ವಿಶ್ವವಾಣಿ

ವಿಶ್ವಾಸವೇ ವಿಶ್ವ

ಮಿಂಚಿದ ಕನ್ನಡಿಗ ವೈಶಾಕ್

ಕನ್ನಡಿಗ ವೈಶಾಕ್ ವಿಜಯ್ ಕುಮಾರ್ ಅವರ ಅತ್ಯುತ್ತಮ ಬೌಲಿಂಗ್ ನೆರವಿನಿಂದ ಪಂಜಾಬ್ ಕಿಂಗ್ಸ್ ತಂಡವು ಮಂಗಳವಾರ ನಡೆದ ಐಪಿಎಲ್ ಪಂದ್ಯದಲ್ಲಿ ಗುಜರಾತ್ ತಂಡವನ್ನು 162 ರನ್‌ಗಳಿಗೆ ನಿಯಂತ್ರಿಸಿತು. ವೈಶಾಕ್ 4 ಓವರ್‌ಗಳಲ್ಲಿ 34 ರನ್‌ಗೆ ಗುಜರಾತ್ ತಂಡದ 3 ವಿಕೆಟ್‌ಗಳನ್ನು ಪಡೆದರು.

ಸೊಂಪಾದ ಪುಟಗಳು

ಕುರ್ಮಿ ಚೇತನಾ ರ್‍ಯಾಲಿಯಿಂದ ರಾಜ್ಯಸಭೆ ಹಾದಿಯತ್ತ...!

ಜನಪಥ ರಾಘವಶರ್ಮ ನಿಡ್ಲೆ 6

ಗುಡ್ ಬೈ ನಕ್ಸಲಿಸಂ, ಆರ್‌ಐಪಿ ಮಾವೋಯಿಸಂ

ಮುಕ್ತಮುಕ್ತ ರವೀ ಸಜಂಗದ್ದೆ 7

ದಾರಿದೀಪೋಕ್ತಿ

ನಿಮ್ಮ ಜೀವನದ ಸತ್ಯಕಥೆ ನಿಮಗೆ ಮಾತ್ರ ಗೊತ್ತಿರಲು ಸಾಧ್ಯ. ಉಳಿದವುಗಳೆಲ್ಲ ಬೇರೆಯವರು ಕಂಡ ಕಥೆಗಳು ಅಥವಾ ಅವರು ತಮ್ಮ ದೃಷ್ಟಿಕೋನಕ್ಕೆ, ಅನುಕೂಲಕ್ಕೆ ಸರಿಹೊಂದುವಂತೆ ಹೆಣೆದ ಕಥೆಗಳು. ಹೀಗಾಗಿ ನೀವು ಹೇಳುವ ಕಥೆ ಸರಿಯಾಗಿರಬೇಕು.

ವಕ್ರತುಂಡೋಕ್ತಿ

ಹೆಂಡತಿ ಕೇಳುವ ಪ್ರಶ್ನೆಗಳಿಗೆ ಉತ್ತರ ಗೊತ್ತಿದ್ದರೂ 'ಗೊತ್ತಿಲ್ಲ' ಎಂದು ಹೇಳುವವನೇ ನಿಜವಾದ ಶಾಂತಿಪ್ರಿಯ.

ರಮೇಶ್ ಕುಮಾರ್‌ಗೆ ವಾರ್ಷಿಕ ದತ್ತಿ ಪ್ರಶಸ್ತಿ

ಬೆಂಗಳೂರು: ಕರ್ನಾಟಕ ಕಾರ್ಯ ನಿರತ ಪತ್ರಕರ್ತರ ಸಂಘದ (ಕೆಯುಡಬ್ಲ್ಯುಜೆ) 2024ನೇ ಸಾಲಿನ ವಾರ್ಷಿಕ ಪ್ರಶಸ್ತಿಗಳನ್ನು ಪ್ರಕಟಿಸಲಾಗಿದ್ದು, ವಿಶ್ವವಾಣಿಯ ರಮೇಶ್ ಕುಮಾರ್ ನಾಯಕ್ ಅವರಿಗೆ ಗರುಡನಗಿರಿ ನಾಗರಾಜ್ ದತ್ತಿ ಪ್ರಶಸ್ತಿ ದೊರೆತಿದೆ. ಬೀದರ್‌ನಲ್ಲಿ ಏಪ್ರಿಲ್ 11 ಮತ್ತು 12ರಂದು ನಡೆಯಲಿರುವ 40ನೇ ರಾಜ್ಯ ಪತ್ರಕರ್ತರ ಸಮ್ಮೇಳನದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ಏಪ್ರಿಲ್ ಫೂಲ್ಸ್ ಡೇ!



ಇರಾನ್ ಇಸ್ಫಹಾನ್ ನಗರದ ಮೇಲೆ 900 ಕಿಲೋ ತೂಕದ ಬಂಕರ್ ಬಸ್ಟರ್ ಬಾಂಬ್ ದಾಳಿ

ಅಮೆರಿಕ ದಾಳಿಗೆ ಇರಾನ್ ಉದ್ಯಮ ನಗರಿ ತತ್ತರ, ಕುವೈತ್ ತೈಲ ಟ್ಯಾಂಕರ್‌ಗೆ ಇರಾನ್ ಬೆಂಕಿ

ಶಾಂತಿ ಜಪ ಬಾಂಬ್ ದಾಳಿ

ಪರಿಹಾರ ಸಾಮಗ್ರಿ ಒಯ್ಯಲು ಭಾರತಕ್ಕೆ ಬರಬೇಕಿದ್ದ ಇರಾನ್ ವಿಮಾನದ ಮೇಲೂ ಅಟ್ಯಾಕ್

ಟೆಹರಾನ್/ವಾಷಿಂಗ್ಟನ್: ಶಾಂತಿ ಮಾತುಕತೆಯ ಪ್ರಸ್ತಾಪಗಳ ನಡುವೆಯೇ ಇರಾನ್ ಮೇಲೆ ಅಮೆರಿಕ ಮತ್ತು ಇಸ್ರೇಲ್ ದಾಳಿ ಮುಂದುವರಿಸಿವೆ. ಇರಾನ್‌ನ ಇಸ್ಫಹಾನ್ ನಗರದಲ್ಲಿರುವ ಮಿಲಿಟರಿ ಕೇಂದ್ರದ ಮೇಲೆ ಮಂಗಳವಾರ ಅಮೆರಿಕ ಸುಮಾರು 907 ಕೆಜಿ ಬಂಕರ್ ಬಸ್ಟರ್ ಬಾಂಬ್‌ಗಳಿಂದ ದಾಳಿ ನಡೆಸಿದೆ. ಈ ಸ್ಫೋಟದ ವಿಡಿಯೊವೊಂದನ್ನು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹಂಚಿಕೊಂಡಿದ್ದಾರೆ.

ಇಸ್ಫಹಾನ್ ಇರಾನ್‌ನ ಪ್ರಮುಖ ವಾಣಿಜ್ಯ ನಗರಗಳಲ್ಲಿ ಒಂದಾಗಿದ್ದು, ದೇಶದ ಯುರೇನಿಯಂ ಸಂಶೋಧನಾ ಕೇಂದ್ರಗಳೂ ಈ ನಗರದಲ್ಲಿವೆ. ಮಂಗಳವಾರ ಮುಂಜಾನೆ ಇಸ್ಫಹಾನ್ ನಗರದಲ್ಲಿರುವ ಬದ್ರ್ ಮಿಲಿಟರಿ ವಾಯುನೆಲೆಯ ಮೇಲೆ ಅಮೆರಿಕ ನಡೆಸಿದ ದಾಳಿ ವೇಳೆ ಸರಣಿ ಸ್ಫೋಟಗಳ ನಡುವೆ ಬೆಂಕಿಯ ಚೆಂಡು ಮುಗಿಲೆತ್ತರಕ್ಕೆ ಚಿಮ್ಮುವ ದೃಶ್ಯ ಕಂಡು ಬಂದಿದೆ.

ಇರಾನ್ ಯುದ್ಧ ಕೊನೆಗೊಳಿಸುವ ಒಪ್ಪಂದಕ್ಕೆ ಶೀಘ್ರವೇ ಬರದಿದ್ದರೆ, ಆ ದೇಶದ ಇಂಧನ ಮೂಲಗಳು, ಪರಮಾಣು ಕೇಂದ್ರಗಳು ಮತ್ತು ನೀರು ಸರಬರಾಜು ಘಟಕಗಳೂ ಸೇರಿದಂತೆ ಪ್ರಮುಖ ಮೂಲಸೌಕರ್ಯಗಳನ್ನೂ ನಾಶಪಡಿಸುವುದಾಗಿ ಟ್ರಂಪ್ ಎಚ್ಚರಿಕೆ ನೀಡಿದ ಮರು ದಿನವೇ ಈ ದಾಳಿ ನಡೆದಿದೆ. ಈ ದಾಳಿಯು ಕೊಲ್ಲಿ ಸಂಘರ್ಷವನ್ನು ಮತ್ತೊಂದು ಹಂತಕ್ಕೆ ಕೊಂಡೊಯ್ದಿದೆ.

ಇರಾನ್ ಪ್ರತಿದಾಳಿ: ಅಮೆರಿಕ ದಾಳಿಗೆ ಪ್ರತಿಯಾಗಿ ಇರಾನ್ ದುಬೈ ಸಾಗರ ತೀರದ ಬಳಿ ನಿಂತಿದ್ದ ಕುವೈತ್‌ನ ತೈಲ ನೌಕೆಯೊಂದನ್ನು ಸ್ಫೋಟಿಸಿದೆ. ಇದಲ್ಲದೆ ಇಸ್ರೇಲ್‌ನ ಹೈಫಾದಲ್ಲಿರುವ ತೈಲ ಸಂಸ್ಕರಣಾಗಾರವನ್ನು ಗುರಿಯಾಗಿಸಿಕೊಂಡು ದಾಳಿ ನಡೆಸಿದೆ. ದಾಳಿಯಿಂದ ಸಂಸ್ಕರಣಾಗಾರಕ್ಕೆ ಬೆಂಕಿ ಹೊತ್ತಿಕೊಂಡಿದ್ದು ಆಕಾಶದುದ್ದಕ್ಕೂ ಕಪ್ಪು ಹೊಗೆ ಆವರಿಸಿದೆ.

ಜಲಮಾರ್ಗಕ್ಕೆ ಟೋಲ್ ?

ಹೊರ್ಮುಜ್ ಜಲಸಂಧಿಯಲ್ಲಿ ಸುಂಕ ಸಂಗ್ರಹಿಸುವ ಹೊಸ ಯೋಜನೆಗೆ ಇರಾನ್ ಸಂಸತ್ತಿನ ಭದ್ರತಾ ಸಮಿತಿಯು ಅನುಮೋದನೆ ನೀಡಿದೆ. ಇದು ಕೆಲವು ದೇಶಗಳ ಹಡಗುಗಳ ಮೇಲೆ ಸುಂಕ, ಇನ್ನೂ ಕೆಲವು ದೇಶಗಳ ಹಡಗುಗಳ ಮೇಲೆ ನಿರ್ಬಂಧವನ್ನು ಹೇರಲು ಅವಕಾಶ ಮಾಡಿಕೊಡುತ್ತದೆ ಎಂದು ಇರಾನ್‌ನ ಸರಕಾರಿ ಮಾಧ್ಯಮ ವರದಿ ಮಾಡಿದೆ. ಜಲಸಂಧಿಯಲ್ಲಿ ಸಾಗುವ ಮಿತ್ರ ರಾಷ್ಟ್ರದ ಹಡಗುಗಳಿಗೆ ರಿಯಾಲ್ ಆಧಾರಿತ ಟೋಲ್ ವ್ಯವಸ್ಥೆಯನ್ನು ಪರಿಚಯಿಸಲು ಇರಾನ್ ಮುಂದಾಗಿದೆ.

ಸಹಾಯಕ್ಕೆ ಇಟಲಿ ನಕಾರ

ಇರಾನ್ ಜತೆಗಿನ ಯುದ್ಧದಲ್ಲಿ ನ್ಯಾಟೋ ರಾಷ್ಟ್ರಗಳ ಅಸಹಕಾರ ಮುಂದುವರಿದಿದೆ. ಯುದ್ಧದ ನಿರ್ಧಾರವನ್ನು ಸ್ಪೇನ್ ಅಧ್ಯಕ್ಷರು ಖಂಡಿಸಿದ ಬೆನ್ನಿಗೇ ಇಟಲಿ ತನ್ನ ವಾಯುನೆಲೆ ಬಳಕೆಗೆ ಅನುಮತಿ ನಿರಾಕರಿಸಿದೆ. ಮೊದಲು ಸ್ಪೇನ್ ತನ್ನ ವಾಯುನೆಲೆ ಬಳಸಲು ನಿರಾಕರಿಸಿದೆ. ಇದೀಗ ಇಟಲಿ ರಕ್ಷಣಾ ಸಚಿವ ಗೈಡೋ ಕ್ರೊಸೆಟ್ಟೊ ಅಮೆರಿಕದ ವಿಮಾನಗಳು ಸಿಗೊನೆಲ್ಲಾ ವಾಯುನೆಲೆಯನ್ನು ಬಳಸಲು ಅನುಮತಿ ನಿರಾಕರಿಸಿರುವುದಾಗಿ ತಿಳಿಸಿದ್ದಾರೆ. ನಾವು ಯುದ್ಧದಲ್ಲಿಲ್ಲ, ನಾವು ಯುದ್ಧಕ್ಕೆ ಹೋಗಲು ಬಯಸುವುದಿಲ್ಲ ಎಂದು ಇಟಲಿ ಪ್ರಧಾನಿ ಜಾರ್ಜಿಯಾ ಮೆಲೋನಿ ರೇಡಿಯೊ ಸಂದರ್ಶನದಲ್ಲಿ ತಿಳಿಸಿದ್ದಾರೆ.

ಭಾರತಕ್ಕೆ ಹೊರಟ ವಿಮಾನದ ಮೇಲೆ ದಾಳಿ: ಪರಿಹಾರ ಸಾಮಗ್ರಿ ತರಲು ಭಾರತದತ್ತ ಪ್ರಯಾಣ ಮಾಡಲು ಸಿದ್ಧವಾಗಿದ್ದ ಇರಾನ್ ವಿಮಾನದ ಮೇಲೆ ಇಸ್ರೇಲ್ ದಾಳಿ ನಡೆಸಿದೆ. ಇರಾನ್‌ನ ಮಶಾದ್ ವಿಮಾನ ನಿಲ್ದಾಣದ ಮೇಲೆ ನಡೆದ ವೈಮಾನಿಕ ದಾಳಿಯಲ್ಲಿ ಮಹಾನ್ ಏರ್ ವಿಮಾನವು ಹಾನಿಗೊಳಗಾಗಿದೆ. ಈ ವಿಮಾನವು ಪರಿಹಾರ ಸಾಮಗ್ರಿಗಳನ್ನು ಪಡೆಯಲು ಮಂಗಳವಾರ ಸಂಜೆ ದೆಹಲಿಗೆ ಬರಬೇಕಿತ್ತು. ಯುದ್ಧ ಸಂತ್ರಸ್ತರಿಗೆ 11 ಟನ್‌ಗಳಿಗೂ ಹೆಚ್ಚು ಮಾನವೀಯ ಔಷಧಿಗಳನ್ನು ಹೊತ್ತುಕೊಂಡು ಇರಾನ್‌ಗೆ ಹಿಂತಿರುಗಬೇಕಿತ್ತು.

ಈ ಘಟನೆಯು ದೇಶದಲ್ಲಿ ನಾಗರಿಕ ವಿಮಾನಯಾನ ಸುರಕ್ಷತೆಯ ಬಗ್ಗೆ ಕಳವಳವನ್ನು ಹುಟ್ಟುಹಾಕಿದೆ. ಮಹಾನ್ ಏರ್ ಖಾಸಗಿ ಒಡೆತನದ ಇರಾನಿನ ವಿಮಾನಯಾನ ಸಂಸ್ಥೆಯಾಗಿದ್ದು, ಇದು ಪಶ್ಚಿಮ ಏಷ್ಯಾ, ಮಧ್ಯ ಏಷ್ಯಾ, ದಕ್ಷಿಣ ಏಷ್ಯಾ, ಆಗ್ನೇಯ ಏಷ್ಯಾ ಮತ್ತು ಪೂರ್ವ ಏಷ್ಯಾದ ಹಲವಾರು ದೇಶಗಳಿಗೆ ವಿಮಾನಗಳನ್ನು ನಿರ್ವಹಿಸುತ್ತದೆ. ಉಕ್ರೇನ್ ಯುದ್ಧಕ್ಕಾಗಿ ರಷ್ಯಾಕ್ಕೆ ಶಸ್ತ್ರಾಸ್ತ್ರಗಳನ್ನು ಸಾಗಿಸಲು ಇರಾನ್ ಏರ್ ಮತ್ತು ಮಹಾನ್ ಏರ್‌ನಂತಹ ವಾಣಿಜ್ಯ ವಿಮಾನಗಳನ್ನು ಬಳಸಲಾಗುತ್ತಿತ್ತು ಎಂದು ಇಸ್ರೇಲ್ ಆರೋಪಿಸಿದೆ.

ದುಡ್ಡಿಗಾಗಿ ದುಂಬಾಲು: ಯುದ್ಧದಿಂದ ಆರ್ಥಿಕ ಸಂಕಷ್ಟ ಎದುರಿಸುತ್ತಿರುವ ಅಮೆರಿಕ ಇದೀಗ ಯುದ್ಧಕ್ಕೆ ಹಣ ನೀಡಲು ಅರಬ್ ರಾಷ್ಟ್ರಗಳ ಮೇಲೆ ಒತ್ತಡ ಹೇರಲಾರಂಭಿಸಿದೆ. ಈ ಬಗ್ಗೆ ಟ್ರಂಪ್ ಅವರ ಇಂಗಿತದ ಬಗ್ಗೆ ಖುದ್ದು ಶ್ವೇತಭವನ ಮಾಹಿತಿ ನೀಡಿದೆ.

ನೀರು, ವಿದ್ಯುತ್, ಎಲ್‌ಪಿಜಿ, ಪೆಟ್ರೋಲ್, ಟೋಲ್, ಅಗತ್ಯ ಔಷಧ, ಕಾರು, ಮೊಬೈಲ್ ಎಲ್ಲವೂ ತುಟ್ಟಿ

ಇಂದಿನಿಂದ ಹೊಸ ದುಬಾರಿ ದುನಿಯಾ

ದೆಹಲಿ/ ಬೆಂಗಳೂರು: ಏಪ್ರಿಲ್ 1 ಹೊಸ ಆರ್ಥಿಕ ವರ್ಷ ಆರಂಭವಾಗುವ ದಿನ. ಕೇಂದ್ರ ಮತ್ತು ರಾಜ್ಯ ಸರಕಾರಗಳ ಹಲವು ಬೆಲೆ ಏರಿಕೆ ಪ್ರಸ್ತಾಪಗಳು ಬುಧವಾರದಿಂದಲೇ ಜಾರಿಯಾಗಲಿದೆ. ಇದರೊಂದಿಗೆ ಕೊಲ್ಲಿ ಯುದ್ಧದ ಕಾರಣ ಇನ್ನಷ್ಟು ವಸ್ತುಗಳು ದುಬಾರಿಯಾಗಲಿದ್ದು ಜನರನ್ನು ಸಂಕಷ್ಟಕ್ಕೀಡು ಮಾಡುವ ನಿರೀಕ್ಷೆ ಇದೆ.

ಆರ್ಥಿಕ ವರ್ಷದ ಮೊದಲ ದಿನದಿಂದಲೇ ರಾಜ್ಯದಲ್ಲಿ ವಾಣಿಜ್ಯ ಬಳಕೆಯ ವಿದ್ಯುತ್ ಮತ್ತು ರಾಷ್ಟ್ರೀಯ ಹೆದ್ದಾರಿಗಳಲ್ಲಿ ಟೋಲ್ ಏರಿಕೆಯಾಗಲಿದೆ. ಬೆಂಗಳೂರು ನಗರದಲ್ಲಿ ನೀರಿನ ದರವೂ ಏರಿಕೆಯಾಗಲಿದೆ. ಕೇಂದ್ರ ಸರಕಾರ ಗೃಹಬಳಕೆ ಸಿಲಿಂಡರ್ ದರವನ್ನು ಈಗಾಗಲೇ ಏರಿಸಿದ್ದು, ಯುದ್ಧ ಮುಂದುವರಿದರೆ ಉಳಿದ ಪೆಟ್ರೋಲಿಯಂ ಉತ್ಪನ್ನಗಳ ದರವನ್ನೂ ಹೆಚ್ಚಿಸುವ ಸಾಧ್ಯತೆ ದಟ್ಟವಾಗಿದೆ. ಖಾಸಗಿ ಇಂಧನ ಕಂಪನಿಗಳು ಈಗಾಗಲೇ ದರ ಏರಿಸಿದ್ದು ಪೆಟ್ರೋಲ್ ದರ 100ರ ಗಡಿ ದಾಟಿದೆ.

ರಾಜ್ಯದ ಟೋಲ್ ಪ್ಲಾಜಾಗಳಲ್ಲಿ ಶೇ.3 ರಿಂದ 5ರಷ್ಟು ಟೋಲ್ ದರ ಏರಿಕೆಯಾಗಲಿದ್ದು, ಕಾರುಗಳಿಗೆ 5ರಿಂದ 10 ರು. ಟೋಲ್ ಹೆಚ್ಚಳವಾಗಲಿದೆ. ವಾಣಿಜ್ಯ ಬಳಕೆಯ ವಾಹನಗಳು 15ರಿಂದ 40 ರು. ಹೆಚ್ಚುವರಿಯಾಗಿ ಪಾವತಿಸಬೇಕಾಗುತ್ತದೆ. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ತನ್ನ ವಾರ್ಷಿಕ ಪಾಸ್ ದರವನ್ನು 2026-27ನೇ ಸಾಲಿಗೆ 75 ರೂ. ಹೆಚ್ಚಳ ಮಾಡಿ ಹೊರಡಿಸಿದ ಅಧಿಸೂಚನೆ ಕೂಡ ಏಪ್ರಿಲ್ 1ರಿಂದ ಜಾರಿಗೆ ಬರಲಿದೆ. ವಾರ್ಷಿಕ ಪಾಸ್ ದರವು 3,000ರಿಂದ 3,075 ರು.ಗಳಿಗೆ ಏರಿಕೆಯಾಗಲಿದೆ.

ನೀರು, ವಿದ್ಯುತ್ ದರ ಪರಿಷ್ಕರಣೆ: ಬೆಂಗಳೂರು ನೀರು ಸರಬರಾಜು, ಒಳಚರಂಡಿ ಮಂಡಳಿ ಏಪ್ರಿಲ್ ಒಂದರಿಂದ ಅನ್ವಯವಾಗುವಂತೆ ನೀರಿನ ದರವನ್ನು ಶೇ.3ರಷ್ಟು ಹೆಚ್ಚಳ ಮಾಡಲಿದ್ದು, ಇದರಿಂದ ಬೆಂಗಳೂರಿಗರಿಗೆ ಮತ್ತೊಂದು ಹೊರೆ ಬೀಳಲಿದೆ.

→ 4



ಏ.1ರಿಂದ ಏನೇನು ಬದಲಾವಣೆ?

- ಟೋಲ್‌ಗಳಲ್ಲಿ ಇನ್ನು ಮುಂದೆ ನಗದು ಪಾವತಿ ಸಂಪೂರ್ಣ ಸ್ಥಗಿತ
- ಹೋಟೆಲ್‌ಗಳಲ್ಲಿ ಬಿಲ್ ಪಾವತಿ ಲಕ್ಷ ರು ದಾಟಿದರೆ ಪ್ಯಾನ್ ಕಡ್ಡಾಯ
- ರೈಲು ಹೊರಡುವ 8 ಗಂಟೆಗೆ ಮುನ್ನ ಮುಂಗಡ ಟಿಕೆಟ್ ರದ್ದುಪಡಿಸಿದರೆ ರೀಫಂಡ್ ಇಲ್ಲ
- ಶೇ.50 ಹೆಚ್‌ಆರ್‌ಎ ಸೌಲಭ್ಯದ ನಗರಗಳ ಪಟ್ಟಿಗೆ ಬೆಂಗಳೂರು ಸೇರ್ಪಡೆ
- ಉದ್ಯೋಗಿಯ ಮೂಲ ವೇತನ, ಒಟ್ಟು ವೇತನದ (ಸಿಟಿಸಿ) ಕನಿಷ್ಠ ಶೇ.50 ಕಡ್ಡಾಯ
- ಹೊಸ ಆದಾಯ ತೆರಿಗೆ ಕಾಯಿದೆ ಜಾರಿ, ತೆರಿಗೆ ವಂಚನೆ ತಡೆಗೆ ಮತ್ತಷ್ಟು ಕ್ರಮ
- ಬ್ಯಾಂಕ್‌ಗಳಲ್ಲಿ ವಾರ್ಷಿಕ 10 ಲಕ್ಷ ಒಳಗಿನ ಹಣ ಠೇವಣಿಗೆ ಪ್ಯಾನ್ ಅಗತ್ಯವಿಲ್ಲ.

ನಾಳೆ ಚಂದ್ರನೆಡೆಗೆ ಸಾಗಲಿದೆ ನಾಸಾದ ಒರಾಯನ್ ನೌಕೆ

ಕೇಪ್ ಕೆನವೆರಲ್ (ಫ್ಲೋರಿಡಾ): 53 ವರ್ಷಗಳ ಬಳಿಕ ಮೊದಲ ಬಾರಿಗೆ ಮತ್ತೆ ಮಾನವಸಹಿತ ಚಂದ್ರಯಾನಕ್ಕೆ ನಾಸಾ ಸಿದ್ಧವಾಗಿದೆ. ನಾಸಾದ ಐತಿಹಾಸಿಕ ಆರ್ಟೆಮಿಸ್ ಮಿಷನ್ ಯೋಜನೆಯಡಿ, ಒರಾಯನ್

ಕ್ಯಾಪ್ಸೂಲ್ ನೌಕೆಯು ನಾಲ್ವರು ಗಗನಯಾತ್ರಿಗಳನ್ನು ಹೊತ್ತು, ಅಮೆರಿಕದ ಫ್ಲೋರಿಡಾ ಕೆನಡಿ ಸ್ಪೇಸ್ ಸೆಂಟರ್‌ನಿಂದ ಚಂದ್ರನಲ್ಲಿಗೆ ಚಿಮ್ಮಲಿದೆ. ಭಾರತೀಯ ಕಾಲಮಾನ ಗುರುವಾರ ಮುಂಜಾನೆ 3.54ಕ್ಕೆ ಈ ವಿಶೇಷ ಘಟನೆ ಸಂಭವಿಸಲಿದೆ. ಶೇ.80ರಷ್ಟು ಹವಾಮಾನ ಅನುಕೂಲವಾಗಿದ್ದರೂ, ಸೂರ್ಯನಿಂದ ವಿಕಿರಣಗಳು ಹೆಚ್ಚಾಗಿ ಬಿಡುಗಡೆಯಾಗುತ್ತಿರುವ ಕಾರಣ ನಾಸಾ ಈಗ ಸೂರ್ಯನ ಮೇಲೂ ಕಣ್ಣಿಟ್ಟಿದೆ.

ಉಗ್ರ ಮಸೂದ್ ಅಜರ್ ಸಹೋದರ ನಿಗೂಢ ಸಾವು

ಇಸ್ಲಾಮಾಬಾದ್: ಜೈಶ್-ಎ-ಮೊಹಮ್ಮದ್ ಭಯೋತ್ಪಾದಕ ಸಂಘಟನೆಯ ಮುಖಂಡ ಮಸೂದ್ ಅಜರ್‌ನ ಹಿರಿಯ ಸಹೋದರ ಮೊಹಮ್ಮದ್ ತಾಹಿರ್ ಅನ್ವರ್ ಪಾಕಿಸ್ತಾನದಲ್ಲಿ ಸಾವನ್ನಪ್ಪಿದ್ದಾನೆ. ಅವನ

ಸಾವು ಇನ್ನೂ ನಿಗೂಢವಾಗಿಯೇ ಉಳಿದಿದೆ. ವರದಿಗಳ ಪ್ರಕಾರ, ತಾಹಿರ್ ಅನ್ವರ್ ಜೈಶ್-ಎ-ಮೊಹಮ್ಮದ್‌ನಲ್ಲಿ ಪ್ರಮುಖ ಪಾತ್ರ ವಹಿಸಿದ್ದನು. ಈತ ಭಾರತದಲ್ಲಿ ನಡೆದ ಹಲವಾರು ಪ್ರಮುಖ ಭಯೋತ್ಪಾದಕ ದಾಳಿಗಳಿಗಳೊಂದಿಗೆ ಸಂಬಂಧ ಹೊಂದಿದ್ದಾನೆ ಎಂಬುದು ಗಮನಿಸಬೇಕಾದ ಸಂಗತಿ. ಈ ದಾಳಿಗಳು ಭಾರತದ ಭದ್ರತೆ, ರಾಜಕೀಯ, ಭಾರತ-ಪಾಕಿಸ್ತಾನ ಸಂಬಂಧಗಳ ಮೇಲೆ ಆಳವಾದ ಪರಿಣಾಮ ಬೀರಿವೆ.

ಬಿಹಾರದ ದೇಗುಲದಲ್ಲಿ ಕಾಲ್ತುಳಿತ; 9 ಭಕ್ತರ ಸಾವು

ಪಾಟ್ನಾ: ಬಿಹಾರದ ನಳಂದ ಜಿಲ್ಲೆಯ ಶೀತಲಾ ಮಾತಾ ಮಂದಿರದಲ್ಲಿ ಮಂಗಳವಾರ ಸಂಭವಿಸಿದ ಭೀಕರ ಕಾಲ್ತುಳಿತದಲ್ಲಿ 9 ಮಹಿಳಾ ಭಕ್ತರು ಸಾವನ್ನಪ್ಪಿದ್ದು, 12ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ನಳಂದ

ಜಿಲ್ಲೆಯ ಬಿಹಾರ ಶರೀಫ್‌ನಿಂದ ಸುಮಾರು 5 ಕಿಲೋಮೀಟರ್ ದೂರದಲ್ಲಿರುವ ಮಾಘ್ರಾ ಗ್ರಾಮದಲ್ಲಿರುವ ಶೀತಲಾದೇವಿ (ಶೀತ್ಲಾ ಷ್ಟಮಿ) ದೇವಾಲಯದಲ್ಲಿ ಕಾಲ್ತುಳಿತ ಸಂಭವಿಸಿದೆ. ಚೈತ್ರ ಮಾಸದ ಕೊನೆಯ ಮಂಗಳವಾರವಾದ್ದರಿಂದ, ಅಪಾರ ಸಂಖ್ಯೆಯ ಭಕ್ತರು ಜಮಾಯಿಸಿದ್ದರು. ಜನದಟ್ಟಣೆ ವೇಳೆ ಬ್ಯಾರಿಕೇಡ್‌ಗಳು ಮುರಿದಿದ್ದು, ಒಬ್ಬರ ಮೇಲೆ ಒಬ್ಬರಂತೆ ಭಕ್ತರು ಕೆಳಗೆ ಬಿದ್ದಿದ್ದಾರೆ. ಇದರಿಂದ ಕಾಲ್ತುಳಿತ ಉಂಟಾಗಿದೆ.

ಕೈದಿಗಳಿಗೆ ಮರಣದಂಡನೆ ಇಸ್ರೇಲ್ ಸಂಸತ್ತು ಅಸ್ತು

ಟೆಲಿಅವಿವ್: ಇಸ್ರೇಲ್ ಸಂಸತ್ತು ಪ್ಯಾಲೆಸ್ತೀನಿ ಕೈದಿಗಳ ಮರಣದಂಡನೆಗೆ ಅಧಿಕಾರ ನೀಡುವ ಕಾನೂನನ್ನು ಅಂಗೀಕರಿಸಿದೆ. ಪಶ್ಚಿಮ ದಂಡೆ ಮೇಲೆ ದಾಳಿ ನಡೆಸಿದ ಕೈದಿಗಳನ್ನು 90 ದಿನಗಳಲ್ಲಿ ಗಲ್ಲಿಗೇರಿಸುವ ಸಾಧ್ಯತೆ ಇದೆ. ಪ್ರಸ್ತುತ,



ಇಸ್ರೇಲ್ ಜೈಲುಗಳಲ್ಲಿ 4,500 ಮಕ್ಕಳು ಸೇರಿದಂತೆ 11,000 ಪ್ಯಾಲೆಸ್ತೀನಿ ಕೈದಿಗಳಿದ್ದಾರೆ. ಈ ಕಾನೂನಿನಡಿಯಲ್ಲಿ ಇಸ್ರೇಲ್‌ನ ಜೈಲುಗಳಲ್ಲಿ ಇರಿಸಲಾಗಿರುವ ಪಶ್ಚಿಮ ದಂಡೆ ಕೈದಿಗಳನ್ನು 90 ದಿನಗಳಲ್ಲಿ ಗಲ್ಲಿಗೇರಿಸುವ ಸಾಧ್ಯತೆ ಇದೆ. ಪ್ರಸ್ತುತ, ಇಸ್ರೇಲ್‌ನ ಜೈಲುಗಳಲ್ಲಿ 4,500 ಮಕ್ಕಳು ಸೇರಿದಂತೆ 11,000 ಪ್ಯಾಲೆಸ್ತೀನಿ ಕೈದಿಗಳಿದ್ದಾರೆ. ಕಾನೂನು ಅಂಗೀಕಾರವಾದ ನಂತರ, ರಾಷ್ಟ್ರೀಯ ಭದ್ರತಾ ಸಚಿವ ಬೆನ್-ಗ್ವಿರ್ ಸಂಸತ್ತಿನ ಒಳಗೆ ಮತ್ತು ಹೊರಗೆ ಸಂಭ್ರಮ ಆಚರಿಸಿದರು.

ದಾವಣಗೆರೆಯಲ್ಲಿ ಡಿಕೆಶಿ, ಬಿಎಸ್‌ವೈ, ಬಾಗಲಕೋಟೆಯಲ್ಲಿ ಸಿದ್ದು ಪ್ರಚಾರ

ಉಪಸಮರಕ್ಕೆ ಬಿಜೆಪಿ ಪ್ರಣಾಳಿಕೆ ಬಿಡುಗಡೆ

ದಾವಣಗೆರೆ: ಉಪಚುನಾವಣೆ ಹತ್ತಿರವಾಗುತ್ತಿದ್ದಂತೆಯೇ ಬಿಜೆಪಿ, ಕಾಂಗ್ರೆಸ್ ಪ್ರಚಾರದ ಭರಾಟೆಯೂ ಜೋರಾಗಿದೆ. ಬಾಗಲಕೋಟೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಉಮೇಶ್ ಮೇಟಿ ಪರ ಪ್ರಚಾರ ನಡೆಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಬಿಜೆಪಿ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು. ದಾವಣಗೆರೆ ದಕ್ಷಿಣ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಬಿಜೆಪಿ ನಾಯಕ ಆರ್. ಅಶೋಕ ಮಂಗಳವಾರ ಚುನಾವಣೆ ಪ್ರಣಾಳಿಕೆ ಬಿಡುಗಡೆ ಮಾಡಿದರು. ದಾವಣಗೆರೆಯಲ್ಲಿ ಬಿಜೆಪಿ ಅಭ್ಯರ್ಥಿ ಶ್ರೀನಿವಾಸ ದಾಸಕರಿಯಪ್ಪ ಪರ ಮಾಜಿ ಸಿಎಂ ಬಿ.ಎಸ್.ವೈ ಪ್ರಚಾರ ಮಾಡಿದರೆ, ಕಾಂಗ್ರೆಸ್ ಅಭ್ಯರ್ಥಿ ಸಮರ್ಥ್ ಶಾಮನೂರು ಪರ ಡಿಸಿಎಂ ಡಿ.ಕೆ.ಶಿವಕುಮಾರ್ ಬ್ಯಾಟಿಂಗ್ ಮಾಡಿದರು.

→ 4

ಸಿಎಂ ಸಿದ್ದರಾಮಯ್ಯ ಎಂದರೆ ಈಗ ಸಾಲದರಾಮಯ್ಯ ಆಗಿದ್ದಾರೆ. 2023 ರಲ್ಲಿ 81 ಸಾವಿರ ಕೋಟಿ, 2024 ರಲ್ಲಿ 92.25 ಸಾವಿರ ಕೋಟಿ, 2025ರಲ್ಲಿ 1.16 ಲಕ್ಷ ಕೋಟಿ, ಈ ವರ್ಷ 1.32 ಲಕ್ಷ ಕೋಟಿ ರು. ಸಾಲ ಮಾಡಿದ್ದಾರೆ.

-ಆರ್.ಅಶೋಕ, ಬಿಜೆಪಿ ನಾಯಕ

ಐತಿಹಾಸಿಕ ಬೆಂಗಳೂರು ಹೂವಿನ ಕರಗಕ್ಕೆ ಚಾಲನೆ ದೊರೆತಿದ್ದು, ಮಂಗಳವಾರ ಧರ್ಮರಾಯ ದೇವಸ್ಥಾನದಲ್ಲಿ ನಡೆದ ಹಸಿ ಕರಗ ಉತ್ಸವಕ್ಕೆ ಸಾವಿರಾರು ಭಕ್ತರು ಸಾಕ್ಷಿಯಾದರು.

ಏಪ್ರಿಲ್ 15ರವರೆಗೆ ಸ್ವಯಂ ಗಣತಿಗೆ ಅವಕಾಶ

ವಿಶ್ವದ ಅತಿದೊಡ್ಡ ಡಿಜಿಟಲ್ ಜನಗಣತಿ ಇಂದಿನಿಂದ ಶುರು

ದೆಹಲಿ: ಹದಿನಾರು ವರ್ಷಗಳ ನಂತರ ದೇಶದಲ್ಲಿ ಇದೇ ಮೊದಲ ಬಾರಿಗೆ ಏಪ್ರಿಲ್ ಒಂದರಿಂದ ಬೃಹತ್ ಜನಗಣತಿ ನಡೆಯಲಿದೆ. ಇದರೊಂದಿಗೆ ವಿಶ್ವದ ಅತಿದೊಡ್ಡ ಜನಗಣತಿಗೆ ದೇಶದ ಜನತೆ ಸಾಕ್ಷಿಯಾಗಲಿದ್ದಾರೆ.

ಭಾರತದಲ್ಲಿ ಇಲ್ಲಿಯವರೆಗೆ 15 ಜನಗಣತಿಗಳು ನಡೆದಿವೆ. ದೇಶಕ್ಕೆ ಸ್ವಾತಂತ್ರ್ಯ ಸಿಕ್ಕ ಬಳಿಕ ಏಳು ಬಾರಿ ಗಣತಿ ನಡೆದಿದೆ. ಈ ಹಿಂದೆ 2011ರಲ್ಲಿ ಗಣತಿ ನಡೆದಿತ್ತು. ಸಾಮಾನ್ಯವಾಗಿ ಪ್ರತಿ 10 ವರ್ಷಗಳಿಗೊಮ್ಮೆ ಗಣತಿ ಕಾರ್ಯ ನಡೆಯುತ್ತದೆ. ಆದರೆ ಕೋವಿಡ್ ಕಾರಣದಿಂದ ಗಣತಿ ಐದು ವರ್ಷಗಳಷ್ಟು ವಿಳಂಬವಾಗಿ ಆರಂಭವಾಗಿದೆ. 16ನೇ ಗಣತಿ 2027ರಲ್ಲಿ ಪೂರ್ಣಗೊಳ್ಳಲಿದೆ. ಈ ಗಣತಿ ಸಂಪೂರ್ಣವಾಗಿ ಡಿಜಿಟಲ್ ವೇದಿಕೆ ಬಳಸಿ ನಡೆಯುವ ಮೊದಲ ಜನಗಣತಿ ಎಂಬ ಹೆಗ್ಗಳಿಕೆ ಹೊಂದಿದೆ.

→ 4

ಸ್ವಯಂಗಣತಿಗೆ ಚಾಲನೆ

ಕರ್ನಾಟಕ, ಮಿಜೋರಾಂ, ದೆಹಲಿ, ಗೋವಾ, ಒಡಿಶಾ ಮೊದಲಾದ ಕೆಲ ರಾಜ್ಯಗಳಲ್ಲಿ ಏಪ್ರಿಲ್ 1ರಿಂದ 15ರವರೆಗೆ ಸ್ವಯಂ ಗಣತಿಗೆ ಕಾಲಾವಕಾಶವಿದೆ. ನಂತರ ಏಪ್ರಿಲ್ 16ರಿಂದ ಮೇ 15ರವರೆಗೆ ಗಣತಿದಾರರು ಮನೆ ಮನೆಗಳಿಗೆ ತೆರಳಿ ಗಣತಿ ಕಾರ್ಯ ನಡೆಸಲಿದ್ದಾರೆ.

ಶಿವಕುಮಾರ ಸ್ವಾಮೀಜಿ 119ನೇ ಜನ್ಮಜಯಂತಿ ಕಾರ್ಯಕ್ರಮದಲ್ಲಿ ಭಾಗಿ

ರಾಷ್ಟ್ರಪತಿ ಮುರ್ಮು ಇಂದು ಸಿದ್ದಗಂಗಾ ಮಠಕ್ಕೆ

ಬೆಂಗಳೂರು: ಸಿದ್ದಗಂಗಾ ಮಠದಲ್ಲಿ ಆಯೋಜಿಸಿರುವ ಲಿಂಗೈಕ್ಯ ಶ್ರೀ ಶಿವಕುಮಾರ ಸ್ವಾಮೀಜಿ ಅವರ 119ನೇ ಜನ್ಮಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಲು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಮಂಗಳವಾರ ಸಂಜೆ ಬೆಂಗಳೂರಿಗೆ ಆಗಮಿಸಿದ್ದಾರೆ.

ಮಂಗಳವಾರ ರಾತ್ರಿ ರಾಜಭವನದಲ್ಲಿ ವಾಸ್ತವ್ಯ ಹೂಡಿದ ಅವರು, ಬುಧವಾರ ಬೆಳಗ್ಗೆ ತುಮಕೂರಿಗೆ ತೆರಳಿ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ರಾಷ್ಟ್ರಪತಿ ಮುರ್ಮು ಅವರು ಹೆಲಿಕಾಪ್ಟರ್‌ನಲ್ಲಿ ತುಮಕೂರಿಗೆ ಆಗಮಿಸಲಿದ್ದಾರೆ. ಕಾರ್ಯಕ್ರಮ ಮುಗಿಸಿದ ಬಳಿಕ ಹೆಲಿಕಾಪ್ಟರ್‌ನಲ್ಲಿಯೇ ವಾಪಸ್ ಬೆಂಗಳೂರಿಗೆ ಆಗಮಿಸಿ, ದೆಹಲಿಗೆ ತೆರಳಲಿದ್ದಾರೆ

2ನೇ ರಾಷ್ಟ್ರಪತಿ: ಈ ಹಿಂದೆ ದೇಶದ ಮೊದಲ ಮಹಿಳಾ ರಾಷ್ಟ್ರಪತಿಯಾಗಿದ್ದ ಪ್ರತಿಭಾ ಪಾಟೀಲ್ ಕೂಡ ಶ್ರೀಗಳ ಹುಟ್ಟುಹಬ್ಬ ಹಾಗೂ ಗುರು ವಂದನಾ ಮಹೋತ್ಸವದಲ್ಲಿ ಭಾಗಿಯಾಗಿದ್ದರು. ಮುರ್ಮು ಅವರು ರಾಷ್ಟ್ರಪತಿಗಳು ಶ್ರೀಗಳ ಗದ್ದುಗೆಗೆ ಭೇಟಿ ನೀಡಿ ದರ್ಶನ ಪಡೆದು ನಂತರ ವೇದಿಕೆ ಕಾರ್ಯಕ್ರಮಕ್ಕೆ ಆಗಮಿಸುವರು. ಸುತ್ತೂರು ವೀರಸಿಂಹಾಸನ ಸಂಸ್ಥಾನ ಮಠದ ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸುವರು. ಸಿದ್ದಗಂಗಾ ಮಠದ ಉತ್ತರಾಧಿಕಾರಿ ಶ್ರೀ ಶಿವಸಿದ್ದೇಶ್ವರ ಸ್ವಾಮೀಜಿ ಉಪಸ್ಥಿತರಿರುವರು.

ಗೌರವ ಅತಿಥಿಗಳಾಗಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಥ್, ಕೇಂದ್ರ ಸಚಿವರಾದ ಪ್ರಹ್ಲಾದ್ ಜೋಷಿ, ವಿ. ಸೋಮಣ್ಣ, ಗೃಹ ಸಚಿವ ಡಾ. ಜಿ. ಪರಮೇಶ್ವರ್, ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್, ಶಾಸಕರಾದ ಜಯಚಂದ್ರ, ಕೆ.ಎನ್. ರಾಜಣ್ಣ, ಶಾಸಕರಾದ ಜಿ.ಬಿ. ಜ್ಯೋತಿಗಣೇಶ್, ಬಿ. ಸುರೇಶ್‌ಗೌಡ ಪಾಲ್ಗೊಳ್ಳಲಿದ್ದಾರೆ. ಇದೇ ಸಂದರ್ಭದಲ್ಲಿ 119 ಮಕ್ಕಳಿಗೆ ಸ್ವಾಮೀಜಿಯ ಹೆಸರು ನಾಮಕರಣ ಮಾಡಲಾಗುವುದು ಎಂದು ಮಠದ ಮೂಲಗಳು ತಿಳಿಸಿವೆ.

ರಾಜಧಾನಿಗೆ ಆಗಮಿಸಿದ ರಾಷ್ಟ್ರಪತಿ ಮುರ್ಮು ಅವರನ್ನು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಥ್, ಕೇಂದ್ರ ಸಚಿವ ವಿ. ಸೋಮಣ್ಣ, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಮತ್ತಿತರರು ಸ್ವಾಗತಿಸಿದರು.

5 ವರ್ಷದಲ್ಲಿ ಕರ್ನಾಟಕದ ಟೋಲ್‌ಗಳಿಂದಲೇ 23 ಸಾವಿರ ಕೋಟಿ ಲೂಟಿ: ಸುರ್ಜೇವಾಲ

ಏ.1 ದೋಚುವ ದಿನವನ್ನಾಗಿಸಿ: ಕೈ ಕೆಂಡ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಏಪ್ರಿಲ್ 1ರಿಂದ ದೇಶದ ವಿವಿಧ ಅಗತ್ಯ ವಸ್ತುಗಳ ದರ ಏರಿಕೆಯಾಗುತ್ತಿರುವುದನ್ನು ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಟೀಕಿಸಿದ್ದು, ನರೇಂದ್ರ ಮೋದಿ ನೇತೃತ್ವದ ಸರಕಾರ ಅಧಿಕಾರಕ್ಕೆ ಬಂದಾಗಿನಿಂದ ಏ.1 ದೋಚುವ ದಿನವನ್ನಾಗಿಸಿಕೊಂಡಿದೆ ಎಂದು ಕಿಡಿಕಾರಿದ್ದಾರೆ.

ಕೆಪಿಸಿಸಿ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರತಿವರ್ಷದಂತೆ ಈ ವರ್ಷವೂ ಏ.1ರಂದು ಟೋಲ್, ಔಷಧ ಸೇರಿದಂತೆ ಹಲವು ವಸ್ತುಗಳ ಬೆಲೆ ಏರಿಕೆಯಾಗಲಿದೆ. ಈ ಮೂಲಕ ಬಿಜೆಪಿ ಸರಕಾರ ಜನರನ್ನು ಲೂಟಿ ಮಾಡಲು ಹೊರಟಿದೆ. ಕೇಂದ್ರ ಬೆಲೆ ಏರಿಕೆ ಮಾಡಿ ಜನರ ಜೀವನ ಕಸಿಯಲಿದೆ ಎಂದು ವಾಗ್ದಾಳಿ ನಡೆಸಿದರು.

ದೇಶಾದ್ಯಂತ ಏ. 1ರಿಂದ ಶೇ 5ರಷ್ಟು ಟೋಲ್ ದರ ಹೆಚ್ಚಳವಾಗಲಿದೆ. 2019ರಿಂದ ಈವರೆಗೆ ಕರ್ನಾಟಕ ಒಂದರಲ್ಲಿ ಕೇಂದ್ರ ಸರಕಾರ 23 ಸಾವಿರ ಕೋಟಿ ರು. ವಸೂಲಿ ಮಾಡಿದೆ. 2025-26 ರಲ್ಲಿಯೇ 4600 ಕೋಟಿ ರು. ಸಂಗ್ರಹಿಸುವ ಅಂದಾಜಿದೆ. ಈಗ ಶೇ.5ರಷ್ಟು ಹೆಚ್ಚಳ ಮಾಡುವುದರಿಂದ ರಾಜ್ಯದ ಜನರ ಮೇಲೆ ಹೆಚ್ಚುವರಿಯಾಗಿ 250 ಕೋಟಿ ರು. ಹೊರೆ ಬೀಳಲಿದೆ. ಮೈಸೂರು- ಬೆಂಗಳೂರು ಎಕ್ಸ್‌ಪ್ರೆಸ್ ಹೆದ್ದಾರಿ ಉದ್ಘಾಟನೆಯಾಗುವ ಮೊದಲೇ ಟೋಲ್ ಸಂಗ್ರಹಿಸಿದೆ ಎಂದು ಆರೋಪಿಸಿದರು.

ಜೀವ ರಕ್ಷಕಗಳ ಮೇಲೆಯೂ ದರ ಏರಿಕೆ: ಕೇವಲ ಟೋಲ್ ಮಾತ್ರವಲ್ಲದೇ, ಕೇಂದ್ರ ಸರಕಾರ ಜೀವರಕ್ಷಕ ಔಷಧಿಗಳ ಮೇಲೆಯೂ ತೆರಿಗೆ ಹೆಚ್ಚಿಸಲು ಮುಂದಾಗಿದೆ. ಸುಮಾರು 900 ಅಗತ್ಯ ಔಷಧಿಗಳ ಬೆಲೆ ಶೇ.12.12ರಷ್ಟು ಹೆಚ್ಚಾಗುತ್ತಿದೆ. ಇದು ರೋಗಿಗಳಿಗೆ ನೋವು ನೀಡುವ ಮತ್ತೊಂದು ಬೆಲೆ ಏರಿಕೆ. ಬಿಪಿ, ಶುಗರ್ ಮಾತ್ರೆಗಳ ದರವೂ ಏರಿಕೆ ಆಗುತ್ತಿದೆ. ಡಯಾಬಿಟಿಸ್, ಬಿಪಿಗೆ ಬೇಕಾದ 31 ಹೊಸ ಔಷಧಗಳ ಬೆಲೆ ಏರಿಕೆ ಆಗುತ್ತಿದೆ. ಹೃದಯಕ್ಕೆ ಅಳವಡಿಸುವ ಸ್ಟಂಟ್ ಬೆಲೆ ಕೂಡ ಹೆಚ್ಚಾಗುತ್ತಿದೆ ಎಂದು ಸುರ್ಜೇವಾಲಾ ಆರೋಪಿಸಿದರು.

ದೇಶದಲ್ಲಿ ಬೆಲೆ ಏರಿಕೆಯಿಂದ ಜನರು ನರಳುತ್ತಿದ್ದಾರೆ. ಕೇಂದ್ರದ ಅನೇಕ ತಪ್ಪುಗಳು, ಯುದ್ಧದ ನೆಪದಲ್ಲಿ ಕಷ್ಟ ಅನುಭವಿಸುವಂತಾಗಿದೆ. ತಪ್ಪು ವಿದೇಶಿ ನೀತಿಯಿಂದ ನಾವೆಲ್ಲ ನರಳುತ್ತಿದ್ದೇವೆ. ಕೇಂದ್ರ ಸರಕಾರದ ಉಜ್ವಲ ಹೋಗಿ, ಸೌದೆ ಯೋಜನೆ ಆರಂಭ. ಹೋಟೆಲ್‌ನವರು ಎಲ್‌ಪಿಜಿ ಸಿಗದೆ ಪರದಾಡುತ್ತಿದ್ದಾರೆ. ಅನಿಲ ಬಿಟ್ಟು ಸೌದೆ ಅವಲಂಬಿಸುವ ಪರಿಸ್ಥಿತಿ ಬಂದಿದೆ.

-ಡಿ.ಕೆ.ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ

ಕಾಂಗ್ರೆಸ್ ಸರಕಾರ ಪ್ರತಿಯೊಬ್ಬ ಕನ್ನಡಿಗ ಹಾಗೂ ಭಾರತೀಯರ ಪರವಾಗಿದ್ದೇವೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರಕಾರ ದೇಶದ ಜನರ ಮೇಲೆ ಬೆಲೆ ಏರಿಕೆ ಮಾಡಿದೆ. ಆ ಮೂಲಕ, ಜನರ ಜೇಬಿಗೆ ಕತ್ತರಿ ಹಾಕಲು ಮುಂದಾಗಿದೆ. ಈ ರೀತಿಯ ಲೂಟಿಯನ್ನು ಸಹಿಸಲು ಸಾಧ್ಯವಿಲ್ಲ.

-ರಣದೀಪ್ ಸಿಂಗ್ ಸುರ್ಜೇವಾಲ, ರಾಜ್ಯ ಕಾಂಗ್ರೆಸ್ ಉಸ್ತುವಾರಿ

ರಾಜ್ಯದಲ್ಲಿ ಯಾವ ವರ್ಷ ಎಷ್ಟು ಟೋಲ್ ಸಂಗ್ರಹ

ವರ್ಷ	ಸಂಗ್ರಹಿಸಿದ ಟೋಲ್ ಮೊತ್ತ
2019-20	1,882 ಕೋಟಿ ರು.
2020-21	1,866 ಕೋಟಿ ರು.
2021-22	2,351 ಕೋಟಿ ರು.
2022-23	3,517 ಕೋಟಿ ರು.
2023-24	4,086 ಕೋಟಿ ರು.
2024-25	4,320 ಕೋಟಿ ರು.
2025-26	4,600 ಕೋಟಿ ರು. (ಅಂದಾಜು)

ಸಮಾಚಾರ ಸಣ್ಣದಲ್ಲ

ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಏ.5ರಂದು

ಶಿರಸಿ: ಬೆಂಗಳೂರಿನ ಸಪ್ತಕ ಮತ್ತು ಬಿಜಾಪುರೆ ಹಾರ್ಮೋನಿಯಮ್ ಫೌಂಡೇಶನ್ ಸಾಗರ ಸಂಸ್ಥೆಗಳಿಂದ ಋತು ಗಾನ ವ್ಯಾಖ್ಯಾನ ಎಂಬ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ನಗರದ ನೆಮ್ಮದಿ ರಂಗಧಾಮದಲ್ಲಿ ಏ.5ರ ಸಂಜೆ 5ಗಂಟೆಯಿಂದ ರಂಗಧಾಮದಲ್ಲಿ ನಡೆಯಲಿದೆ. ಈ ಸಂದರ್ಭದಲ್ಲಿ ಡಾ. ರವೀಂದ್ರ ಕಾಟೋಟಿ ಅವರು ರಚಿಸಿ ಸಂಗೀತ ಸಂಯೋಜಿಸಿರುವ ಆರು ಋತುಗಳ ವರ್ಣನೆಯಿರುವ ರಾಗಾಧಾರಿತ ಕನ್ನಡದ ಬಂದಿಶ್ ಗಳ ಜೊತೆಗೆ ಅವೇ ರಾಗಗಳ ಪಾರಂಪರಿಕ ಬಂದಿಶ್ ಗಳನ್ನು ರೇಷ್ಮಾ ಭಟ್ ಮತ್ತು ಆದಿತ್ಯ ಪಲ್ಲಕ್ಕಿ ಅವರು ಹಾಡಲಿದ್ದಾರೆ. ಈ ರಚನೆಗಳಿಗೆ ಸಂದರ್ಭಸೂಚಿ ವ್ಯಾಖ್ಯಾನವನ್ನು ಡಾ. ಶತಾವಧಾನಿ ಆರ್. ಗಣೇಶ್ ಮಾಡಲಿದ್ದಾರೆ. ಡಾ. ರವೀಂದ್ರ ಕಾಟೋಟಿ ಅವರು ಹಾರ್ಮೋನಿಯಮ್ ಮತ್ತು ಗುರುರಾಜ ಆಡುಕಳ ಅವರು ತಬಲಾ ಸಹವಾದನ ಸಹಕಾರ ನೀಡಲಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಈ ವಿಶಿಷ್ಟ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಸಪ್ತಕದ ಜಿ. ಎಸ್. ಹೆಗಡೆ, ಹಾಗೂ ಡಾ. ರವೀಂದ್ರ ಕಾಟೋಟಿ ಪ್ರಕಟನೆಯಲ್ಲಿ ಕೋರಿದ್ದಾರೆ.

ಶಿಕ್ಷಕರ ಅರ್ಹತಾ ಪರೀಕ್ಷೆಯಲ್ಲಿ ಸಾಧನೆ

ಅಂಕೋಲಾ: ಕೇಂದ್ರೀಯ ಮಾಧ್ಯಮಿಕ ಶಿಕ್ಷಣ ಮಂಡಳಿಯು ನಡೆಸಿದ ಕೇಂದ್ರೀಯ ಶಿಕ್ಷಕರ ಅರ್ಹತಾ ಪರೀಕ್ಷೆಯಲ್ಲಿ ಇಲ್ಲಿನ ಕೆಎಲ್‌ಇ ಸಂಸ್ಥೆಯ ಶೇಷಗಿರಿ ಪಿಕಳೆ ಶಿಕ್ಷಣ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಗಮನಾರ್ಹ ಸಾಧನೆ ಮಾಡಿದ್ದಾರೆ. ಮಹಾ ವಿದ್ಯಾಲಯದ ವಿದ್ಯಾರ್ಥಿಗಳಾದ ಬಿ.ಎನ್. ನಿರಂಜನ ಕುಮಾರ, ಕಾರ್ತಿಕ ಶೆಟ್ಟಿ ಹಾಗೂ ಸ್ಮಿತಾ ಅಂಬಿಗ ಅವರು ಈ ಪ್ರತಿಷ್ಠಿತ ಪರೀಕ್ಷೆಯಲ್ಲಿ ಅರ್ಹತೆ ಗಳಿಸಿದ ಸಾಧಕರು. ರಾಷ್ಟ್ರಮಟ್ಟದ ಅತ್ಯಂತ ಕಠಿಣ ಪರೀಕ್ಷೆಗಳಲ್ಲಿ ಒಂದೆಂದು ಪರಿಗಣಿಸಲ್ಪಟ್ಟಿರುವ ಸಿ-ಟೆಟ್ ನಲ್ಲಿ ಉತ್ತೀರ್ಣರಾಗುವ ಮೂಲಕ, ಈ ವಿದ್ಯಾರ್ಥಿಗಳು ದೇಶಾದ್ಯಂತ ಇರುವ ಕೇಂದ್ರೀಯ ವಿದ್ಯಾಲಯಗಳು ಹಾಗೂ ವಿವಿಧ ಪ್ರತಿಷ್ಠಿತ ಶಾಲೆಗಳಲ್ಲಿ ಶಿಕ್ಷಕರ ಹುದ್ದೆಗೆ ಅರ್ಜಿ ಸಲ್ಲಿಸಲು ಅರ್ಹತೆ ಪಡೆದಿದ್ದಾರೆ. ವಿದ್ಯಾರ್ಥಿಗಳ ಈ ಶೈಕ್ಷಣಿಕ ಸಾಧನೆಗೆ ಕೆಎಲ್‌ಇ ಸಂಸ್ಥೆಯ ಆಡಳಿತ ಮಂಡಳಿಯ ಪದಾಧಿಕಾರಿಗಳು, ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳು ಹರ್ಷ ವ್ಯಕ್ತಪಡಿಸಿದ್ದಾರೆ ಎಂದು ಪ್ರಾಚಾರ್ಯರಾದ ಡಾ. ವಿನಾಯಕ ಜಿ. ಹೆಗಡೆ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಗ್ರಾಮೀಣ ಭಾಗದ ವಿದ್ಯಾರ್ಥಿಗಳು ರಾಷ್ಟ್ರೀಯ ಮಟ್ಟದ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಯಶಸ್ಸು ಪಡೆಯುತ್ತಿರುವುದು ಜಿಲ್ಲೆಯ ಶೈಕ್ಷಣಿಕ ವಲಯದಲ್ಲಿ ಮೆಚ್ಚುಗೆಗೆ ಪಾತ್ರವಾಗಿದೆ.

ಎಸಿ,ಎಸ್ಟಿ ಜನರ ಸಮಸ್ಯೆ ಇತ್ಯರ್ಥ ಪಡಿಸಿ

ಕಾರವಾರ: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಕುಂದು ಕೊರತೆಗಳನ್ನು ತಮ್ಮ ಹಂತದಲ್ಲಿ ಪರಿಶೀಲಿಸಿ ಸಮಸ್ಯೆಗಳನ್ನು ಶೀಘ್ರವಾಗಿ ಇತ್ಯರ್ಥ ಪಡಿಸುವಂತೆ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಕೆ.ಲಕ್ಷ್ಮೀಪ್ರಿಯಾ ನಿರ್ದೇಶನ ನೀಡಿದರು. ಅವರು ಮಂಗಳವಾರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಜಿಲ್ಲಾ ಮಟ್ಟದ ಜಾಗೃತ ಮತ್ತು ಉಸ್ತುವಾರಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಮೇಲೆ ನಡೆಯುವ ದೌರ್ಜನ್ಯವನ್ನು ತಡೆಯುವ ನಿಟ್ಟಿನಲ್ಲಿ ತಕ್ಷಣವೇ ಸಂತ್ರಸ್ತರಿಗೆ ಸ್ಪಂದಿಸಬೇಕು ಎಂದು ಸೂಚಿಸಿದ ಅವರು, ಜಿಲ್ಲೆಯಲ್ಲಿ ಈ ಹಿಂದೆ ನಡೆದಿರುವ ದೌರ್ಜನ್ಯದ ಪ್ರಕರಣಗಳನ್ನು ಶೀಘ್ರವಾಗಿ ಪರಿಹರಿಸುವಂತೆ ತಿಳಿಸಿದರು. ಜಿಲ್ಲೆಯಲ್ಲಿ ಸ್ಮಶಾನಗಳಿಗೆ ಮೀಸಲಿಟ್ಟ ನಿವೇಶನಗಳನ್ನು ಅತಿಕ್ರಮಣ ಮಾಡಿರುವ ಕುರಿತು ದೂರುಗಳು ಕೇಳಿಬರುತ್ತಿದ್ದು ಈ ಬಗ್ಗೆ ಸಮಗ್ರ ವರದಿ ನೀಡುವಂತೆ ತಿಳಿಸಿದ ಅವರು, ಅಲೆಮಾರಿ ಜನಾಂಗದವರಿಗೆ ವಸತಿ ಸೌಲಭ್ಯ ಕಲ್ಪಿಸುವ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದರು. ಸಭೆಯಲ್ಲಿ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಕೃಷ್ಣಮೂರ್ತಿ, ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಉಮೇಶ ವೈ.ಕೆ., ವಿವಿಧ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳು ಸಮಿತಿ ಸದಸ್ಯರು ಮತ್ತಿತರರು ಇದ್ದರು.

ಇಂದು ನಾನಾ ಕಡೆ ವಿದ್ಯುತ್ ವ್ಯತ್ಯಯ

ಕಾರವಾರ: ಹೆಸ್ಕಾಂ, ಕುಮಟಾ ಉಪವಿಭಾಗದ ಗೋಕರ್ಣ ಶಾಖೆಯ ಮಾದನಗೇರಿ 11ಕೆ.ವಿ ಕೇಬಲ್ ಬಿಚ್ಚಿ ಅಳವಡಿಸುವ ಕಾಮಗಾರಿಯು ಬಳಲೆ ಗ್ರಾಮದಲ್ಲಿ ಇರುವುದರಿಂದ ಅಂಕೋಲಾ ಉಪ-ವಿಭಾಗ ವ್ಯಾಪ್ತಿಯ ಬಳಲೆ, ದೇವಿಗದ್ದೆ, ಉಳವರೆ ವ್ಯಾಪ್ತಿಯ ಎಲ್ಲ ಭಾಗಗಳಲ್ಲಿ ಏ.1 ಬೆಳಗ್ಗೆ 10 ಗಂಟೆಯಿಂದ ಸಂಜೆ 5 0ಗಂಟೆ ವರೆಗೆ ವಿದ್ಯುತ್ ವ್ಯತ್ಯಯವಾಗಲಿದ್ದು, ಗ್ರಾಹಕರು ಸಹಕರಿಸುವಂತೆ ಹೆಸ್ಕಾಂ, ಕುಮಟಾ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರು(ವಿ) ರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

{ಪ್ರಿಯಾಂಕ್ ಖರ್ಗೆ} ಸಚಿವ,

ವಿಬಿ ಜಿ ರಾಮ್ ಜಿ ಯೋಜನೆಯನ್ನು ಗ್ರಾಮೀಣ ಕಾರ್ಮಿಕರಿಗೆ, ಗ್ರಾಮಗಳಿಗೆ ತಲುಪಿಸಲು ಬೇಕಾದ ಅಗತ್ಯ ರೂಪುರೇಷೆಗಳನ್ನು ಕೇಂದ್ರ ಸರಕಾರ ಈಗಾಗಲೇ ಸಿದ್ಧಪಡಿಸಬೇಕಿತ್ತು. ಆದರೆ, ಇನ್ನೂ ಯಾವುದೇ ನಿಯಮಗಳು ರೂಪುಗೊಂಡಿಲ್ಲ. ನಿಧಿ ಹಂಚಿಕೆಯ ಬಗ್ಗೆ ಸ್ಪಷ್ಟತೆ ಇಲ್ಲ.

ಬನವಾಸಿ ಜಾತ್ರೆಗೆ ಹರಿದು ಬಂದ ಜನಸಾಗರ | ಮಧ್ಯರಾತ್ರಿ ಮುಗಿಲು ಮುಟ್ಟಿದ ಜಯಘೋಷ

ವಿಜೃಂಭಣೆಯ ಮಧುಕೇಶ್ವರ ರಥೋತ್ಸವ

ವಿಶ್ವವಾಣಿ ಸುದ್ದಿಮನೆ ಬನವಾಸಿ:

ಶ್ರೀ ಕ್ಷೇತ್ರ ಬನವಾಸಿಯ ಮಾತೋಬರ ಶ್ರೀ ಉಮಾಮಧುಕೇಶ್ವರ ದೇವರ ಜಾತ್ರಾ ಮಹೋತ್ಸವಕ್ಕೆ ಹರಿದು ಬಂದ ಜನಸಾಗರ ದೇವರ ದರ್ಶನ ಪಡೆದು ಕೃತಾರ್ತರಾದರು.

ದೇವರ ದರ್ಶನ ಪಡೆಯಲು ಭಕ್ತರು ರಾತ್ರಿ ಒಂದು ಗಂಟೆ ವರೆಗು ಬರುತ್ತಲೇ ಇದ್ದರು. ಈ ಬಾರಿ ದರ್ಶನಾರ್ತಿಗಳು ಹೆಚ್ಚಿನ ಪ್ರಮಾಣ ಇದ್ದು ಅವರೆಲ್ಲರಿಗೂ ದರ್ಶನ ವ್ಯವಸ್ಥೆ ಮಾಡಿ ರಾತ್ರಿ ಒಂದು ಗಂಟೆಗೆ ರಥ ಹೊರಡುವಂತೆ ಆಯಿತು. ಸಾವಿರಾರು ಭಕ್ತರ ಜಯಗೋಷಣೆ, ಡೊಳ್ಳು ವಾಲಗದ ನಡುವೆ ರಥೋತ್ಸವ ವಿಜೃಂಭಣೆಯಿಂದ ನಡೆಯಿತು.

ಮಧ್ಯರಾತ್ರಿ ಒಂದು ಗಂಟೆ ಆರು ನಿಮಿಷಕ್ಕೆ ರಥ ಹೊರಟರು ಕೂಡ ರಥ ಬೀದಿ ಕೊನೆಗೆ ಒಂದೇ ತಾಸಿನಲ್ಲಿ ಮುಟ್ಟಿ, ಅಲ್ಲಿ ಪೂಜಾ ಕಾರ್ಯ ಆದ ನಂತರ ಪುನಃ ಹೊರಟು ಬೆಳಗಿನ ಜಾವ ಐದು ಗಂಟೆ ಒಂಬತ್ತು ಗಂಟೆಗೆ ಸಾಂಗವಾಗಿ ನೆಲೆ ನಿಂತಿತು. ಈ ಸಡಗರ ಸಂಭ್ರಮ ನೋಡಿ ಜನ ಖುಷಿ ಪಟ್ಟು ಅವರ ಜೈಕಾರ ಮುಗಿಲು ಮುಟ್ಟಿತು. ತಾಂತ್ರಿಕಾರದ ವೆ. ಮೂ. ಶ್ರೀನಿಧಿ ಭಟ್ ಮಂಗಳೂರು ಅವರ ಮುಖ್ಯ ಪೌರೋಹಿತ್ಯದಲ್ಲಿ ವೈದಿಕರೆಲ್ಲರ ಸಹಕಾರದಲ್ಲಿ ಜಾತ್ರಾ ಧಾರ್ಮಿಕ ಕಾರ್ಯಕ್ರಮ ವಿಧಿ ಒತ್ತಾಗಿ ನೆರವೇರಿತು.

ಶ್ರೀ ದೇವಸ್ಥಾನದ ಆಡಳಿತ ಮಂಡಳಿ ಅಧ್ಯಕ್ಷ

ಶ್ರೀ ಉಮಾ ಮಧುಕೇಶ್ವರ ದೇವರ ರಥೋತ್ಸವ

ಸುಧಾಕರ್ ಹೇಮಾದ್ರಿ, ಯವರ ನೇತೃತ್ವದಲ್ಲಿ ಉಪಾಧ್ಯಕ್ಷ ಪ್ರಕಾಶ್ ಬಂಗ್ಲೆ, ಕಾರ್ಯದರ್ಶಿ ಲತಾ ಶೆಟ್ಟಿ, ಕೋಶಾಧ್ಯಕ್ಷ ಮೇಘರಾಜ ನರೇಗಲ್, ಟ್ರಸ್ಟಿಗಳಾದ ವಿನಾಯಕ ಮಂಗಳೂರು, ಜಿ. ಜಿ. ಹೆಗಡೆ, ಗೀತಾ ಯಜಮಾನ, ಶಿವಾಜಿ ಚೆನ್ನಯ್ಯ, ಪರಶುರಾಮ ಉಪ್ಪಾರ ಇವರೆಲ್ಲ ಕ್ರಿಯಾಶೀಲರಾಗಿ ಕಾರ್ಯ ನಿರ್ವಹಿಸಿದರು. ತಾಂತ್ರಿಕರು, ಪುರೋಹಿತರು, ಅರ್ಚಕರು, ಉಪಾಧಿವಂತರು, ಬಾಬುದಾರರು, ಶ್ರೀ ಕ್ಷೇತ್ರದ ಸೀಮಾ ಭಕ್ತರ ಅವಿರತವಾಗಿ ಪ್ರಯತ್ನದ ಫಲ ಜಾತ್ರೆ ವೈಭವೋಪೇತವಾಗಿ ನೆರವೇರಿತು.

ಪ್ರಮುಖರಿಂದ ದರ್ಶನ: ಕ್ಷೇತ್ರದ ಶಾಸಕ ಶಿವರಾಮ ಹೆಬ್ಬಾರ, ಯುವ ಮುಖಂಡ ವಿವೇಕ ಹೆಬ್ಬಾರ್ ದರ್ಶನ ಪಡೆದು ಅನ್ನದಾನದ ಕಾರ್ಯಕ್ರಮದಲೀ ಪಾಲ್ಗೊಂಡರು. ಮಾಜಿ ಶಾಸಕ ವಿ.ಎಸ್. ಪಾಟೀಲ್, ಸಹಾಯಕ ಕಮಿಷನರ್ ಚಂದ್ರಶೇಖರ ಜೆ.ಸಿ.ತಹಸೀಲ್ದಾರ ರಮೇಶ್ ಬಿ.ಹೆಗಡೆ, ಪುರಾತತ್ವ ಇಲಾಖೆಯ ರಾಕೇಶ್ ಬಿ.ಎಸ್., ಸಿ. ಎಫ್. ನಾಯ್ಕ, ದ್ಯಾಮಣ್ಣ ದೊಡ್ಮನಿ ಸೇರಿದಂತೆ ಗಣ್ಯಾತಿ ಗಣ್ಯರು ಅನೇಕರ ದರ್ಶನ ಪಡೆದರು. ಶಿರಸಿ ಡಿವೈಎಸ್‌ಪಿ ಗೀತಾ ಪಾಟೀಲ್ ಮಾರ್ಗ ದರ್ಶನದಲ್ಲಿ, ಸಿಪಿಐ ಶಶಿಕಾಂತ್ ವರ್ಮಾ ನೇತೃತ್ವದಲ್ಲಿ, ಬನವಾಸಿ ಪಿಎಸ್‌ಐ ಮಹಾಂತೇಶ ಕಂಬಾರ ಅವರ ಮುಂದಾಳತ್ವದ ಬಂದೋಬಸ್ತ್ ವಿಚಾರದಲ್ಲಿ ಅಚ್ಚುಕಟ್ಟಾಗಿ ಮಾಡಲಾಗಿತ್ತು. ಹೆಸ್ಕಾಂ ಅವರ ಪ್ರಯತ್ನ ಫಲ ವಿದ್ಯುತ್ ಸಮರ್ಪಕ ವಾಗಿತ್ತು. ಬಹುತೇಕ ಲೋಕೋಪಯೋಗಿ ಸೇರಿದಂತೆ ಎಲ್ಲ ಇಲಾಖೆ ಮುತುವರ್ಜಿ ವಹಿಸಿ ಕಾರ್ಯ ಮಾಡಿದವು.

ವಡೆಯರ್‌ರಿಂದ ಅನ್ನ ಪ್ರಸಾದಕ್ಕೆ ಚಾಲನೆ

ಅನ್ನದಾನ ಸೇವೆ ಪ್ರತಿ ವರ್ಷದ ಪದ್ಧತಿಯಂತೆ ಟಿ. ಜಿ. ನಾಡಿಗೇರ ಕುಟುಂಬದವರಿಂದ ದೇವಸ್ಥಾನದಲ್ಲಿ ಭಕ್ತರಿಗೆ ಅನ್ನ ಪ್ರಸಾದ ವ್ಯವಸ್ಥೆ ಮಾಡಲಾಯಿತು. ಟಿ . ಜಿ.ನಾಡಿಗೇರ ಮತ್ತು ಸುಧಾ ನಾಡಿಗೇರ ಸ್ಮರ್ಣಾರ್ತ ನಾಡಿಗೇರ ಕುಟುಂಬ ದವರು ನಡೆಸಿದ ಅನ್ನ ಪ್ರಸಾದ ಸೇವೆಗೆ ಹಿರಿಯರಾದ ರಾಜಶೇಖರ ವಡೆಯರ್‌ಚಾಲನೆ ನೀಡಿದರು. ದತ್ತರಾಜ್ ನಾಡಿಗೇರ ಸೇರಿದಂತೆ ನಾಡಿಗೇರ ಕುಟುಂಬದವರು ಅನ್ನದಾನ ಸೇವೆ ಸಲ್ಲಿಸಿದರು. ಸಾವಿರಾರು ಭಕ್ತರು ಪ್ರಸಾದ ಸ್ವೀಕರಿಸಿದರು.

ಲಕ್ಷಾಂತರ ಜನರಿಗೆ ಕಣ್ಣಿನ ಚಿಕಿತ್ಸೆ | ಸಾವಿರಾರು ಬಡ ಜನರಿಗೆ ಮಾನವೀಯ ಸೇವೆ

ಲಯನ್ಸ್ ರೇವಣಕರ ಕಣ್ಣಿನ ಆಸ್ಪತ್ರೆಗೆ ಎರಡು ದಶಕ

ಸದಾಶಿವ.ಎಸ್.ಹೆಗಡೆ, ಕುಮಟಾ

ಇಲ್ಲಿರುವ ಲಯನ್ ರೇವಣಕರ ಚೆರಿಟೇಬಲ್ ಕಣ್ಣಿನ ಆಸ್ಪತ್ರೆಯು ಎರಡು ದಶಕಗಳ ಸಾರ್ಥಕ ಸೇವೆಯನ್ನು ಮಾ.31ರಂದು ಪೂರೈಸಿತು.

2006ರ ಮಾ.31ರಂದು ಆರಂಭಗೊಂಡ ಈ ಆಸ್ಪತ್ರೆ ಈ ಎರಡು ದಶಕಗಳ ಸೇವಾ ಅವಧಿಯಲ್ಲಿ ಪಟ್ಟಣಿಗರೊಂದಿಗೆ ಅದರಲ್ಲೂ ವಿಶೇಷವಾಗಿ ಹೆಚ್ಚಿನ ಗ್ರಾಮೀಣ ಜನತೆಗೆ ಸೇವೆ ಸಲ್ಲಿಸಿ ಜನಮನ್ನಣೆ ಗಳಿಸಿದೆ.

ಲಕ್ಷಾಂತರ ಜನರ ಕಣ್ಣು ತಪಾಸಣೆ ನಡೆಸಿ ಅವರಿಗೆ ಸೂಕ್ತ ಚಿಕಿತ್ಸೆ ಒದಗಿಸುವುದರ ಜೊತೆಗೆ, ಸಹಸ್ರಾರು ಶಸ್ತ್ರಚಿಕಿತ್ಸೆಗಳನ್ನು ಯಶಸ್ವಿಯಾಗಿ ಈ ಆಸ್ಪತ್ರೆ ಪೂರೈಸಿದೆ. ನಿರಂತರವಾಗಿ ಜಿಲ್ಲೆಯ ವಿವಿಧೆಡೆ ಉಚಿತ ಕ್ಯಾಂಪ್ ಗಳನ್ನು ನಡೆಸುತ್ತ ಅವಶ್ಯವಿರುವ ಸಹಸ್ರಾರು ಬಡರೋಗಿಗಳಿಗೆ ಆಸ್ಪತ್ರೆಯಲ್ಲಿ ಊಟೋಪಚಾರ, ವಸತಿ ಸಹಿತ ಉಚಿತ ಶಸ್ತ್ರಚಿಕಿತ್ಸೆಗಳನ್ನು ನೆರವೇರಿಸಿ ಮಾನವೀಯ ಸೇವೆಯಲ್ಲಿ ಈ ಸಂಸ್ಥೆ ವಿಶಿಷ್ಟ ಸ್ಥಾನವನ್ನು ಪಡೆದಿದೆ. ಆಧುನಿಕ ಯಂತ್ರೋಪಕರಣಗಳು ಹಾಗೂ ನುರಿತ ನೇತ್ರತಜ್ಞ ವೈದ್ಯರನ್ನು ಒಳಗೊಂಡ ವೈದ್ಯಕೀಯ ತಂಡದೊಂದಿಗೆ ಕಾರ್ಯನಿರ್ವಹಿಸುತ್ತಿರುವ ಈ ಆಸ್ಪತ್ರೆ, ನೇತ್ರ ಚಿಕಿತ್ಸೆಯಲ್ಲಿ ವಿಶ್ವಾಸಾರ್ಹ ಕೇಂದ್ರವಾಗಿ ಗುರುತಿಸಿಕೊಂಡಿದೆ. ಶಾಲಾ ಮಕ್ಕಳ ಕಣ್ಣು ತಪಾಸಣೆ, ನೇತ್ರದಾನ ಜಾಗೃತಿ ಮತ್ತು ಚಾಲಕರಿಗಾಗಿ ವಿಶೇಷ ಉಚಿತ ತಪಾಸಣೆ ಕಾರ್ಯಕ್ರಮಗಳನ್ನೂ ಹಮ್ಮಿಕೊಳ್ಳುತ್ತಿದೆ. ಸಂಸ್ಥೆಯ ಈ ಸಾಧನೆಗೆ ಲಯನ್ಸ್ ಸದಸ್ಯರು, ವೈದ್ಯರು, ಸಿಬ್ಬಂದಿ, ದಾನಿಗಳು ಹಾಗೂ ಸಾರ್ವಜನಿಕರ ಸಹಕಾರ ಪ್ರಮುಖವಾಗಿದೆ ಎಂದು ಲಯನ್ಸ್ ಹ್ಯುಮನಿಟೇರಿಯನ್ ಸರ್ವೀಸ್ ಟ್ರಸ್ಟ್ ನ ಚೇರಮನ್ ಮದನ ನಾಯಕ ಅವರು ಪತ್ರಿಕಾ ಪ್ರಕಟಣೆಯ ಮೂಲಕ ತಿಳಿಸುತ್ತ, ಮುಂಬರುವ ದಿನಗಳಲ್ಲಿಯೂ ಸಂಸ್ಥೆಯ ಸೇವಾ ಕಾರ್ಯಗಳಿಗೆ ಎಲ್ಲರ ಸಹಕಾರ ಕೋರಿದ್ದಾರೆ.

ಲಯನ್ಸ್ ರೇವಣಕರ ಚೆರಿಟೇಬಲ್ ಕಣ್ಣಿನ ಆಸ್ಪತ್ರೆ.

ಆರೋಗ್ಯ ಉತ್ತಮವಾಗಿರಲು ರಕ್ತದಾನ ಮಾಡಿ

ಯಲ್ಲಾಪುರ: ಮನುಷ್ಯನಿಗೆ ಎಲ್ಲದಕ್ಕೂ ಮಿಗಿಲಾಗಿ ಆರೋಗ್ಯ ಸಂಪತ್ತು ಮಹತ್ವದ್ದು. ಅದರಲ್ಲೂ ನಮ್ಮ ಆರೋಗ್ಯ ನಿರಂತರ ಉತ್ತಮವಾಗಿರಲು ರಕ್ತದಾನ ಮಾಡುತ್ತಿರಬೇಕು. ಅಲ್ಲದೇ, ರಕ್ತದಾನದಿಂದ ಇನ್ನೊಂದು ಜೀವ ಉಳಿಸಿದ ಪುಣ್ಯವೂ ಲಭಿಸುತ್ತದೆ ಎಂದು ತಾಲೂಕಾ ವೈದ್ಯಾಧಿಕಾರಿ ಡಾ.ನರೇಂದ್ರ ಪವಾರ ತಿಳಿಸಿದರು.

ಮಂಗಳವಾರ ಪಟ್ಟಣದ ಅಡಿಕೆ ಭವನದಲ್ಲಿ ಜ್ಞಾನ ತರಂಗಿಣಿ ಫೌಂಡೇಶನ್ ಹಮ್ಮಿಕೊಂಡ ತಾಲೂಕಾ ಮಟ್ಟದ ಉಚಿತ ಆರೋಗ್ಯ ಮತ್ತು ರಕ್ತದಾನ ಶಿಬಿರ ಉದ್ಘಾಟಿಸಿ ಮಾತನಾಡಿದರು.

ಎಲ್ಲೆಡೆ ಆರೋಗ್ಯ ಶಿಬಿರಗಳು ನಡೆಯುತ್ತವೆ. ಸಹಜವಾಗಿ ಹಳ್ಳಿಗಳಲ್ಲಿಯೂ ಆರೋಗ್ಯ ತಪಾಸಣೆ ನಮ್ಮ ವೈದ್ಯರು, ನರ್ಸ್‌ಗಳು ಮಾಡುತ್ತಿರುತ್ತಾರೆ. ಆದರೆ ರಕ್ತದಾನ ಶಿಬಿರ ನಡೆಯುವುದು ಅಪರೂಪ. ಆದ್ದರಿಂದ ಇಂತಹ ಸಂಸ್ಥೆಗಳು ರಕ್ತದಾನ ಶಿಬಿರ ಏರ್ಪಡಿಸುವುದರಿಂದ ಸಮಾಜಕ್ಕೆ ಹೆಚ್ಚಿನ ಸಹಕಾರಿ. ಅಲ್ಲದೇ ನಮ್ಮ ಪ್ರಥಮ ದರ್ಜೆ ಕಾಲೇಜಿನವರು ಕೂಡ ಶಿಬಿರ ನಡೆಸಿ, ವಿದ್ಯಾರ್ಥಿಗಳಿಗೆ ರಕ್ತದಾನದ ಮಹತ್ವ ಅರಿಯುವಂತೆ ಮಾಡಿದ್ದಾರೆ ಎಂದರು.

ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯ ಡಾ.ಆರ್.ಡಿ.ಜನಾರ್ಧನ ಮಾತನಾಡಿ, ರಕ್ತದಾನ ಮಹಾಪುಣ್ಯ. ರಕ್ತದಾನದ ಮಹತ್ವದ ಕುರಿತು ಸಮಾಜದಲ್ಲಿ ಜಾಗೃತಿ ಮೂಡಿಸಬೇಕಾಗಿದೆ. ಆ ದೃಷ್ಟಿಯಿಂದಲೇ ಇಂತಹ ಶಿಬಿರಗಳು ಎಲ್ಲೆಡೆ ನಡೆಯಬೇಕು. ನಮ್ಮ ಕಾಲೇಜಿನಲ್ಲಿ ಕೆಲದಿನಗಳ ಹಿಂದೆ ಆರೋಗ್ಯ ಇಲಾಖೆಯ ಸಹಕಾರದಲ್ಲಿ ಇಂತಹ ಶಿಬಿರ ಆಯೋಜಿಸಿದ್ದೆವು. ಅಲ್ಲದೇ ಮುಂದಿನ ದಿನಗಳಲ್ಲಿಯೂ ನಮ್ಮ ವಿದ್ಯಾರ್ಥಿಗಳ ಆಸಕ್ತಿಯಿಂದ ಇನ್ನೊಂದು ರಕ್ತದಾನ ಶಿಬಿರ ಮಾಡಲು ಚಿಂತನೆ ನಡೆಸಿದ್ದೇವೆ ಎಂದರು.

ಜ್ಞಾನತರಂಗಿಣಿ ಫೌಂಡೇಶನ್ ಅಧ್ಯಕ್ಷ ಅಪ್ಪು ವರಖ್ ಅಧ್ಯಕ್ಷತೆ ವಹಿಸಿದ್ದರು. ಅತಿಥಿಗಳಾಗಿ ಸಂಕಲ್ಪ ಸಂಚಾಲಕ ಪ್ರಸಾದ ಹೆಗಡೆ, ಜಿ.ಪಂ. ಅಭಿಯಂತರ ಪ್ರಕಾಶ ಬಂಟ್, ಲಯನ್ಸ್ ಅಧ್ಯಕ್ಷ ಶೇಷಗಿರಿ ಪ್ರಭು, ಹುಬ್ಬಳ್ಳಿಯ ನಾರಾಯಣ ಹೃದಯಾಲಯದ ಮತ್ತು ಡಾ.ಅಗರವಾಲ್ ಕಣ್ಣಿನ ಆಸ್ಪತ್ರೆಯ ತಜ್ಞ ವೈದ್ಯರು ತಪಾಸಣೆ ನಡೆಸಿದರು.

ಅಡಿಕೆ ಭವನದಲ್ಲಿ ಜ್ಞಾನ ತರಂಗಿಣಿ ಫೌಂಡೇಶನ್ ಹಮ್ಮಿಕೊಂಡ ತಾಲೂಕಾ ಮಟ್ಟದ ಉಚಿತ ಆರೋಗ್ಯ ಮತ್ತು ರಕ್ತದಾನ ಶಿಬಿರವನ್ನು ತಾಲೂಕಾ ವೈದ್ಯಾಧಿಕಾರಿ ಡಾ.ನರೇಂದ್ರ ಪವಾರ ಉದ್ಘಾಟಿಸಿದರು.

ಗ್ರಾಪಂ ಕಚೇರಿ ಬೀಗ ಹಾಕುವ ಎಚ್ಚರಿಕೆ

ಭಟ್ಕಳ: ತಾಲೂಕಿನ ಮುಂಡಳ್ಳಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಖಾಸಗಿ ವ್ಯಕ್ತಿಗಳು ಕೃಷಿ ಭೂಮಿಯನ್ನು ಖರೀದಿಸಿ ಮಣ್ಣು ತುಂಬಿಸಿ ಎತ್ತರಗೊಳಿಸುತ್ತಿರುವ ಹಿನ್ನೆಲೆಯಲ್ಲಿ ಮಳೆಗಾಲದಲ್ಲಿ ನೀರಿನ ಸಹಜ ಹರಿವಿಗೆ ಅಡ್ಡಿಯಾಗುತ್ತಿದ್ದು, ಮಳೆಗಾಲದಲ್ಲಿ ಕೃತಕ ಪ್ರವಾಹ ಉಂಟಾಗುತ್ತಿದೆ ಎಂದು ಆರೋಪಿಸಿ ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಸಂಬಂಧ ಸಾರ್ವಜನಿಕರು ಪಂಚಾಯತ್ ಕಚೇರಿಯಲ್ಲಿ ಜಮಾವಣೆಗೊಂಡು ಅಧಿಕಾರಿಗಳ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿ, ತಕ್ಷಣ ಕ್ರಮ ಕೈಗೊಳ್ಳದಿದ್ದರೆ ಪಂಚಾಯತ್ ಕಚೇರಿಗೆ ಬೀಗ ಜಡಿಯುವ ಎಚ್ಚರಿಕೆ ನೀಡಿದರು.

ಸ್ಥಳೀಯರ ಪ್ರಕಾರ, ಶರಾಬಿ ಹೊಳೆ ಸಮೀಪದಲ್ಲಿರುವ ಈ ಪ್ರದೇಶವು ಪ್ರತಿ ಮಳೆಗಾಲದಲ್ಲೂ ಪ್ರವಾಹಕ್ಕೆ ತುತ್ತಾಗುತ್ತದೆ. ಇಂತಹ ಪರಿಸ್ಥಿತಿಯಲ್ಲಿಯೇ ಕೃಷಿ ಭೂಮಿಯಲ್ಲಿ ಮಣ್ಣು ತುಂಬುತ್ತಿರುವ ಪ್ರಕ್ರಿಯೆ ಸಮಸ್ಯೆಯನ್ನು ಮತ್ತಷ್ಟು ಗಂಭೀರಗೊಳಿಸಿದೆ ಎಂದು ಅವರು ಹೇಳಿದರು.

ಈ ಪ್ರದೇಶವನ್ನು ಈಗಾಗಲೇ ಪ್ರವಾಹ ಪೀಡಿತ ಪ್ರದೇಶವೆಂದು ಪರಿಗಣಿಸಿ, ಕೃಷಿ ಭೂಮಿಯಲ್ಲಿ ಯಾವುದೇ ರೀತಿಯ ಪರಿವರ್ತನೆ ಅಥವಾ ಮಣ್ಣು ತುಂಬಲು ಅನುಮತಿ ನೀಡಬಾರದು ಎಂದು ಸಾರ್ವಜನಿಕರ ಸಮ್ಮುಖದಲ್ಲಿ ಠರಾವು ಕೈಗೊಳ್ಳಲಾಗಿತ್ತು. ಆದಾಗ್ಯೂ, ಪಂಚಾಯತ್ ಅಧಿಕಾರಿಗಳು ಅನುಮತಿ ನೀಡುತ್ತಿರುವುದರ ಕುರಿತು ಜನ ಅಧಿಕಾರಿಗಳ ವಿರುದ್ಧ ಸಂದೇಹ ವ್ಯಕ್ತಪಡಿಸುತ್ತಿದ್ದಾರೆ.

ಸಾರ್ವಜನಿಕರು ತಕ್ಷಣ ತಹಸೀಲ್ದಾರರನ್ನು ಸ್ಥಳಕ್ಕೆ ಕರೆಯುವಂತೆ ಆಗ್ರಹಿಸಿದ್ದು, ಅವರು ಸ್ಥಳಕ್ಕೆ ಬಂದು ಸೂಕ್ತ ಪರಿಹಾರ ನೀಡದಿದ್ದರೆ ಪಂಚಾಯತ್ ಕಚೇರಿಯಿಂದ ತೆರಳುವುದಿಲ್ಲ ಎಂದು ಪಟ್ಟು ಹಿಡಿದರು.

ಸಾರ್ವಜನಿಕರು ಪಂಚಾಯತ್ ಕಚೇರಿಯಲ್ಲಿ ಜಮಾವಣೆಗೊಂಡು ಅಧಿಕಾರಿಗಳ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಕುಮಟಾ ಸರಕಾರಿ ಪದವಿ ಕಾಲೇಜಿನ ವಿದ್ಯಾರ್ಥಿಗಳಿಂದ ಪ್ರತಿಭಟನೆ | ತಹಸೀಲ್ದಾರ್‌ಗೆ ಮನವಿ

ಪ್ರಾಚಾರ್ಯೆ ವರ್ತನೆ ಖಂಡನೆ, ಅಮಾನತಿಗೆ ಆಗ್ರಹ

ಕುಮಟಾ: ಇಲ್ಲಿನ ಸರಕಾರಿ ಪದವಿ ಕಾಲೇಜ್ ಪ್ರಾಚಾರ್ಯೆಯ ವಿರುದ್ಧ ಕೆಲವು ವಿದ್ಯಾರ್ಥಿಗಳು ಘೋಷಣೆ ಕೂಗುತ್ತ ಕಾಲೇಜಿನ ಆವರಣದಲ್ಲಿ ಪ್ರತಿಭಟನೆ ನಡೆದಿದ ಘಟನೆ ಮಂಗಳವಾರ ನಡೆಯಿತು.

ಪ್ರಾಚಾರ್ಯೆ ವಿಜಯಾ ಡಿ. ನಾಯ್ಕ ಅವರು ವಿದ್ಯಾರ್ಥಿಗಳಿಂದ ವಾರ್ಷಿಕವಾಗಿ ಸಂಗ್ರಹವಾದ ಶುಲ್ಕದ ಖರ್ಚು ವೆಚ್ಚದ ಬಗ್ಗೆ ಮಾಹಿತಿ ಕೇಳಿದರೆ ಡಿಬಾರ್ ಮಾಡುವುದಾಗಿ, ಟಿ.ಸಿ. ಕೊಟ್ಟು ಕಳುಹಿಸುವುದಾಗಿ ಹಾಗೂ ಪೊಲೀಸರನ್ನು ಕರೆಯಿಸಿ ದೂರು ದಾಖಲಿಸುತ್ತೇನೆ ಎಂದು ಬೆದರಿಕೆ ಹಾಕುತ್ತಾರೆ ಎಂಬುದು ಪ್ರತಿಭಟನೆ ನಡೆಸಿದ ವಿದ್ಯಾರ್ಥಿಗಳ ಆರೋಪಿಸಿದರು. ಪ್ರಾಚಾರ್ಯೆಯನ್ನು ಅಮಾನತು ಮಾಡಿ ಇಲ್ಲವೇ ಇಲ್ಲಿಂದ ವರ್ಗಾಯಿಸಿ ಎಂದು ಪಟ್ಟುಹಿಡಿದು ಕುಳಿತುಕೊಂಡರಲ್ಲದೆ, ಕಾಲೇಜಿ ಅಧ್ಯಕ್ಷ ಶಾಸಕ ದಿನಕರ ಶೆಟ್ಟಿ ಸ್ಥಳಕ್ಕೆ ಆಗಮಿಸಬೇಕು ಎಂದು ಆಗ್ರಹಿಸಿದರು.

ಈ ಪ್ರತಿಭಟನೆಗೆ ಎ.ಬಿ.ವಿ.ಪಿ ಬೆಂಬಲಿಸಿದ್ದು, ಜೆಡಿಎಸ್ ಜಿಲ್ಲಾ ಅಧ್ಯಕ್ಷ ಸೂರಜ್ ನಾಯ್ಕ ಸೋನಿ, ಕಾಂಗ್ರೆಸ್ ಮುಖಂಡ ಭಾಸ್ಕರ್‌ಪಟಗಾರ ವಿದ್ಯಾರ್ಥಿಗಳು ಪ್ರತಿಭಟನೆ ನಿರತ ಸ್ಥಳಕ್ಕೆ ಆಗಮಿಸಿ ತಮ್ಮ ಬೆಂಬಲ ವ್ಯಕ್ತಪಡಿಸಿದರು. ಶಾಸಕ ದಿನಕರ ಶೆಟ್ಟಿ ಅವರು ಸ್ಥಳಕ್ಕೆ ಆಗಮಿಸಿ, ವಿದ್ಯಾರ್ಥಿಗಳು ಮತ್ತು ಪ್ರಾಚಾರ್ಯರ ನಡುವೆ ಒಳ್ಳೆಯ ಬಾಂಧವ್ಯ ಇರಬೇಕು. ಪ್ರಾಚಾರ್ಯರ ವರ್ಗಾವಣೆಯಿಂದ ಸಮಸ್ಯೆ ಪರಿಹಾರವಾಗುವುದಿಲ್ಲ ಎಂದು ಪ್ರತಿಭಟನಾಕಾರರಿಗೆ ತಿಳಿಹೇಳಿ ಸಮಾಧಾನಿಸಲು ಯತ್ನಿಸಿದರಲ್ಲದೆ, ಜಿಲ್ಲಾ ಉಸ್ತುವಾರಿ ಸಚಿವರಿಗೆ ದೂರವಾಣಿ ಕರೆ ಮಾಡಿ ಇಲ್ಲಿ ನಡೆದಿರುವ ವಿದ್ಯಮಾನಗಳನ್ನು ವಿವರಿಸಿದರು.

ಇದೇ ಸಂದರ್ಭದಲ್ಲಿ ಉಸ್ತುವಾರಿ ಸಚಿವರು ವಿದ್ಯಾರ್ಥಿ ಮುಖಂಡರೊಂದಿಗೆ ಈ ಬಗ್ಗೆ ಮಾತನಾಡಿದರು. ಈ ಸಂದರ್ಭದಲ್ಲೂ ಪ್ರಾಚಾರ್ಯರ ಅಮಾನತು ಅಥವಾ ವರ್ಗಾವಣೆ ಬೇಡಿಕೆ ಇಟ್ಟ ಕಾರಣ, ಸಚಿವರು ಈ ವಿಷಯದ ಬಗ್ಗೆ ಕ್ರಮವಹಿಸುವ ಭರವಸೆ ನೀಡಿದರು. ಉಸ್ತುವಾರಿ ಸಚಿವರ ಈ ಭರವಸೆಯನ್ವಯ ಪ್ರತಿಭಟನಾನಿರತ ವಿದ್ಯಾರ್ಥಿಗಳು ತಮ್ಮ ಪ್ರತಿಭಟನೆಯನ್ನು ಹಿಂಪಡೆದರು.

ಇದೇ ಸಂದರ್ಭದಲ್ಲಿ ವಿದ್ಯಾರ್ಥಿ ಮುಖಂಡರು ಈ ಬಗ್ಗೆ ಕ್ರಮಕೈಗೊಳ್ಳುವಂತೆ ಸ್ಥಳದಲ್ಲಿದ್ದ ತಹಸೀಲ್ದಾರ್‌ಅವರಿಗೆ ಮನವಿ ನೀಡಿದರು. ಕೊನೆಯಲ್ಲಿ ಸೂರಜ್ ನಾಯ್ಕ ಸೋನಿ ರವರು ವಿದ್ಯಾರ್ಥಿ ಮುಖಂಡರು ಮತ್ತು ಪ್ರಾಚಾರ್ಯರು ಉಪನ್ಯಾಸಕರೊಂದಿಗೆ ಮಾತನಾಡಿ, ಈ ಹಿನ್ನೆಲೆಯಲ್ಲಿ ದಾಖಲಾದ ಪ್ರಕರಣಗಳನ್ನು ಸೌಹಾರ್ದಯುತವಾಗಿ ಬಗೆಹರಿಸಿಕೊಳ್ಳುವಂತೆ, ವಿದ್ಯಾರ್ಥಿಗಳೊಂದಿಗೆ ಉತ್ತಮ ಬಾಂಧವ್ಯ ಇಟ್ಟುಕೊಳ್ಳುವ ಮೂಲಕ ಚಿಕ್ಕಪುಟ್ಟ ಸಮಸ್ಯೆಗಳನ್ನು ಸಣ್ಣದರಲ್ಲಿಯೇ ಬಗೆಹರಿಸಿಕೊಳ್ಳುವಂತೆ ತಿಳಿಹೇಳಿದರು.

ಕುಮಟಾ ಸರಕಾರಿ ಪದವಿ ಕಾಲೇಜಿನ ಪ್ರಾಚಾರ್ಯೆ ವಿರುದ್ಧ ಕಾಲೇಜಿನ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿ ಕ್ರಮಕ್ಕಾಗಿ ತಹಸೀಲ್ದಾರರಿಗೆ ಮನವಿ ಸಲ್ಲಿಸಿದರು.

ವಿಪ ಸದಸ್ಯ ಸಂಕನೂರು | ಬಂಗಾರಮಕ್ಕಿಯಲ್ಲಿ ಉದ್ಯೋಗೋತ್ಸವಕ್ಕೆ ಚಾಲನೆ

ಕೌಶಲ ವೃದ್ಧಿಯಿಂದ ನಿರುದ್ಯೋಗಕ್ಕೆ ಪರಿಹಾರ

ವಿಶ್ವವಾಣಿ ಸುದ್ದಿಮನೆ ಹೊನ್ನಾವರ:

ಕೌಶಲ್ಯ ತರಬೇತಿ ಇಲಾಖೆಯಿಂದ ಯುವ ಜನತೆಯ ಕೌಶಲ್ಯವನ್ನು ವೃದ್ಧಿಸುವ ಮೂಲಕ ವಿವಿಧ ರಾಷ್ಟ್ರೀಯ, ಅಂತ ರಾಷ್ಟ್ರೀಯ ಕಂಪೆನಿಗಳಲ್ಲಿ ಉದ್ಯೋಗ ಪಡೆಯುವ ಮೂಲಕ ನಿರುದ್ಯೋಗ ಸಮಸ್ಯೆಗೆ ಪರಿಹಾರ ಕಾಣುವಂತಾಗಿದೆ ಎಂದು ವಿಧಾನ ಪರಿಷತ್ ಸದಸ್ಯ ಎಸ್.ವಿ.ಸಂಕನೂರು ಹೇಳಿದರು.

ತಾಲೂಕಿನ ಗೇರುಸೊಪ್ಪ ಶ್ರೀ ಕ್ಷೇತ್ರ ಬಂಗಾರಮಕ್ಕಿ ಶ್ರೀ ವೀರಾಂಜನೇಯ ದೇವಸ್ಥಾನದಿಂದ ನಡೆಯುತ್ತಿರುವ ಸಂಸ್ಕೃತಿ ಕುಂಭ ಮಲೆನಾಡ ಉತ್ಸವ – 2026 ಇದರ ನಾಲ್ಕನೇ ದಿನವಾದ ಸೋಮವಾರ ನಡೆದ ಉದ್ಯೋಗೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ನಿರುದ್ಯೋಗ ಜಾಗತಿಕ ಮಟ್ಟದ ಸಮಸ್ಯೆಯಾಗಿದ್ದು, ಇದರ ಪರಿಹಾರ ಸವಾಲಿನ ಕೆಲಸವಾಗಿದೆ. ಯುವ ಜನತೆಯಲ್ಲಿ ಕೌಶಲ್ಯದ ಕೊರತೆ ನಿರುದ್ಯೋಗ ಹೆಚ್ಚಲು ಬಹು ದೊಡ್ಡ ಕಾರಣವಾಗಿದೆ. ವೃತ್ತಿಗೆ ಸಮಾನವಾದ ಕೌಶಲ್ಯ ರೂಪಿಸುವ ಕೆಲಸ ಪಠ್ಯದ ಮೂಲಕ ಆಗಬೇಕಿದೆ. ಚಿನ್ನದ ಪದಕದೊಂದಿಗೆ ಉತ್ತೀರ್ಣರಾದ ವಿದ್ಯಾರ್ಥಿಗಳು ಉದ್ಯೋಗ ಸಂದರ್ಶನದಲ್ಲಿ ವಿಫಲರಾಗುತ್ತಿರುವುದು ಕಂಡು ಬರುತ್ತಿದೆ ಎಂದರು.

ಯುವ ಜನತೆಯಲ್ಲಿ ಕೌಶಲ್ಯ ಬೆಳೆಸಲು ಕೇಂದ್ರ ಸರಕಾರ ಕೌಶಲ್ಯ ತರಬೇತಿ ಇಲಾಖೆಯನ್ನು ರಚಿಸಿದೆ. ಆ ಬಳಿಕ ದೇಶದಲ್ಲಿ ಕೌಶಲ್ಯ ಯುಗ ಆರಂಭಗೊಂಡಿದೆ. ಈ ಇಲಾಖೆಯಿಂದ ಕೌಶಲ್ಯ ವೃದ್ಧಿಗೊಳಿಸಿ ಉದ್ಯೋಗ ಸಮಸ್ಯೆ ಬಗೆಹರಿಸಲು ಸಹಕಾರಿಯಾಗಿದೆ. ಇದೇ ರೀತಿ ಕೇಂದ್ರ ಸರಕಾರ ಉದ್ಯೋಗ ಸೃಷ್ಟಿಸಲು ಹಲವು ಯೋಜನೆಗಳನ್ನು ಜಾರಿಗೆ ತಂದಿದೆ ಎಂದು ತಿಳಿಸಿದರು. ಧಾರ್ಮಿಕ ಕ್ಷೇತ್ರದಲ್ಲಿ ಯುವ ಜನತೆಗಾಗಿ ಉದ್ಯೋಗ ಮೇಳ ಹಮ್ಮಿಕೊಂಡಿರುವುದು ಪ್ರಶಂಸನೀಯವಾಗಿದೆ. ಸರಕಾರದಿಂದ ಯಾವುದೇ ಧನ ಸಹಾಯ ಯಾಚಿಸದೆ, ಕೇವಲ ಭಕ್ತರ ಸಹಾಯ ಸಹಕಾರದಲ್ಲಿ ಎರಡು ದಶಕದಿಂದ ಶ್ರೀ ಮಾರುತಿ ಗುರೂಜಿ ಅವರ ನೇತೃತ್ವದಲ್ಲಿ ಬಂಗಾರಮಕ್ಕಿಯಲ್ಲಿ 'ಸಂಸ್ಕೃತಿ ಕುಂಭ ಮಲೆನಾಡ ಉತ್ಸವ' ಯಶಸ್ವಿಯಾಗಿ ನಡೆಯುತ್ತಿದೆ ಎಂದು ನಾನು ತಿಳಿದು ಆಶ್ಚರ್ಯಗೊಂಡೆ. ಸಂಸ್ಕೃತಿ ಉಳಿಸಲು ಸರಕಾರ ಮಾಡಬೇಕಾದ ಕೆಲಸವನ್ನು ಮಾರುತಿ ಗುರೂಜಿ ಮಾಡುತ್ತಿದ್ದಾರೆ ಎಂದರು. ಶ್ರೀ ಕ್ಷೇತ್ರ ಬಂಗಾರಮಕ್ಕಿಯ ಧರ್ಮಾಧಿಕಾರಿ ಶ್ರೀ ಮಾರುತಿ ಗುರೂಜಿ ಅಧ್ಯಕ್ಷತೆ ಮತ್ತು ದಿವ್ಯ ಸಾನಿಧ್ಯ ವಹಿಸಿ ಉಪದೇಶ ನೀಡಿದರು. ಸಾಹಿತಿ ಸಿದ್ದು ಯಾಪಲಪರವಿ ಗದಗ ಉಪಸ್ಥಿತರಿದ್ದರು.

ಮಂಜುನಾಥ್ ಸ್ವಾಗತ ಮತ್ತು ಧನ್ಯವಾದಗೈದರು. ಶೈಲೇಶ್, ಭಾರತಿ, ಸೌಮ್ಯ ಕಾರ್ಯಕ್ರಮ ನಿರೂಪಿಸಿದರು.

ಶ್ರೀ ಕ್ಷೇತ್ರ ಬಂಗಾರಮಕ್ಕಿ ಶ್ರೀ ವೀರಾಂಜನೇಯ ದೇವಸ್ಥಾನದಿಂದ ನಡೆಯುತ್ತಿರುವ ಸಂಸ್ಕೃತಿ ಕುಂಭ ಮಲೆನಾಡ ಉತ್ಸವ – 2026 ಇದರ ನಾಲ್ಕನೇ ದಿನವಾದ ಸೋಮವಾರ ನಡೆದ ಉದ್ಯೋಗೋತ್ಸವ ಕಾರ್ಯಕ್ರಮವನ್ನು ವಿಧಾನ ಪರಿಷತ್ ಸದಸ್ಯ ಎಸ್.ವಿ.ಸಂಕನೂರು ಉದ್ಘಾಟಿಸಿದರು.

ಸ್ವಚ್ಛ ಪರಿಸರದಿಂದ ಆರೋಗ್ಯಕರ ಜೀವನ: ಶಾಸಕ ದೇಶಪಾಂಡೆ

ಕಾರವಾರ: ರಾಷ ಗಾಂಧೀಜಿಯವರ ಕನಸ್ಸಿನಂತೆ ಪರಿಸರವನ್ನು ಸ್ವಚ್ಛವಾಗಿಡುವುದರಿಂದ ಆರೋಗ್ಯಕರ ಜೀವನವನ್ನು ಸಾಗಿಸಬಹುದು, ಇಡೀ ರಾಜ್ಯಾದ್ಯಂತ ವಿನೂತನವಾಗಿ ಸ್ವಚ್ಛತಾ ಅಭಿಯಾನವನ್ನು ಹಮ್ಮಿಕೊಂಡಿದ್ದು, ಈ ನಿಟ್ಟಿನಲ್ಲಿ ರಾಜ್ಯದ 224 ವಿಧಾನಸಭಾ ಕ್ಷೇತ್ರಗಳ ಪೈಕಿ ಪ್ರಥಮವಾಗಿ ಹಳಿಯಾಳ ಕ್ಷೇತ್ರದಲ್ಲಿ ಸ್ವಚ್ಛತಾ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದು ಶಾಸಕ ಆರ್.ವಿ.ದೇಶಪಾಂಡೆ ಹೇಳಿದರು.

ಅವರು ಮಂಗಳವಾರ ದಾಂಡೇಯ ಚೆನ್ನಮ್ಮ ವೃತ್ತದಲ್ಲಿ ಸ್ವಚ್ಛತಾ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದರು. ಹಳಿಯಾಳ ವಿಧಾನಸಭಾ ಕ್ಷೇತ್ರದಲ್ಲಿ 3 ದಿನಗಳ ಸ್ವಚ್ಛತಾ ಅಭಿಯಾನ ಹಮ್ಮಿಕೊಳ್ಳಲಾಗಿದೆ. ದಾಂಡೇಲಿ ಕೈಗಾರಿಕ ನಗರವಾಗಿದ್ದು, ಪ್ರವಾಸೋದ್ಯಮ ಅಭಿವೃದ್ಧಿ ಹೊಂದುತ್ತಿದ್ದು, ಇಲ್ಲಿನ ರೆಸಾರ್ಟ್, ರಸ್ತೆ, ಬಸ್ ನಿಲ್ದಾಣ, ಚರಂಡಿ ಉದ್ಯಾನವನಗಳು ಸೇರಿದಂತೆ ದಾಂಡೇಯ ಎಲ್ಲ ಭಾಗದಲ್ಲಿ ಸ್ವಚ್ಛವಾಗಿರಬೇಕು. ಅಂಗಡಿ ಮಾಲೀಕರು ಮತ್ತು ವ್ಯಾಪಾರಸ್ಥರು ತಮ್ಮ ಸುತ್ತ ಮತ್ತಲಿನಲ್ಲಿ ಸ್ವಚ್ಛತೆಯನ್ನು ಕಾಪಾಡಿಕೊಳ್ಳಬೇಕು ಹಾಗೂ ಸ್ವಚ್ಛತಾ ಅಭಿಯಾನದಲ್ಲಿ ಸ್ವಯಂ ಪ್ರೇರಣೆಯಿಂದ ಎಲ್ಲರೂ ಪಾಲ್ಗೊಳುವ ಮೂಲಕ ಕ್ಷೇತ್ರವನ್ನು ಕಸ ಮುಕ್ತ ತಾಲೂಕು ಮಾಡಲು ಕೈ ಜೋಡಿಸಬೇಕು ಎಂದರು. ಹಳಿಯಾಳ, ದಾಂಡೇಲಿ, ಜೋಯಿಡಾ ತಾಲೂಕಿನಾದ್ಯಂತ ಸ್ವಚ್ಛತಾ ಅಭಿಯಾನ ನಡೆಯುತ್ತಿದೆ. ಈ ರೀತಿಯ ಕರ್ಯಕ್ರಮವನ್ನು ರಾಜ್ಯದಲ್ಲಿ ಒಂದು ತಿಂಗಳ ಆಯೋಜನೆ ಮಾಡುವುದರಿಂದ ಇಡೀ ರಾಜ್ಯ ಸ್ವಚ್ಛವಾಗಿರುತ್ತದೆ ಎಂದರು.

ನಗರ ಸಭೆ ಪೌರಾಯುಕ್ತ ವಿವೇಕ ಬನ್ನೇ ಮಾತನಾಡಿದರು. ಕರ್ಯಕ್ರಮದಲ್ಲಿ ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನರ್ದೇಶಕ ಝುಹೀರ್ ಅಬ್ಬಾಸ್, ತಹಸೀಲ್ದಾರ್ ಶೈಲೇಶ್ ಪರಮಾನಂದ, ಎಸಿಎಫ್ ಸಂತೋಷ ಚವ್ಹಾಣ್ ಸೇರಿ ಮತ್ತಿತ್ತರರು ಇದ್ದರು.

ಸಮಾಚಾರ ಸಣ್ಣದಲ್ಲ

ಬಸವಣ್ಣ ದೇವರ ಜಾತ್ರೆ ಏ.2ರಂದು

ಧಾರವಾಡ : ತಾಲೂಕಿನ ಅಮ್ಮಿನಬಾವಿ ಗ್ರಾಮದ ಗುಡಿ ಓಣಿಯಲ್ಲಿರುವ ಪ್ಯಾಟಿ ಬಸವಣ್ಣ(ನಂದೀಶ್ವರ) ದೇವರ ವಾರ್ಷಿಕ ಜಾತ್ರಾ ಮಹೋತ್ಸವ ಏ.2ರಂದು 'ದವನದ ಹುಣ್ಣಿಮೆ'ಯ ದಿನ ಜರುಗಲಿದೆ. ಮುನ್ನಾದಿನ ಬುಧವಾರ ರಾತ್ರಿ 8 ಗಂಟೆಗೆ ಉಚ್ಛಾಯ ಬಂಡಿ ಉತ್ಸವ ವಿವಿಧ ಜನಪದ ವಾದ್ಯಗಳ ಸಮೇತ ನಡೆಯಲಿದ್ದು, ಅಂದು ದೇವಾಲಯದಲ್ಲಿ ಅಹೋರಾತ್ರಿ ಭಜನಾ ಕಾರ್ಯಕ್ರಮ ನಡೆಯಲಿದೆ. ಏ. 2 ಪ್ರಾತಃಕಾಲದಲ್ಲಿ ಬಸವಣ್ಣ ದೇವರ ವಿಗ್ರಹಕ್ಕೆ ಏಕಾದಶ ಮಹಾರುದ್ರಾಭಿಷೇಕ, ನೂರೊಂದು ಬಿಲ್ವಾರ್ಚನೆ, ಅಲಂಕಾರ ಪೂಜೆ ಹಾಗೂ ಮಹಾಮಂಗಳಾರತಿ ಜರುಗುವುದು. ನಂತರ ಅನ್ನಸಂತರ್ಪಣೆ ನಡೆಯಲಿದೆ. ಅಂದು ಸಂಜೆ 4 ಗಂಟೆಗೆ ಅಮ್ಮಿನಬಾವಿ ಸಂಸ್ಥಾನ ಪಂಚಗೃಹ ಹಿರೇಮಠದ ಓರ್ವ ಜಂಗಮ ಮೂರ್ತಿ ಸಮೇತ ಗ್ರಾಮದ ಹಕ್ಕು-ಬಾಬುಗಳ ಗಣ್ಯರೊಂದಿಗೆ ಅಲಂಕೃತ ರಥೋತ್ಸವ ನಂದಿಕೋಲು, ಪಲ್ಲಕ್ಕಿ, ಕರಡಿ ಮಜಲು, ಭಜನೆಗಳ ಸಮೇತ ಆರಂಭಗೊಳ್ಳಲಿದೆ. ದೇವಾಲಯದ ಪ್ರಧಾನ ಅರ್ಚಕ ಬಸವರಾಜ ಪೂಜಾರ ವರ್ಷದ ಆಗು-ಹೋಗು ಕುರಿತು ಹೇಳಿಕೆ ಹೇಳುವರೆಂದು ದೇವಾಲಯದ ಸೇವಾ ಟ್ರಸ್ಟ್ ಅಧ್ಯಕ್ಷ ಪ್ರಕಾಶ ಹುಲ್ಲೂರ ತಿಳಿಸಿದ್ದಾರೆ.

ಭಜರಂಗದಳದಿಂದ ರಾಮ ನವಮಿ ಆಚರಣೆ

ಅಣ್ಣಿಗೇರಿ : ಪಟ್ಟಣದಲ್ಲಿ ವಿಶ್ವ ಹಿಂದೂ ಪರಿಷತ್ ಹಾಗೂ ಭಜರಂಗದಳದ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ''ರಾಮ ನವಮಿ'' ಪ್ರಯುಕ್ತ ''ಹಿಂದೂ ಧರ್ಮ ಸಭೆ'' ಕಾರ್ಯಕ್ರಮ ಅತ್ಯಂತ ಸಡಗರ-ಸಂಭ್ರಮದಿಂದ ಜರುಗಿತು. ಮಾಜಿ ಸಚಿವ ಶಂಕರ ಪಾಟೀಲ ಮುನೇನಕೊಪ್ಪ ಉದ್ಘಾಟಿಸಿ ಮಾತನಾಡಿ, ಪ್ರಭು ಶ್ರೀರಾಮನ ಆದರ್ಶಗಳು ಇಂದಿನ ಸಮಾಜಕ್ಕೆ ದಾರಿದೀಪವಾಗಿವೆ. ಧರ್ಮ ಮತ್ತು ನ್ಯಾಯದ ಹಾದಿಯಲ್ಲಿ ನಡೆಯುವುದು ರಾಮರಾಜ್ಯದ ಮೂಲ ಮಂತ್ರವಾಗಿದೆ ಎಂದು ತಿಳಿಸಿದರು. ಮುಖ್ಯ ವಕ್ತಾರರಾಗಿ ಆಗಮಿಸಿದ್ದ ಕಿರಣ್ಕುಮಾರ್ ವಿವೇಕವಂಶಿ ಹಿಂದೂ ಧರ್ಮದ ಜಾಗೃತಿ ಹಾಗೂ ಸಂಘಟನೆಯ ಕುರಿತು ಪ್ರಖರ ವಿಚಾರಗಳನ್ನು ಮಂಡಿಸಿದರು. ಅಧ್ಯಕ್ಷತೆಯನ್ನು ವಿಶ್ವ ಹಿಂದೂ ಪರಿಷತ್ನ ಜಿಲ್ಲಾಧ್ಯಕ್ಷ ಮಹೇಶ ಪಾಟೀಲ ವಹಿಸಿದ್ದರು. ಷಣ್ಮುಖ ಗುರಿಕಾರ, ಶಿವಶಂಕರ ಕಲ್ಲೂರ, ಶಿವಯೋಗಿ ಸುರಕೋಡ, ನಾಗಪ್ಪ ದಳವಾಯಿ, ಚಂಬಣ್ಣ ಸುರಕೋಡ, ಭರತೇಶ ಜೈನ, ಭಗವಂತ ಪುಟ್ಟಣ್ಣವರ, ವಿರೇಶ ಕುಬಸದ, ಶಿವಕುಮಾರ ಬಳಿಗೇರ ಭಾಗವಹಿಸಿದ್ದರು.

ತ್ರೈಮಾಸಿಕ ಕೆಡಿಪಿ ಸಭೆ ಏ.10 ರಂದು

ಹಾವೇರಿ: ಈ ಮೊದಲು ಏಪ್ರಿಲ್ 13 ರಂದು ನಿಗದಿಪಡಿಸಿದ್ದ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಗತಿ ಪರಿಶೀಲನೆ ಕುರಿತು ತ್ರೈಮಾಸಿಕ ಕೆಡಿಪಿ ಸಭೆ, ಏಪ್ರಿಲ್ 10 ರಂದು ಬೆಳಿಗ್ಗೆ 10 ಗಂಟೆಗೆ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ನಡೆಯಲಿದೆ. ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಖಾತೆ ಹಾಗೂ ಹಾವೇರಿ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವಾನಂದ ಪಾಟೀಲ ಅಧ್ಯಕ್ಷತೆ ವಹಿಸುವರು ಎಂದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ತಿಳಿಸಿದ್ದಾರೆ.

ಏ.2 ರಂದು ಪೊಲೀಸ್ ಧ್ವಜ ದಿನಾಚರಣೆ

ಹಾವೇರಿ: ಪೊಲೀಸ್ ಧ್ವಜ ದಿನಾಚರಣೆ ಕಾರ್ಯಕ್ರಮ ಏಪ್ರಿಲ್ 2 ರಂದು ಬೆಳಿಗ್ಗೆ 8 ಗಂಟೆಗೆ ಕೆರಿಮತ್ತಿಹಳ್ಳಿ ಪೊಲೀಸ್ ಕವಾಯತು ಮೈದಾನದಲ್ಲಿ ಜರುಗಲಿದೆ. ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಯಶೋಧಾ ವಂಟಗೋಡಿ ಅವರು ಅಧ್ಯಕ್ಷತೆ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಹಾವೇರಿ ಉಪ ವಿಭಾಗ ಕಚೇರಿಯ ನಿವೃತ್ತ ಮಹಿಳಾ ಎ.ಎಸ್.ಐ. ಸುರೇಖಾ ಎಸ್. ರಾಯ್ಕರ್ ಅವರು ಭಾಗವಹಿಸಲಿದ್ದಾರೆ.

ಭಗವಾನ ಮಹಾವೀರ ಜಯಂತಿ ಆಚರಣೆ

ನವಲಗುಂದ: ಪಟ್ಟಣದ ತಾಲೂಕ ಆಡಳಿತ ಸೌಧದಲ್ಲಿ ಭಗವಾನ ಮಹಾವೀರ ಜಯಂತಿ ಕಾರ್ಯಕ್ರಮವನ್ನು ತಹಸೀಲ್ದಾರ್,ಜೈನ ಸಮುದಾಯದ ಮುಖಂಡರು ಹಾಗೂ ತಾಲೂಕಾ ಕಚೇರಿ ಸಿಬ್ಬಂದಿ ಸಮ್ಮುಖದಲ್ಲಿ ಆಚರಣೆ ಮಾಡಲಾಯಿತು. ಸಮಾಜದ ಅಧ್ಯಕ್ಷ ವಿ.ಪಿ. ಪಾಟೀಲ ಮಾತನಾಡಿ, ಮಹಾವೀರರು ಅಹಿಂಸೆ ಮತ್ತು ಸತ್ಯದ ಸಂದೇಶವನ್ನು ನೀಡಿ ಭಾತೃತ್ವದಿಂದ ಬಾಳಲು ಒಳ್ಳೆಯ ಸಂದೇಶ ನೀಡಿದ್ದಾರೆ. ನಾವೆಲ್ಲರೂ ಮಹಾವೀರರ ಆಶಯದಂತೆ ನಡೆದು ಬಾಳಬೇಕೆಂದರು. ಪುರಸಭೆ ಮುಖ್ಯಾಧಿಕಾರಿ ಶರಣು ಪೂಜಾರ, ಕಾಂಗ್ರೆಸ ಪ್ರಚಾರ ಸಮಿತಿಯ ಅಧ್ಯಕ್ಷ ಆನಂದ ಹವಳಕೊಡ, ಮುಖಂಡರಾದ ವಿಜಯ ಪಾಟೀಲ, ಮನೋಹರ ಪಾಟೀಲ, ಸಂತೋಷಗೌಡ್ರು ಪಾಟೀಲ, ಶಾಂತುಗೌಡ ಪಾಟೀಲ, ಶಿವಕುಮಾರ ಪಾಟೀಲ ಇದ್ದರು.

{ಬಿ.ಎಸ್. ಯಡಿಯೂರಪ್ಪ} ಮಾಜಿ ಮುಖ್ಯಮಂತ್ರಿ

ಕಾಂಗ್ರೆಸ್ ಸರಕಾರದ ಭ್ರಷ್ಟಾಚಾರ ಮತ್ತು ದುರಾಡಳಿತದಿಂದ ಈಗಾಗಲೇ ರಾಜ್ಯದ ಜನರು ರೋಸಿ ಹೋಗಿದ್ದಾರೆ. ದಾವಣಗೆರೆ ಮತ್ತು ಬಾಗಲಕೋಟೆ ಉಪ ಚುನಾವಣೆ 2028ರ ಚುನಾವಣೆಗೆ ದಿಕ್ಸೂಚಿಯಾಗಲಿದೆ. ಗ್ಯಾರಂಟಿಗಳ ಹೆಸರಿನಲ್ಲಿ ರಾಜ್ಯದ ಬೊಕ್ಕಸವನ್ನ ಲೂಟಿ ಮಾಡುತ್ತಿದೆ. ಅಭಿವೃದ್ಧಿ ಕೆಲಸಗಳು ಸ್ಥಗಿತಗೊಂಡಿದ್ದು, ರಾಜ್ಯದ ಜನತೆ ಎಲ್ಲವನ್ನೂ ಗಮನಿಸುತ್ತಿದ್ದಾರೆ.



ಧಾರವಾಡ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ | ವಿವಿಧ ಗೋಷ್ಠಿಗಳು | ಚಿಂತಕ ಡಾ. ಸಿದ್ದನಗೌಡ ಪಾಟೀಲ ಉಪನ್ಯಾಸ

ಕನ್ನಡಿಗರ ಬದುಕು ಸುಂದರವಾಗಬೇಕಿದೆ

ವಿಶ್ವವಾಣಿ ಸುದ್ದಿಮನೆ, ಧಾರವಾಡ:

ಕನ್ನಡಿಗರ ಬದುಕು ಸುಂದರವಾದರೆ, ಭಾಷೆ ಹಾಗೂ ಸಂಸ್ಕೃತಿಯೂ ಸುಂದರಗೊಳ್ಳುತ್ತದೆ. ಈ ಕುರಿತು ಗಂಭೀರ ಚರ್ಚೆ ನಡಯಬೇಕು ಎಂದು ಚಿಂತಕ ಡಾ. ಸಿದ್ದನಗೌಡ ಪಾಟೀಲ ಹೇಳಿದರು.

ನಗರದ ಕರ್ನಾಟಕ ವಿದ್ಯಾವರ್ಧಕ ಸಂಘದ ಡಾ. ಪಾಟೀಲ ಪುಟ್ಟಪ್ಪ ಸಭಾಂಗಣದಲ್ಲಿ ನಡೆದ ಕಸಾಪ 18ನೇ ಜಿಲ್ಲಾ ಕನ್ನಡ ಸಮ್ಮೇಳನದಲ್ಲಿ ಮಂಗಳವಾರ ''ಕನ್ನಡ ಭಾಷೆ ಮತ್ತು ಬದುಕಿನ'' ಬಗ್ಗೆ ನಡೆದ ಗೋಷ್ಠಿಯಲ್ಲಿ ಅವರು ಮಾತನಾಡಿದರು.

ಕನ್ನಡ ಅನ್ನ ನೀಡುವ ಭಾಷೆಯಾಗಲು ಮೊದಲು ನಾವು ಕನ್ನಡಿಗರಾಗಿ ಬದುಕುವುದು ಕಲಿಯಬೇಕು. ಪರಭಾಷೆ ವ್ಯಾಮೋಹದ ನಡುವೆ ಸ್ವಭಾಷೆಯ ಸೊಗಡ ಮರೆಯದಂತೆ ಎಚ್ಚರಿಕೆ ನೀಡಿದರು.

ತುಳು ಭಾಷೆಗೆ ಲಿಪಿ ಇಲ್ಲವಾದರೂ, ಈ ಭಾಷೆ ಶ್ರೀಮಂತಗೊಳ್ಳುವ ಜೊತೆ ತುಳುನಾಡು ಪ್ರತ್ಯೇಕತೆ ಬೇಡಿಕೆ ಇದೆ. ಈ ಭಾಷಿಕರಿಗೆ ಇರುವ ಅಭಿಮಾನ ಕನ್ನಡಿಗರಿಗೆ ಇಲ್ಲದೇ ಹೋಯಿತೇ? ಎಂದು ಬೇಸರಿಸಿದರು.

ಹಿಂದಿನ ''ಚಲೇ ಜಾವ್'' ಚಳುವಳಿ ಈಗ ದೇಶದಲ್ಲಿ ''ಚಲೇ ಆವೋ'' ಚಳುವಳಿಯಾಗಿ ಮಾರ್ಪಟ್ಟಿದೆ. ಇದರಿಂದ ಕನ್ನಡಿಗರ ಬದುಕು ಶ್ರೀಮಂತಗೊಳ್ಳುವುದೇ ಎಂಬ ಪ್ರಶ್ನೆ ಉದ್ಭವಿಸಿದೆ ಎಂದು ಹೇಳಿದರು.

ಕನ್ನಡವನ್ನು ವೇದಿಕೆ ಭಾಷೆಯಾಗಿ ಮಾಡದೆ, ಮನೆಯ ಭಾಷೆಯನ್ನಾಗಿ ಮಾಡೋಣ. ಬದುಕಿನ ಪ್ರತಿಯೊಂದು ಹಂತಲ್ಲೂ ಕನ್ನಡತನ ಮೈಗೂಡಿಸಿಕೊಂಡಾಗ ಮಾತ್ರ ಭಾಷೆ ಉಳಿಯಲು ಸಾಧ್ಯವಿದೆ. ಕನ್ನಡಿಗರ ಬದುಕು ಶ್ರೀಮಂತಗೊಳ್ಳದೆ, ಭಾಷಾ ಶ್ರೀಮಂತಿಕೆ ಅಸಾಧ್ಯ. ಹೀಗಾಗಿ ಆಳುವ ಸರಕಾರಗಳು ಕನ್ನಡಿಗರ ಬದುಕಿನ ಶ್ರೀಮಂತಿಕೆಗಾಗಿ ಕ್ರಮ ಕೈಗೊಳ್ಳಬೇಕಿದೆ ಎಂದು ಸಲಹೆ ನೀಡಿದರು.

ಭಾಷೆಗೂ ಸಾವಿದೆ. ಭಾಷೆ ಸತ್ತರೆ ಒಂದು ಸಂಸ್ಕೃತಿ ಸತ್ತಂತೆ. ಈ ಕಾರಣಕ್ಕೆ ಕನ್ನಡ ಭಾಷೆ, ಸಂಸ್ಕೃತಿ, ಶಾಲೆಗಳು ಉಳಿಯಲಿವೆ. ಈ ಕುರಿತು ಗಂಭೀರ ಚರ್ಚೆ ನಡೆಯಲಿ ಎಂದರು. ''ಮಕ್ಕಳ ಸಾಹಿತ್ಯ - ಪತ್ರಿಕೆಗಳು'' ಕುರಿತು ವಿಷಯ ಮಂಡಿಸಿದ ಶಂಕರ ಹಲಗತ್ತಿ, ಮಕ್ಕಳ ಸಾಹಿತ್ಯ ಪ್ರೋತ್ಸಾಹಕ್ಕೆ ಪ್ರತ್ಯೇಕ ಅಕಾಡೆಮಿ ತೆರೆದಿದ್ದು, ಅದು ನಿರೀಕ್ಷಿತ ಮಟ್ಟದಲ್ಲಿ ಕೆಲಸ ಮಾಡುತ್ತಿಲ್ಲ. ಕರ್ನಾಟಕದಲ್ಲಿ ಮಕ್ಕಳಿಗಾಗಿ ಪತ್ರಿಕೆ ನಿರಂತರ ನಡೆದ ಉದಾಹರಣೆ ಇಲ್ಲ. ಮಕ್ಕಳ ಸಾಹಿತ್ಯ ಶ್ರೀಮಂತ ಆದಾಗ ಮಾತ್ರ ಕನ್ನಡದ ಉಳಿವು ಸಾಧ್ಯ. ಮಕ್ಕಳಲ್ಲಿ ಸಾಹಿತ್ಯ ಓದುವ ಗೀಳು ಬೆಳೆಸಬೇಕು ಎಂದರು. ವಿಶ್ರಾಂತ ಶಿಕ್ಷಣಾಧಿಕಾರಿ ಶಿವಶಂಕರ ಹಿರೇಮಠ ಅಧ್ಯಕ್ಷತೆ ವಹಿಸಿದ್ದರು. ಸಮ್ಮೇಳನದ ಸರ್ವಾಧ್ಯಕ್ಷೆ ಡಾ.ಹೇಮಾ ಪಟ್ಟಣಶೆಟ್ಟಿ, ಡಾ.ಲಿಂಗರಾಜ ಅಂಗಡಿ, ಡಾ.ಧನವಂತ ಹಾಜವಗೋಳ ಇತರರು ಇದ್ದರು. ಅನ್ವರ್‌ಹುಬ್ಬಳ್ಳಿ ನಿರೂಪಿಸಿದರು. ಬಸವರಾಜ ಗೊರವರ ವಂದಿಸಿದರು.

ನಗರದ ಕರ್ನಾಟಕ ವಿದ್ಯಾವರ್ಧಕ ಸಂಘದ ಡಾ. ಪಾಟೀಲ ಪುಟ್ಟಪ್ಪ ಸಭಾಂಗಣದಲ್ಲಿ ನಡೆದ ಕಸಾಪ 18ನೇ ಜಿಲ್ಲಾ ಕನ್ನಡ ಸಮ್ಮೇಳನದಲ್ಲಿ ಶಂಕರ ಹಲಗತ್ತಿ ಮಾತನಾಡಿದರು.

ಕನ್ನಡದ ಡಿಜಿಟಲೀಕರಣ ವೇಗ ಹೆಚ್ಚಬೇಕಿದೆ

ಕನ್ನಡ ಭಾಷೆಯ ಡಿಜಿಟಲೀಕರಣ ವೇಗವಾಗಿ ನಡೆಯಬೇಕಿದೆ. ಎಐ ತಂತ್ರಜ್ಞಾನಕ್ಕೆ ನಾವು ಹೆಚ್ಚೆಚ್ಚು ಕನ್ನಡ ಪಠ್ಯಗಳನ್ನು ನೀಡಿದಷ್ಟೂ, ಭವಿಷ್ಯದಲ್ಲಿ ಕನ್ನಡದ ಭಾಷಾಂತರ ಮತ್ತು ಭಾಷಾ ತಂತ್ರಾಂಶಗಳು ಬಹಳಷ್ಟು ನಿಖರವಾಗುತ್ತವೆ ಎಂದು ಮಾಹಿತಿ ನೀಡಿದರು.

'ಶಿಕ್ಷಣ, ಉದ್ಯೋಗ ಹಾಗೂ ಭವಿಷ್ಯದ ಬದುಕು'' ವಿಷಯ ಮಂಡಿಸಿದ ಸಂಚಯ ರಾಷ್ಟ್ರೀಯ ಸಾಹಿತ್ಯ ಡಿಜಿಟಲಿಕರಣ ಸಂಸ್ಥೆ ಸಂಚಾಲಕ ಎಚ್.ಎಲ್. ಓಂಪ್ರಕಾಶ ಮಾತನಾಡಿದರು.

ಎಐ ಒಳ್ಳೆಯದಕ್ಕೂ ಇದೆ. ಕೆಟ್ಟದ್ದಕ್ಕೂ ಇದೆ. ಆದರೆ, ಈ ತಂತ್ರಜ್ಞಾನ ಸಮಾಜದ ಒಳಿತಿಗೆ ಬಳಸಬೇಕು. ಆದರೆ, ಇತ್ತೀಚಿಗೆ ಟೈಪಿಂಗ್ ಮಾಡುವ ಗೋಜಿಗೆ ಹೋಗದ ಲೇಖಕರು ಕೃತಕ ಬುದ್ಧಿಮತ್ತೆ ಮೂಲಕ ಕೃತಿ ಚೌರ್ಯ ನಡೆಸುತ್ತಿದ್ದು, ಇದು ಒಳ್ಳೆಯದಲ್ಲ ಎಂದರು.

ಎಐ ತಂತ್ರಜ್ಞಾನವೇ ಕಾರಣ. ಕಾಲಕ್ಕೆ ತಕ್ಕಂತೆ ಶಿಕ್ಷಣ, ಉದ್ಯೋಗ ಕ್ಷೇತ್ರ ಬದಲಾಗಿದೆ. ಅಲ್ಲದೇ, ಸಾಹಿತಿಗಳನ್ನು ಹಾಗೂ ವಿಜ್ಞಾನಿಗಳನ್ನೂ ಕಪಿಮುಷ್ಠಿಯಲ್ಲಿ ಇರಿಸಿದೆ. ಅಲ್ಲದೇ, ಈ ತಂತ್ರಜ್ಞಾನ ಬಳಸಿ, ಉದ್ಯೋಗ ಸೃಷ್ಟಿಸಿ ಬದುಕು ಕಟ್ಟಿಕೊಳ್ಳುವ ಅವಕಾಶಗಳ ಬಗ್ಗೆ ತಿಳಿಸಿದರು. ಗೋಷ್ಠಿಯ ನಂತರ ಇಬ್ಬರು ಸಂಪನ್ಮೂಲ ವ್ಯಕ್ತಿಗಳು ಸಾರ್ವಜನಿಕರೊಂದಿಗೆ ಸಂವಾದನ ನಡೆಸಿದರು. ಜಿಲ್ಲಾ ಡಯಟ್ ಪ್ರಾಚಾರ್ಯ ಬಸವರಾಜ ನಾಲ್ವತ್ತವಾಡ, ಪ್ರಾಚಾರ್ಯ ಡಾ. ಎಸ್.ಎಸ್. ಅಂಗಡಿ, ಗುರುಕುಲ ಸಂಸ್ಥೆ ನಿರ್ದೇಶಕ ಎನ್.ಎಂ. ಪಾಟೀಲ ಇದ್ದರು.

ಕವಿತೆ ಸಮಾಜದ ಅಂತರಾಳದ ದನಿ

ಧಾರವಾಡ: ಕವಿತೆ ಕೇವಲ ಶಬ್ದಗಳ ವಿಲಾಸವಲ್ಲ, ಅದು ಸಮಾಜದ ಅಂತರಾಳದ ಧ್ವನಿ, ನೋವು, ನಲಿವು ಮತ್ತು ಆಕ್ರೋಶಗಳಿಗೆ ನೀಡುವ ಅಕ್ಷರ ರೂಪವೇ ಕವಿತೆ ಎಂದು ಸಾಹಿತಿ ಡಾ. ಪ್ರಜ್ಞಾ ಮತ್ತಿಹಳ್ಳಿ ಹೇಳಿದರು. ಜಿಲ್ಲಾ 18ನೇ ಸಮ್ಮೇಳನದಲ್ಲಿ ಕವಿಗೋಷ್ಠಿ ಆಶಯ ನುಡಿದ ಅವರು, ಮನುಷ್ಯನ ಮನಸ್ಸನ್ನು ಮೃದುಗೊಳಿಸುವ ಮತ್ತು ಚಿಂತನೆಗೆ ಹಚ್ಚುವ ಶಕ್ತಿ ಕವಿತೆಗಿದೆ. ಕವಿಗಳು ಸಮಾಜದ ಕಣ್ಣಾಗಬೇಕು. ಇಂದಿನ ಯುವ ಕವಿಗಳು ಸಾಮಾಜಿಕ ಮಾಧ್ಯಮಗಳ ಪ್ರಭಾವಕ್ಕೆ ಒಳಗಾಗಿ ಕೇವಲ ಲೈಕ್ಸ್‌ಗಳಿಗಾಗಿ ಬರೆಯಬಾರದು. ಅನುಭವದ ಒಲೆಯಲ್ಲಿ ಬೆಂದು ಬಂದ ಸಾಹಿತ್ಯ ಮಾತ್ರವೇ ದೀರ್ಘಕಾಲ ಉಳಿಯಲಿದೆ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ನಿವೃತ್ತ ಪ್ರಾಚಾರ್ಯ ಪ್ರೊ. ಎಸ್.ಆರ್. ಆಶಿ, ಪ್ರತಿ ಶಬ್ದ ಶಕ್ತಿಯಿದ್ದಂತೆ. ಅದನ್ನು ಬಳಸುವಾಗ ಕವಿಗೆ ಸಾಮಾಜಿಕ ಜವಾಬ್ದಾರಿ ಇರಲಿ. ಅಕ್ಷರಗಳು ಆಯುಧಗಳಾಗುವ ಬದಲು ಅರಿವಿನ ದೀಪಗಳಾಗಬೇಕು ಎಂದರು.

30ಕ್ಕೂ ಹೆಚ್ಚು ಕವಿಗಳು ಕವಿತೆ ವಾಚನ ಮಾಡಿದರು. ಪ್ರೀತಿ, ಪ್ರಕೃತಿ, ರೈತರ ಸಂಕಷ್ಟಗಳು ಮತ್ತು ನಾಡು-ನುಡಿಯ ಕುರಿತಾದ ಕವಿತೆಗಳು ಸಭಿಕರ ಮೆಚ್ಚುಗೆಗೆ ಪಾತ್ರವಾದವು. ಪ್ರೊ.ಶಶಿಧರ ತೋಡಕರ, ವೀರಣ್ಣ ಒಡ್ಡೀನ್ ಇದ್ದರು. ಭೀಮರಾಶಿ ಹೂಗಾರ ನಿರೂಪಿಸಿದರು. ಎಸ್.ಜಿ. ಹಿರೇಮಠ ಸ್ವಾಗತಿಸಿದರು. ಭೀಮರಾಶಿ ಹೂಗಾರ ನಿರೂಪಿಸಿದರು ಎಸ್ ಎಮ್ ಮೆಣಸಿನಕಾಯಿ ವಂದಿಸಿದರು.

ಸಾಹಿತ್ಯ ಸೃಷ್ಟಿ, ಭಾಷಾಂತರದಲ್ಲೂ ಎಐ ಕ್ರಾಂತಿ ..!

ಧಾರವಾಡ: ಸಮ್ಮೇಳನದಲ್ಲಿ ಐಐಐ ಡೀನ್ ಡಾ. ಎಸ್.ಎಂ. ಶಿವಪ್ರಸಾದ ಅಧ್ಯಕ್ಷತೆಯಲ್ಲಿ ಕೃತಕ ಬುದ್ಧಿಮತ್ತೆ; ಸವಾಲು ಮತ್ತು ಅವಕಾಶ ಕುರಿತು ತಾಂತ್ರಿಕ ಗೋಷ್ಠಿ ಜರುಗಿತು. ''ಸಾಹಿತ್ಯ ಸೃಷ್ಟಿ ಮತ್ತು ಭಾಷಾಂತರದ ಮೇಲೆ ಎಐ ಪ್ರಭಾವ''ದ ವಿಷಯ ಮಂಡಿಸಿದ ಐಟಿ ಕಂಪನಿ ಮುಖ್ಯಸ್ಥ ಸಂಕೇಶ ಪಾಟೀಲ, ಕೃತಕ ಬುದ್ಧಿಮತ್ತೆ ಎಂಜನಿಯರಿಂಗ್ ಕ್ಷೇತ್ರಕ್ಕೆ ಸೀಮಿತವಾಗಿಲ್ಲ. ಇಂದಿನ ಸಾಹಿತ್ಯ ಸೃಷ್ಟಿ, ಭಾಷಾಂತರದಲ್ಲೂ ಹೊಸ ಕ್ರಾಂತಿ ಸೃಷ್ಟಿಸಿದೆ ಎಂದು ಹೇಳಿದರು.

ಅಭಿವೃದ್ಧಿಯಲ್ಲಿ ತಂತ್ರಜ್ಞಾನದ ಕೊಡುಗೆ ಅಗಾಧ. ಹಿಂದೆ ಬೃಹತ್ ಕೃತಿ ಭಾಷಾಂತರಕ್ಕೆ ವರ್ಷಗಳೇ ಬೇಕಿತ್ತು. ಆದರೆ, ಇಂದು ಕೆಲವೇ ಕ್ಷಣಗಳಲ್ಲಿ ಭಾಷಾಂತರ ಮಾಡುವ ಅವಕಾಶ ಎಐ ತಂತ್ರಜ್ಞಾನ ಒದಗಿಸಿದೆ. ಎಐ ಕೂಡ ಕವಿತೆಗಳನ್ನು ಅಥವಾ ಕಥೆಗಳನ್ನು ಬರೆಯಬಲ್ಲದು. ಆದರೆ, ಮನುಷ್ಯ ಸಹಜವಾದ ನೋವು, ನಲಿವು ತಂತ್ರಜ್ಞಾನಕ್ಕೆ ಅಸಾಧ್ಯ. ಎಐ ಕೇವಲ ದತ್ತಾಂಶಗಳು ಸಂಸ್ಕರಿಸಲಿದೆ. ಆದರೆ ಲೇಖಕರು ಬದುಕನ್ನು ಸಂಸ್ಕರಿಸುತ್ತಾರೆ ಎಂದರು.

ಕ್ಯಾಂಪಸ್‌ನಲ್ಲೇ ವಿವಿ ಘಟಿಕೋತ್ಸವಕ್ಕೆ ಮನವಿ

ವಿಶ್ವವಾಣಿ ಸುದ್ದಿಮನೆ, ಹಾವೇರಿ:

ಹಾವೇರಿ ವಿಶ್ವವಿದ್ಯಾಲಯದ ಪ್ರಥಮ ಘಟಿಕೋತ್ಸವವನ್ನು ವಿಶ್ವವಿದ್ಯಾಲಯದ ಕ್ಯಾಂಪಸ್ ನಲ್ಲಿಯೇ ಆಯೋಜಿಸುವಂತೆ ಒತ್ತಾಯಿಸಿ, ವಿ.ವಿ ಉಪಕುಲಪತಿಗಳಾದ ಪ್ರೊ. ಸುರೇಶ ಎಚ್. ಜಂಗಮಶೆಟ್ಟಿ ಅವರಿಗೆ ವಿ.ವಿ ಉಳಿಸಿ ಹೋರಾಟ ಸಮಿತಿಯಿಂದ ಮನವಿ ಸಲ್ಲಿಸಲಾಯಿತು.

ನಗರದ ಹೊರವಲಯ ಕೇರಿಮತ್ತಿಹಳ್ಳಿಯ ಹಾವೇರಿ ವಿಶ್ವವಿದ್ಯಾಲಯದಲ್ಲಿ ಉಪಕುಲಪತಿಗಳನ್ನು ಭೇಟಿ ಮಾಡಿದ ವಿ.ವಿ ಉಳಿಸಿ ಹೋರಾಟ ಸಮಿತಿ ನಿಯೋಗ ಮನವಿ ಸಲ್ಲಿಸಿದರು.

ಹಾವೇರಿ ವಿಶ್ವವಿದ್ಯಾಲಯದ ಪ್ರಪ್ರಥಮ ಘಟಿಕೋತ್ಸವ ಕಾರ್ಯಕ್ರಮ ನಡೆಯುತ್ತಿರುವುದು ಖುಷಿಯ ಸಂಗತಿ. ಹಲವು ಸಮಸ್ಯೆಗಳ ಮಧ್ಯೆಯೂ ಹಲವು ಸಂಸ್ಥೆಗಳೊಂದಿಗೆ ಒಪ್ಪಂದ ಹಾಗೂ ಸಹಕಾರಗಳೊಂದಿಗೆ ವಿಶ್ವ ವಿದ್ಯಾಲಯ ಯಶಸ್ವಿಯಾಗಿ ನಡೆಯುತ್ತಿದೆ. ಹಾವೇರಿ ವಿಶ್ವ ವಿದ್ಯಾಲಯ ಉಳಿಸಿ ಹೋರಾಟ ಸಮಿತಿಯು ಅಭಿನಂದಿಸುತ್ತದೆ. ಆದರೆ ಘಟಿಕೋತ್ಸವ ಕಾರ್ಯಕ್ರಮವನ್ನು ಬೇರೆ ಕಡೆ ಮಾಡುತ್ತಿರುವುದು ಬೇಸರದ ತಂದಿದೆ ಎಂದು ಹೇಳಿದರು.

ಮನವಿ ಸ್ವೀಕರಿಸಿದ ಉಪಕುಲಪತಿ, ಹೋರಾಟ ಸಮಿತಿಯ ಸದಾಶಯವೇ ನಮ್ಮದು ಆಗಿದೆ. ಆದರೆ ವಿವಿ ಆವರಣದಲ್ಲಿ ಘಟಿಕೋತ್ಸವ ನಡೆಸಲು ಅಗತ್ಯವಿರುವ ಬಿಲ್ಡಿಂಗ್ ಹಾಗೂ ಸಭಾಂಗಣವಿಲ್ಲ. ಜರ್ಮನ್ ಟೆಂಟ್ ಹಾಕಿ ಕಾರ್ಯಕ್ರಮ ನಡೆಸಲು ಲಕ್ಷಾಂತರ ಹಣ ಬೇಕಾಗುತ್ತದೆ. ಅಷ್ಟು ಹಣ ವಿ.ವಿ ಯಲ್ಲಿ ಇಲ್ಲ. ಅಷ್ಟೆಯಲ್ಲದೇ ಆವರಣದಲ್ಲಿ ವಿದ್ಯುತ್ ತಂತಿಗಳು ಬಹಳಷ್ಟು ಇದ್ದಿರುವ ಕಾರಣ ಹೊರಾಂಗಣದಲ್ಲಿ ಜರ್ಮನ್ ಪೆಂಡಾಲ್ ಹಾಕಿ ಕಾರ್ಯಕ್ರಮ ನಡೆಸುವುದು ಅಸಾಧ್ಯ. ಹಾಗಾಗಿ ಜಿ.ಎಚ್ ಕಾಲೇಜ್ ಆವರಣದಲ್ಲಿ ಘಟಿಕೋತ್ಸವ ಮಾಡಲಾಗುತ್ತಿದೆ. ಆದರೂ ರಾಜ್ಯಪಾಲರಿಗೆ ವಿವಿ ಭೇಟಿಗೆ ವಿನಂತಿಸಿದ್ದೇವೆ. ರಾಜ್ಯಪಾಲರು ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಲಿದ್ದಾರೆ ಎಂದು ಹೇಳಿದರು.

ಘಟಿಕೋತ್ಸವ ವಿಶ್ವವಿದ್ಯಾಲಯದ ಕ್ಯಾಂಪಸ್ ನಲ್ಲಿಯೇ ನಡೆಸುವಂತೆ ಕ್ರಮ ಕೈಗೊಂಡು, ಉಪಕುಲಪತಿಗಳಿಗೆ ನಿರ್ದೇಶನ ನೀಡುವಂತೆ ಒತ್ತಾಯಿಸಿ ರಾಜ್ಯಪಾಲರಾದ ಥಾವರಚಂದ ಗೆಹ್ಲೊಥ್ ಹಾಗೂ ಉನ್ನತ ಶಿಕ್ಷಣ ಸಚಿವರಾದ ಡಾ. ಎಂ.ಸಿ ಸುಧಾಕರ್‌ಅವರಿಗೆ ಡಿಸಿ ಮೂಲಕ ಮನವಿ ಸಲ್ಲಿಸಲಾಯಿತು

ಈ ಸಂದರ್ಭದಲ್ಲಿ ಹೋರಾಟ ಸಮಿತಿ ಸಂಚಾಲಕರಾದ ಬಸವರಾಜ ಪೂಜಾರ, ಪದವಿಪೂರ್ವ ಶಿಕ್ಷಣ ಇಲಾಖೆ ನಿವೃತ್ತ ಉಪನಿರ್ದೇಶಕ ಎಂ. ಆಂಜನೇಯ, ಎಸ್‌ಎಫ್‌ಐ ಜಿಲ್ಲಾಧ್ಯಕ್ಷರಾದ ಬಸವರಾಜ ಎಸ್, ರೈತ ಸಂಘದ ಶಹರ ಘಟಕದ ಅಧ್ಯಕ್ಷರಾದ ಸುರೇಶ ಛಲವಾದಿ, ರೈತ ಸಂಘದ ರಾಜ್ಯ ಉಪಾಧ್ಯಕ್ಷರಾದ ಮಂಜುಳಾ ಎಸ್. ಅಕ್ಕಿ, ಬಿಎಸ್ಪಿ ಜಿಲ್ಲಾಧ್ಯಕ್ಷರಾದ ಮಕಬುಲ್ ಎಂ.ಕೆ, ಸಹಮತ ಸಂಸ್ಥೆಯ ಸಹಕಾರ್ಯದರ್ಶಿಗಳಾದ ಲಕ್ಷ್ಮೀಪ್ರಭ ಎಸ್. ಹುಲ್ಲೂರು, ಡಿವೈಎಫ್‌ಐ ಜಿಲ್ಲಾ ಮುಖಂಡರಾದ ಖಲಂದರ್‌ಅಲ್ಲಿಗೌಡ್ರ,ಎಸ್‌ಎಫ್‌ಐ ಜಿಲ್ಲಾ ಉಪಾಧ್ಯಕ್ಷರಾದ ಅರುಣ ನಾಗಾವತ್, ಚೈತ್ರಾ ಕೊರವರ, ಬಾಲ ಸಂಘಂ ಮುಖಂಡರಾದ ಧನುಷ್ ದೊಡ್ಮನಿ ಉಪಸ್ಥಿತರಿದ್ದರು.

ಹಾವೇರಿ ವಿವಿ ಘಟಿಕೋತ್ಸವವನ್ನು ವಿವಿ ಕ್ಯಾಂಪಸ್ ನಲ್ಲಿಯೇ ನಡೆಸುವಂತೆ ಒತ್ತಾಯಿಸಿ, ವಿ.ವಿ ಉಪಕುಲಪತಿ ಪ್ರೊ. ಸುರೇಶ ಎಚ್. ಜಂಗಮಶೆಟ್ಟಿ ಅವರಿಗೆ ವಿ.ವಿ ಉಳಿಸಿ ಹೋರಾಟ ಸಮಿತಿಯಿಂದ ಮನವಿ ಸಲ್ಲಿಸಲಾಯಿತು.

ಗಣ್ಯರಿಗೆ ಹಾವೇರಿ ವಿವಿಯ ವಾಸ್ತವ ದರ್ಶನ ಆಗಲಿ ಬಿಡಿ

ನಮ್ಮ ಹಾವೇರಿ ವಿಶ್ವವಿದ್ಯಾಲಯಕ್ಕೆ ಅಗತ್ಯ ಅನುದಾನ, ಖಾಯಂ ಸಿಬ್ಬಂದಿ ನೇಮಕ, ಅಧ್ಯಯನ ಪೀಠಗಳು, ಸಭಾಂಗಣ, ಕಟ್ಟಡಗಳು, ಹಾಸ್ಟೆಲ್ ಗಳು, ಕ್ಯಾಂಟೀನ್, ಸಮರ್ಪಕ ರಸ್ತೆ ಸೇರಿದಂತೆ ಇನ್ನೂ ಹಲವು ಮೂಲ ಸೌಲಭ್ಯಗಳ ಅಗತ್ಯವಿದೆ. ಹಾಗಾಗಿ ಘಟಿಕೋತ್ಸವ ಕ್ಯಾಂಪಸ್ ನಲ್ಲಿಯೇ ನಡೆದರೆ ಕಾರ್ಯಕ್ರಮಕ್ಕೆ ಆಗಮಿಸುವ ಸಚಿವರಿಗೆ, ಗಣ್ಯರಿಗೆ ವಸ್ತುಸ್ಥಿತಿಯು ಗಮನಕ್ಕೆ ಬರುತ್ತದೆ. ಅಲ್ಲದೇ ಅನುದಾನ ಒದಗಿಸುವಂತೆ ಮನವೊಲಿಸಲು ಸಾಧ್ಯವಿದೆ. ಈಗಾಗಲೇ ಕಳೆದ ಬಜೆಟ್ ಪೂರ್ವದಲ್ಲಿ ನಮ್ಮ ಹೋರಾಟ ಸಮಿತಿಯಿಂದ ನಮ್ಮ ವಿ.ವಿ ಅಭಿವೃದ್ದಿಗೆ ಅಗತ್ಯ ಅನುದಾನ ಪರ ದನಿ ಎತ್ತಲಾಗಿದೆ. ಇನ್ನು ಮುಂದೆಯೂ ಸಮಿತಿ ಹೋರಾಟ ಮಾಡುತ್ತದೆ ಎಂದು ಮನವಿಯಲ್ಲಿ ವಿವರಿಸಲಾಗಿದೆ.

ಇಂದಿನಿಂದ ಮೊದಲ ಹಂತದ ಜನಗಣತಿ

ಹಾವೇರಿ: ಜಿಲ್ಲೆಯಲ್ಲಿ ಮೊದಲ ಹಂತದ ಜನಗಣತಿ ಏಪ್ರಿಲ್ 1 ರಿಂದ ಮೇ 15ರವರೆಗೆ ಜರುಗಲಿದೆ. ಸಾರ್ವಜನಿಕರು ನೀಡಿದ ಮಾಹಿತಿ ಗೌಪ್ಯವಾಗಿರುತ್ತದೆ. ಹಾಗಾಗಿ ಸಾರ್ವಜನಿಕರು ಯಾವುದೇ ವದಂತಿಗಳಿಗೆ ಕಿವಿಗೊಡದೆ ನಿಖರ ಮಾಹಿತಿ ನೀಡಬೇಕು ಎಂದು ಜಿಲ್ಲಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಅವರು ತಿಳಿಸಿದರು.

ಡಿಸಿ ಕಚೇರಿ ಸಭಾಂಗಣದಲ್ಲಿ ಮಾಧ್ಯಮಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಸರಕಾರದ ವಿವಿಧ ಯೋಜನೆಗಳ ಜಾರಿಗೆ ಜನಸಂಖ್ಯೆ ಹಾಗೂ ಜನರ ಆರ್ಥಿಕ, ಸಾಮಾಜಿಕ ಸ್ಥಿತಿಗತಿ ಬಹಳ ಮುಖ್ಯ. ಸಾರ್ವಜನಿಕರು ಸ್ವಯಂ ಪ್ರೇರಣೆಯಿಂದ ಜನಗಣತಿಯಲ್ಲಿ ಭಾಗವಹಿಸಬೇಕು ಎಂದರು.

ಜನಗಣತಿ ಎಂದರೆ ದೇಶದ ಪ್ರತಿಯೊಂದು ಕುಟುಂಬ, ಪ್ರತಿಯೊಬ್ಬ ವ್ಯಕ್ತಿ ಮತ್ತು ಅವರ ಜನಸಂಖ್ಯಾ, ಆರ್ಥಿಕ ಮತ್ತು ಸಾಮಾಜಿಕ ಮಾಹಿತಿಗಳ ಅಧಿಕೃತ ಸಂಪೂರ್ಣ ಎಣಿಕೆಯಾಗಿದೆ ಎಂದರು.

ಭಾರತದಲ್ಲಿ 1872 ರಿಂದ ಇದು 16ನೇ ಜನಗಣತಿ ಯಾಗಿದೆ. ದೇಶದಲ್ಲಿಯೇ ಪ್ರಥಮ ಬಾರಿಗೆ ಡಿಜಿಟಲ್ ರೂಪದಲ್ಲಿ ನಡೆಸಲಾಗುತ್ತದೆ. ಭಾರತದ ಸ್ವಾತಂತ್ರ್ಯದ ನಂತರದ 8ನೇ ಜನಗಣತಿ ಇದಾಗಿದೆ. ಭಾರತೀಯ ಜನಗಣತಿಯು ಜನಸಂಖ್ಯಾಶಾಸ್ತ್ರ ಆರ್ಥಿಕ ಚಟುವಟಿಕೆ, ಸಾಕ್ಷರತೆ ಮತ್ತು ಶಿಕ್ಷಣ, ವಸತಿ ಮತ್ತು ಮನೆಯ ಸೌಲಭ್ಯಗಳು, ನಗರೀಕರಣ, ಫಲವತ್ತತೆ ಮತ್ತು ಮರಣ, ಎಸ್ಸಿಎಸ್ಟಿ, ಭಾಷೆ, ಧರ್ಮ,ವಲಸೆ, ಇತರೆ ಅಂಕಿಅಂಶಗಳಮಾಹಿತಿ ಅತ್ಯಂತ ವಿಶ್ವಾಸಾರ್ಹ ಮೂಲವಾಗಿದೆ ಎಂದು ತಿಳಿಸಿದರು.

ಜಿಲ್ಲಾಮಟ್ಟದಲ್ಲಿ ಜಿಲ್ಲಾಧಿಕಾರಿಗಳನ್ನು ಪ್ರಧಾನ ಜನಗಣತಿ ಅಧಿಕಾರಿಯಾಗಿ, ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯನ್ನು ಹೆಚ್ಚುವರಿ ಜಿಲ್ಲಾ ಪ್ರಧಾನ ಜನಗಣತಿ ಅಧಿಕಾರಿ ಹಾಗೂ ಅಪರ ಜಿಲ್ಲಾಧಿಕಾರಿ ಜಿಲ್ಲಾ ಜನಗಣತಿ ಅಧಿಕಾರಿಗಳಾಗಿದ್ದು, ಜಿ.ಪಂ.ಮುಖ್ಯ ಯೋಜನಾಧಿಕಾರಿಗಳು, ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕರು, ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳು, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರನ್ನು ಹೆಚ್ಚುವರಿ ಜನಗಣತಿ ಅಧಿಕಾರಿಗಳು ಎಂದು ಜನಗಣತಿ ನಿರ್ದೇಶನಾಲಯ ನೇಮಕ ಮಾಡಿದೆ.

ಡಿಜಿಟಲ್ ವಿಧಾನ:

ಭಾರತೀಯ ಜನಗಣತಿಯ ಇತಿಹಾಸದಲ್ಲಿ ಇದೇ ಮೊದಲಬಾರಿಗೆ ಮೊಬೈಲ್ ಆ್ಯಪ್ ಮತ್ತು ಡಿಜಿಟಲ್ ವಿಧಾನಗಳ ಮೂಲಕ ಸಮಗ್ರವಾಗಿ ಜನಗಣತಿ ನಡೆಸಲಾಗುತ್ತಿದೆ. ಕರ್ನಾಟಕದಲ್ಲಿ ಮೊದಲ ಹಂತವಾಗಿ 1 ಏಪ್ರಿಲ್ 2026 ರಿಂದ 15 ಮೇ 2026ರ ವರೆಗೆ ನಡೆಯಲಿದೆ. ಎರಡನೇ ಹಂತ ಫೆಬ್ರವರಿ 2027 ರಿಂದ 1 ಮಾರ್ಚ್ 2027ರವರೆಗೆ ನಡೆಯಲಿದೆ ಎಂದು ತಿಳಿಸಿದರು.

ಮಾಧ್ಯಮಗೋಷ್ಠಿಯಲ್ಲಿ ಜಿಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರುಚಿ ಬಿಂದಲ್, ಅಪರ ಜಿಲ್ಲಾಧಿಕಾರಿ ಡಾ.ನಾಗರಾಜ ಎಲ್, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ಶಿರಕೋಳ, ಜಿ.ಪಂ. ಉಪಕಾರ್ಯದರ್ಶಿ ಡಾ.ಪುನಿತ್ ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

ರಟ್ಟಿಹಳ್ಳಿ ಶಾಲೆ ಆವರಣದಲ್ಲಿ ಕುಸ್ತಿ ಪಂದ್ಯಾವಳಿ ಸಂಭ್ರಮದಿಂದ ಜರುಗಿರುವುದು.

ಮಹಾವೀರರ ಅಹಿಂಸೆ ಸಂದೇಶ ಸಾರ್ವಕಾಲಿಕ

ಹಾವೇರಿ: ಜಗತ್ತಿಗೆ ಅಹಿಂಸೆ, ಸತ್ಯ ಮತ್ತು ತ್ಯಾಗದ ಮಾರ್ಗವನ್ನು ತೋರಿಸಿದವರು ಮಹಾವೀರ ಭಗವಂತರು. ಅವರ ಸತ್ಯ, ಅಹಿಂಸೆ, ತ್ಯಾಗದ ಸಂದೇಶ ಸಾರ್ವಕಾಲಿಕವಾಗಿದೆ ಎಂದು ತಾಲೂಕು ಮಟ್ಟದ ಗ್ಯಾರಂಟಿ ಯೋಜನೆ ಸಮಿತಿ ಅಧ್ಯಕ್ಷ ಎಂ ಎಂ ಮೈದೂರ ಹೇಳಿದರು.

ನಗರದ ಶ್ರೀ ನೇಮಿನಾಥ ದಿಗಂಬರ ಜೈನ ಮಂದಿರದಲ್ಲಿ ಸೋಮವಾರ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕಂತಿ ಇಲಾಖೆ ಹಾಗೂ ಜೈನ್ ಮಂದಿರ ಕಮೀಟಿ ಸಹಯೋಗದಲ್ಲಿ ಆಯೋಜಿಸಲಾದ ಭಗವಾನ್ ಶ್ರೀ 1008 ಮಹಾವೀರ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಮಹಾತ್ಮ ಗಾಂಧೀಜಿ ಅವರು ಅಹಿಂಸಾ ಮಾರ್ಗದಿಂದ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟರು. ಅಹಿಂಸಾ ಮಾರ್ಗಕ್ಕೆ ದೊಡ್ಡ ಶಕ್ತಿ ಇದೆ. ಆದರೆ ಇಂದು ಗಲ್ಫ್ ರಾಷ್ಟ್ರಗಳ ಲ್ಲಿ ಯುದ್ಧ ನಡೆಯುತ್ತಿರುವುದು ವಿಷಾದದ ಸಂಗತಿಯಾಗಿದೆ. ಜೀವನದಲ್ಲಿ ಸತ್ಯ, ಅಹಿಂಸೆ, ತ್ಯಾಗದ ಮನೋಭಾವ ಅಳವಡಿಸಿಕೊಂಡು ಉತ್ತಮ ಸಮಾಜಕ್ಕೆ ಎಲ್ಲರೂ ಶ್ರಮಿಶೋಣ ಎಂದು ಮನವಿ ಮಾಡಿದರು. ಕನ್ನಡ ಮತ್ತು ಸಂಸ್ಕಂತಿ ಇಲಾಖೆ ಸಹಾಯಕ ನಿರ್ದೇಶಕ ವೀರಯ್ಯಸ್ವಾಮಿ ಹಿರೇಮಠ ಮಾತನಾಡಿದರು. ವಿದ್ಯಾ ಹಳ್ಳಿಯವರ ಮಹಾವೀರರ ಬಗ್ಗೆ ಉಪನ್ಯಾಸ ನೀಡಿದರು. ಜೈನ್ ಕಮೀಟಿ ಅಧ್ಯಕ್ಷ ಚಂದ್ರನಾಥ ಕಳಸೂರ ಅಧ್ಯಕ್ಷತೆ ವಹಿದ್ದರು. ಅಲ್ಪಸಂಖ್ಯಾತರ ಆಯೋಗದ ಸದಸ್ಯೆ ಪರಿಮಳಾ ಜೈನ್, ಶಿರಸ್ತೇದಾರ ನಾಗರಾಜ ಕನವಳ್ಳಿ, ಜೈನ ಸಂಘದ ಅಧ್ಯಕ್ಷ ಮಂಜಪ್ಪ ರಾ.ತಡಸದ ಇದ್ದರು.

ಶ್ರೀ ರೇಣುಕಾಚಾರ್ಯ ಜಯಂತಿ, ಕೃತಿ ಬಿಡುಗಡೆ

ಧಾರವಾಡ: ಜೀವಾತ್ಮ ಪರಮಾತ್ಮನಾಗಲು ಉತ್ಕೃಷ್ಟ, ಅಲೌಕಿಕ ಗಾಢ ಚಿಂತನೆ ಬೋಧಿಸುವ ವೀರಶೈವ ಪಂಚಸೂತ್ರೀಯ ಪ್ರವಚನ ಒಂದು ಮೇರು ದಾರ್ಶನಿಕ ಕೃತಿಯಾಗಿ ಎಲ್ಲರ ಗಮನಸೆಳೆದಿದೆ ಎಂದು ಕಾಶಿ ಪೀಠದ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯರು ಹೇಳಿದರು. ಇಲ್ಲಿಯ ಚರಂತಿಮಠ ಗಾರ್ಡನ್ನಲ್ಲಿ ಹಮ್ಮಿಕೊಂಡಿದ್ದ ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ ಹಾಗೂ 'ವೀರಶೈವ ಪಂಚಸೂತ್ರೀಯ ಪ್ರವಚನ' ಕೃತಿಯ ಲೋಕಾರ್ಪಣೆಯಲ್ಲಿ ಸಾನ್ನಿಧ್ಯ ವಹಿಸಿ ಮಾತನಾಡಿ, ವೀರಶೈವ ಒಂದು ಜಾತಿ, ವರ್ಗ,ಪಂಗಡ ಸೂಚಿಸದೇ, ಶಿವನ ಆಧ್ಯಾತ್ಮದ ಅನುಸಂಧಾನ ಮಾರ್ಗವಾಗಿದೆ ಎಂದರು. ಅಕ್ಕಿಆಲೂರು ಮುತ್ತಿನಕಂತಿಮಠದ ಚಂದ್ರಶೇಖರ ಸ್ವಾಮೀಜಿ ಮಾತನಾಡಿದರು. ಮಾಜಿ ಶಾಸಕ ಅಮೃತ ದೇಸಾಯಿ ಮಾತನಾಡಿ, ವೀರಶೈವ-ಲಿಂಗಾಯತ ಸಮಾಜ ಒಗ್ಗಟ್ಟು ಪ್ರದರ್ಶಿಸಲು ರೇಣುಕಾಚಾರ್ಯ ಜಯಂತಿ ವೇದಿಕೆ ಒದಗಿಸಿದೆ ಎಂದರು.

ಕುಸ್ತಿ ಖ್ಯಾತಿಯ ರಟ್ಟಿಹಳ್ಳಿಯಲ್ಲೊಂದು ಗರಡಿ ಮನೆ ಇಲ್ಲ !

ಮಲ್ಲೇಶ್ ಓಲೆಕಾರ್,ರಟ್ಟಿಹಳ್ಳಿ :

ಪಟ್ಟಣದಲ್ಲಿ ರಥೋತ್ಸವದ ಸಂಭ್ರಮ ಅಬ್ಬರಿಸುತ್ತಿರುವ ಈ ಹೊತ್ತಿನಲ್ಲಿ ಪಟ್ಟಣದ ಪ್ರಾಥಮಿಕ ಶಾಲೆಯ ಆವರಣದಲ್ಲಿ ಏರ್ಪಡಿಸಿದ ಬಯಲು ಕುಸ್ತಿ ಪಂದ್ಯಾವಳಿ ಜನರ ಗಮನ ಸೆಳೆದಿದೆ. ರಾಜ್ಯದ ವಿವಿಧ ಜಿಲ್ಲೆಗಳ ಜೊತೆಗೆ ಅಂತರ್‌ರಾಜ್ಯ ಮಟ್ಟದ ಕುಸ್ತಿ ಪಟುಗಳು ಆಗಮಿಸಿ ಅಖಾಡಕ್ಕೆ ಇಳಿದಿದ್ದು, ಕುಸ್ತಿ ಕಣ ರಂಗೇರಿದೆ. ಪೈಪೋಟಿ, ಪೈಚಾರಿ, ಪೈಪೋಟಿಯ ನಡುವೆ ಪ್ರೇಕ್ಷಕರು ಕೇಕೆ ಹಾಕುತ್ತಾ ಕ್ರೀಡಾ ಸ್ಫೂರ್ತಿ ಮೆರೆದರು. ಆದರೆ, ಈ ಸಂಭ್ರಮದ ಮಧ್ಯೆ ಒಂದು ಕೊರಗು ಏನಂದರೆ ಪಟ್ಟಣಕ್ಕೆ ಒಂದು ಸುಸಜ್ಜಿತ ಗರಡಿ ಮನೆ ಇಲ್ಲದಿರುವುದು..! ಇಲ್ಲಿಗೆ ಹೊರರಾಜ್ಯದ ಕುಸ್ತಿಪಟುಗಳು ಬಂದು ಅಖಾಡದಲ್ಲಿ ಮಣ್ಣು ಮುಕ್ಕುತ್ತಾರೆ. ಆದರೆ ನಾವು ದಿನವೂ ಮಣ್ಣೇ ಹುಡುಕುತ್ತಿರ್ತೀವಿ ಎನ್ನುತ್ತಾರೆ ಕುಸ್ತಿಪಟುಗಳು.

ರಟ್ಟಿಹಳ್ಳಿಯಲ್ಲಿ ಸರಿಯಾದ ಗರಡಿ ಅಖಾಡ ಇಲ್ಲದಿರುವುದು ಹಲವು ವರ್ಷಗಳಿಂದಲೂ ಕ್ರೀಡಾಪಟುಗಳಿಗೆ ಕಾಡುತ್ತಿರುವ ಸಮಸ್ಯೆ. ಬಯಲು ಕುಸ್ತಿ ಆಯೋಜನೆ ಮಾಡಿದಾಗ ಮಾತ್ರ ಕುಸ್ತಿ ನೆನಪಾಗುವುದು, ಉಳಿದ ದಿನಗಳಲ್ಲಿ ಗರಡಿಗೆ ಜಾಗವೇ ಸಿಗದಿರುವುದು ಅವರ ಬೇಸರ. ರಟ್ಟಿಹಳ್ಳಿಯಲ್ಲಿ ಕುಸ್ತಿಯ ಜಾತ್ರೆ ಪ್ರತಿ ವರ್ಷ ಜೋರಾಗುತ್ತದೆ. ಆದರೆ ಗರಡಿ ಇಲ್ಲದ ಕಾರಣ, ಸ್ಥಳೀಯ ಪಟುಗಳ ಕನಸುಗಳು ಮಾತ್ರ ಮಣ್ಣಿನಲ್ಲಿ ಮಣ್ಣಾಗುತ್ತಿವೆ.

ಗರಡಿ ಮನೆ ಇಲ್ಲದಿರುವುದರಿಂದ ಯುವಕರಲ್ಲಿ ದೈಹಿಕ ಚಟುವಟಿಕೆ ಕಡಿಮೆಯಾಗುತ್ತಿದೆ. ಮೊಬೈಲ್, ಟಿವಿ, ಇಂಟರ್‌ನೆಟ್ಗಳ ಕಡೆಗೆ ಹೆಚ್ಚು ಒಲವು ಬೆಳೆದಿದ್ದು, ಆರೋಗ್ಯದ ಮೇಲಿನ ಕಾಳಜಿ ಕುಗ್ಗುತ್ತಿದೆ. ಇದರ ಪರಿಣಾಮ ಶಕ್ತಿ, ಸಹನಶೀಲತೆ, ಸ್ಪರ್ಧಾತ್ಮಕ ಮನೋಭಾವವೂ ಕುಂದುತ್ತಿದೆ. ಆದ್ದರಿಂದ, ಪಟ್ಟಣದ ಹಿರಿಯರು, ಯುವಕರು, ಹಾಗೂ ಸಾರ್ವಜನಿಕ ಪ್ರತಿನಿಧಿಗಳು ಒಗ್ಗೂಡಿ ಗರಡಿಮನೆ ನಿರ್ಮಾಣದ ಬಗ್ಗೆ ಚಿಂತನೆ ನಡೆಸಬೇಕು. ಇದು ಕೇವಲ ವ್ಯಾಯಾಮ ಮಾಡುವ ಸ್ಥಳವಷ್ಟೇ ಅಲ್ಲ, ನಮ್ಮ ಸಂಸ್ಕೃತಿಯ ಪ್ರತೀಕವೂ ಆಗಿದೆ. ಗರಡಿಮನೆಗಳು ಮರಳಿ ಬಂದರೆ, ಯುವಜನತೆ ದಿಟ್ಟವಾಗುತ್ತದೆ. ಸಮಾಜವೂ ಸದೃಢವಾಗುತ್ತದೆ ಎಂಬ ಮಾತು ಸ್ಥಳೀಯ ಹಿರಿಯ ಕುಸ್ತಿ ಪಟುಗಳಿಂದ ಕೇಳಿ ಬರುತ್ತದೆ.

ಹಿಂದೆ ಗರಡಿ ಮನೆಯಲ್ಲಿ ತರಬೇತಿ ಪಡೆದ ಅನೇಕ ಸ್ಥಳೀಯ ಪಟುಗಳು ತಾಲೂಕು, ಜಿಲ್ಲಾ ಮಟ್ಟದಲ್ಲಿ ಹೆಸರು ಮಾಡಿದ್ದರು.

ಆದರೆ ಈಗ ಪರಿಸ್ಥಿತಿ ಬದಲಾಗಿದೆ. ಗರಡಿ ಇಲ್ಲದಿದ್ದರೆ ಗುದ್ದಾಟ ಹೇಗೆ? ಗುದ್ದಾಟ ಇಲ್ಲದಿದ್ದರೆ ಗೆಲುವು ಹೇಗೆ? ಎಂದು ಯುವ ಪಟುಗಳು ಪ್ರಶ್ನಿಸುತ್ತಾರೆ.

ಕುಸ್ತಿ ಕಣ ಭರ್ಜರಿಯಾಗಿದ್ದರೂ, ಸ್ಥಳೀಯ ಪ್ರತಿಭೆಗಳು ಮಂಕಾಗುತ್ತಿರುವುದು ವಾಸ್ತವ. ಅಧಿಕಾರಿಗಳು ಪ್ರತಿವರ್ಷ ಬಯಲು ಕುಸ್ತಿಗೆ ವೇದಿಕೆ ಸಿದ್ಧಪಡಿಸುವ ಬದಲು, ಶಾಶ್ವತ ಗರಡಿ ಮನೆ ನಿರ್ಮಾಣಕ್ಕೆ ಮುಂದಾದರೆ ಮಾತ್ರ ರಟ್ಟಿಹಳ್ಳಿ ಮತ್ತೆ ಕುಸ್ತಿ ಕ್ಷೇತ್ರದಲ್ಲಿ ಗುರುತಿಸಿಕೊಳ್ಳಲಿದೆ ಎಂದು ಕ್ರೀಡಾಭಿಮಾನಿಗಳು ಅಭಿಪ್ರಾಯಪಟ್ಟಿದ್ದಾರೆ.

ಒಟ್ಟಿನಲ್ಲಿ ರಥೋತ್ಸವದ ಕುಸ್ತಿ ಜಾತ್ರೆ ಉತ್ಸವದ ಉತ್ಸಾಹ ಹೆಚ್ಚಿಸಿದರೂ, ಗರಡಿ ಇಲ್ಲದ ಕುಸ್ತಿ ಪ್ರೀತಿ ಕುಸಿಯುತ್ತಿದೆ. ಅಖಾಡ ಸಿದ್ಧಪಡಿಸುವ ವೇಗದಲ್ಲಿ ಗರಡಿ ಕೂಡ ಕಟ್ಟಿದ್ರೆ, ರಟ್ಟಿಹಳ್ಳಿ ಮತ್ತೆ ಕುಸ್ತಿ ನಕ್ಷೆಯಲ್ಲಿ ಮೆರೆದೀತು. ಇಲ್ಲದಿದ್ದರೆ, ಈ ಜಾತ್ರೆ ಕೇವಲ 'ಒಂದು ದಿನದ ಶೋ' ಆಗಿಯೇ ಉಳಿಯಲಿದೆ.

ರಟ್ಟಿಹಳ್ಳಿ ಶಾಲೆ ಆವರಣದಲ್ಲಿ ಕುಸ್ತಿ ಪಂದ್ಯಾವಳಿ ಸಂಭ್ರಮದಿಂದ ಜರುಗಿರುವುದು.

ಮೈಲಾರ ಮಹದೇವಪ್ಪ ಕೊಡುಗೆ ಮರೆಯಲಾಗದು

ಹಾವೇರಿ: ದೇಶದ ಸ್ವಾತಂತ್ರ್ಯಕ್ಕೆ ಮಹಾತ್ಮ ಗಾಂಧೀಜಿಯವರ ಮಾಡು ಇಲ್ಲವೇ ಮಡಿ ಕರೆಯನ್ನು ಸಮರ್ಪಣ ಭಾವದಿಂದ ಸ್ವೀಕರಿಸಿದ ಮೈಲಾರ ಮಹಾದೇವಪ್ಪ, ವೀರಯ್ಯ ಹಿರೇಮಠ ಹಾಗೂ ತಿರಕಪ್ಪ ಮಡಿವಾಳರ ಹುತಾತ್ಮರಾಗಿ ಇಂದಿಗೆ 83 ವರ್ಷ ಗತಿಸಿದವು. ಈ ಮೂವರು ಹುತಾತ್ಮರ ಮತ್ತು ಅವರ ಸಂಗಡಿಗರ ಕುರಿತು ಇಂದಿನ ಪೀಳಿಗೆಗೆ ಮನವರಿಕೆ ಮಾಡಿಕೊಡುವ ಅಗತ್ಯತೆ ಇದೆ. ಜೊತೆಗೆ ಕೇವಲ ಹಾವೇರಿ ಜಿಲ್ಲೆಗೆ ಸೀಮಿತವಾಗಿರುವ ಏಪ್ರಿಲ್ 1ನೇ ದಿನದ ಹುತಾತ್ಮರ ದಿನಾಚರಣೆಯನ್ನು ರಾಜ್ಯಾದ್ಯಂತ ವಿಸ್ತರಿಸಬೇಕೆಂಬುದು ಪ್ರಜ್ಞಾವಂತರು ಆಗ್ರಹಿಸಿದ್ದಾರೆ.

ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ 1, ಏಪ್ರಿಲ್ 1943ರಂದು ಹೊಸರಿತ್ತಿಯ ಶ್ರೀ ವೀರಭದ್ರೇಶ್ವರ ದೇಗುಲದಲ್ಲಿ ಬ್ರಿಟಿಷರ ಕಂದಾಯ ಹಣವನ್ನು ವಶಪಡಿಸಿಕೊಳ್ಳುವ ಸಂದರ್ಭದಲ್ಲಿ ಪೊಲೀಸರ ಗುಂಡೇಟಿಗೆ ಮೂವರು ಹುತಾತ್ಮರಾಗಿದ್ದರು. ಕೋಗನೂರಿನ ಗೋಣೆಪ್ಪ ಕಮತ ಬಲಗೈಯಲ್ಲಿನ ಮೂರು ಬೆರಳುಗಳು ಬಂದೂಕಿನ ಬ್ಯಾನೆಟ್ನಿಂದ ತುಂಡರಿಸಲ್ಪಟ್ಟಿದ್ದವು. ಹಾಲಗಿಯ ಚಾಂದಸಾಬ ಓಲೇಕಾರ ಕಿವಿ ಮೇಲಿನ ಭಾಗದಲ್ಲಿ ಗಂಭೀರ ಗಾಯವಾಗಿತ್ತು. ಮುದಕಪ್ಪ ಹಡಪದ ಬಲಗಾಲಿಗೆ ಗುಂಡೇಟು ಬಿದ್ದಿತ್ತು. ಆದರೆ ಗಾಂಧೀಜಿಯವರು ನೀಡಿದ ಕರೆಯನ್ನು ಪಾಲಿಸಿದ ಚಳವಳಿಗಾರರು ತಮ್ಮ ಬಳಿ ಶಸ್ತ್ರಗಳಿದ್ದರೂ ಅಹಿಂಸಾ ತತ್ವ ಪಾಲಿಸಲು ಅನಿವಾರ್ಯವಾಗಿ ಪ್ರಾಣಾರ್ಪಣೆ ಮಾಡಬೇಕಾಯಿತು ಎಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಹೊರಗುತ್ತಿಗೆ ಸೇವೆ ಸಂಬಂಧ ಸರಕಾರ ಆದೇಶ ಹೊರಡಿಸಿಲ್ಲ

ಬೆಂಗಳೂರು: ಸರಕಾರದಲ್ಲಿ ಹೊರ ಗುತ್ತಿಗೆ ಆಧಾರಿತ ಸಿಬ್ಬಂದಿಯ ಸೇವೆಯನ್ನು ಮುಂದುವರಿಸುವ ಬಗ್ಗೆ ಆರ್ಥಿಕ ಇಲಾಖೆಯ ಅಧಿಕೃತ ಜ್ಞಾಪನದ ಮಾದರಿಯಲ್ಲಿ, ನಕಲಿಯಾಗಿ ಸಂ.ಆಇ/ಸೇನಿ/08/2026 ದಿನಾಂಕ: 24-03-2026 ಸಂಖ್ಯೆಯಲ್ಲಿ ಅನಧಿಕೃತವಾಗಿ ಸೃಷ್ಟಿಸಿ ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟಿದ್ದಾರೆ.

ಕೆಲವು ಮಾಧ್ಯಮಗಳು, ಆನ್‌ಲೈನ್ ಆವೃತ್ತಿಗಳು ಹಾಗೂ ಸಾಮಾಜಿಕ ಮಾಧ್ಯಮಗಳು ನೈಜತೆ ಪರಿಶೀಲಿಸದೆ, ಈ ಸುದ್ದಿಯನ್ನು ಪ್ರಕಟಿಸಿವೆ. ಸರಕಾರದ ಇಂತಹ ಯಾವುದೇ ಆದೇಶ ಅಥವಾ ಅಧಿಕೃತ ಜ್ಞಾಪನ ಪತ್ರ ಹೊರಡಿಸಿಲ್ಲ. ಈ ನಕಲಿ ಜ್ಞಾಪನ ಪತ್ರ ಅಧಿಕೃತವಲ್ಲ ಎಂದು ಆರ್ಥಿಕ ಇಲಾಖೆಯ ಸರಕಾರದ ಅಧೀನ ಕಾರ್ಯದರ್ಶಿ ಎಂ.ರಾಜಮ್ಮ ಪ್ರಕಟಣೆಯಲ್ಲಿ ಸ್ಪಷ್ಟಪಡಿಸಿದ್ದಾರೆ. ಈ ನಡುವೆ ಆರ್ಥಿಕ ಇಲಾಖೆಯಿಂದ ಅಧಿಕೃತ ಜ್ಞಾಪನ ಹೊರಡಿಸದೇ ಇದ್ದರೂ ನಕಲಿ ಅಧಿಕೃತಕ ಜ್ಞಾಪನವನ್ನು ಹೊರಡಿಸಿರುವುದರಿಂದ ಸರಕಾರದ ಇಲಾಖೆಗಳಲ್ಲಿ ಗೊಂದಲಮಯ ವಾತಾವರಣ ಉಂಟಾಗಿದೆ. ಈ ರೀತಿ ಜ್ಞಾಪನವನ್ನು ಹೊರಡಿಸಿರುವ ವ್ಯಕ್ತಿಗಳ ವಿರುದ್ಧ ಕೂಡಲೇ ಕ್ರಮಕ್ಕೆ ಗೊಳ್ಳುವಂತೆ ವಿಧಾನಸೌಧ ಪೊಲೀಸ್ ಠಾಣೆಗೆ ಆರ್ಥಿಕ ಇಲಾಖೆ ದೂರು ನೀಡಿದೆ.

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಇಂಜಿನಿಯರರ ಕಛೇರಿ, ಲೋಕೋಪಯೋಗಿ ಇಲಾಖೆ
ಮಂಗಳೂರು ವಿಭಾಗ, ಮಂಗಳೂರು
ಸಂಖ್ಯೆ:ಲೋ.ಇ:ಮಂ.ವಿ:ಟಿ.ಎನ್.ಡಿ:(36ಇ):2025-26:ಜೆಇ-1 ದಿನಾಂಕ: 27.03.2026
ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ) / 2ನೇ ಕರೆ ಲೆಕ್ಕಶೀರ್ಷಿಕೆ 5054-04-337-0-01-154 ಜಿಲ್ಲಾ ರಸ್ತೆಗಳು ಸುಧಾರಣೆಯಡಿ ಇಂಡೆಂಟ್ ನಂ: 30116 ಈ ಕಾಮಗಾರಿಗೆ 2ನೇ ಕರೆಯಾಗಿ ಟೆಂಡರ್ ಕರೆಯಲಾಗಿದ್ದು, ಟೆಂಡರನ್ನು ಸಲ್ಲಿಸುವ ಕೊನೆಯ ದಿನಾಂಕ: 15.04.2026 (ಅಪರಾಹ್ನ 5.00 ಗಂಟೆಯವರೆಗೆ ಮಾತ್ರ) ನಿಗದಿಪಡಿಸಲಾಗಿರುತ್ತದೆ.
ಈ ಕಾಮಗಾರಿಯ ಅಂದಾಜು ಮೊತ್ತ: ರೂ.400.00 ಲಕ್ಷ ಆಗಿರುತ್ತದೆ ಮೇಲಿನ ಕಾಮಗಾರಿಗಳಿಗೆ ಕೆ.ಡಬ್ಲ್ಯೂ-4 ಪ್ರಮಾಣಿತ ಟೆಂಡರ್ ದಾಖಲೆಯ ಪ್ರಕಾರ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ, ಕೆಲಸದ ಮೌಲ್ಯ, ಟೆಂಡರ್‌ಗೆ ಹಾಕಲಾದ ಮೊತ್ತ, ಇ.ಎಮ್.ಡಿ. ಮೊತ್ತ ಇತ್ಯಾದಿ ಕುರಿತು ಹೆಚ್ಚಿನ ವಿವರಗಳನ್ನು ಕೆ.ಪಿ.ಪಿ ಪೋರ್ಟಲ್ (www.kppp.karnataka.gov.in) ನಲ್ಲಿ ನೋಡಬಹುದು. ಹೆಚ್ಚಿನ ವಿವರಗಳಿಗಾಗಿ ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ವಿಭಾಗೀಯ ಕಛೇರಿ, ಮಂಗಳೂರು ಇವರನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು. ದೂರವಾಣಿ ಸಂಖ್ಯೆ: 0824-2423169.
ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್
DIPR/DK/KSMCA/1/25-26 dt.31.03.2026

ಕರ್ನಾಟಕ ಸರ್ಕಾರ
ಪಂಡಿತ ಸಾರ್ವಜನಿಕ ಆಸ್ಪತ್ರೆ, ಶಿರಸಿ(ಉ.ಕ)-581401
PANDIT GENERAL HOSPITAL, SIRSI (N.K) 581401
ದೂರವಾಣಿ: 08384-229936, Email ID: pghsis@gmail.com
ದಿನಾಂಕ: 27.03.2026
ಇ-ಟೆಂಡರ್ ಅಧಿಸೂಚನೆ
ಪಂಡಿತ ಸಾರ್ವಜನಿಕ ಆಸ್ಪತ್ರೆ, ಶಿರಸಿಗೆ ಹಾಗೂ ತಾಯಿ ಮತ್ತು ಮಕ್ಕಳ ಆಸ್ಪತ್ರೆ, ಶಿರಸಿಗೆ 2026-27 ನೇ ಸಾಲಿಗಾಗಿ ಒಳ ರೋಗಿಗಳಿಗೆ ಸಿದ್ದಪಡಿಸಿದ ಪಥ್ಯಾಹಾರ (Ready Meal) ಹಾಗೂ ಬ್ರೆಡ್ ಸರಬರಾಜು ಮಾಡಲು ಹಾಗೂ ಅರ್ಹ ಸಂಘ, ಸಂಸ್ಥೆಗಳಿಂದ ಇ-ಸಂಗ್ರಹಣಾ ವೇದಿಕೆ ಮೂಲಕ ಟೆಂಡರ್ ಅಹ್ವಾನಿಸಲಾಗಿದೆ. ವಾರ್ಷಿಕ ಟೆಂಡರ್ ಮೊತ್ತ: ರೂ. 68.40 ಲಕ್ಷ. ಟೆಂಡರ್ ಅರ್ಜಿ ಸಲ್ಲಿಸುವ ಕೊನೆಯ ದಿ: 18.04.2026 (ಅಧಿಸೂಚನೆ ಸಂ: NO:PGHS/DIET TENDER/01/2025-26 ದಿ: 27.03.2026.
ತಾಯಿ ಮತ್ತು ಮಕ್ಕಳ ಆಸ್ಪತ್ರೆ, ಶಿರಸಿಗೆ 2026-27 ನೇ ಸಾಲಿಗಾಗಿ ವಿವಿಧ ವೃಂದಗಳ 16 ಸಿಬ್ಬಂದಿಗಳ ಮಾನವ ಸಂಪನ್ಮೂಲ ಸೇವೆಯನ್ನು ಹೊರಗುತ್ತಿಗೆ ಮೇರೆಗೆ ಪಡೆಯುವ ಕುರಿತು ಅರ್ಹ ಸಂಘ, ಸಂಸ್ಥೆಗಳಿಂದ ಇ-ಸಂಗ್ರಹಣಾ ವೇದಿಕೆ ಮೂಲಕ ಟೆಂಡರ್ ಅಹ್ವಾನಿಸಲಾಗಿದೆ. ವಾರ್ಷಿಕ ಟೆಂಡರ್ ಮೊತ್ತ: ರೂ. 39.57 ಲಕ್ಷ ಟೆಂಡರ್ ಅರ್ಜಿ ಸಲ್ಲಿಸುವ ಕೊನೆಯ ದಿ: 18.04.2026(ಅಧಿಸೂಚನೆ ಸಂ: No:PGHS /MCHS/MAN POWER/TENDER/02/25-26 ದಿ:27.03.2026
ಟೆಂಡರ್ ನಮೂನೆಗಳಿಗಾಗಿ, ಇ.ಎಮ್.ಡಿ. ಟೆಂಡರ್ ಷರತ್ತು /ನಿಬಂಧನೆಗಳ ಬಗ್ಗೆ ಮತ್ತು ಹೆಚ್ಚಿನ ಮಾಹಿತಿಗಾಗಿ https://kppp.karnataka.gov.in ವೆಬ್‌ಸೈಟ್‌ನಲ್ಲಿ ನೋಡಬಹುದಾಗಿದೆ.
ಸಹಿ/- ಆಡಳಿತ ವೈದ್ಯಾಧಿಕಾರಿಗಳು
ಪಂಡಿತ ಸಾರ್ಜನಿಕ ಆಸ್ಪತ್ರೆ, ಶಿರಸಿ(ಉ.ಕ)
DIPR/KWR/KSMCA/1267/25-26 dt. 31.03.2026

ಕರ್ನಾಟಕ ಸರ್ಕಾರ GOVERNMENT OF KARNATAKA
ಬಳ್ಳಾರಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನ ಕೇಂದ್ರ ಬಳ್ಳಾರಿ.
Reg.No:205/1995-96-Recognized by Medical Council of India, New Delhi vide No:MCI-57(3)/79-Med/1912, Dtd.16-04-1979 &Endst. No.MCI-37(1)(Recog.-18)(UG)/2017-Med./109629,Dt: 06/05/2019
DIRECTOR: 8147796529 PRINCIPAL :8147796527
CAO:8147796526PA : 8147796539.
e-mail-ids:directorbmcrcballari@gmail.com, website : https://bmcrcballari.karnataka.gov.inprincipalbmcrcballari@gmail.com
No. BMCRC/SUP/TEND/DIALYSIS/06/2025-26/Call-3
DATE: 25.03.2026
ಮರು ಇ-ಟೆಂಡರ್ ಅಧಿಸೂಚನೆ
ಬಿಎಂಸಿಆರ್‌ಸಿ ಸಂಸ್ಥೆಯ ವೈದ್ಯಕೀಯ ಮಹಾವಿದ್ಯಾಲಯ ಆಸ್ಪತ್ರೆಗೆ ಡಯಾಲಿಸಿಸ್ ಐಟಂಗಳನ್ನು ಒಂದು ವರ್ಷದ ಅವಧಿಗೆ ಧರಗುತ್ತಗೆ ಆಧಾರದ ಮೇಲೆ ಸರಬರಾಜು ಮಾಡಲು ಅರ್ಹ ಟೆಂಡರುದಾರರಿಂದ ಕೆ.ಟಿ.ಪಿ.ಪಿ ಅಧಿನಿಯಮ-1999-2000 ರಂತೆ ದ್ವಿ-ಬಿಡ್ ಪದ್ದತಿಯಲ್ಲಿ ಕರ್ನಾಟಕ ಸರ್ಕಾರದ ಇ-ಪೋರ್ಟಲ್ https://kppp.karnataka.gov.in ಮೂಲಕ ಇ-ಟೆಂಡರನ್ನು ಆಹ್ವಾನಿಸಲಾಗಿರುತ್ತದೆ. ಆಸಕ್ತ ಟೆಂಡರ್‌ದಾರರು ಮೇಲಿನ ಪೋರ್ಟಲ್‌ನಲ್ಲಿ ಟೆಂಡರನ್ನು ದಿನಾಂಕ: 10.04.2026 ಸಂಜೆ 5.00 ಗಂಟೆಯ ಒಳಗಾಗಿ ಸಲ್ಲಿಸಲು ಕೋರಿದೆ. ಟೆಂಡರಿನ ಅಂದಾಜು ಮೊತ್ತ ರೂ.198.31 ಲಕ್ಷಗಳಿರುತ್ತವೆ. ಹೆಚ್ಚಿನ ವಿವರಗಳನ್ನು ಮೇಲಿನ ವೆಬ್ ಸೈಟ್ www.bmcrcballari.karnataka.gov.in ನಲ್ಲಿ ಪಡೆಯಬಹುದಾಗಿದೆ.
ಸಹಿ/- ಡೀನ್ ಹಾಗು ನಿರ್ದೇಶಕರು, ಬಿಎಂಸಿ ಆರ್ ಸಿ, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/1197/ಕೆಎಸ್‌ಎಂಸಿಎ/2025-26

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ ತುಮಕೂರು
ಜಿಲ್ಲಾ ಯೋಜನಾ ನಿರ್ವಹಣಾ ಘಟಕ, ಎನ್.ಆರ್.ಹೆಚ್.ಎಂ. ಜಿಲ್ಲಾ ಆರೋಗ್ಯ ಮತ್ತು ಕು.ಕ. ಅಧಿಕಾರಿಗಳ ಕಛೇರಿ, ತುಮಕೂರು
Email:dpmotumkur@gmail.com, dhotumkur@gmail.com, rchotumkur@gmail.com
ಸಂಖ್ಯೆ: DPMU(T)/NHM/05/2010-11 ದಿನಾಂಕ: 25.03.2026
ಟೆಂಡರ್ ಪ್ರಕಟಣೆ
ತುಮಕೂರು ಜಿಲ್ಲೆ0ು ಎಲ್ಲಾ Non 24X7 PHC, 24X7 PHC, FRU, MCH, Namma clinic, TB Centre & CHC ಗಳ ಜೈವಿಕ ವೈದ್ಯಕೀ0ು ತ್ಯಾಜ್ಯ KSPCB ನಿಯಮದನ್ವಯ ನಿರ್ವಾಹಣೆ ಮಾಡಲು ಇ-ಪ್ರಕ್ಯೂರ್ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಪ್ರಕಟಣೆಯನ್ನು ಆಹ್ವಾನಿಸಲಾಗಿದೆ.
ಇ-ಪ್ರಕ್ಯೂರ್ಮೆಂಟ್ ವ್ಯವಸ್ಥೆಯಡಿ ಟೆಂಡರ್ ಶೆಡ್ಯೂಲ್ ಈ ಕೆಳಗಿನಂತಿದೆ:-
ವಿವರ: 1. ಇ-ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಯಲ್ಲಿರುತ್ತದೆ. ದಿನಾಂಕ : 17.03.2026. 2. ಟೆಂಡರ್ ಫಾರಂಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಮತ್ತು ಕಾಲ; ದಿನಾಂಕ: 16.04.2026, ಸಮಯ ಮಧ್ಯಾಹ್ನ 4.00 ಗಂಟೆ. 3. ಟೆಂಡರ್ ಫಾರಂಗಳನ್ನು ತೆರೆಯುವ ದಿನಾಂಕ ಮತ್ತು ಕಾಲ (ತಾಂತ್ರಿಕ ಬಿಡ್) ದಿನಾಂಕ: 17.04.2026, (ಸಮಯ ಕ್ರಮವಾಗಿ ಮದ್ಯಾಹ್ನ 4.30 ಗಂಟೆ) 4. ಟೆಂಡರ್ ತೆರೆಯುವ ಸ್ಥಳ ಮತ್ತು ಪ್ರಾಧಿಕಾರ: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ತುಮಕೂರು. 5. ಜೈವಿಕ ವೈದ್ಯಕೀಯ ತ್ಯಾಜ್ಯ KSPCB ನಿಯಮದನ್ವಯ ನಿರ್ವಾಹಣೆ ಟೆಂಡರ್ ಮೊತ್ತ ಮತ್ತು ಇ.ಎಂ.ಡಿ ಮೊತ್ತ: ಟೆಂಡರ್ ಮೊತ್ತ ರೂ.8468400/- ಇ.ಎಂ.ಡಿ. ಮೊತ್ತ ರೂ.212000/- ಇ-ಪ್ರೊಕ್ಯೂರ್ ಮೆಂಟ್ ಮುಖಾಂತರ ನಮೂದಿಸುವುದು.
ಹೆಚ್ಚಿನ ಮಾಹಿತಿಯನ್ನು ಜಿಲ್ಲಾ ಯೋಜನಾ ನಿರ್ವಹಣಾ ಘಟಕ, ತುಮಕೂರು ಇಲ್ಲಿ ಕಛೇರಿಯ ವೇಳೆಯಲ್ಲಿ ಮಾಹಿತಿ ಪಡೆಯ ಬಹುದಾಗಿದೆ MOB: 9449843123.
ಸಹಿ/- ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ತುಮಕೂರು .
DIPR/TUM/523/KSMCA/2025-26

ಕೇಂದ್ರದ ಅಸಹಕಾರದ ಬಗ್ಗೆ ಬಿಜೆಪಿ ರಾಜ್ಯಾಧ್ಯಕ್ಷರಿಗೆ ಅಂಕಿ ಅಂಶ ಸಹಿತ ಸವಾಲು

ಬಿಜೆಪಿಗೆ ರಾಜಕೀಯ ಹತಾಶೆ: ಸಿಎಂ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯ ಸರಕಾರದ ಆರ್ಥಿಕ ಸ್ಥಿತಿ ಬಗ್ಗೆ ಶ್ವೇತಪತ್ರ ಹೊರಡಿಸಬೇಕು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಒತ್ತಾಯಿಸಿರುವುದು ಆರ್ಥಿಕ ಕ್ಷೇತ್ರದ ಬಗೆಗಿನ ಅವರ ಅಜ್ಞಾನ, ಆಡಳಿತದ ಅನುಭವದ ಕೊರತೆ ಮತ್ತು ರಾಜಕೀಯ ಹತಾಶೆಯನ್ನು ತೋರಿಸುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಟೀಕಿಸಿದ್ದಾರೆ.

ಈ ಸಂಬಂಧ ಸುದೀರ್ಘ ಮಾಧ್ಯಮ ಹೇಳಿಕೆ ಬಿಡುಗಡೆ ಮಾಡಿರುವ ಅವರು, ಕಳೆದ ತಿಂಗಳಷ್ಟೇ ಈ ಆರ್ಥಿಕ ವರ್ಷದ ಬಜೆಟ್ ಮಂಡಿಸಿದ್ದೇನೆ. ಅದು ಅಂಕಿ-ಅಂಶಗಳ ಕಾಗದದ ಕಂತೆ ಅಲ್ಲ, ರಾಜ್ಯದ ಏಳು ಕೋಟಿ ಕನ್ನಡಿಗರಿಗೆ ಒಪ್ಪಿಸಿರುವ ಪ್ರಾಮಾಣಿಕ ಲೆಕ್ಕಪತ್ರ. ಆ ಆಯವ್ಯಯವನ್ನು ವಿಧಾನಮಂಡಲದ ಉಭಯ ಸದನಗಳು ಒಪ್ಪಿಕೊಂಡು ಅಂಗೀಕರಿಸಿವೆ. ಇದೇ ನಮ್ಮ ಶ್ವೇತಪತ್ರ ಎಂದಿದ್ದಾರೆ.

ಅಲ್ಲದೆ, ಇದರ ಬಗ್ಗೆ ವಿಧಾನಮಂಡಲದ ಉಭಯ ಸದನಗಳಲ್ಲಿ ಕೂಲಂಕಷವಾಗಿ ಚರ್ಚೆ ನಡೆದಿದೆ. ವಿಜಯೇಂದ್ರ ಅವರ ಪಕ್ಷದವರೂ ಸೇರಿದಂತೆ 21 ಜನ ವಿರೋಧ ಪಕ್ಷದ ಸದಸ್ಯರೂ ಮಾತನಾಡಿ ಎತ್ತಿದ್ದ ಪ್ರಶ್ನೆಗಳಿಗೆ ಸೂಕ್ತ ಉತ್ತರ ನೀಡಿದ್ದೇನೆ. ಇದರ ಬಗ್ಗೆ ಇನ್ನೂ ನಿಮಗೆ ಅನುಮಾನಗಳಿದ್ದರೆ ವಿವರಣೆ ಕೊಡಲು ನಾನು ಸಿದ್ಧನಿದ್ದೇನೆ. ಉಪಚುನಾವಣೆಯ ಅಖಾಡದಲ್ಲಿಯೇ ನಿಮ್ಮ ಜತೆ ಬಹಿರಂಗ ಚರ್ಚೆಗೂ ನಾನು ಸಿದ್ಧನಿದ್ದೇನೆ. ದಯವಿಟ್ಟು ಕೇವಲ ರಾಜಕೀಯ ಮಾತನಾಡಬೇಕೆಂಬ ಬಾಯಿ ಚಪಲಕ್ಕಾಗಿ ಆಯವ್ಯಯ ಪತ್ರದ ಪಾವಿತ್ರ್ಯ ಹಾಳು ಮಾಡಲು ಹೋಗಬೇಡಿ ಎಂದು ಛೇಡಿಸಿದ್ದಾರೆ.

ರಾಜ್ಯ ದಿವಾಳಿ ಸ್ಥಿತಿಯಲ್ಲಿದೆ ಎಂಬ ಆರೋಪದ ಹಿಂದೆ ನಮ್ಮ ಸರಕಾರವನ್ನು ರಾಜಕೀಯವಾಗಿ ಎದುರಿಸಲಾಗದ ಬಿಜೆಪಿ ನಾಯಕರ ಅಸಹಾಯಕತೆ, ಹತಾಶೆ ಮತ್ತು ಅಸೂಯೆ ಇದೆ. ಯಾವ ಇಲಾಖೆಯೂ ನೌಕರರಿಗೆ ಸಂಬಳ ನೀಡಲಾಗದ ದಿವಾಳಿ ಸ್ಥಿತಿಯಲ್ಲಿಲ್ಲ. ನಮ್ಮ ಸರಕಾರ ಆರ್ಥಿಕವಾಗಿ ಮಾತ್ರವಲ್ಲ ರಾಜಕೀಯವಾಗಿಯೂ ಸುಭದ್ರವಾಗಿದೆ. ರಾಜ್ಯದ ಜನತೆ ನೆಮ್ಮದಿಯಿಂದ ಇದ್ದಾರೆ. ವಿಜಯೇಂದ್ರ ಅವರೇ, ಕರ್ನಾಟಕದ ಆರ್ಥಿಕ ಸ್ಥಿತಿ ನಿಮ್ಮ ಪಕ್ಷದ ಆಡಳಿತ ಇರುವ ಕೇಂದ್ರ ಸರಕಾರಕ್ಕಿಂತಲೂ ಉತ್ತಮ ಸ್ಥಿತಿಯಲ್ಲಿದೆ. ನಮ್ಮ ಈ ವರ್ಷದ ನಮ್ಮ ಬಜೆಟ್ ಗಾತ್ರ 4,48,004 ಕೋಟಿಗಳಾಗಿದ್ದು, ಇದು ಕಳೆದ ವರ್ಷದ ಬಜೆಟ್ ಗಾತ್ರಕ್ಕಿಂತ 38,455 ಕೋಟಿ ರು.ಗಳಷ್ಟು ಹೆಚ್ಚಿನದ್ದಾಗಿದೆ.

ನಮ್ಮ ಬಜೆಟ್ ಗಾತ್ರ ದಲ್ಲಿ ಶೇ.9.4ರಷ್ಟು ಬೆಳವಣಿಗೆಯಾಗಿದ್ದರೆ, ಕೇಂದ್ರ ಸರಕಾರದ ಬಜೆಟ್ ಕಳೆದ ವರ್ಷಕ್ಕೆ ಹೋಲಿಸಿದರೆ ಶೇ.5.6ರಷ್ಟು ಮಾತ್ರ ಬೆಳವಣಿಗೆ ಸಾಧಿಸಿದೆ. ಕಳೆದ ವರ್ಷ 50.66 ಲಕ್ಷ ಕೋಟಿಗಳ ಬಜೆಟ್ ಮಂಡಿಸಿದ್ದ ಕೇಂದ್ರ ಸರಕಾರ ಈ ವರ್ಷ 53.47 ಲಕ್ಷ ಕೋಟಿ ರು. ಗಾತ್ರದ ಬಜೆಟ್ ಮಂಡಿಸಿದ್ದಾರೆ. ನಮ್ಮ ಬಜೆಟ್ ಗಾತ್ರ ಆರ್ಥಿಕ ಪ್ರಗತಿಯನ್ನು ಸೂಚಿಸುತ್ತಿದೆ. ಆರ್ಥಿಕ ಹಿಂಜರಿತ ಇದ್ದಿದ್ದರೆ ಈ ಪ್ರಗತಿ ಸಾಧ್ಯವಾಗುತ್ತಿತ್ತೇ ಎಂದು ಪ್ರಶ್ನಿಸಿದ್ದಾರೆ.

> ಬಿಜೆಪಿ ಅಧಿಕಾರದಲ್ಲಿರುವ ಕೇಂದ್ರ ಸರಕಾರ ಮತ್ತು ರಾಜ್ಯ ಸರಕಾರಗಳ ಅರ್ಥಿಕತೆಯನ್ನು ಸೂಕ್ಷ್ಮವಾಗಿ ಅವಲೋಕನ ಮಾಡಿದರೆ ಯಾರು ಆರ್ಥಿಕತೆಯನ್ನು ದಿವಾಳಿ ಸ್ಥಿತಿಗೆ ತಳ್ಳಿದವರು ಎನ್ನುವುದು ಸ್ಪಷ್ಟವಾಗುತ್ತದೆ. ವಿಜಯೇಂದ್ರ ಅವರು ಬೇಜವಾಬ್ದಾರಿ ಹೇಳಿಕೆ ನೀಡುವ ಮೊದಲು ಸ್ವಲ್ಪ ಹೋಮ್ ವರ್ಕ್ ಮಾಡಿಕೊಂಡು ಬನ್ನಿ, ಮಾತನಾಡೋಣ.
>
> -ಸಿದ್ದರಾಮಯ್ಯ, ಮುಖ್ಯಮಂತ್ರಿ

ಬಿಜೆಪಿ ಆಡಳಿತದ ಮೇಲೆ ಕಣ್ಣಾಡಿಸಿ: ವಿಜಯೇಂದ್ರ ಅವರೇ ದಯವಿಟ್ಟು ಒಮ್ಮೆ ನಿಮ್ಮ ಪಕ್ಷದ ಆಡಳಿತ ಇರುವ ರಾಜ್ಯಗಳ ಆರ್ಥಿಕತೆಯ ಮೇಲೆ ಕಣ್ಣಾಡಿಸಿಕೊಂಡು ಬನ್ನಿ. ಮಹಾರಾಷ್ಟ್ರದ ಸಾಲ ಬಾಕಿ 11.02 ಲಕ್ಷ ಕೋಟಿಯಷ್ಟಿದ್ದರೆ, ಬಿಹಾರದ ವಿತ್ತೀಯ ಕೊರತೆ ಜಿಎಸ್‌ಡಿಪಿ ಶೇ.11.8ರಷ್ಟಿದೆ. ರಾಜಸ್ತಾನ ಮತ್ತು ಮಧ್ಯಪ್ರದೇಶದ ವಿತ್ತೀಯ ಕೊರತೆ ಜಿಎಸ್‌ಡಿಪಿಯ ಶೇಕಡಾ 3.7ರಷ್ಟಿದೆ. ಬಿಜೆಪಿ ಆಳ್ವಿಕೆಯ ಕೇಂದ್ರ ಸರಕಾರ ಇರಲಿ, ರಾಜ್ಯ ಸರಕಾರಗಳಿರಲಿ ಆರ್ಥಿಕ ದಿವಾಳಿತನವೇ ಬಿಜೆಪಿ ಆಡಳಿತದ ಮುಖ್ಯ ಗುರುತಾಗಿದೆ. ನಮ್ಮನ್ನು ರಾಜಕೀಯವಾಗಿ ಹಣಿಯಬೇಕೆಂಬ ದುರುದ್ದೇಶದಿಂದ ಕೇಂದ್ರ ಸರಕಾರ ಸತತವಾಗಿ ಕರ್ನಾಟಕಕ್ಕೆ ಹೊಡೆತದ ಮೇಲೆ ಹೊಡೆತ ಕೊಡುತ್ತಿದೆ. ತೆರಿಗೆ ಹಂಚಿಕೆ, ಜಿಎಸ್‌ಟಿ ಪರಿಹಾರ ಮತ್ತು ಕೇಂದ್ರ ಪ್ರಾಯೋಜಿತ ಯೋಜನೆಗಳ ಅನುದಾನದಲ್ಲಿ ನಿರಂತರವಾಗಿ ಮಲತಾಯಿ ಧೋರಣೆ ಅನುಸರಿಸುತ್ತಾ ಬಂದಿದೆ. 14ನೇ ಹಣಕಾಸು ಆಯೋಗ ತೆರಿಗೆ ಹಂಚಿಕೆಯ ಪಾಲನ್ನು ಶೇಕಡಾ 4.72ಕ್ಕೆ ನಿಗದಿಗೊಳಿಸಿತ್ತು, ಹದಿನೈದನೇ ಹಣಕಾಸು ಆಯೋಗ 3.64ಕ್ಕೆ ಇಳಿಸಿತ್ತು. ನಮ್ಮ ತೀವ್ರ ಪ್ರತಿಭಟನೆಯ ನಂತರ ಹದಿನಾರನೇ ಹಣಕಾಸು ಆಯೋಗ ಈಗ ತೆರಿಗೆ ಹಂಚಿಕೆಯ ಪಾಲನ್ನು ಶೇಕಡಾ 4.13ಕ್ಕೆ ನಿಗದಿಗೊಳಿಸಿದೆ. ಅತ್ಯಂತ ಹೆಚ್ಚು ತೆರಿಗೆ ಸಂಗ್ರಹಿಸುವ ಕರ್ನಾಟಕಕ್ಕೆ ಕೇಂದ್ರ ದುರುದ್ದೇಶದಿಂದ ಈ ಅನ್ಯಾಯ ಎಸಗಿದರೂ ರಾಜ್ಯದ ಬಿಜೆಪಿ ನಾಯಕರಾಗಲಿ, ಆ ಪಕ್ಷದ ಸಂಸದರಾಗಲಿ ಬಾಯಿ ಬಿಚ್ಚದೆ ಕರ್ನಾಟಕ ರಾಜ್ಯದ ಜನತೆಗೆ ದ್ರೋಹ ಎಸಗುತ್ತಿದ್ದಾರೆ ಎಂದಿದ್ದಾರೆ.

ಜಿಎಸ್‌ಟಿ ಪರಿಷ್ಕರಣೆಯಿಂದ ಜನರಿಗೆ ಲಾಭವಿಲ್ಲ

ಕೇಂದ್ರ ಸರಕಾರದ ಜಿಎಸ್‌ಟಿ ದರ ಪರಿಷ್ಕರಣೆಯಿಂದ ಸಾಮಾನ್ಯ ಜನರಿಗೆ ಯಾವ ಲಾಭವೂ ಆಗಿಲ್ಲ. ಕಾರು, ಬೈಕುಗಳ ಖರೀದಿ ಮಾಡಿದವರಿಗೆ ಸ್ವಲ್ಪ ಲಾಭವಾಗಿರಬಹುದು. ಇದರ ಬಹುತೇಕ ಲಾಭವನ್ನು ಬಹುರಾಷ್ಟ್ರೀಯ ಕಂಪೆನಿಗಳು, ಕಾರ್ಪೊರೇಟ್ ಕುಳಗಳು ಹೊತ್ತುಕೊಂಡು ಹೋಗುತ್ತಿವೆ. ಇಷ್ಟರ ನಡುವೆಯೂ ಕಳೆದ ವರ್ಷದ ಆಯವ್ಯಯಕ್ಕಿಂತ ಸುಮಾರು 22,573 ಕೋಟಿ ರು. ಹೆಚ್ಚಿನ ರೆವಿನ್ಯೂ ಸಂಗ್ರಹವಾಗಬಹುದೆಂದು ಅಂದಾಜಿಸಿದ್ದೇವೆ. ನಾನು ಎಂದೂ ಸಾಲ ಮಾಡಬಾರದು ಎಂದು ಹೇಳಿಲ್ಲ, ಹೇಳುವುದೂ ಇಲ್ಲ. ಎಲ್ಲ ಅಭಿವೃದ್ಧಿ ಹೊಂದಿದ ಆರ್ಥಿಕತೆಗಳಲ್ಲೂ ಸಾಲ ದೊಡ್ಡ ಪ್ರಮಾಣದಲ್ಲೇ ಇದೆ. ಆದರೆ ಮಾಡುವ ಸಾಲದ ಹಣವನ್ನು ಮೂಲಸೌಕರ್ಯ ಮತ್ತು ಆರ್ಥಿಕ ಚಟುವಟಿಕೆಗಳಿಗಾಗಿ ಹೂಡಿಕೆ ಮಾಡಿದಾಗ ಅದರಿಂದ ಬರುವ ಪ್ರತ್ಯಕ್ಷ ಮತ್ತು ಪರೋಕ್ಷ ಗಳಿಕೆ ಆರ್ಥಿಕತೆಯನ್ನು ಇನ್ನಷ್ಟು ಸದೃಡಗೊಳಿಸುತ್ತದೆ ಎಂದಿದ್ದಾರೆ. ವಿಜಯೇಂದ್ರ ಅವರೇ ರಾಜ್ಯದಲ್ಲಿ ಬಿಜೆಪಿ ಸರಕಾರವಿದ್ದಾಗ ಮಾಡಿದ್ದ ಸಾಲವನ್ನೊಮ್ಮೆ ಹಿಂದಿರುಗಿ ಹೋಗಿ ನೋಡಿ. ಕೊರೋನ ಸಮಯದಲ್ಲಿ ವಿರೋಧ ಪಕ್ಷದಲ್ಲಿದ್ದ ನಾವು ಪ್ರತಿ ಕುಟುಂಬಕ್ಕೆ 10,000 ರು. ಕೊಡಿ ಜನರ ಕೈಯಲ್ಲಿ ಹಣವಿಲ್ಲದೆ ಸಂಕಷ್ಟದಲ್ಲಿದ್ದಾರೆ. ಅವರ ಕಷ್ಟ ಸ್ವಲ್ಪವಾದರೂ ಕಡಿಮೆಯಾಗಲಿ ಎಂದು ಹೇಳಿದರೆ ಆಗ ಅಧಿಕಾರದಲ್ಲಿದ್ದ ಬಿಜೆಪಿಯವರು ಕೇಳಲಿಲ್ಲ. ಆದರೂ ಸಾಲ ಮಾಡಿ ಮಾಡಿದ್ದೇನು? ಒಂದು ರಸ್ತೆ ಸರಿ ಮಾಡಲಿಲ್ಲ. ತಮ್ಮ 4 ವರ್ಷಗಳ 2019-23 ರ ಅವಧಿಯಲ್ಲಿ ಹಿಂದುಳಿದ ವರ್ಗದವರಿಗೆ ಕೇವಲ 5 ಹಾಸ್ಟೆಲ್‌ಗಳನ್ನು ಕೊಟ್ಟಿದ್ದೀರಿ. 2,832 ಹೊಸ ಬಸ್ಸುಗಳನ್ನು ಕೊಂಡುಕೊಳ್ಳಲಾಯಿತು. ನಾಲ್ಕು ವರ್ಷಗಳಲ್ಲಿ 5.75 ಲಕ್ಷ ಮನೆಗಳನ್ನು ನಿರ್ಮಿಸಿದರು. ಹೊಸ ಆಸ್ಪತ್ರೆಗಳಿರಲಿಲ್ಲ. ವೈದ್ಯರ ನೇಮಕಾತಿ ಇರಲಿಲ್ಲ. ಹೀಗಿದ್ದರೂ ಬಿಜೆಪಿ 2023ರಲ್ಲಿ 5,53,363 ಕೋಟಿ ರೂಗಳಷ್ಟು ಬಾಕಿ ಸಾಲವನ್ನು ಉಳಿಸಿಹೋಗಿತ್ತು ಎಂದು ಸಿಎಂ ಕಿಡಿಕಾರಿದ್ದಾರೆ.

ಸಿಡಿಲು ಬಡಿದು ಕೋಳಿ ಅಂಗಡಿ ಮಾಲೀಕ ಸಾವು

ಶಿವಮೊಗ್ಗ: ಕೋಳಿ ಅಂಗಡಿಗೆ ಸಿಡಿಲು ಬಡಿದ ಪರಿಣಾಮ ಕೋಳಿಗಳ ಜತೆ ಕೋಳಿ ಅಂಗಡಿ ಮಾಲೀಕನು ಮೃತಪಟ್ಟಿರುವ ಘಟನೆ ಶಿವಮೊಗ್ಗದ ರಾಮನಗರದಲ್ಲಿ ನಡೆದಿದೆ. ಹಾರನಹಳ್ಳಿ ನಿವಾಸಿ ಮುಶೇಖ್ ಮುಜೀಬ್ ಉರ್ ರಹಮಾನ್ (45) ಮೃತ. ಶಿವಮೊಗ್ಗ ತಾಲೂಕು ಹಾರನಹಳ್ಳಿ ಸಮೀಪದ ರಾಮನಗರದಲ್ಲಿ ಸವಳಂಗ ರಸ್ತೆ ಪಕ್ಕದಲ್ಲಿ ರಹಮಾನ್ ಕೋಳಿ ಅಂಗಡಿ ನಡೆಸುತ್ತಿದ್ದರು. ಸೋಮವಾರ ಸಂಜೆ ಮಳೆ ಗಾಳಿ ಸಮೇತ ಬಂದ ಸಿಡಿಲು ಮೊದಲು ಕೋಳಿ ಅಂಗಡಿ ಪಕ್ಕದ ಮರಕ್ಕೆ ಬಡಿದಿದೆ. ಸಿಡಿಲ ರಭಸಕ್ಕೆ ಮರದ ಜತೆಗೆ ಪಕ್ಕದ ಕೋಳಿ ಅಂಗಡಿಗೂ ಬಡಿದಿದೆ. ಇದರಿಂದ ಕೋಳಿ ಹಾಗೂ ಅಂಗಡಿಯಲ್ಲಿದ್ದ ಮಾಲೀಕ ರಹಮಾನ್ ಸಹ ಮೃತಪಟ್ಟಿದ್ದಾರೆ.

ವೃದ್ಧೆ ಸಾವು: ಮಂಗನ ಮೂಕರೋಧನೆ

ರಾಮನಗರ: ವೃದ್ಧೆ ಸಾವಿಗೆ ಕೋತಿಯೊಂದು ಮರುಗಿ, ಮೃತದೇಹದ ಮೇಲೆ ಮಲಗಿ ರೋಧನೆ ವ್ಯಕ್ತಪಡಿಸಿರುವ ಅಪರೂಪದ ಘಟನೆ ಜಿಲ್ಲೆಯ ಚನ್ನಪಟ್ಟಣ ತಾಲೂಕಿನ ಬಿ.ವಿ.ಹಳ್ಳಿ ಗ್ರಾಮದಲ್ಲಿ ನಡೆದಿದೆ. ಗ್ರಾಮದ ನಿವಾಸಿ 80 ವರ್ಷದ ಪಾರ್ವತಮ್ಮ ಎಂಬುವವರ ಸಾವಿಗೆ ಕಪಿರಾಯ ಕಣ್ಣೀರು ಹಾಕಿದ್ದಾನೆ. ನಿತ್ಯ ಮನೆ ಬಳಿ ಬರ್ತಿದ್ದ ಕೋತಿಯನ್ನು ತಿಂಡಿ ಕೊಟ್ಟು ವೃದ್ಧೆ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದರು. ಕೋತಿ ಜತೆ ನಿತ್ಯ ಒಡನಾಟ ಹೊಂದಿದ್ದ ವೃದ್ಧೆ ಮಂಗಳವಾರ ವಯೋಸಹಜ ಕಾಯಿಲೆಯಿಂದ ಸಾವನ್ನಪ್ಪಿದ್ದಾರೆ.

5 ಕೋಟಿ ರು. ವೆಚ್ಚದಲ್ಲಿ ಕಾಮಗಾರಿ | ದೊಡ್ಡಗೌಡರ ಜೀವನ ಚರಿತ್ರೆ ಮ್ಯೂಸಿಯಂನಲ್ಲಿ ಅನಾವರಣ

ಹುಟ್ಟೂರು ಹರದನಹಳ್ಳಿಯಲ್ಲಿ ಎಚ್‌ಡಿಡಿ ಮ್ಯೂಸಿಯಂ

ಹಾಸನ: ರಾಜ್ಯದ ಮುತ್ಸದ್ದಿ ರಾಜಕಾರಣಿ, ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರ ಹೆಸರಿನಲ್ಲಿ ಮ್ಯೂಸಿಯಂ ಹುಟ್ಟೂರಿನಲ್ಲಿ ನಿರ್ಮಾಣವಾಗಲಿದೆ. ರೈತನ ಮಗನಾಗಿ ಹುಟ್ಟಿ, ರಾಜಕೀಯವಾಗಿ ಹಂತ ಹಂತವಾಗಿ ಮೇಲೇರಿ ದೇಶದ ಪ್ರಧಾನಿ ಪಟ್ಟಕ್ಕೇರಿದ ಗೌಡರ ಹುಟ್ಟೂರು ಹಾಸನ ಜಿಲ್ಲೆಯ ಹೊಳೆನರಸೀಪುರ ತಾಲೂಕಿನ ಹರದನಹಳ್ಳಿಯಲ್ಲಿ ಎಚ್.ಡಿ. ದೇವೇಗೌಡರ ಜೀವನ ಹಾಗೂ ಸಾಧನೆಯನ್ನು ವಿವರವಾಗಿ ತಿಳಿಸುವ ಮ್ಯೂಸಿಯಂ ಬರಲಿದೆ.

ಮ್ಯೂಸಿಯಂ ಗೌಡರ ಅಭಿಮಾನಿಗಳ ಹಲವು ದಿನಗಳ ಕೋರಿಕೆಯಾಗಿತ್ತು. ಗೌಡರ ಸಮಗ್ರ ಸಾಧನೆ ತಿಳಿಸುವ ಕೇಂದ್ರವಾಗಲಿರುವ ಮ್ಯೂಸಿಯಂ ನಿರ್ಮಾಣದ ಹೊಣೆ ಎಚ್.ಎನ್ ಕೃಷ್ಣ ಹೊತ್ತಿದ್ದಾರೆ. 2022ರ ಏಪ್ರಿಲ್‌ನಲ್ಲಿಯೇ ದೇವೇಗೌಡರ ಹುಟ್ಟೂರಿನಲ್ಲಿ ಮಾಜಿ ಪ್ರಧಾನಿಯ ಮ್ಯೂಸಿಯಂ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿದೆ. ಶೃಂಗೇರಿಯ ಶ್ರೀಗಳಾದ ಶ್ರೀ ವಿಧುಶೇಖರ ಭಾರತಿ ಮಹಾಸ್ವಾಮೀಜಿಗಳು ಶಿಲಾನ್ಯಾಸ ನೆರವೇರಿಸಿದ್ದರು.



ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರ ಮ್ಯೂಸಿಯಂಗೆ ಶೃಂಗೇರಿಯ ಶ್ರೀಗಳಾದ ಶ್ರೀ ವಿಧುಶೇಖರ ಭಾರತಿ ಮಹಾಸ್ವಾಮೀಜಿಗಳು ಶಿಲಾನ್ಯಾಸ ನೆರವೇರಿಸಿದ್ದರು.

5 ಕೋಟಿ ಅನುದಾನದಲ್ಲಿ ಕಾಮಗಾರಿ: ಐದು ಕೋಟಿ ರು. ವೆಚ್ಚದಲ್ಲಿ ಈ ಮ್ಯೂಸಿಯಂ ನಿರ್ಮಾಣವಾಗಲಿದೆ. ಇದಕ್ಕಾಗಿ ರಾಜ್ಯ ಲೋಕೋಪಯೋಗಿ ಇಲಾಖೆ ಐದು ಕೋಟಿ ರು. ಅನುದಾನ ಮಂಜೂರು ಮಾಡಿದೆ. ಸುಂದರ ವಿನ್ಯಾಸದ ಬೃಹತ್ ಕಟ್ಟಡ, ಉದ್ಯಾನ ಹೀಗೆ ಆಕರ್ಷಕವಾಗಿ ಈ ಮ್ಯೂಸಿಯಂ ಹಳ್ಳಿಯಲ್ಲಿ ನಿರ್ಮಾಣವಾಗಲು ಸರಕಾರ ನೆರವು ನೀಡುತ್ತಿದೆ. ದೇವೇಗೌಡರ ಪುತ್ರ, ಮಾಜಿ ಸಚಿವ ಎಚ್.ಡಿ. ರೇವಣ್ಣ ಮ್ಯೂಸಿಯಂಗೆ ಅಗತ್ಯವಾದ ಭೂಮಿಯನ್ನು ಕೊಡುಗೆಯಾಗಿ ನೀಡಿದ್ದಾರೆ.

ಗೌಡರ ಹಳೆ ಭಾವಚಿತ್ರ ಕೊಡಲು ಮನವಿ: ದೇವೇಗೌಡರ ಹಳೆಯ ಚಿತ್ರಗಳನ್ನು ಹೊಂದಿರುವವರು ಅದನ್ನು ತಮಗೆ ತಲುಪಿಸಿದರೆ ಅದನ್ನು ಜತನದಿಂದ ಸ್ಕ್ಯಾನ್ ಒರಿಜಿನಲ್ ಅನ್ನು ಅವರಿಗೇ ಮರಳಿಸಲಾಗುವುದು ಎಂದು ಎಚ್.ಎನ್.ಕೃಷ್ಣ ತಿಳಿಸಿದ್ದಾರೆ. ಮಾಹಿತಿಗೆ ಇಮೇಲ್: drkrishnahn@gmail.com. ಫೋನ್ ನಂ: 9844088832

ಮ್ಯೂಸಿಯಂನಲ್ಲಿ ಏನಿರುತ್ತದೆ?

ದೇವೇಗೌಡರ ಮ್ಯೂಸಿಯಂನಲ್ಲಿ ದೇವೇಗೌಡರ ಜೀವನ ಚರಿತ್ರೆಯನ್ನು ಬಿಂಬಿಸುವ ಸಂಪೂರ್ಣ ಮಾಹಿತಿ, ಪ್ರಧಾನಿ ಆಗಿದ್ದಾಗ ಗೌಡರಿಗೆ ದೇಶ ವಿದೇಶಗಳಿಂದ ಬಂದ ಉಡುಗೊರೆಗಳ ಸಂಗ್ರಹ. ದೇವೇಗೌಡರು ತಮ್ಮ ರಾಜಕೀಯ ಜೀವನಕ್ಕೆ ಎಂಟ್ರಿಯಾದ ಮೊದಲ ಚುನಾವಣೆಯಿಂದ ಈವರೆಗಿನ ಘಟನಾವಳಿಗಳನ್ನು ವಿವರಿಸುವ ಕಲರ್ ಫುಲ್ ಭಾವ ಚಿತ್ರಗಳ ಪ್ರದರ್ಶನ, ಗೌಡರ ಬದುಕಿನ ಮಹತ್ತರ ಘಟನೆಗಳನ್ನ ಬಿಂಬಿಸೋ ಮಾಹಿತಿ, ದೇವೇಗೌಡರ ಒಡನಾಡಿಗಳ ಭಾವಚಿತ್ರಗಳು, ದೇವಗೌಡರ ಬಗ್ಗೆ ಪ್ರಕಟವಾಗಿರೋ ಪುಸ್ತಕಗಳ ಪ್ರದರ್ಶನ, ದೇವೇಗೌಡರ ಬದುಕಿನ ಶೈಲಿ ಬಿಂಬಿಸೋ ಚಿತ್ರಾವಳಿ ಹೀಗೆ ಹಳ್ಳಿಯ ಸಾಮಾನ್ಯ ರೈತನೊಬ್ಬನ ಮಗನಾಗಿ ಹುಟ್ಟಿ ಪ್ರಧಾನಿ ಹುದ್ದೆಗೇರಿದ ವ್ಯಕ್ತಿಯೊಬ್ಬರ ಬದುಕು ಹೇಗಿತ್ತು ಅನ್ನೋದನ್ನು ಎಳೆ ಎಳೆಯಾಗಿ ಬಿಡಿಸಿಡುವ ಸಂಪೂರ್ಣ ಚಿತ್ರಣ ಈ ಮ್ಯೂಸಿಯಂನಲ್ಲಿ ಸಿಗಲಿದೆ.

ಹಿಂದುಗಳು ನನ್ನ ಬೆನ್ನಿಗೆ: ಯತ್ನಾಳ್

ಲಿಂಗಸುಗೂರು: ರಾಜ್ಯದ ಜನತೆ ಹಾಗೂ ಹಿಂದುಗಳು ನನ್ನ ಪರವಾಗಿ ಸದಾ ಗ್ರಿನ್ ಸಿಗ್ನಲ್ ತೋರಿಸುತ್ತಾರೆ ಇದರಿಂದ ಯಡಿಯೂರಪ್ಪ ಗ್ರೀನ್ ಸಿಗ್ನಲ್ ಬೇಕಿಲ್ಲ ಎಂದು ವಿಜಯಪುರ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಾಗಲಕೋಟೆಯಲ್ಲಿ ವಿರಣ್ಣ ಚರಂತಿಮಠ ಅವರ ಪರವಾಗಿ ಪ್ರಚಾರಕ್ಕೆ ಹೋಗುವೆ ಹೊರತು ವಿಜಯೇಂದ್ರರ ಪರವಾಗಿ ಅಲ್ಲ. ಹಿಂದುಗಳ ಕರೆದಲ್ಲಿ ನಾನು ಪ್ರಚಾರಕ್ಕೆ ತೆರಳುತ್ತೇನೆ ಎಂದರು.

ಡಿಜಿಟಲ್ ಜನಗಣತಿ ಇಂದಿನಿಂದ ಶುರು

← ಮೊದಲಪುಟದಿಂದ

ಈ ಬಾರಿಯ ಜನಗಣತಿ ಎರಡು ಹಂತದಲ್ಲಿ ನಡೆಯಲಿದೆ. ಮೊದಲ ಹಂತದಲ್ಲಿ ಮನೆಗಳ ಪಟ್ಟಿ ಮತ್ತು ಮನೆ ಗಣತಿ ಆಗಲಿದೆ.

ಮನೆಗಳ ಸ್ಥಿತಿ, ಸೌಲಭ್ಯ, ಆಸ್ತಿಪಾಸ್ತಿ ಇತ್ಯಾದಿ ಮಾಹಿತಿ ಕಲೆ ಹಾಕಲಾಗುತ್ತದೆ. ಮೊದಲ ಹಂತದ ಗಣತಿ ಸೆಪ್ಟೆಂಬರ್ 30ರವರೆಗೂ ನಡೆಯಲಿದೆ. ಎರಡನೇ ಹಂತದಲ್ಲಿ ಜನಗಣತಿ ನಡೆಯಲಿದೆ. ಇಲ್ಲಿ ಜನರ ಸಾಮಾಜಿಕ ಆರ್ಥಿಕ ಹಾಗೂ ಶೈಕ್ಷಣಿಕ ದತ್ತಾಂಶವನ್ನು ಕಲೆಹಾಕಲಾಗುತ್ತದೆ. ಜನರ ಜಾತಿ, ಉಪಜಾತಿ ಇತ್ಯಾದಿ ಮಾಹಿತಿಯನ್ನೂ ಪಡೆಯಲಾಗುತ್ತದೆ. ಈ ಡಿಜಿಟಲ್ ಗಣತಿ ಕಾರ್ಯದಲ್ಲಿ 30 ಲಕ್ಷದಷ್ಟು ಗಣತಿದಾರರು, ಮೇಲುಸ್ತುವಾರಿಗಳು ಮತ್ತು ಅಧಿಕಾರಿಗಳು ಪಾಲ್ಗೊಳ್ಳಲಿದ್ದಾರೆ. ಗಣತಿಗೆಂದೇ ಮೊಬೈಲ್ ಆ್ಯಪ್‌ಗಳನ್ನು ಅಭಿವೃದ್ಧಿಪಡಿಸಲಾಗಿದೆ. ಗಣತಿದಾರರು ಈ ಆ್ಯಪ್‌ಗಳಲ್ಲಿ ದತ್ತಾಂಶವನ್ನು ತುಂಬಲಿದ್ದಾರೆ. ಹಾಗೆಯೇ, ಜನರು ತಾವಾಗಿಯೇ ದತ್ತಾಂಶ ನೀಡಲು ಆನ್‌ಲೈನ್ ಪೋರ್ಟಲ್ ತೆರೆಯಲಾಗಿದೆ. ಇದು 16 ಭಾಷೆಗಳಲ್ಲಿದ್ದು, ಜನರು ತಮ್ಮ ಹಾಗೂ ತಮ್ಮ ಕುಟುಂಬದವರ ವಿವರವನ್ನು ಆನ್‌ಲೈನ್‌ನಲ್ಲೇ ತುಂಬಬಹುದು. ಭರ್ತಿ ಮಾಡಿ ಸಲ್ಲಿಸಿದ ಬಳಿಕ ಸಿಗುವ ಗಣತಿ ಐಡಿಯನ್ನು ಸಮೀಕ್ಷೆಗೆ ಬರುವ ಗಣತಿದಾರರ ಜತೆ ಹಂಚಿಕೊಳ್ಳಬೇಕಾಗುತ್ತದೆ. ಗಣತಿದಾರರು ಈ ಐಡಿಯನ್ನು ಪರಿಶೀಲಿಸಿ, ಮಾಹಿತಿ ದೃಢಪಡಿಸುತ್ತಾರೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.
ಸಂಖ್ಯೆ:ಬೆಂಅಪ್ರಾ/ಕಾ.ಅ-ದ/ಕಾ_ಟೆಂ.06/2025-26 ದಿನಾಂಕ: 31.03.2026
ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ (ದ್ವಿಲಕೋಟೆ ಪದ್ಧತಿಯಲ್ಲಿ ಐಟಂ ದರದ ಟೆಂಡರ್)
(ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: https://kppp.karntaka.gov.in ಮೂಲಕ ಮಾತ್ರ)
ಕಾರ್ಯನಿರ್ವಾಹಕ ಅಭಿಯಂತರರು, ದಕ್ಷಿಣ ವಿಭಾಗ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಇವರು ಅರ್ಹ ಟೆಂಡರ್‌ದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್ ಆಹ್ವಾನಿಸಿದ್ದಾರೆ.

ಕ್ರ. ಸಂ	ಕಾಮಗಾರಿ ಹೆಸರು	ಟೆಂಡರ್‌ಗಿಟ್ಟ ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ	ಇಎಂಡಿ ರೂ. ಗಳಲ್ಲಿ
1	ಜೆ.ಪಿ.ನಗರ 8ನೇ ಹಂತ, 1ನೇ ಬ್ಲಾಕ್, ಕೊತ್ತನೂರು ಗ್ರಾಮದ ಸರ್ವೆ ನಂ. 3/1, 3/2ಬಿ ಮತ್ತು 4 ರಲ್ಲಿ ರಸ್ತೆ ಮತ್ತು ಚರಂಡಿಗಳ ಸಮಗ್ರ ಅಭಿವೃದ್ಧಿ ಮತ್ತು ಮೂಲಭೂತ ಸೌಕರ್ಯಗಳನ್ನು ಒದಗಿಸುವುದು. (ಇಂಡೆಂಟ್: ಬಿಡಿಎ/2025-26/ಆರ್‌ಡಿ/ವರ್ಕ್-ಇಂಡೆಂಟ್232).	116.61	1,75,000 (ರೂ. 1,00,000/- ಇ-ಪಾವತಿ ಮೂಲಕ ಮತ್ತು ರೂ. 75,000/- ಬ್ಯಾಂಕ್ ಗ್ಯಾರೆಂಟಿ ಮೂಲಕ)
2	ಜೆ.ಪಿ.ನಗರ 9ನೇ ಫೇಸ್, 3ನೇ ಮತ್ತು 4ನೇ ಬ್ಲಾಕ್ ಮತ್ತು ಮುಂದುವರೆದ ಅಂಜನಾಪುರ 9ನೇ ಬ್ಲಾಕ್, ಬೆಂಗಳೂರು, ಇಲ್ಲಿ ರಸ್ತೆ ಮತ್ತು ಚರಂಡಿಗಳ ಸುಧಾರಣೆ (ಇಂಡೆಂಟ್: ಬಿಡಿಎ/2025-26/ಆರ್‌ಡಿ/ವರ್ಕ್-ಇಂಡೆಂಟ್233).	131.83	1,98,000 (ರೂ. 1,00,000/- ಇ-ಪಾವತಿ ಮೂಲಕ ಮತ್ತು ರೂ. 98,000/- ಬ್ಯಾಂಕ್ ಗ್ಯಾರೆಂಟಿ ಮೂಲಕ)

ಟೆಂಡರ್ ಸಂಸ್ಕರಣಾ ಶುಲ್ಕ ರೂ.ಗಳಲ್ಲಿ: ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿರುವಂತೆ. ಪೂರ್ಣಗೊಳಿಸುವ ಅವಧಿ: (ಕ್ರ.ಸಂ.1 ರಿಂದ 2) 09 ತಿಂಗಳಿಗೆ (ಮಳೆಗಾಲ ಸೇರಿದಂತೆ)

ಕಾರ್ಯಕ್ರಮಗಳ ಪಟ್ಟಿ	ದಿನಾಂಕ	ಸಮಯ
01. ಟೆಂಡರ್ ಆಕ್ಷೇಪಣೆಗಳು / ಸ್ಪಷ್ಟೀಕರಣಗಳಿಗೆ ಕೊನೆಯ ದಿನಾಂಕ ಮತ್ತು ಸಮಯ	10.04.2026	17.00 ಗಂಟೆ
02. ಪ್ರೀ ಬಿಡ್ ಸಭೆ	06.04.2026	10.00 ಗಂಟೆ
03. ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ	13.04.2026	17.00 ಗಂಟೆ
04. ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	15.04.2026	10.00 ಗಂಟೆ
05. ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	18.04.2026	11.00 ಗಂಟೆ

ಹೆಚ್ಚಿನ ವಿವರಗಳು, ನೋಂದಣಿ ಮತ್ತು ಇ-ಪಾವತಿಗೆ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: https://kppp.karntaka.gov.in ಭೇಟಿ ನೀಡಬಹುದು ಅಥವಾ ದೂ:25501216 / 25501217 ಸಂಪರ್ಕಿಸುವುದು. ಸಹಾಯವಾಣಿ/ವಾಟ್ಸ್‌ಪ್: 9483166622 (24X7). @BDAOfficialGok
ಸಹಿ/-ಕಾರ್ಯನಿರ್ವಾಹಕ ಅಭಿಯಂತರರು, ದಕ್ಷಿಣ ವಿಭಾಗ, ಬಿಡಿಎ, ಬೆಂಗಳೂರು

ಇಂದಿನಿಂದ ಹೊಸ ದುಬಾರಿ ದುನಿಯಾ

← ಮೊದಲಪುಟದಿಂದ

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ಎಸ್ಕಾಂಗಳ ಒತ್ತಾಯಕ್ಕೆ ಮಣಿದು 2025-26ನೇ ಸಾಲಿಗೆ ಪೂರ್ವಾನ್ವಯವಾಗುವಂತೆ ವಿದ್ಯುತ್ ದರ ಪರಿಷ್ಕರಿಸಿ ಆದೇಶ ಹೊರಡಿಸಿದೆ. ಇದರಿಂದ ಹೊಸ ಹಣಕಾಸು ವರ್ಷದಲ್ಲಿ ಕೈಗಾರಿಕೆಗಳು ಮತ್ತು ವಾಣಿಜ್ಯ ಗ್ರಾಹಕರಿಗೆ ವಿದ್ಯುತ್ ದರ ಏರಿಕೆಯ ಬಿಸಿ ತಟ್ಟಲಿದೆ. ಸಿಲಿಂಡರ್ ಕೊರತೆ, ನೀರು ಮತ್ತು ವಿದ್ಯುತ್ ದರ ಏರಿಕೆ ಹಿನ್ನೆಲೆಯಲ್ಲಿ ಹೊಟೇಲ್ ಮಾಲೀಕರೂ ದರ ಏರಿಸುವ ಸಾಧ್ಯತೆ ಇದೆ. ಯುದ್ಧದ ಹಿನ್ನೆಲೆಯಲ್ಲಿ ದೇಶದಲ್ಲಿ ಕಬ್ಬಿಣ, ಉಕ್ಕು, ಸಿಮೆಂಟ್ ಮತ್ತಿತರ ಮೂಲ ಸೌಕರ್ಯ ಉತ್ಪನ್ನಗಳ ಬೆಲೆಯಲ್ಲೂ ಏರಿಕೆ ಕಂಡು ಬಂದಿವೆ. ಪ್ಲಾಸ್ಟಿಕ್ ಉತ್ಪನ್ನಗಳ ಬೆಲೆಯಲ್ಲೂ ಏರಿಕೆಯಾಗಿದೆ. ಇದೇ ವೇಳೆ ಆಟೋಮೊಬೈಲ್ ಉದ್ದಿಮೆಗಳು ಏಪ್ರಿಲ್ ಒಂದರಿಂದ ದ್ವಿಚಕ್ರ ಮತ್ತು ಕಾರುಗಳ ಬೆಲೆ ಏರಿಸುವುದಾಗಿ ಈಗಾಗಲೇ ಪ್ರಕಟಿಸಿವೆ. ಎಲೆಕ್ಟ್ರಾನಿಕ್ ಉತ್ಪನ್ನಗಳ ದರದಲ್ಲೂ ಏರಿಕೆ ನಿಶ್ಚಿತವಾಗಿದೆ. ಬಿಟುಮೆನ್ ಕೊರತೆಯಿಂದ ದೇಶದ ರಸ್ತೆ ಕಾಮಗಾರಿಗಳೂ ವಿಳಂಬವಾಗಲಿದ್ದು ಕಾಮಗಾರಿ ಮೊತ್ತ ಏರುವ ಸಾಧ್ಯತೆ ಇದೆ.

ವಿದ್ಯುತ್ ದರ ಪರಿಷ್ಕರಣೆ

ಯೂನಿಟ್‌ಗೆ ರು.ಗಳಲ್ಲಿ

ವರ್ಗ	ಪರಿಷ್ಕೃತ ದರ	ನಿಶ್ಚಿತ/ಬೇಡಿಕೆ ದರ (ಪರಿಷ್ಕೃತ)
ಎಲ್‌ಟಿ 3ಎ ವಾಣಿಜ್ಯ	7.00 7.10	235 ರು. ಕಿ.ವ್ಯಾ
ಎಲ್‌ಟಿ 5 ಕೈಗಾರಿಕೆ	4.50 5.20	165 ರು. ಹೆಚ್‌ಪಿಗೆ
ಹೆಚ್‌ಟಿ 2ಎ ಕೈಗಾರಿಕೆ	6.60 6.70	365 ರು. ಕಿ.ವ್ಯಾಟ್‌ಗೆ
ಹೆಚ್‌ಟಿ 2ಬಿ ವಾಣಿಜ್ಯ	5.95 6.90	390 ರು. ಕಿಲೋ ವ್ಯಾಟ್‌ಗೆ

ಉಪಸಮರಕ್ಕೆ ಬಿಜೆಪಿ ಪ್ರಣಾಳಿಕೆ ಬಿಡುಗಡೆ

← ಮೊದಲಪುಟದಿಂದ

ಬಿಜೆಪಿ ಪ್ರಣಾಳಿಕೆಯಲ್ಲೇನಿದೆ?: ದಾವಣಗೆರೆ ದಕ್ಷಿಣ ಕ್ಷೇತ್ರವನ್ನು ರಾಜ್ಯದ ಮಾದರಿ ಕ್ಷೇತ್ರವನ್ನಾಗಿ ರೂಪಿಸುವುದು, ಸುಧಾರಿತ ಮೂಲಸೌಕರ್ಯ, ಎಲ್ಲ ಪ್ರಮುಖ ರಸ್ತೆಗಳ ಪುನರ್ ನಿರ್ಮಾಣ, ಒಳ ರಸ್ತೆಗಳ ಡಾಂಬರೀಕರಣ, ಕಾಂಕ್ರೀಟೀಕರಣ, ಟ್ರಾಫಿಕ್ ಸಮಸ್ಯೆ ಪರಿಹಾರಕ್ಕೆ ಸ್ಮಾರ್ಟ್ ಸಿಗ್ನಲ್ ವ್ಯವಸ್ಥೆ, ಕ್ಷೇತ್ರದಲ್ಲಿರುವ 39 ಕೊಳಚೆ ಪ್ರದೇಶಗಳ ಅಭಿವೃದ್ಧಿ, ಸರಕಾರಿ ಆಸ್ಪತ್ರೆಗಳನ್ನು ಆಧುನಿಕತೆಯೊಂದಿಗೆ ಮೇಲ್ದರ್ಜೆಗೇರಿಸುವುದು, ಉಚಿತ ಸಂಚಾರಿ ಕ್ಲಿನಿಕ್, ಹಿರಿಯ ನಾಗರಿಕರಿಗೆ ಮನೆ ಬಾಗಿಲಿಗೆ ಆರೋಗ್ಯ ಸೇವೆ, ಸರ್ಕಾರಿ ಶಾಲಾ - ಕಾಲೇಜುಗಳ ಅಭಿವೃದ್ಧಿ ಹಾಗೂ ಸ್ಮಾರ್ಟ್ ಕ್ಲಾಸ್‌ಗೆ ರೂಪಾಂತರ ಸೇರಿದಂತೆ ಹಲವು ಆಶ್ವಾಸನೆಗಳು ಈ ಪ್ರಣಾಳಿಕೆಯಲ್ಲಿವೆ.

ಸಮಾಚಾರ ಸಣ್ಣದಲ್ಲ

ಕಸದ ವಿಚಾರಕ್ಕೆ ಗಲಾಟೆ: ಮುಖ್ಯಶಿಕ್ಷಕನಿಗೆ ಹಲ್ಲೆ

ಕಲಬುರಗಿ: ಕಸ ಎಸೆಯದಂತೆ ತಡೆದಿದ್ದಕ್ಕೆ ಮುಖ್ಯ ಶಿಕ್ಷಕರೊಬ್ಬರ ಮೇಲೆ ದುಷ್ಕರ್ಮಿಗಳ ಗುಂಪು ಮಾರಣಾಂತಿಕ ಹಲ್ಲೆ ನಡೆಸಿ, ಹಣ ದೋಚಿರುವ ಘಟನೆ ಅಫಜಲಪುರ ತಾಲೂಕಿನ ಚೌಡಾಪೂರ ಗ್ರಾಮದಲ್ಲಿ ನಡೆದಿದೆ. ಚೌಡಾಪೂರದ ಮುಖ್ಯ ಶಿಕ್ಷಕ ಲಕ್ಷ್ಮಣ ಜೋಗುರ್ ಹಲ್ಲೆಗೊಳಗಾದವರು. ಆರೋಪಿಗಳಾದ ಉಮೇಶ್ ಭೋವಿ, ವಿಕಾಸ್ ಹಾಗೂ ಅವರ ಗ್ಯಾಂಗ್ ಬರ್ತ್‌ಡೇ ಪಾರ್ಟಿ ಮುಗಿಸಿ, ಶಿಕ್ಷಕರ ಮನೆಯ ಬಳಿ ಕಸ ಎಸೆಯಲು ಯತ್ನಿಸಿದ್ದಾರೆ. ಇದನ್ನು ಗಮನಿಸಿದ ಶಿಕ್ಷಕರ ಮಗ ಇಲ್ಲಿ ಕಸ ಎಸೆಯಬೇಡಿ ಎಂದು ಆಕ್ಷೇಪಿಸಿದ್ದಕ್ಕೆ ಸಂಚು ರೂಪಿಸಿದ ದುಷ್ಕರ್ಮಿಗಳು, ಮಾರಕಾಸ್ತ್ರಗಳಿಂದ ಶಿಕ್ಷಕ ಹಾಗೂ ಅವರ ಮಗನ ಮೇಲೆ ಮನಬಂದಂತೆ ಹಲ್ಲೆ ನಡೆಸಿದ್ದಾರೆ. ಹಲ್ಲೆಯ ನಂತರ ಆರೋಪಿಗಳು ಜೀವ ಬೆದರಿಕೆ ಹಾಕಿ 20 ಸಾವಿರ ರು. ನಗದು ದೋಚಿ ಸ್ಥಳದಿಂದ ಪರಾರಿಯಾಗಿದ್ದಾರೆ. ಗಾಯಾಳುಗಳನ್ನು ತಕ್ಷಣ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಘಟನೆಗೆ ಸಂಬಂಧಿಸಿದಂತೆ ಗಾಣಗಾಪೂರ ಪೊಲೀಸ್ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರಿದಿದೆ.

ತಂದೆ ಸಾವಿನಲ್ಲೂ ವಿದ್ಯಾರ್ಥಿನಿ ಪರೀಕ್ಷೆ

ಯಾದಗಿರಿ: ತಂದೆಯ ಅಕಾಲಿಕ ಸಾವಿನ ನೋವಿನಲ್ಲೂ ಅನುಸುಜಾ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆದಿದ್ದು, ವಿದ್ಯಾರ್ಥಿನಿಯ ಪರೀಕ್ಷೆ ಬದ್ಧತೆಗೆ ಎಲ್ಲೆಡೆ ಮೆಚ್ಚುಗೆ ವ್ಯಕ್ತವಾಗುತ್ತಿದೆ. ವಿದ್ಯಾರ್ಥಿನಿ ಅನುಸುಜಾ ತಂದೆ ಸಾವಿನ ದುಖಃದಲ್ಲೂ ಧೃತಿಗೇಡದೆ ಯಾದಗಿರಿ ಜಿಲ್ಲೆ ಗುರುಮಠಕಲ್ ಪಟ್ಟಣದ ಜಿ.ಶ್ರೀನಿವಾಸ್ ರೆಡ್ಡಿ ಸ್ಮಾರಕ ಕನ್ನಡ ಮತ್ತು ಆಂಗ್ಲ ಮಾಧ್ಯಮ ಶಾಲೆ (ಫ್ರಂಟ್‌ಲೈನ್ ಶಾಲೆ) ಪರೀಕ್ಷಾ ಕೇಂದ್ರದಲ್ಲಿ ಹಿಂದಿ ಪರೀಕ್ಷೆ ಬರೆದಿದ್ದಾರೆ. ಮಧ್ಯಾಹ್ನದ ನಂತರ ಅಂತ್ಯಸಂಸ್ಕಾರದಲ್ಲಿ ಪಾಲ್ಗೊಂಡರು. ಗುರುಮಠಕಲ್ ಪಟ್ಟಣದ ಕಟಲಗೇರಾ ಬಡಾವಣೆಯ ಕೂಲಿ ಕಾರ್ಮಿಕ ಅಂಜಪ್ಪ ಅನಾರೋಗ್ಯದಿಂದ ಸೋಮವಾರ ಮೃತಪಟ್ಟಿದ್ದರು. 4 ವಿಷಯಗಳ ಪರೀಕ್ಷೆಯನ್ನು ಯಶಸ್ವಿಯಾಗಿ ಬರೆದಿರುವ ಅನುಸುಜಾ ಇನ್ನೊಂದು ವಿಷಯದ ಪರೀಕ್ಷೆಯನ್ನು ಬರೆಯುವ ಸಿದ್ಧತೆಯಲ್ಲಿದ್ದಾರೆ. ವಿದ್ಯಾರ್ಥಿನಿ ಮನೆಗೆ ಭೇಟಿ ನೀಡಿದ ಶಾಲಾ ಶಿಕ್ಷಕರು, ಎಸ್‌ಡಿಎಂಸಿ ಸದಸ್ಯರು, ಸ್ಥಳೀಯ ಮುಖಂಡರು ಸಾಂತ್ವನ ಹೇಳಿದ್ದಾರೆ. ಆತ್ಮಸ್ಥೈರ್ಯದಿಂದಲೇ ಇನ್ನೊಂದು ವಿಷಯ ಬರೆಯುವಂತೆ ಪ್ರೇರೇಪಣೆ ನೀಡಿದ್ದಾರೆ.

ಬಸ್‌ಗೆ ಬೈಕ್ ಡಿಕ್ಕಿ ಹೊಡೆಸಿ ಆತ್ಮಹತ್ಯೆ



ವಿಜಯಪುರ: ಲವ್ ಬ್ರೇಕಪ್ ಆಗಿದ್ದಕ್ಕೆ ಬಸ್ಸಿಗೆ ಡಿಕ್ಕಿ ಹೊಡೆದು ಬೈಕ್ ಸವಾರ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ವಿಜಯಪುರ ಜಿಲ್ಲೆಯ ಸಿಂದಗಿ ತಾಲೂಕಿನ ಕನ್ನೊಳ್ಳಿ ಟೋಲ್‌ಗೇಟ್ ಬಳಿ ಘಟನೆ ನಡೆದಿದೆ. ಸಿಂದಗಿ ಪಟ್ಟಣದ ಅಲ್ಲಾಪುರ ಲೇಔಟ್‌ನ ಯವಕ ಅಭಿಷೇಕ ಸೈಬಗೌಡ ನಾಗರಳ್ಳಿ (19) ಮೃತ ದುರ್ದೈವಿ. ಕನ್ನೊಳ್ಳಿ ಕ್ರಾಸ್ ಬಳಿ ಹೋಗುತ್ತಿದ್ದ ಸರಕಾರಿ ಬಸ್‌ಗೆ ಮೃತ ಅಭಿಷೇಕ್ ತನ್ನ ರಾಯಲ್ ಎನ್‌ಫೀಲ್ಡ್ ಬೈಕ್‌ನಲ್ಲಿ ಬಂದು ಡಿಕ್ಕಿ ಹೊಡೆದಿದ್ದಾನೆ. ಡಿಕ್ಕಿಯಾದ ರಭಸಕ್ಕೆ ಬೈಕ್‌ಗೆ ಬೆಂಕಿ ಹತ್ತಿದೆ. ಬಳಿಕ ಬಸ್ಸಿಗೂ ಬೆಂಕಿ ಆವರಿಸಿಕೊಂಡಿದ್ದು, ಭಾಗಶಃ ಸುಟ್ಟು ಕರಕಲಾಗಿದೆ. ಪರಿಣಾಮ ಬೈಕ್ ಸವಾರ ಸಜೀವ ದಹನವಾಗಿದ್ದಾನೆ. ಬೆಂಕಿ ಹೊತ್ತಿಕೊಳ್ಳುತ್ತಿದ್ದಂತೆ ಪ್ರಯಾಣಿಕರು ಬಸ್ಸಿನಿಂದ ಕೆಳಗಿಳಿದಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ವಿಶ್ವವಾಣಿ ಕ್ಲಬ್ ಹೌಸ್
01.04.2026
ಸಂಜೆ: 06.55 ರಿಂದ 08.05 ರವರೆಗೆ

ಬುಧವಾರದ ಅತಿಥಿ
ಶ್ರೀಮತಿ ಚಂದ್ರಕಲಾ
ವಿಷಯ
21ನೇ ಶತಮಾನ-ಶಿಕ್ಷಣದ ಸವಾಲುಗಳು
vishwavani.news

ದಿನ ವಿಶೇಷ

01 ಏಪ್ರಿಲ್ 2026 ಬುಧವಾರ

» ಸೂರ್ಯೋದಯ	:	6-20
» ಸೂರ್ಯಾಸ್ತ	:	6-41
» ತಿಥಿ	:	ಚತುರ್ದಶಿ
» ನಕ್ಷತ್ರ	:	ಉತ್ತರ ಫಾಲ್ಗುಣಿ
» ಸಂವತ್ಸರ	:	ಪರಾಭವ
» ಆಯನ	:	ಉತ್ತರಾಯಣ
» ಋತು	:	ವಸಂತ
» ಮಾಸ	:	ಚೈತ್ರ
» ಪಕ್ಷ	:	ಶುಕ್ಲಪಕ್ಷ

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ದೇಶದ ಜನರಿಗೆ ಕೇಂದ್ರದಿಂದ ಸೌದೆಭಾಗ್ಯ | ಸಿಲಿಂಡರ್ ಕೊರತೆಯಿಂದ ರಾಜ್ಯದಲ್ಲಿ ವಿದ್ಯುತ್ ಬೇಡಿಕೆ ಹೆಚ್ಚಳ

ಮೋದಿಯವರ ಅಚ್ಛೇ ದಿನ ಬದಲಿಗೆ ಕಚ್ಚಾ ದಿನ ಬಂದಿದೆಯೇ?: ಡಿಸಿಎಂ ಶಿವಕುಮಾರ್

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕೇಂದ್ರ ಬಿಜೆಪಿ ಸರಕಾರ ಜನರಿಗೆ ಉಜ್ವಲ ಯೋಜನೆ ಬದಲಾಗಿ ಸೌದೆ ಒಲೆ ಯೋಜನೆ ನೀಡಿದೆ. ಪ್ರಧಾನಿ ನರೇಂದ್ರ ಮೋದಿ ಅಚ್ಛೇದಿನ ಏನಾಯ್ತು? ಈಗ ಇರುವುದನ್ನು ಕಚ್ಚಾ ದಿನ ಎನ್ನಬೇಕಾ ಎಂದು ಪ್ರಶ್ನಿಸಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಕೇಂದ್ರ ಸರಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪಂಚರಾಜ್ಯ ಚುನಾವಣೆ ನಡೆಯುತ್ತಿದೆ. ಜನರು ಪರದಾಡುತ್ತಿದ್ದು, ಹೋಟೆಲ್ ಗಳು ಬಂದ್ ಆಗುತ್ತಿವೆ. ಜನತೆಗೆ ವಿದ್ಯುತ್ ಒಲೆ ಬಳಸುವ ಅನಿವಾರ್ಯತೆ ಎದುರಾಗಿದೆ. ಕಳೆದ ಹದಿನೈದು ದಿನಗಳಿಂದ ರಾಜ್ಯದಲ್ಲಿ ವಿದ್ಯುತ್ ಬಳಕೆ ಪ್ರಮಾಣ ಶೇ.10ರಷ್ಟು ಏರಿಕೆಯಾಗಿದೆ. ಕೇಂದ್ರ ಸರಕಾರ ಜನರಿಗೆ ಸೌದೆ ಭಾಗ್ಯ ನೀಡಿದ್ದು, ಎಲ್ಲಿಂದ ಸೌದೆ ಒದಗಿಸುವುದು? ಎಂದು ಲೇವಡಿ ಮಾಡಿದರು.

ಯುದ್ಧಗಳ ನೆಪ, ಕೇಂದ್ರ ಸರಕಾರದ ತಪ್ಪು ನಿರ್ಧಾರ, ನೀತಿಗಳಿಂದಾಗಿ ಇಂದು ದೇಶದ ಜನ ಬೆಲೆ ಏರಿಕೆಯಿಂದ ನರಳುತ್ತಿದ್ದಾರೆ. ಅಡುಗೆ ಅನಿಲ ಸಿಲಿಂಡರ್ ಬೆಲೆ ಏರಿಕೆ ಮಾತ್ರವಲ್ಲ, ಟೋಲ್ ಶುಲ್ಕ, ರೈಲ್ವೆ ಟಿಕೆಟ್ ದರ ಎಲ್ಲವೂ ಹೆಚ್ಚಾಗಿದೆ. ಕೆಲವು ಅನಿವಾರ್ಯ ಪರಿಸ್ಥಿತಿಯಲ್ಲಿ ರಾಜ್ಯ ಸರಕಾರ ಬೆಲೆ ಏರಿಕೆ ತೀರ್ಮಾನ ಮಾಡಿದಾಗ ಯಾವ ರೀತಿ ಟೀಕೆ ಟಿಪ್ಪಣಿ ಬಂದಿವೆ ಎಂದು ಎಲ್ಲರಿಗೂ ಗೊತ್ತಿದೆ. ಸಾಮಾನ್ಯ ಜನರ ಮೇಲೆ ಕೇಂದ್ರ ಸರಕಾರ ಬೆಲೆ ಏರಿಕೆ ಯುದ್ಧ ಮಾಡುತ್ತಿದೆ. ಜನರನ್ನು ಕೇಂದ್ರ ಸರಕಾರ ಫೂಲ್ ಮಾಡುತ್ತಿದೆ. ನಾವು ಪಾದಯಾತ್ರೆ ಮಾಡಿದಾಗ ಈ ಬೆಲೆ ಏರಿಕೆ ಸಮಸ್ಯೆಯಿಂದ ಜನರು ಕಂಗೆಟ್ಟಿದ್ದು, ಜನರ ಆರ್ಥಿಕ ಪರಿಸ್ಥಿತಿ ಸುಧಾರಿಸಲು ನಮ್ಮ ಸರಕಾರ ಐದು ಗ್ಯಾರಂಟಿ ಯೋಜನೆ ನೀಡಿ ಅವರಿಗೆ ಶಕ್ತಿ ತುಂಬಿದ್ದೇವೆ. ಈಗ ನಮ್ಮ ಗ್ಯಾರಂಟಿ ಯೋಜನೆಗಳು ಜನರಿಗೆ ಆರ್ಥಿಕವಾಗಿ ರಕ್ಷಣೆ ನೀಡಿವೆ. 900 ಔಷಧಗಳ ದರ ಏರಿಕೆ ಮಾಡಲಾಗಿದೆ. 12% ಜಿಎಸ್‌ಟಿ ವಿಧಿಸಲಾಗಿದೆ. ಎನ್‌ಪಿಪಿಎ ಬೆಲೆ ಏರಿಕೆ ಮಾಡಿ ಇವುಗಳಿಗೆ ಶೇ 10.7 ರಷ್ಟು ಇದ್ದ ತೆರಿಗೆಯನ್ನು ಶೇ.12ಕ್ಕೆ ಏರಿಕೆ ಮಾಡಲಾಗಿದೆ. ಅಗತ್ಯ ವಸ್ತುಗಳಾದ ಪ್ಲಾಸ್ಟಿಕ್ ಪೈಪ್ ಸೇರಿದಂತೆ ಇತರೇ ವಸ್ತುಗಳ ಬೆಲೆಯನ್ನು ಟನ್‌ಗೆ 7 ಸಾವಿರ ಹೆಚ್ಚಳ ಮಾಡಲಾಗಿದೆ. ಈಗಾಗಲೇ ಲೋಕೋಪಯೋಗಿ ಇಲಾಖೆಯಿಂದ ಬಿಟುಮಿನ್ ಹಾಕಲು ಟೆಂಡರ್ ಕರೆಯಲಾಗಿದೆ. ಈಗಾಗಲೇ ಕೆಲಸ ಪ್ರಾರಂಭ ಮಾಡಲಾಗಿದೆ. ಬೆಲೆ ಹೆಚ್ಚಳದಿಂದ ಕೆಲಸ ನಿಲ್ಲಿಸುವುದು ಬೇಡ ಸರಕಾರವೇ ನೇರವಾಗಿ ಬಿಟುಮಿನ್ ಅನ್ನು ಸರಬರಾಜು ಮಾಡಲಿದೆ ಎಂದು ಬೆಂಗಳೂರಿನ ಗುತ್ತಿಗೆದಾರರು ಹಾಗೂ ಅಧಿಕಾರಿಗಳಿಗೆ ತಿಳಿಸಿದ್ದೇನೆ ಎಂದರು.

ಕೆಪಿಸಿಸಿ ಅಧ್ಯಕ್ಷ, ಡಿಸಿಎಂ ಡಿ.ಕೆ.ಶಿವಕುಮಾರ್, ಎಐಸಿಸಿ ಪ್ರ.ಕಾರ್ಯದರ್ಶಿ ಸುರ್ಜೇವಾಲಾ ಮಾತನಾಡಿದರು.

> **ಮೋದಿ ಸರಕಾರ ಪ್ರತಿನಿತ್ಯ ಜನರ ಜೋಬಿನಿಂದ ಪಿಕ್ ಪಾಕೆಟ್ ಮಾಡುತ್ತಿದೆ. ಬೆಂಗಳೂರು- ಮೈಸೂರು ಹೆದ್ದಾರಿಯಲ್ಲಿ ಕೇಂದ್ರ ಸರಕಾರ 900 ಕೋಟಿ ವಸೂಲಿ ಮಾಡಿದೆ. ಕೇಂದ್ರ ಸರಕಾರ ಅದೇ ಹಣ ನಮಗೆ ಕೊಟ್ಟರೆ ಗ್ರಾಮೀಣ ಭಾಗದ ರಸ್ತೆಗಳನ್ನು ಅಭಿವೃದ್ಧಿ ಮಾಡಬಹುದು.**
>
> **- ಡಿ.ಕೆ.ಶಿವಕುಮಾರ್,** ಕೆಪಿಸಿಸಿ ಅಧ್ಯಕ್ಷ

ಸಿಮೆಂಟ್, ಕಬ್ಬಿಣ ಬೆಲೆ ಹೆಚ್ಚಳ: ಸಿಮೆಂಟ್ ಬೆಲೆಯೂ ಸಹ 50 ರಿಂದ 100 ರುಪಾಯಿಗೆ ಹೆಚ್ಚಳವಾಗಿದೆ. ಇದರ ಹಿಂದೆ ದೊಡ್ಡ ಸಿಮೆಂಟ್ ಮಾಫಿಯಾವೇ ಇದೆ. ಇದನ್ನು ಯಾರು ನಿಯಂತ್ರಣ ಮಾಡುತ್ತಿದ್ದಾರೆ ಎಂಬುದು ಎಲ್ಲರಿಗೂ ಗೊತ್ತಿದೆ. ಕಬ್ಬಿಣದ ಬೆಲೆ 47 ಸಾವಿರದಿಂದ 59 ಸಾವಿರಕ್ಕೆ ಹೆಚ್ಚಳವಾಗಿದೆ. ಹೀಗಾದರೆ ಜನಸಾಮಾನ್ಯ ಮನೆ ಕಟ್ಟುವುದು ಹೇಗೆ. ಇದರಿಂದ ಸರಕಾರದ ಕಾಮಗಾರಿಗಳಿಗೂ ಹಿನ್ನಡೆಯಾಗುತ್ತಿದೆ. ಅಲ್ಲದೇ ಇದ್ದಕ್ಕಿದ್ದಂತೆ ವಿಮಾನ ಪ್ರಯಾಣದರವನ್ನು ಶೇ.18 ರಷ್ಟು ಏರಿಕೆ ಮಾಡಲಾಗಿದೆ ಎಂದು ಹೇಳಿದರು.

ಅರಣ್ಯಗಳಿಗೆ ಜನರು ಹೋಗಬಾರದು ಎಂದು ಹೇಳಿರುವ ಕಾರಣಕ್ಕೆ ಸೌದೆ ಅಭಾವ ನಿಜಕ್ಕೂ ಹೆಚ್ಚಾಗಲಿದೆ. ಹಳ್ಳಿಗಳಲ್ಲೂ ಸಹ ಗ್ಯಾಸ್ ಬಳಕೆ ಹೆಚ್ಚಾಗಿ ಜನ ಸೌದೆ ಬಳಸುತ್ತಿಲ್ಲ. ಒಮ್ಮೆಲೆ ಬಳಕೆ ಹೆಚ್ಚಾದರೆ ಅಭಾವ ಉಂಟಾಗಲಿದೆ. ಬ್ಲಾಕ್ ಮಾರ್ಕೆಟ್ ಕೆಲಸ ಮಾಡುತ್ತಿದ್ದು 2 ಸಾವಿರದವರೆಗೆ ಗೃಹಬಳಕೆ, 4 ಸಾವಿರದವರೆಗೆ ಕಮರ್ಷಿಯಲ್ ಗ್ಯಾಸ್ ಬೆಲೆ ಹೆಚ್ಚಾಗಿದೆ ಎಂದರು.

ಕೇಂದ್ರ ಪರ್ಯಾಯ ವ್ಯವಸ್ಥೆ ಮಾಡಬೇಕು

ಶೇ.34ರಷ್ಟು ಪೋಸ್ಟಲ್ ಹಾಗೂ ಪಾರ್ಸಲ್ ಚಾರ್ಜ್ ಹೆಚ್ಚಳ ಮಾಡಿದ್ದಾರೆ. ಹೀಗಾದರೆ ಸಾಮಾನ್ಯ ಜನ ಹೇಗೆ ಬದುಕಬೇಕು. ಅಚ್ಛೇದಿನ ಏನಾಯಿತು. ಹೀಗೆ ಮುಂದುವರಿದರೆ ಜನಸಾಮಾನ್ಯರು ಹೇಗೆ ಬದುಕಬೇಕು. ನಾವು ಗ್ಯಾರಂಟಿ ನೀಡಿದ ಕಾರಣಕ್ಕೆ ಜನ ಸ್ವಲ್ಪ ಉಸಿರಾಡುತ್ತಿದ್ದಾರೆ. ಇದೇ ರೀತಿ ಕೇಂದ್ರ ಸರಕಾರ ಪರ್ಯಾಯ ವ್ಯವಸ್ಥೆ ಮಾಡಬೇಕು. ಜನಸಾಮಾನ್ಯರ ಬವಣೆಯ ಜತೆ ಕೇಂದ್ರ ನಿಲ್ಲುತ್ತಿಲ್ಲ. ಬೆಲೆ ಏರಿಕೆ ಯಿಂದ ತತ್ತರಿಸುತ್ತಿರುವ ಜನರಿಗೆ ಕೇಂದ್ರ ಸರಕಾರ ನೆರವಾಗಬೇಕು ಎಂದು ಆಗ್ರಹಿಸುತ್ತೇವೆ ಎಂದರು.

ಅಗತ್ಯ ವಸ್ತುಗಳ ಎಲ್ಲ ದರ ಏರಿಕೆ

ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಮಾತನಾಡಿ, ಕೇಂದ್ರ ಸರಕಾರ 2026ರ ಮಾರ್ಚ್‌ನಿಂದ ಪ್ಲಾಸ್ಟಿಕ್ ಸರಕುಗಳ ಬೆಲೆಯನ್ನು ಶೇ.50ರಷ್ಟು ಏರಿಸಿದೆ. ಇಂಡಿಯನ್ ಆಯಿಲ್ ಕಾರ್ಪೊರೇಷನ್ ಪ್ರತಿ ಟನ್ ಪಾಲಿಥಿಲಿನ್ ದರವನ್ನು 7000 ಹೆಚ್ಚಳ ಮಾಡಿತ್ತು. ಪ್ರತಿ ಟನ್ ಪಾಲಿಪ್ರೊಪಿಲಿನ್ ದರ 4000 ಏರಿಕೆಯಾಗಿದೆ. ಇದು ಪ್ಲಾಸ್ಟಿಕ್ ಬಾಟಲ್, ಪ್ಯಾಕೇಜಿಂಗ್ ವಸ್ತುಗಳು ಸೇರಿದಂತೆ ಎಫ್‌ಎಂಸಿಜಿ ಉತ್ಪನ್ನಗಳ ಮೇಲೆ ನೇರ ಪರಿಣಾಮ ಬೀರುತ್ತದೆ. ಇಷ್ಟೇ ಅಲ್ಲ ಪ್ರತಿ ಟನ್ ಪಿವಿಸಿ ಬೆಲೆ 6000 ಏರಿಕೆಯಾಗಿದೆ. ಇದರಿಂದ ನೀರಾವರಿ ಹಾಗೂ ಕಟ್ಟಡ ನಿರ್ಮಾಣಕ್ಕೆ ಬಳಸಲಾಗುವ ಪಿವಿಸಿ ಪೈಪ್‌ಗಳ ಬೆಲೆ ಏರಿಕೆಯಾಗಲಿವೆ. ಏಪ್ರಿಲ್ 2026ರಲ್ಲಿ ಸಿಮೆಂಟ್ ಬೆಲೆ ಪ್ರತಿ ಚೀಲಕ್ಕೆ 50-100 ಏರಿಕೆಯಾಗುವ ಅಂದಾಜು ಮಾಡಲಾಗಿದೆ. ದೇಶದ ಸಿಮೆಂಟ್ ಉತ್ಪಾದನ ಕ್ಷೇತ್ರ ಅದಾನಿ ನಿಯಂತ್ರಣದಲ್ಲಿದ್ದು ಇದರ ದರ ಏರಿಕೆ ಇನ್ನು ಹೆಚ್ಚಾಗಬಹುದು. ಗೃಹಬಳಕೆ ಅಡುಗೆ ಅನಿಲ ಸಿಲಿಂಡರ್ ಬೆಲೆ ಒಂದೇ ತಿಂಗಳಲ್ಲಿ 2 ಬಾರಿ ದರ ಏರಿಕೆ ಕಂಡಿದೆ. ಆದರೆ ವಾಸ್ತವದಲ್ಲಿ ಸಿಲಿಂಡರ್ ಕೊರತೆಯಿಂದ ಜನರು 2000 ರುಪಾಯಿ ಗಿಂತ ಹೆಚ್ಚು ಪಾವತಿ ಮಾಡಬೇಕಾಗಿದೆ. ಕಬ್ಬಿಣದ ಬೆಲೆ ಕೂಡ ಇದೇ ರೀತಿ ಏರಿಕೆಯಾಗುತ್ತಿದ್ದರೂ ಮೋದಿ ಸರಕಾರ ಮಾತ್ರ ಮೂಕ ಪ್ರೇಕ್ಷಕನಾಗಿದೆ ಎಂದು ಟೀಕಿಸಿದರು.

476 ಅಕ್ಕಿಕಾಳು ಬಳಸಿ ಶ್ರೀರಾಮ ರಕ್ಷಾ ಸ್ತೋತ್ರ

ಸುಬ್ರಹ್ಮಣ್ಯ: ಕುಕ್ಕೆ ಸುಬ್ರಹ್ಮಣ್ಯದ ಉದ್ಯಮಿಯೊಬ್ಬರು ಅಕ್ಕಿ ಕಾಳಿನಲ್ಲಿ ಶ್ರೀರಾಮ ರಕ್ಷಾ ಸ್ತೋತ್ರ ಬರೆಯುವ ಮೂಲಕ ವಿಶಿಷ್ಟವಾಗಿ ಶ್ರೀರಾಮ ನವಮಿ ಆಚರಿಸಿದ್ದಾರೆ. ಹಲವು ದಾಖಲೆಗಳಿಗೆ ಭಾಜನರಾದ ಉದ್ಯಮಿ ಮೈಕ್ರೋ ಪರಮೇಶ್ 10.30 ಗಂಟೆಯೊಳಗೆ 476 ಅಕ್ಕಿ ಕಾಳು ಬಳಸಿಕೊಂಡು ಸ್ತೋತ್ರ ಬರೆದಿದ್ದು, ಬಳಿಕ ಅದಕ್ಕೆ ಫೋಟೋ ಫ್ರೇಮ್ ಹಾಕಿ ಇಟ್ಟುಕೊಂಡಿದ್ದಾರೆ.

ಅಕ್ಕಿಕಾಳಿನಲ್ಲಿ ಬರೆಯುವ ಕಲೆಯನ್ನು ಕರಗತ ಮಾಡಿಕೊಂಡಿರುವ ಇವರ ಸಾಧನೆ ಏಷ್ಯಾ ಬುಕ್ ಆಫ್ ರೆಕಾರ್ಡ್ಸ್, ವಂಡರ್ ರೆಕಾರ್ಡ್ಸ್, ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್, ವರ್ಲ್ಡ್ ರೆಕಾರ್ಡ್ಸ್ ಆಫ್ ಇಂಡಿಯಾದಲ್ಲಿ ಸ್ಥಾನ ಪಡೆದುಕೊಂಡಿದೆ. ಜತೆಗೆ ಮೈಕ್ರೋ ಪರಮೇಶ್ ಅವರಿಗೆ ಹಾವೇರಿ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಕೂಡ ದೊರೆತಿದೆ.

amazonನಲ್ಲಿ ಲಭ್ಯ

QR CODE ಸ್ಕ್ಯಾನ್ ಮಾಡಿ, ಫೋನ್ ಪೇ / ಗೂಗಲ್ ಪೇ ಮಾಡಿದ ಸ್ಕ್ರೀನ್ ಶಾಟ್ ಜೊತೆಗೆ ನಿಮ್ಮ ವಿಳಾಸವನ್ನು ಕೆಳಗಿನ ನಂಬರ್‌ಗೆ ಕಳುಹಿಸಿ. ನಿಮ್ಮ ಮನೆ ಬಾಗಿಲಿಗೆ ಪುಸ್ತಕ ತಲುಪಿಸುತ್ತೇವೆ.
63623 93966

ಮಹಿಳೆಯರ ಬಲವರ್ಧನೆಗೆ ಕಲಬುರಗಿ ಪಾಲಿಕೆ ಆದ್ಯತೆ

55 ವಾರ್ಡ್‌ಗಳಿಗೆ ಪಾಲಿಕೆ ಪಿಂಕ್ ಆಟೋ

ಕಲಬುರಗಿ: ಇಲ್ಲಿನ ಕಲಬುರಗಿ ಮಹಾನಗರ ಪಾಲಿಕೆಯ 2026-27ನೇ ಸಾಲಿನ ಬಜೆಟ್‌ನಲ್ಲಿ ಮಹಿಳಾ ಬಲವರ್ಧನೆಗೆ ವಿಶೇಷ ಆದ್ಯತೆ ನೀಡಲಾಗಿದ್ದು, ನಗರದ ಸಾರಿಗೆ ಮತ್ತು ಉದ್ಯೋಗ ಕ್ಷೇತ್ರದಲ್ಲಿ ಕ್ರಾಂತಿಕಾರಿ ಬದಲಾವಣೆ ತರಲು ಪಾಲಿಕೆ ಮುಂದಾಗಿದೆ.

ನಗರದ ಇಂದಿರಾ ಸ್ಮಾರಕ ಭವನದಲ್ಲಿ ಮಂಗಳವಾರ ನಡೆದ ಮುಂಗಡ ಪತ್ರದ ಸಭೆಯ ಅಧ್ಯಕ್ಷತೆ ವಹಿಸಿದ್ದ ಮಹಾಪೌರರಾದ ವರ್ಷಾ ಜಾನೆ ಅವರು ಮಹಿಳೆಯರಿಗಾಗಿ ಆಕರ್ಷಕ ಯೋಜನೆಗಳನ್ನು ಘೋಷಿಸಿದ್ದಾರೆ. ನಗರದ ಒಟ್ಟು 55 ವಾರ್ಡ್‌ಗಳಲ್ಲಿ ಮಹಿಳೆಯರ ಸುರಕ್ಷಿತ ಸಂಚಾರಕ್ಕಾಗಿ ಮತ್ತು ಮಹಿಳಾ ಉದ್ಯೋಗಿಗಳಿಗೆ ಉತ್ತೇಜನ ನೀಡಲು ಪ್ರತಿ ವಾರ್ಡ್‌ಗೆ ಒಂದರಂತೆ 'ಪಿಂಕ್ ಆಟೋ'ಗಳನ್ನು ಒದಗಿಸಲು ನಿರ್ಧರಿಸಲಾಗಿದೆ. ಈ ಯೋಜನೆಯು ಮಹಿಳಾ ಪ್ರಯಾಣಿಕರಿಗೆ ನೆಮ್ಮದಿಯ ಸಾರಿಗೆ ವ್ಯವಸ್ಥೆ ಕಲ್ಪಿಸುವುದಲ್ಲದೆ, ಸ್ಥಳೀಯ ಮಹಿಳೆಯರಿಗೆ ಸ್ವಯಂ ಉದ್ಯೋಗದ ಹೊಸ ಹಾದಿ ತೆರೆಯಲಿದೆ.

ಕಲಬುರಗಿ ಮಹಾಪೌರರಾದ ವರ್ಷಾ ಜಾನೆ ಅವರು ಬಜೆಟ್ ಸಭೆ ನಡೆಸಿದರು.

ಮಹಿಳೆಯರಿಗೆ ಕಾರು ಚಾಲನಾ ತರಬೇತಿ: ಕೇವಲ ಆಟೋ ಅಷ್ಟೇ ಅಲ್ಲದೆ, ನಗರದ ಆಸಕ್ತ ಮಹಿಳೆಯರಿಗೆ ವೃತ್ತಿಪರ 'ಕಾರ್ ಚಾಲನಾ ತರಬೇತಿ' ನೀಡಲು ಪಾಲಿಕೆ ನಿರ್ಧರಿಸಿದೆ.

ಈ ತರಬೇತಿ ಪಡೆದ ಮಹಿಳೆಯರಿಗೆ ಪಾಲಿಕೆಯಲ್ಲಿ ಪುರುಷರ ಸಮನಾಗಿ ವಾಹನ ಚಾಲನೆ ಕೆಲಸಗಳಲ್ಲಿ ನೇಮಕ ಮಾಡಿಕೊಳ್ಳಲು ಆದ್ಯತೆ ನೀಡಲಾಗುವುದು ಎಂದು ಮೇಯರ್ ಘೋಷಿಸಿದರು.

ಉಮೇಶ್ ಮೇಟಿ ಪರ ಸಿಎಂ ಸಿದ್ದರಾಮಯ್ಯ ಮತಯಾಚನೆ | ಸಮರೋಪಾದಿಯಲ್ಲಿ ಕಾಂಗ್ರೆಸ್-ಬಿಜೆಪಿ ಪ್ರಚಾರ

ಬಾಗಲಕೋಟೆಯಲ್ಲಿ ನಿರೀಕ್ಷೆಗೂ ಮೀರಿ ಜನಬೆಂಬಲ

ಬಾಗಲಕೋಟೆ: ಬಾಗಲಕೋಟೆ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಉಮೇಶ್ ಮೇಟಿಯವರ ಪರವಾಗಿ ನಿರೀಕ್ಷೆಗೂ ಮೀರಿ ಜನಬೆಂಬಲ ವ್ಯಕ್ತವಾಗುತ್ತಿದೆ ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದರು.

ಅವರು ಬಾಗಲಕೋಟೆ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆ ಪ್ರಚಾರ ಕಾರ್ಯದಲ್ಲಿ ಭಾಗವಹಿಸಿದ ಸಂದರ್ಭದಲ್ಲಿ ಮಾಧ್ಯಮದವರ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿ ಮಾತನಾಡಿ, ಉಪಚುನಾವಣೆಯ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಪಕ್ಷಕ್ಕೆ ವಾತಾವರಣ ಪೂರಕವಾಗಿದೆ.

> **ನಾವು ಪ್ರತೀ ವರ್ಷ 52 ಸಾವಿರ ಕೋಟಿ ರೂಪಾಯಿಯನ್ನು ರಾಜ್ಯದ ಜನರ ಜೇಬಿಗೆ ಹಾಕುತ್ತಲೇ ಅಭಿವೃದ್ಧಿ ಕೆಲಸ ವನ್ನೂ ಮಾಡುತ್ತಿದ್ದೇವೆ. ಬಿಜೆಪಿಯವರು ಕಳ್ಳೆತ್ತು ಗಳು. ಗೇಯುವ ಎತ್ತಿಗೆ ತಾನೆ ಮೇವು ಹಾಕೋದು, ಹಾಗೆಯೇ ಕೆಲಸ ಮಾಡಿದ ನಮಗೆ ಕೂಲಿ ಕೊಡಿ.**
>
> **-ಸಿದ್ದರಾಮಯ್ಯ,** ಮುಖ್ಯಮಂತ್ರಿ

ದಿವಂಗತ ಎಚ್.ವೈ.ಮೇಟಿಯವರು ಬಾಗಲಕೋಟೆಯ ಅಭಿವೃದ್ಧಿಗೆ ಶ್ರಮವಹಿಸಿದ್ದರು. ಮೇಟಿಯವರು ಎಲ್ಲ ವರ್ಗ ದವರ ಏಳಿಗೆಗಾಗಿ ಸೇವೆ ಸಲ್ಲಿಸಿದ ಅಜಾತಶತ್ರು ವಾಗಿದ್ದರು. ಸರಳ, ಸಜ್ಜನ ಮೇಟಿಯವರ ಅವರ ನಿಧನದಿಂದ ಖಾಲಿಯಾಗಿರುವ ಶಾಸಕ ಸ್ಥಾನಕ್ಕೆ ಅವರ ಮಗನೇ ಆದ ಉಮೇಶ್ ಮೇಟಿಯವರು ಕಾಂಗ್ರೆಸ್ ಅಭ್ಯರ್ಥಿಯಾಗಿದ್ದು, ಬಾಗಲಕೋಟೆ ಯಲ್ಲಿ ಅವರ ಗೆಲ್ಲುವ ವಿಶ್ವಾಸವಿದೆ ಎಂದರು.



ಕಾಂಗ್ರೆಸ್ ಅಭ್ಯರ್ಥಿ ಉಮೇಶ್ ಮೇಟಿ ಪರ ಬಾಗಲಕೋಟೆ ಕ್ಷೇತ್ರದ ವಿವಿಧ ಗ್ರಾಮಗಳಲ್ಲಿ ಸಿಎಂ ಸಿದ್ದರಾಮಯ್ಯ ಪ್ರಚಾರ ನಡೆಸಿದರು.

ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ನವರೇ ಆಗಿದ್ದ ಪೈಲ್ವಾನ್ ಸಾದಿಕ್ ಅವರ ಮನವೊಲಿಸಿ ಕಣದಿಂದ ಹಿಂದೆ ಸರಿಯುವಂತೆ ಮಾಡಲಾಗಿದೆ. ಸಚಿವ ಜಮೀರ್ ಅಹ್ಮದ್ ಅವರೂ ಚುನಾವಣಾ ಪ್ರಚಾರದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದರು. ಬಿಜೆಪಿಯವರು ಸೋಲಿನ ಭೀತಿಯಲ್ಲಿದ್ದಾರೆ: ಸೋಲಿನ ಭಯದಿಂದ ಸಿಎಂ ಅವರು ಬಾಗಲ ಕೋಟೆಯಲ್ಲಿ ಹೆಚ್ಚಿನ ಪ್ರಚಾರ ಕೈಗೊಂಡಿದ್ದಾರೆ ಎಂಬ ಬಿಜೆಪಿಯವರ ಹೇಳಿಕೆಗೆ ಪ್ರತಿಕ್ರಿಯೆ ನೀಡಿ, ಬಿಜೆಪಿಯವರು ಸೋಲಿನ ಭೀತಿಯಿಂದ ಇಂತಹ ಹೇಳಿಕೆಗಳನ್ನು ನೀಡುತ್ತಿದ್ದಾರೆ. ನಿಧನ ಹೊಂದಿದ ಶಾಸಕರ ಕುಟುಂಬದವರಿಗೆ ಟಿಕೆಟ್ ನೀಡುವುದು ಕಾಂಗ್ರೆಸ್ ಪಕ್ಷದ ಪ್ರತೀತಿಯಾಗಿದ್ದು, ದಾವಣಗೆರೆ ಹಾಗೂ ಬಾಗಲ ಕೋಟೆಯಲ್ಲಿ ನಿಧನ ಹೊಂದಿದ ಶಾಸಕರ ಕುಟುಂಬದವರಿಗೆ ಟಿಕೆಟ್ ನೀಡಲಾಗಿದೆ ಎಂದರು.

ಉಪಸಮರ

ಬಿಜೆಪಿ ಪ್ರಣಾಳಿಕೆ

ದಾವಣಗೆರೆ ದಕ್ಷಿಣ

ದಾವಣಗೆರೆ: ಜನರಿಗೆ ಮೂಲ ಸೌಕರ್ಯ ಒದಗಿಸುವ ಮೂಲಕ ದಾವಣಗೆರೆ ದಕ್ಷಿಣ ವನ್ನು ಮಾದರಿ ಕ್ಷೇತ್ರವನ್ನಾಗಿಸುವ ದೃಷ್ಟಿಯಿಂದ ಬಿಜೆಪಿ ಪ್ರಣಾಳಿಕೆ ಬಿಡುಗಡೆ ಮಾಡಿದೆ ಎಂದು ವಿಧಾನ ಸಭೆ ವಿಪಕ್ಷ ನಾಯಕ ಆರ್. ಅಶೋಕ್ ತಿಳಿಸಿದರು. ಬಿಜೆಪಿ ಕಚೇರಿಯಲ್ಲಿ ಮಂಗಳವಾರ ದಾವಣಗೆರೆ ದಕ್ಷಿಣ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಪ್ರಣಾಳಿಕೆ ಬಿಡುಗಡೆಗೊಳಿಸಿ ಮಾತನಾಡಿದ, ದಾವಣಗೆರೆಯ ಜನರು ಕಾಂಗ್ರೆಸ್‌ನ ಸರ್ವಾಧಿಕಾರ ಧಿಕ್ಕರಿಸಿ ಬಿಜೆಪಿಗೆ ಮತ ನೀಡುವ ಮೂಲಕ ಗೆಲ್ಲಿಸಬೇಕು. ಶ್ರೀನಿವಾಸ್ ದಾಸಕರಿಯಪ್ಪ ಮನೆಯ ಮಗನಾಗಿ ಕ್ಷೇತ್ರದ ಜನರ ಕೆಲಸ ಮಾಡಿಕೊಡುವರು ಎಂದರು.

ಸಿದ್ದರಾಮಯ್ಯ ಸಾಲದ ರಾಮಯ್ಯ: ಸಿಎಂ ಸಿದ್ದರಾಮಯ್ಯ ಎಂದರೆ ಈಗ ಸಾಲದರಾಮ ಯ್ಯ ಆಗಿದ್ದಾರೆ. 2023 ರಲ್ಲಿ 81 ಸಾವಿರ ಕೋಟಿ, 2024 ರಲ್ಲಿ 92.25 ಸಾವಿರ ಕೋಟಿ, 2025 ರಲ್ಲಿ 1.16 ಲಕ್ಷ ಕೋಟಿ, ಈ ವರ್ಷ 1.32 ಲಕ್ಷ ಕೋಟಿ ಸಾಲ ಮಾಡಿದ್ದಾರೆ. 2013 ರಲ್ಲಿ ರಾಜ್ಯದ ಪ್ರತಿಯೊಬ್ಬರ ಮೇಲೆ 19 ಸಾವಿರ ರೂಪಾಯಿ ಸಾಲ ಇತ್ತು. ಈಗ 1,12, 400 ರೂಪಾಯಿ ಇದೆ. ಸಮಾಜವಾದಿ ಸಿದ್ದರಾಮಯ್ಯ ಈಗ ಮಜಾರಾಮಯ್ಯ ಆಗಿದ್ದಾರೆಂದು ವಾಗ್ದಾಳಿ ನಡೆಸಿದರು.

ಈ ಸಂದರ್ಭದಲ್ಲಿ ಕೇಂದ್ರ ಮಾಜಿ ಸಚಿವ ಡಾ. ಜಿ.ಎಂ. ಸಿದ್ದೇಶ್ವರ, ಡಾ.ವೈ.ಎ. ನಾರಾಯಣಸ್ವಾಮಿ, ಕೆ.ಎಸ್. ನವೀನ್, ಎಂ.ಪಿ. ರೇಣುಕಾ ಚಾರ್ಯ, ಡಾ.ಎ.ಎಚ್. ಶಿವಯೋಗಿ ಸ್ವಾಮಿ, ಎಂ. ಬಸವರಾಜನಾಯ್ಕ, ಎನ್. ರಾಜಶೇಖರ ನಾಗಪ್ಪ ಇತರರು ಇದ್ದರು.

ಕಾಂಗ್ರೆಸ್ ಪಕ್ಷಕ್ಕೆ ಸಿದ್ಧಾಂತಗಳೇ ಮುಖ್ಯ: ಡಿಸಿಎಂ ಡಿಕೆಶಿ

ದಾವಣಗೆರೆ: ಒಬ್ಬರಿಂದಲೇ ಕಾಂಗ್ರೆಸ್ ಪಕ್ಷ ನಡೆಯುವುದಿಲ್ಲ. ನಮ್ಮ ಪಕ್ಷ ಸಿದ್ಧಾಂತಗಳಿಂದ ನಡೆಯುತ್ತದೆ. ಪಕ್ಷಕ್ಕೆ ಡಿಕೆ ಶಿವಕುಮಾರ್, ಮುಖ್ಯಮಂತ್ರಿ ಸಿದ್ದರಾಮಯ್ಯ ಮುಖ್ಯವಲ್ಲ. ಸಿದ್ಧಾಂತಗಳೇ ಮುಖ್ಯ ಎಂದು ತಿಳಿಸಿದರು.



ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯ ಪ್ರಚಾರಕ್ಕಾಗಿ ದಾವಣಗೆರೆಗೆ ಆಗಮಿಸಿದ ವೇಳೆ ಎಂಬಿಎ ಕಾಲೇಜು ಆವರಣದ ಹೆಲಿಪ್ಯಾಡ್ ನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಚಿವ ಜಮೀರ್ ಅವರಿಗೆ ಕೇರಳದ ಸ್ಟಾರ್ ಪ್ರಚಾರಕ ಮತ್ತು ಚುನಾವಣಾ ಜವಾಬ್ದಾರಿ ವಹಿಸಿದ್ದು, ಅಲ್ಲಿನ ಜವಾಬ್ದಾರಿ ನಿರ್ವಹಿಸುತ್ತಿದ್ದಾರೆ. ಇಲ್ಲಿ ಪ್ರಚಾರಕ್ಕಾಗಿ ಪಕ್ಷ ಜವಾಬ್ದಾರಿ ನೀಡಿದ್ದು ಶೀಘ್ರವೇ ಬರಲಿದ್ದಾರೆ ಎಂದರು.

ಅಲ್ಪಸಂಖ್ಯಾತರಿಗೆ ಕಾಂಗ್ರೆಸ್ ಪಕ್ಷ ಬೇರೆ ಬೇರೆ ಅವಕಾಶ ನೀಡಿದೆ. ಅಲ್ಪಸಂಖ್ಯಾತರಿಗೆ 16 ನಿಗಮ ಮಂಡಳಿಗಳಲ್ಲಿ ಅವಕಾಶ ನೀಡಿದೆ. ದಾವಣಗೆರೆಯ ಅಬ್ದುಲ್ ಜಬ್ಬಾರ್ ಸಾಬ್ ಪರಿಷತ್ ಸದಸ್ಯ ಸ್ಥಾನ ಸೇರಿದಂತೆ ಹಲವು ಅವಕಾಶ ನೀಡಿದೆ. ಇದನ್ನೇ ಗುರಿಯಾಗಿಸಿ ಬಿಜೆಪಿ ಟೀಕೆ ಮಾಡಿದರೂ ನಾವು ಹಿಂಜರಿಯದೇ ಅವಕಾಶ ನೀಡುವ ಮೂಲಕ ಕಾಂಗ್ರೆಸ್ ಅಲ್ಪಸಂಖ್ಯಾತರ ಪರವಿದೆ ಎಂದು ಅವರು ಸಮರ್ಥಿಸಿಕೊಂಡರು.

ಶೇ.79 ರಷ್ಟು ಜನ ಕಾಂಗ್ರೆಸ್ ಪರ: ಪ್ರತಿ ಬಾರಿ ದಾವಣಗೆರೆ ದಕ್ಷಿಣ ಕ್ಷೇತ್ರದ ಕಣದಲ್ಲಿ ಹಲವು ಮುಸ್ಲಿಂ ಅಭ್ಯರ್ಥಿಗಳು ಇರುತ್ತಾರೆ. ಈ ಬಾರಿ ಹನ್ನೊಂದು ಮಂದಿ ಮುಸ್ಲಿಂ ಅಭ್ಯರ್ಥಿಗಳು ಕಣದಲ್ಲಿದ್ದು, ಕಾಂಗ್ರೆಸ್ ಅಭ್ಯರ್ಥಿಗೆ ಯಾವುದೇ ತೊಡಕಾಗುವುದಿಲ್ಲ. ನಾವು ಆಂತರಿಕವಾಗಿ ಸಮೀಕ್ಷೆ ನಡೆಸಿದ್ದು, ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಶೇ.79ರಷ್ಟು ಮಂದಿ ಕಾಂಗ್ರೆಸ್ ಪರವಾಗಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ ಎಂದರು.

> **ಉಪಚುನಾವಣೆಯಲ್ಲಿ ಅತಿ ಹೆಚ್ಚಿನ ಅಂತರದಿಂದ ಸಮರ್ಥ್ ಶಾಮನೂರು ಗೆಲ್ಲಲಿದ್ದಾರೆ. ಶಾಮನೂರು ಶಿವಶಂಕರಪ್ಪನವರ ದಾನಧರ್ಮ, ಉತ್ತಮ ಕಾರ್ಯಗಳು ಗೆಲುವಿಗೆ ಸಹಕಾರಿಯಾಗಲಿದೆ.**
>
> **-ಡಿ.ಕೆ.ಶಿವಕುಮಾರ್,** ಡಿಸಿಎಂ

ಈ ಸಂದರ್ಭದಲ್ಲಿ ಜಿಲ್ಲಾಧ್ಯಕ್ಷ ಎಚ್.ಬಿ. ಮಂಜುನಾಥ್, ನಟ ಸಾಧುಕೋಕಿಲ, ಯುವ ಕಾಂಗ್ರೆಸ್ ಮುಖಂಡ ಮೊಹಮದ್ ನಲಪಾಡ್ ಇತರರಿದ್ದರು.

2028ರ ಚುನಾವಣೆಗೆ ದಿಕ್ಸೂಚಿ: ಬಿವೈವಿ

ದಾವಣಗೆರೆ: ಈ ಬಾರಿಯ ಚುನಾವಣೆ ಕೇವಲ ಒಬ್ಬ ಶಾಸಕರ ಆಯ್ಕೆಯಲ್ಲ, ಬದಲಾಗಿ ಭ್ರಷ್ಟ ಸರಕಾರದ ವಿರುದ್ಧದ ಜನಾಭಿಪ್ರಾಯವಾಗಲಿದೆ. ಬರುವ ಉಪ ಚುನಾವಣೆಯಲ್ಲಿ ದಾವಣಗೆರೆ ಮತ್ತು ಬಾಗಲಕೋಟೆ ಜಿಲ್ಲೆಗಳ ಮತದಾರರು ಸರಕಾರಕ್ಕೆ ತಕ್ಕ ಪಾಠ ಕಲಿಸುವುದು ನಿಶ್ಚಿತ ಎಂದು ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ ಹೇಳಿದರು.



ನಗರದ ಹೊರವಲಯದ ಖಾಸಗಿ ರೆಸಾರ್ಟ್‌ನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಾಂಗ್ರೆಸ್ ಸರಕಾರವು ಭ್ರಷ್ಟಾಚಾರ ಮತ್ತು ಹಗಲುದರೋಡೆ ಮಾಡುತ್ತಾ ರಾಜ್ಯದ ಜನರನ್ನು ಸಂಪೂರ್ಣ ಮರೆತಿದ್ದು, ಈ ಸರಕಾರದ ದುರಾಡಳಿತದಿಂದ ಈಗಾಗಲೇ ರಾಜ್ಯದ ಜನರು ರೋಸಿ ಹೋಗಿದ್ದಾರೆ. ದಾವಣಗೆರೆ ಮತ್ತು ಬಾಗಲಕೋಟೆ ಜಿಲ್ಲೆಗಳ ಉಪ ಚುನಾವಣೆಯು 2028ರ ವಿಧಾನಸಭಾ ಚುನಾವಣೆಗೆ ದಿಕ್ಸೂಚಿಯಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಕಾಂಗ್ರೆಸ್ ಸರಕಾರ ಗ್ಯಾರಂಟಿ ಯೋಜನೆಗಳ ಹೆಸರಿನಲ್ಲಿ ಕಾಂಗ್ರೆಸ್ ಸರಕಾರ ರಾಜ್ಯದ ಬೊಕ್ಕಸ ಲೂಟಿ ಮಾಡುತ್ತಿದೆ. ಈ ಯೋಜನೆಗಳಿಂದಾಗಿ ರಾಜ್ಯದಲ್ಲಿ ಅಭಿವೃದ್ಧಿ ಕೆಲಸಗಳು ಸ್ಥಗಿತಗೊಂಡಿದ್ದು, ರಸ್ತೆಗಳ ಸ್ಥಿತಿ ಹದಗೆಟ್ಟಿದೆ. ರೈತರಿಗೆ ನೀಡುತ್ತಿದ್ದ ಕಿಸಾನ್ ಸಮ್ಮಾನ್ ನಿಧಿಯ 4ಸಾವಿರ ರು.ಗಳನ್ನು ಕಡಿತಗೊಳಿಸುವ ಮೂಲಕ ಈ ಸರ್ಕಾರ ರೈತ ವಿರೋಧಿ ಧೋರಣೆ ತಳೆದಿದೆ ಎಂದು ದೂರಿದರು.

> **ಜಾತಿ ಮತ್ತು ಪ. ಪಂಗಡದ ಅಭಿವೃದ್ಧಿಗೆ ಮೀಸಲಿಟ್ಟಿದ್ದ ಸುಮಾರು 39ಸಾವಿರ ಕೋಟಿ ರುಗಳನ್ನು ಗ್ಯಾರಂಟಿ ಯೋಜನೆಗಳಿಗೆ ಬಳಸಿಕೊಳ್ಳುವ ಮೂಲಕ ಆ ಸಮುದಾಯಗಳಿಗೆ ದೊಡ್ಡ ದ್ರೋಹ ಎಸಗಿದೆ.**
>
> **-ಬಿ.ಎಸ್. ಯಡಿಯೂರಪ್ಪ,** ಮಾಜಿ ಸಿಎಂ

ವಿಶ್ವವಾಣಿ

ಸಂಪಾದಕೀಯ

ರುಪಾಯಿ ಅಪಮೌಲ್ಯ ನಿಲ್ಲಲೇಬೇಕು

ಸಹನೆಗೂ ಒಂದು ಮಿತಿಯಿರುತ್ತದೆ. ಆ ಮಿತಿ ಮೀರಿದ ಮೇಲೆ ಅದು ಬೇರೆಬೇರೆ ಮಾದರಿಯಲ್ಲಿ ಆಸ್ಫೋಟಗೊಳ್ಳುತ್ತದೆ. ಇಂತಹದ್ದೊಂದು ಸ್ಥಿತಿ ನಿಧಾನಕ್ಕೆ ಬೆಲೆಯೇರಿಕೆಯ ವಿಚಾರದಲ್ಲೂ ರೂಪುಗೊಳ್ಳುತ್ತಿದೆ. ಬೆಲೆಯೇರಿಕೆ ಕೇವಲ ಭಾರತವನ್ನು ಕಾಡುತ್ತಿರುವ ಸಮಸ್ಯೆಯಲ್ಲ, ವಿಶ್ವದ ಎಲ್ಲ ದೇಶಗಳಲ್ಲೂ ಇದು ಭೀಕರ ಸಮಸ್ಯೆಯಾಗಿದೆ. ಡಾಲರ್ ಎದುರು ಪೈಪೋಟಿ ನಡೆಸಲಾಗದ ಕೆಲವು ಬಡರಾಷ್ಟ್ರಗಳಂತೂ ತಮ್ಮ ಕರೆನ್ಸಿಗೆ ಮೌಲ್ಯವೇ ಇಲ್ಲವಾಗಿರುವ ಪರಿಣಾಮ ಸರ್ವನಾಶದ ಅಂಚಿನಲ್ಲಿವೆ. ಸೊಮಾಲಿಯಾ, ಜಿಂಬಾಬ್ವೆ ಅದಕ್ಕೊಂದು ಉದಾಹರಣೆ. ಇವತ್ತು ಒಂದು ದೇಶ ತನ್ನದೇ ಆಂತರಿಕ ಪರಿಸ್ಥಿತಿಯ ಆಧಾರದಲ್ಲಿ ತನ್ನ ಕರೆನ್ಸಿಯ ಮೌಲ್ಯವನ್ನು ನಿರ್ಧರಿಸಲು ಸಾಧ್ಯವಿಲ್ಲ. ಅನ್ಯದೇಶದ ವಸ್ತುಗಳ ಆಮದು, ರಫ್ತಿನ ಅವಲಂಬಿತವಾಗಿರುವುದರಿಂದ ಅನಿವಾರ್ಯವಾಗಿ ಅಮೆರಿಕದ ಡಾಲರ್ ಅನ್ನು ಮಾಧ್ಯಮವಾಗಿ ಬಳಸಬೇಕಾಗುತ್ತದೆ. ಒಂದು ವಸ್ತುವನ್ನು ಕೊಳ್ಳುವಾಗ ಡಾಲರ್ ಅನ್ನೇ ನೀಡಬೇಕಾಗುತ್ತದೆ. ಮಾರುವಾಗ ಡಾಲರ್ ಅನ್ನೇ ಪಡೆಯಬೇಕಾಗುತ್ತದೆ. ಸೊಮಾಲಿಯಾ, ಜಿಂಬಾಬ್ವೆಯಂತಹ ಬಡರಾಷ್ಟ್ರಗಳಿಗೆ ಇದು ಹೇಗೆ ಸಾಧ್ಯ? ಹಾಗಾಗಿ ಆ ದೇಶಗಳ ನೋಟುಗಳು ಬೆಲೆ ಕಳೆದುಕೊಂಡು ಅರ್ಥವ್ಯವಸ್ಥೆ ಹದಗೆಟ್ಟು ಹೋಗಿದೆ. ಸದ್ಯ ಯುದ್ಧ ಜೋರಾಗಿರುವುದರಿಂದ ತೈಲ, ಅನಿಲ ಸೇರಿದಂತೆ ಹಲವು ನಿತ್ಯ ಅನಿವಾರ್ಯ ಸಾಮಗ್ರಿಗಳ ಬೆಲೆಯೇರುತ್ತಲೇ ಇದೆ. ಭಾರತ ತೈಲವನ್ನು ಆಮದು ಮಾಡಿಕೊಳ್ಳುವುದು ಹೆಚ್ಚಿದಂತೆಲ್ಲ ಹೆಚ್ಚೆಚ್ಚು ಡಾಲರ್ ಅನ್ನು ಕೊಡಬೇಕಾಗುತ್ತದೆ. ಡಾಲರ್‌ಗೆ ಬೇಡಿಕೆ ಜಾಸ್ತಿಯಾದಷ್ಟೂ ಅದನ್ನು ಪಡೆಯಲು ಹೆಚ್ಚು ರುಪಾಯಿಗಳನ್ನು ನೀಡಬೇಕಾಗುತ್ತದೆ. ಸಹಜವಾಗಿ ಡಾಲರ್ ಮೌಲ್ಯ ಹೆಚ್ಚುತ್ತದೆ, ರುಪಾಯಿ ಮೌಲ್ಯ ಬೀಳುತ್ತದೆ. ಆಗ ತಂತಾನೇ ಕೊಳ್ಳುವಾಗ ವಸ್ತುಗಳಿಗೆ ಹೆಚ್ಚು ರುಪಾಯಿ ನೀಡಲೇಬೇಕಾಗುತ್ತದೆ. ಪರೋಕ್ಷವಾಗಿ ಡಾಲರ್ ಮೇಲೆ ಅವಲಂಬಿತಗೊಂಡಿರುವ ಈ ಅರ್ಥವ್ಯವಸ್ಥೆಯನ್ನು, ರುಪಾಯಿ ಮೇಲೆಯೇ ಅವಲಂಬಿತಗೊಳ್ಳುವಂತೆ ಮಾಡಬೇಕು. ಅರ್ಥಾತ್ ವಸ್ತುಗಳನ್ನು ಮಾರುವಾಗ ರುಪಾಯಿಯಲ್ಲೇ ಹಣ ಪಡೆಯುವುದು, ಕೊಳ್ಳುವಾಗ ಆಯಾ ದೇಶದ ಕರೆನ್ಸಿ ಪಡೆದುಕೊಳ್ಳುವ ವ್ಯವಸ್ಥೆಯನ್ನು ಬಲವಾಗಿ ರೂಪಿಸಲು ಶುರು ಮಾಡಿದರೆ, ಡಾಲರ್ ತಂತಾನೇ ದುರ್ಬಲವಾಗುತ್ತದೆ. ಯೂರೋಪಿಯನ್ ದೇಶಗಳು ಒಗ್ಗೂಡಿ ಯೂರೋ ಕರೆನ್ಸಿ ರೂಪಿಸಿದ್ದು ಇದಕ್ಕೊಂದು ಉದಾಹರಣೆ. ಭಾರತ, ರಷ್ಯಾಗಳೂ ಇಂತಹದ್ದೇ ಒಂದು ಲೆಕ್ಕಾಚಾರದಲ್ಲಿವೆ. ಆದರೆ ಅಮೆರಿಕದ ಹೊಡೆತಕ್ಕೆ ಸ್ವತಃ ರಷ್ಯಾದ ರೂಬಲ್ ಕೂಡ ಮೌಲ್ಯ ಕಳೆದುಕೊಂಡಿದೆ. ತುರ್ತಾಗಿ ರುಪಾಯಿ ಬಲಗೊಳ್ಳದಿದ್ದರೆ, ಬೆಲೆಯೇರಿಕೆಯನ್ನು ತಡೆಯುವುದು ಕಷ್ಟ.

ಸೊಂಪಾದಕೀಯ

ಬಿಕ್ಕಟ್ಟು ಬಂದಾಗ ಬಿಕ್ಕಿಬಿಕ್ಕಿ ನಕ್ಕವರು

ಮನುಷ್ಯ ಸಂಕಟ ತಾಳಲಾಗದೇ ಬಿಕ್ಕಿಬಿಕ್ಕಿ ಅಳುವುದು ಸಹಜ. ಇನ್ನು ಕೆಲವರು ಬಿಕ್ಕಿಬಿಕ್ಕಿ ನಗುತ್ತಿರುತ್ತಾರೆ. ಚೆನ್ನಾಗಿ ಒಳೇಟು ಬಿದ್ದಿರುತ್ತದೆ. ಗಂಟಲಲ್ಲಿ ಅಳುವಿರುತ್ತದೆ, ಬಾಯಲ್ಲಿ ನಗುತ್ತಿರುತ್ತಾರೆ. ಇದೇ ಬಿಕ್ಕಿಬಿಕ್ಕಿ ನಗುವುದು. ಚುನಾವಣೆಯಲ್ಲಿ ಟಿಕೆಟ್ ಕಳೆದುಕೊಂಡ ಶಾಸಕರು ಇದಕ್ಕೆ ಉತ್ತಮ ಉದಾಹರಣೆ. ಏ.9ರಂದು ಬಾಗಲಕೋಟೆ, ದಾವಣಗೆರೆಯಲ್ಲಿ ಉಪ ಚುನಾವಣೆ ನಡೆಯಲಿದೆ. ದಾವಣಗೆರೆಯಲ್ಲಿ ಕಾಂಗ್ರೆಸ್ ಟಿಕೆಟ್‌ಗಾಗಿ ಸಾದಿಕ್ ಪೈಲ್ವಾನ್ ಗರಿಷ್ಠ ಪೈಪೋಟಿ ನಡೆಸಿದ್ದರು. ಇನ್ನೂ ಕೈ ಟಿಕೆಟ್ ಘೋಷಣೆಯಾಗುವ ಮೊದಲೇ ಸಮರ್ಥ್ ಮಲ್ಲಿಕಾರ್ಜುನ್ ನಾಮಪತ್ರ ಸಲ್ಲಿಸಿಯಾಗಿತ್ತು! ಪೈಲ್ವಾನ್ ಪೈಲ್ವಾನ್‌ನಂತೆ ತೊಡೆತಟ್ಟಿಕೊಂಡೇ ಇದ್ದರು. ನಾಮಪತ್ರ ವಾಪಸ್ ತೆಗೆದುಕೊಳ್ಳುವ ದಿನಾಂಕ ಮುಗಿದರೂ ನಾನು ಜಗ್ಗಲ್ಲ, ಬಗ್ಗಲ್ಲ ಅನ್ನುತ್ತಲೇ ಇದ್ದರು. ಆದರೆ ಎಲ್ಲಿ ಏಟು ಬಿತ್ತೋ ಏನೋ? ದಿಢೀರನೇ ನಾನು ಕಾಂಗ್ರೆಸ್ ಅಭ್ಯರ್ಥಿ ಸಮರ್ಥ್ ಪರ ಕೆಲಸ ಮಾಡುತ್ತೇನೆ ಎಂದು ಒಪ್ಪಿಕೊಂಡರು. ಟಿಕೆಟ್ ಕೊಡಿಸುತ್ತೇನೆಂದು ಭರವಸೆ ನೀಡಿದ್ದ ಜಮೀರ್ ಅಹ್ಮದ್ ಶಬ್ದರಹಿತವಾಗಿ ಅಳುತ್ತಿದ್ದಾರಂತೆ. ಪೈಲ್ವಾನ್ ತಡೆದುಕೊಳ್ಳಲಾಗದೇ ಬಿಕ್ಕಿಬಿಕ್ಕಿ ನಗುತ್ತಿದ್ದಾರೆ, ಮುಂದೆ ಟಿಕೆಟ್ ಸಿಗಬಹುದೆಂಬ ಆಶೆಯಿಂದ. ಯಾರಿಗೆ ಬಿತ್ತೋ? ಎಲ್ಲಿಗೆ ಬಿತ್ತೋ?

ಸಂಪಾದಕರ ಸದ್ಯಶೋಧನೆ

ದ ಲಾಸ್ಟ್ ಮೀಟಿಂಗ್ ಥಿಯರಿ ಎಂದರೇನು?

ಇತ್ತೀಚೆಗೆ ನಾನು ಬಿಬಿಸಿ ಸಂದರ್ಶನವೊಂದನ್ನು ನೋಡುತ್ತಿದ್ದೆ. ಸಂದರ್ಶಕಿ ನಿಮಗೆ 'ದ ಲಾಸ್ಟ್ ಮೀಟಿಂಗ್ ಥಿಯರಿ'ಯಲ್ಲಿ ನಂಬಿಕೆ ಇದೆಯೇ?' ಎಂಬ ಪ್ರಶ್ನೆಗೆ ತಾನು ಊಹಾತ್ಮಕವಾದ ಪ್ರಶ್ನೆಗೆ ಉತ್ತರ ನೀಡುವುದಿಲ್ಲ ಎಂದು, 'ಮುಂದಿನ ಪ್ರಶ್ನೆ ಕೇಳಿ' ಎಂದುಬಿಟ್ಟ. ಹಾಗಾದರೆ 'ದ ಲಾಸ್ಟ್ ಮೀಟಿಂಗ್ ಥಿಯರಿ' ಎಂದರೇನು? ಇದು ಜೀವನದ ಅತ್ಯಂತ ಗಹನವಾದ, ಭಾವನಾತ್ಮಕವಾದ ಮತ್ತು ಅಷ್ಟೇ ಕಟುವಾದ ಸತ್ಯವನ್ನು ಸಾರುವ ಒಂದು ಪರಿಕಲ್ಪನೆ. ಇದು ಯಾವುದೇ ವಿಜ್ಞಾನದ ಪ್ರಯೋಗಾಲಯದಲ್ಲಿ ಸಾಬೀತಾದ ಸಿದ್ಧಾಂತವಲ್ಲ, ಬದಲಿಗೆ ಮನುಷ್ಯನ ಸಂಬಂಧಗಳು, ಸಮಯದ ಅನಿಶ್ಚಿತತೆ ಮತ್ತು ಮರಣದ ಅನಿವಾರ್ಯತೆಯ ಸುತ್ತ ಹೆಣೆಯಲಾದ ಒಂದು ಜೀವನ ದರ್ಶನ ಎನ್ನಬಹುದು. ಈ ಸಿದ್ಧಾಂತದ ಸಾರಾಂಶ ಇಷ್ಟೇ - 'ನಾವು ಒಬ್ಬ ವ್ಯಕ್ತಿಯನ್ನು ಭೇಟಿಯಾದಾಗ ಅಥವಾ ಮಾತಾಡಿಸಿದಾಗ, ಅದು ನಮ್ಮಿಬ್ಬರ ನಡುವಿನ ಕೊನೆಯ ಭೇಟಿಯಾಗಿರಬಹುದು ಎಂಬ ಅರಿವು ನಮಗಿರುವುದಿಲ್ಲ'. ನಾವೆಲ್ಲರೂ ನಾಳೆಯ ಬಗ್ಗೆ ನೂರಾರು ಯೋಜನೆಗಳನ್ನು ಹಾಕಿಕೊಳ್ಳುತ್ತೇವೆ. ಮುಂದಿನ ವಾರ ಸಿಗೋಣ, ಮುಂದಿನ ತಿಂಗಳು ಪ್ರವಾಸ ಹೋಗೋಣ, ನಿವೃತ್ತಿಯ ನಂತರ ಸಮಯ ಕಳೆಯೋಣ ಎಂದು ಮಾತು ಕೊಡುತ್ತೇವೆ. ಆದರೆ ಕಾಲಚಕ್ರದ ಗತಿ ಯಾರ ಅರಿವಿಗೂ ಬರುವುದಿಲ್ಲ. 'ದ ಲಾಸ್ಟ್ ಮೀಟಿಂಗ್ ಥಿಯರಿ' ಹೇಳುವುದೇನೆಂದರೆ, ಪ್ರತಿಯೊಂದು ಭೇಟಿಯ ಹಿಂದೆ ಒಂದು 'ಕೊನೆಯ ಬಾರಿ' ಎಂಬುದು ಅಡಗಿರುತ್ತದೆ. ಒಬ್ಬ ಸ್ನೇಹಿತನಿಗೆ 'ಟಾಟಾ' ಹೇಳಿ ಕಳುಹಿಸುವಾಗ, ತಂದೆ-ತಾಯಿಯ ಆಶೀರ್ವಾದ ಪಡೆದು ಮನೆಯಿಂದ ಹೊರಡುವಾಗ ಅಥವಾ ಸಂಗಾತಿಯೊಡನೆ ಜಗಳವಾಡಿ ಆಚೆ ಹೋಗುವಾಗ-ಅದೇ ನಮ್ಮ ಕೊನೆಯ ಭೇಟಿಯಾಗಬಹುದು ಎಂಬ ಸಣ್ಣ ಸುಳಿವು ನಮಗಿದ್ದರೆ ನಮ್ಮ ವರ್ತನೆ ಹೇಗಿರುತ್ತಿತ್ತು? ಖಂಡಿತವಾಗಿಯೂ ಅದು ಪ್ರೀತಿ ಮತ್ತು ಗೌರವದಿಂದ ಕೂಡಿರುತ್ತಿತ್ತು. ಆದರೆ ಪ್ರಕೃತಿಯ ನಿಯಮದಂತೆ ಆ 'ಕೊನೆಯ ಕ್ಷಣ' ನಮಗೆ ನಿಗೂಢವಾಗಿಯೇ ಉಳಿಯುತ್ತದೆ. ಹಲವು ಬಾರಿ ನಾವು ಪ್ರೀತಿಪಾತ್ರರ ಜತೆ ಸಣ್ಣಪುಟ್ಟ ಕಾರಣಕ್ಕೆ ಜಗಳವಾಡುತ್ತೇವೆ, ಅಹಂಕಾರದಿಂದ ಮಾತು ನಿಲ್ಲಿಸುತ್ತೇವೆ ಅಥವಾ 'ಅವರಿಗೆ ಅಹಂಕಾರ ಜಾಸ್ತಿ, ಅವರೇ ಬಂದು ಮಾತನಾಡಿಸಲಿ' ಎಂದು ಕಾಯುತ್ತಾ ವರ್ಷಗಳನ್ನು ಕಳೆಯುತ್ತೇವೆ. ಆದರೆ ಇದ್ದಕ್ಕಿದ್ದಂತೆ ಒಂದು ದಿನ ಆ ವ್ಯಕ್ತಿ ಇಲ್ಲ ಎಂಬ ಸುದ್ದಿ ಬಂದಾಗ, ನಮ್ಮಲ್ಲಿ ಉಳಿಯುವುದು ಕೇವಲ 'ಪಶ್ಚಾತ್ತಾಪ' ಮಾತ್ರ. 'ಛೇ, ಅಂದು ಅಷ್ಟು ಕೆಟ್ಟದಾಗಿ ಮಾತನಾಡಬಾರದಿತ್ತು', 'ಒಂದು ಬಾರಿ ಕ್ಷಮೆ ಕೇಳಿದ್ದರೆ ಆಗುತ್ತಿತ್ತು', 'ಕೊನೆಯ ಬಾರಿ ಅವರನ್ನು ನೋಡುವ ಅವಕಾಶವೂ ಸಿಗಲಿಲ್ಲವಲ್ಲ' ಎಂಬ ಹಳಹಳಿ ಈ ಸಿದ್ಧಾಂತದ ಕಟು ವಾಸ್ತವ. ನಾವು ಪ್ರೀತಿಸುವವರನ್ನು ಕಳೆದುಕೊಂಡಾಗ ನಮಗೆ ನೋವಾಗುವುದು ಅವರು ದೂರಾದರು ಎಂದಲ್ಲ, ಬದಲಿಗೆ ಅವರಿಗೆ ಹೇಳಬೇಕಾದ ಪ್ರೀತಿಯ ಮಾತುಗಳನ್ನು ಹೇಳಲು ನಮಗೆ ಸಮಯ ಸಿಗಲಿಲ್ಲ ಎಂಬ ಕಾರಣಕ್ಕೆ. ಈ ಥಿಯರಿಯು ನಮಗೆ 'ವರ್ತಮಾನ'ದಲ್ಲಿ ಬದುಕಲು ಕಲಿಸುತ್ತದೆ. ನಾವು ಯಾರಿಗಾದರೂ ಸಮಯ ನೀಡುತ್ತಿದ್ದೇವೆ ಎಂದರೆ ನಮ್ಮ ಜೀವನದ ಒಂದು ಭಾಗವನ್ನೇ ಅವರಿಗೆ ನೀಡುತ್ತಿದ್ದೇವೆ ಎಂದರ್ಥ. ಫೋನ್ ನೋಡುತ್ತಾ ಮಾತಾಡುವುದು, ಅನ್ಯಮನಸ್ಕರಾಗಿರುವುದು ಅಥವಾ ಬೇರೆಯವರ ಉಪಸ್ಥಿತಿಯನ್ನು ಕಡೆಗಣಿಸುವುದು-ಇವೆಲ್ಲವೂ ಆ ಕ್ಷಣದ ಪಾವಿತ್ರ್ಯವನ್ನು ಹಾಳುಮಾಡುತ್ತವೆ. ಒಂದು ವೇಳೆ ಇಂದು ನಾನು ಈ ವ್ಯಕ್ತಿಯನ್ನು ಕೊನೆಯ ಬಾರಿಗೆ ನೋಡುತ್ತಿದ್ದೇನೆ ಎಂದು ಭಾವಿಸಿದರೆ, ನಾವು ಅವರ ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತೇವೆ, ಅವರ ಮಾತುಗಳನ್ನು ಶ್ರದ್ಧೆಯಿಂದ ಕೇಳಿಸಿಕೊಳ್ಳುತ್ತೇವೆ ಮತ್ತು ಆ ಕ್ಷಣವನ್ನು ಸ್ಮರಣೀಯವಾಗಿಸಲು ಪ್ರಯತ್ನಿಸುತ್ತೇವೆ. ಈ 'ಕೊನೆಯ ಭೇಟಿಯ ಪ್ರಜ್ಞೆ' ನಮ್ಮನ್ನು ಹೆಚ್ಚು ಮಾನವೀಯವಾಗಿಸುತ್ತದೆ. ಇಂದಿನ ತಾಂತ್ರಿಕ ಜಗತ್ತಿನಲ್ಲಿ ನಾವು ಸಾವಿರಾರು ಕಿಮೀ ದೂರದಲ್ಲಿರುವವರ ಜತೆ ವಿಡಿಯೋ ಕಾಲ್ ಮಾಡುತ್ತೇವೆ. ಆದರೆ ಆ ಭೌತಿಕ ಸ್ಪರ್ಶ ಮತ್ತು ಸಾಮೀಪ್ಯದ ಬೆಲೆ ನಮಗೆ ತಿಳಿಯುತ್ತಿಲ್ಲ. ಮೆಸೇಜ್‌ಗಳಲ್ಲಿ ಕಿತ್ತಾಡುವುದು ಸುಲಭ, ಆದರೆ ಆ ಮೆಸೇಜ್ ಕಳುಹಿಸಿದ ವ್ಯಕ್ತಿ ಮುಂದಿನ ಕ್ಷಣ ಇರುತ್ತಾರೋ ಇಲ್ಲವೋ ಎಂಬ ಅರಿವು ನಮಗಿರುವುದಿಲ್ಲ. ಅನೇಕ ಬಾರಿ 'Last Seen' ಎಂಬುದು ಕೇವಲ ವಾಟ್ಸಾಪ್ ಸ್ಟೇಟಸ್ ಆಗಿರದೇ, ಆ ವ್ಯಕ್ತಿಯ ಜೀವನದ ಕೊನೆಯ ಕುರುಹೂ ಆಗಿರಬಹುದು. ಈ ಸಿದ್ಧಾಂತದಿಂದ ನಾವು ಕಲಿಯಬೇಕಾದ ಪಾಠಗಳೇನು? 'ದ ಲಾಸ್ಟ್ ಮೀಟಿಂಗ್ ಥಿಯರಿ' ನಮ್ಮನ್ನು ಭಯಪಡಿಸಲು ಇರುವಂಥದ್ದಲ್ಲ, ಬದಲಿಗೆ ನಮ್ಮ ಜೀವನದ ಗುಣಮಟ್ಟವನ್ನು ಸುಧಾರಿಸಲು ಇರುವಂಥದ್ದು. ಯಾರ ಮೇಲಾದರೂ ಕೋಪವಿದ್ದರೆ ಅದನ್ನು ಅಂದೇ ಮರೆತುಬಿಡಿ. ಅಹಂಕಾರಕ್ಕಿಂತ ಸಂಬಂಧ ದೊಡ್ಡದು. ಯಾರನ್ನಾದರೂ ಭೇಟಿಯಾದಾಗ ನಿಮ್ಮ ಪೂರ್ಣ ಗಮನ ಅವರ ಮೇಲಿರಲಿ. ಮನೆಯಿಂದ ಹೊರಡುವಾಗ ಅಥವಾ ಫೋನ್ ಕಟ್ ಮಾಡುವಾಗ ಆಡುವ ಕೊನೆಯ ಮಾತು ಹಿತವಾಗಿರಲಿ.

ಕುರ್ಮಿ ಚೇತನಾ ರ‍್ಯಾಲಿಯಿಂದ ರಾಜ್ಯಸಭೆ ಹಾದಿಯತ್ತ...!

ಕುರ್ಮಿ-ಕೊಯೆರಿ ಸಮಾಜದ ಒಗ್ಗಟ್ಟು ನಿತೀಶ್ ನೈತಿಕ ಸ್ಥೈರ್ಯವನ್ನು ಹಿಗ್ಗಿಸಿತ್ತು. ನಿತೀಶ್ ಒಳಗಿದ್ದ ನಾಯಕನನ್ನು ಅದು ಬಡಿದೆಬ್ಬಿಸಿತ್ತು. ಹೀಗಿದ್ದರೂ, ನಿತೀಶ್ ತುಮ್ ಆಗೇ ಬಢೋ, ಹಮ್ ತುಮಾರೇ ಸಾಥ್ ಹೇ ಎಂದು ಕುರ್ಮಿಗಳು ಘೋಷಣೆ ಕೂಗಿದರೂ, ರಾಜ್ಯವ್ಯಾಪ್ತಿ ಜನರು ನಮ್ಮನ್ನು ಸ್ವೀಕರಿಸುತ್ತಾರಾ? ನನ್ನ ಹಿಂದೆ ಎಷ್ಟು ಮಂದಿ ಬಂದಾರು ಎಂಬ ಪ್ರಶ್ನೆಗಳಿಗೆ ಉತ್ತರ ಸಿಗುತ್ತಿರಲಿಲ್ಲ.

ಜನಪಥ

ರಾಘವಶರ್ಮ ನಿಡ್ಲೆ
vveditoped@gmail.com

ಬಿಹಾರ ವಿಧಾನಪರಿಷತ್ ಸ್ಥಾನಕ್ಕೆ ಸಿಎಂ ನಿತೀಶ್ ಕುಮಾರ್ ಅವರು ಮಾ.30ರಂದು ರಾಜೀನಾಮೆ ಸಲ್ಲಿಸುವ ಮೂಲಕ ಬಿಹಾರ ರಾಜಕಾರಣದ ಅಮೋಘ ಅಧ್ಯಾಯವೊಂದು ಕೊನೆಗೊಂಡಿದೆ. 21 ವರ್ಷಗಳ ಸುದೀರ್ಘ ಅವಧಿಗೆ ಮುಖ್ಯಮಂತ್ರಿಯಾಗಿ, ಸ್ನೇಹಿತರನ್ನು ಬದಲಿಸಿದರೂ, ಕಳಂಕ ಮೆತ್ತಿಕೊಳ್ಳದೆ, ಬೀಮಾರು ರಾಜ್ಯವನ್ನು ಸುಶಾಸನದ ಹಾದಿಗೆ ಕೊಂಡೊಯ್ದ ನಿತೀಶ್, ಈಗ ರಾಜ್ಯಸಭೆಯತ್ತ ಮುಖ ಮಾಡಿದ್ದಾರೆ. ನಿತೀಶರಿಂದ ಒತ್ತಾಯಪೂರ್ವಕವಾಗಿ ಅಧಿಕಾರವನ್ನು ಕಸಿದುಕೊಳ್ಳಲಾಗಿದೆ. ಮೋದಿ-ಅಮಿತ್ ಶಾ ಆಜ್ಞೆಯಂತೆ ಇದು ನಡೆಯುತ್ತಿದೆ ಎನ್ನುತ್ತಲೇ ವಿಪಕ್ಷ ನಾಯಕರು ಕೂಡ ನಿತೀಶರ ಜನಸ್ನೇಹಿ ಆಡಳಿತಶೈಲಿ ಹಾಗೂ ಕಾರ್ಯವೈಖರಿ ಬಗ್ಗೆ ಮೆಚ್ಚುಗೆಯ ಮಾತುಗಳನ್ನಾಡಿರುವುದು ಸ್ವಾಗತಾರ್ಹ.

ಬಿಹಾರ ಮಾಜಿ ಸಿಎಂ, ಸೋಷಿಯಲಿಸ್ಟ್ ಲೀಡರ್ ಕರ್ಪೂರಿ ಠಾಕೂರ್ ಗರಡಿಯಲ್ಲಿ ಬೆಳೆದಿದ್ದ ಲಾಲೂ ಪ್ರಸಾದ್ ಯಾದವ್ ಮತ್ತು ನಿತೀಶ್ ಕುಮಾರ್ ಒಂದೊಮ್ಮೆ ಒಂದೇ ನಾಣ್ಯದ 2 ಮುಖಗಳಂತಿದ್ದವರು. ಆದರೆ ಅಧಿಕಾರ ಯಾರನ್ನೂ ಹೇಗೆ ಬೇಕಾದರೂ ಬದಲಿಸಬಲ್ಲದು. ಲಾಲೂ ಯಾದವ್ ಕೂಡ ಹೊರತಾಗಿರಲಿಲ್ಲ. 1990ರಲ್ಲಿ ಮೊದಲ ಬಾರಿಗೆ ರಾಜ್ಯದ ಸಿಎಂ ಆಗುತ್ತಿದ್ದಂತೆಯೇ ಜತೆಗಿದ್ದವರನ್ನು ಲಾಲೂ ಕಡೆಗಣಿಸಲಾರಂಭಿಸಿದರು. ಅಧಿಕಾರದ ದರ್ಪ, ಅಹಂಕಾರ ನೆತ್ತಿಗೇರಿತ್ತು. ಇದು ನಿತೀಶ್ ಕುಮಾರ್ ಎಂಬ ಮತ್ತೊರ್ವ ನಾಯಕನ ಜನನಕ್ಕೆ ಕಾರಣವಾಯಿತು. ಬಹುಶಃ ಲಾಲೂ ಸಖ್ಯ ಬಿಡದೆ, ಲಾಲೂ ನೆರಳಲ್ಲಿದ್ದುಕೊಂಡು ಹೊಂದಾಣಿಕೆಯ ರಾಜಕಾರಣ ಮಾಡಿದ್ದಿದ್ದರೆ ನಿತೀಶ್ ಈ ಹಂತಕ್ಕೆ ಬರಲು ಸಾಧ್ಯವೇ ಆಗುತ್ತಿರಲಿಲ್ಲವೇನೋ...

1989ರಲ್ಲಿ ಕರ್ಪೂರಿ ಠಾಕೂರ್ ನಿಧನದ ನಂತರ ಖಾಲಿಯಿದ್ದ ವಿಪಕ್ಷ ನಾಯಕನ ಸ್ಥಾನಕ್ಕೆ ಲಾಲೂ ಪ್ರಸಾದ್ ಯಾದವ್ ಹೆಸರನ್ನು ಬಲವಾಗಿ ಬೆಂಬಲಿಸಿದ್ದ ನಿತೀಶ್ ಕುಮಾರ್, 1990ರ ಮಾರ್ಚ್ 18ರಂದು ಬಿಹಾರದ ಐತಿಹಾಸಿಕ ಗಾಂಧಿ ಮೈದಾನದಲ್ಲಿ ಜನತಾದಳ ಸರ್ಕಾರದ ಮುಖ್ಯಮಂತ್ರಿಯಾಗಿ ಲಾಲೂ ಯಾದವ್ ಪ್ರಮಾಣವಚನ ಸ್ವೀಕರಿಸಿದ್ದಾಗಲೂ ಸನಿಹದಲ್ಲಿದ್ದು ಚಪ್ಪಾಳೆ ತಟ್ಟಿದ್ದರು. ಆದರೆ, ಅದೇ ಗಾಂಧಿ ಮೈದಾನ ಲಾಲೂ-ನಿತೀಶ್ ಸಂಬಂಧದ ಅಂತ್ಯಕ್ಕೂ ವೇದಿಕೆಯಾಗುತ್ತದೆ ಎಂದು ನಿತೀಶ್ ಕಲ್ಪಿಸಿಯೂ ಇರಲಿಲ್ಲ. 1994ರ ಕುರ್ಮಿ ಚೇತನಾ ರ‍್ಯಾಲಿಯಲ್ಲಿ ಲಾಲೂ ವಿರುದ್ಧ ಬಂಡಾಯದ ದನಿ ಮೊಳಗಿಸಿದ್ದ ನಿತೀಶ್, ರಾಜಕೀಯದ ಮುಂದಿನ ಹಾದಿ ಬಗ್ಗೆ ಖಚಿತತೆ ಇಲ್ಲದಿದ್ದರೂ, ಲಾಲೂ ಜತೆಗಿರಲಾರೆ ಎಂದು ನಿಶ್ಚಯಿಸಿದ್ದರು.

ಜಯಪ್ರಕಾಶ ನಾರಾಯಣ, ಕರ್ಪೂರಿ ಠಾಕೂರರ ಸೈದ್ಧಾಂತಿಕ ಬದ್ಧತೆಗೆ ಲಾಲೂ ಕಿಂಚಿತ್ತೂ ಬೆಲೆ ನೀಡುತ್ತಿಲ್ಲ, ನಮ್ಮ ಚುನಾವಣಾಪೂರ್ವ ಭರವಸೆಗಳೆಲ್ಲವೂ ಗಾಳಿಗೆ ತೂರಲಾಗುತ್ತಿದೆ. ಇದು ಲಾಲೂ ಯಾದವ್ ಸ್ವಾರ್ಥ ತುಂಬಿದ ಒನ್ ಮ್ಯಾನ್ ಸರ್ಕಾರ ಎಂಬ ಸಿಟ್ಟು ನಿತೀಶ್‌ರಲ್ಲಿ ನಿತ್ಯವೂ ಹೆಚ್ಚುತ್ತಲೇ ಇತ್ತು. 1992ರ ಅಂತ್ಯದ ವೇಳೆಗೆ ದಿಲ್ಲಿ ಪ್ರವಾಸದಲ್ಲಿದ್ದ ಲಾಲೂ ಅವರನ್ನು ಬಿಹಾರ ಭವನದಲ್ಲಿ ಭೇಟಿಯಾಗಲು ಪಕ್ಷದ ಮುಖಂಡರಾದ ನಿತೀಶ್ ಕುಮಾರ್, ಶಿವಾನಂದ ತಿವಾರಿ, ಬ್ರಿಶನ್ ಪಟೇಲ್ ಮತ್ತು ಲಲ್ಲನ್ ಸಿಂಗ್ ಬಂದಿದ್ದರು. ರೈತರಿಗೆ ಸಂಬಂಧಿಸಿದ ಬೇಡಿಕೆಗಳ ಪಟ್ಟಿ ಮುಂದಿಡುವುದು ಈ ನಾಯಕರ ಉದ್ದೇಶವಾಗಿತ್ತು.

ಸಿಎಂ ಸೂಟ್‌ನಲ್ಲಿ ಮಾತುಕತೆ ಶುರುವಾದ ಕೆಲವೇ ಹೊತ್ತಲ್ಲಿ, ಲಲ್ಲನ್ ಸಿಂಗ್ ವಿರುದ್ಧ ಬೆಂಕಿ ಉಗುಳಿದ ಸಿಎಂ ಲಾಲೂ, ನಿಕಲ್ ಬಾಹರ್, ಬಾಹರ್ ನಿಕಲ್.. ಸಾಲಾ ಎಂದು ಕೂಗಾಡಿದ್ದರು. ಲಾಲೂ ಬೊಬ್ಬೆ ಕೇಳಿ ಇಡೀ ಬಿಹಾರ ಭವನವೇ ಸ್ತಬ್ಧಗೊಂಡಿತ್ತು. ಕುತ್ತಿಗೆ ಹಿಡಿದು ಹೊರಗೆ ಹಾಕಿ ಎಂದು ಲಾಲೂ ಕೆರಳುತ್ತಿದ್ದಂತೆ, ನಿತೀಶ್ ಸೇರಿ ಎಲ್ಲಾ ಮುಖಂಡರು ಮೌನದಿಂದ ಬಿಹಾರ ಭವನದಿಂದ ಹೊರನಡೆದಿದ್ದರು. ಘಟನೆಯಿಂದ ತೀವ್ರ ಬೇಸರಗೊಂಡಿದ್ದ ನಿತೀಶ್ ಕುಮಾರ್, ಇನ್ನು ಒಟ್ಟಿಗೆ ಹೆಜ್ಜೆ ಹಾಕಲು ಸಾಧ್ಯವಿಲ್ಲ ಎಂದು ತೀರ್ಮಾನಿಸಿದ್ದರು. ಬಿಹಾರದ ಭವನದಲ್ಲಾದ ಗಲಾಟೆ ಸದ್ದು ಕಿವಿಗೆ ಬಿದ್ದಕೂಡಲೇ ಬಿಕ್ಕಟ್ಟು ಶಮನಗೊಳಿಸಲು ಜನತಾದಳದ ಅಂದಿನ ಅಧ್ಯಕ್ಷ ಶರದ್ ಯಾದವ್ ಎಷ್ಟೇ ಯತ್ನಿಸಿದರೂ, ನಿತೀಶರ ಮನಸ್ಸು ಒಡೆದು ಹೋಗಿತ್ತು.

90ರಲ್ಲಿ ಸರ್ಕಾರ ರಚನೆಯಾದ ಎರಡೇ ವರ್ಷದಲ್ಲಿ ನಿತೀಶ್-ಲಾಲೂ ಮುಖ-ಮುಖ ನೋಡುತ್ತಿರಲಿಲ್ಲ. ಇಬ್ಬರ ನಡುವೆ ಮಾತುಕತೆ ಬಹುತೇಕ ಸ್ಥಗಿತಗೊಂಡಿತ್ತು. ಲಾಲೂ ಜತೆ ಮಾತನಾಡಿ ಪ್ರಯೋಜನವಿಲ್ಲ ಎಂದು ತೀರ್ಮಾನಿಸಿದ್ದ ನಿತೀಶ್, ಸುದೀರ್ಘ ಪತ್ರ ಬರೆಯಲು ಮುಂದಾಗಿ, ಆ ಪತ್ರವನ್ನು ಶರದ್ ಯಾದವ್ ಜತೆಗೂ ಹಂಚಿಕೊಂಡಿದ್ದರು. ಜೆಪಿ, ರಮಾನಂದ ತಿವಾರಿ, ಕರ್ಪೂರಿ ಠಾಕೂರ್ ಅವರಂಥ ಹಿರಿಯಾಳುಗಳು, ಲಕ್ಷಾಂತರ ಕಾರ್ಯಕರ್ತರ ಹೋರಾಟದಿಂದ ಈ ಅಧಿಕಾರ ಪ್ರಾಪ್ತಿಯಾಗಿದೆ ಎನ್ನುವುದನ್ನು ನೀವು ಮರೆತಂತಿದೆ. ಸರ್ಕಾರದಲ್ಲಿ ಯಾದವರನ್ನು ಹೊರತುಪಡಿಸಿ ಇತರೆ ಸಮಾಜದವರ ಯಾವ ಕೆಲಸಗಳು ಆಗುತ್ತಿಲ್ಲ. ಯಾದವೇತರರಿಗಂತೂ ಬೆಲೆಯೇ ಇಲ್ಲ. ಸಮಸ್ತಿಪುರದಲ್ಲಿ

ಎಲ್.ಕೆ.ಆಡ್ವಾಣಿಯವರ ರಥಯಾತ್ರೆ ತಡೆಹಿಡಿಯುವುದು ನಮ್ಮೆಲ್ಲರ ನಿರ್ಧಾರವಾಗಿತ್ತಾದರೂ, ನಾವ್ಯಾರೂ ಅದನ್ನು ರಾಜಕೀಯ ಲಾಭಕ್ಕೆ ಬಳಸಿಕೊಳ್ಳಲಿಲ್ಲ. ಆದರೆ, ನೀವು ಅದನ್ನು ನನ್ನಿಂದಲೇ ಎಲ್ಲವೂ ನಡೆಯಿತು ಎಂಬಂತೆ ಬಿಂಬಿಸಿದ್ದೀರಿ. ಜಾತ್ಯತೀತ ರಾಜಕಾರಣ ನಮ್ಮೆಲ್ಲರ ಬದ್ಧತೆ. ಇದು ನಿಮ್ಮೊಬ್ಬರಿಂದ ಆಗಿರುವುದಲ್ಲ. ಕಾಂಗ್ರೆಸ್‌ನ ದುರಾಡಳಿತ, ಭ್ರಷ್ಟಾಚಾರ ವಿರೋಧಿಸಿ ನಾವು ಅಧಿಕಾರಕ್ಕೇರಿದೆವು. ಆದರೆ ನೀವು ಎಲ್ಲವನ್ನೂ ಮರೆತುಬಿಟ್ಟಿದ್ದೀರಿ. ನಿಮ್ಮ ಸುತ್ತಮುತ್ತ ಎಡಬಿಡಂಗಿಗಳೇ ತುಂಬಿಕೊಂಡಿದ್ದಾರೆ. ನಿಮ್ಮ ಸ್ವಾರ್ಥ ರಾಜಕೀಯಕ್ಕೆ ಧಿಕ್ಕಾರವಿದೆ... ಎಂದು ಹಲವು ಅಂಶಗಳನ್ನು ಉಲ್ಲೇಖಿಸಿ ಅಸಮಾಧಾನದ ಕಿಡಿ ಹೊತ್ತಿಸಿದ್ದರು. ಪತ್ರದ ಕೊನೆ ಪುಟದಲ್ಲಿ, ಇನ್ನು ನಿಮ್ಮೊಂದಿಗೆ ಇರುವುದು ಉಚಿತವಲ್ಲ. ನಿಮ್ಮಿಂದ ಪ್ರತ್ಯೇಕಗೊಂಡು ರಾಜನೀತಿ ನಡೆಸುವುದೇ ಸೂಕ್ತ ಎಂದೂ ತಿಳಿಸಿದ್ದರು.

ಹಾಗಂತ, ತಕ್ಷಣಕ್ಕೇ ನಿತೀಶ್ ಪಕ್ಷದಿಂದ ಹೊರನಡೆದಿರಲಿಲ್ಲ. ಲಾಲೂ ಪ್ರಭಾವಲಯದಾಚೆಗೆ ನಾನು ಬೆಳೆಯಬಲ್ಲೆನೇ? ರಾಜಕೀಯ ಪಕ್ಷವಿಲ್ಲದೆ ಇದು ಸಾಧ್ಯವೇ? ಸಣ್ಣ ಸಮುದಾಯದಿಂದ ಬಂದ ನನ್ನನ್ನು ಜನ ಸ್ವೀಕರಿಸಬಹುದೇ ಎಂಬೆಲ್ಲಾ ಪ್ರಶ್ನೆಗಳು ಆಗಿಂದಾಗ್ಗೆ ಅವರನ್ನು ಕಾಡುತ್ತಿದ್ದವು. ಹೀಗಾಗಿ, ಸುಮಾರು 2 ವರ್ಷಗಳ ಕಾಲ ಲಾಲೂ ಜತೆ ಮಾತುಕತೆ ಇಲ್ಲದೆಯೇ ಪಕ್ಷದಲ್ಲಿ ಮುಂದುವರಿದಿದ್ದರು. ನಿತೀಶ್-ಲಾಲೂ ವೈಮನಸ್ಯಗಳನ್ನು ಜಾರ್ಜ್ ಫರ್ನಾಂಡಿಸ್ ಕೂಡ ಅರಿತಿದ್ದರು ಮತ್ತು ಜಾರ್ಜ್‌ರನ್ನೂ ಲಾಲೂ ಕಡೆಗಣಿಸಿದ್ದರು. ಅವಕಾಶ ಸಿಕ್ಕಾಗಲೆಲ್ಲಾ ನಿತೀಶ್ ಮತ್ತು ಶರದ್ ಯಾದವ್ ಬಗ್ಗೆ ವ್ಯಂಗ್ಯೋಕ್ತಿಗಳ ಮೂಲಕ ಲೇವಡಿ ಮಾಡುತ್ತಿದ್ದ ಲಾಲೂ, 1993ರಲ್ಲಿ ಏರ್ಪಡಿಸಿದ್ದ ಗರೀಬ್ ರ‍್ಯಾಲಿಗೆ (ಬಡವರ ರ‍್ಯಾಲಿ) ನಿತೀಶ್‌ರನ್ನು ವೇದಿಕೆಗೆ ಆಹ್ವಾನಿಸಲಿಲ್ಲ. ಪೋಸ್ಟರ್‌ಗಳಲ್ಲಿ ಉದ್ದೇಶಪೂರ್ವಕವಾಗಿ ನಿತೀಶ್ ಮುಖವನ್ನು ಏರ್‌ಬ್ರಶ್‌ನಿಂದ ಅಳಿಸಿ ಹಾಕಲಾಗುತ್ತಿತ್ತು. ಹೀಗಿದ್ದರೂ, ಆಪ್ತ ಗ್ಯಾನೇಂದ್ರ ಸಿಂಗ್ (ಗ್ಯಾನು) ಜತೆ ಮಾರುತಿ ಕಾರ್‌ನಲ್ಲಿ ಗಾಂಧಿ ಮೈದಾನಕ್ಕೆ ತೆರಳಿದ್ದ ನಿತೀಶ್, ಕಾರಿನೊಳಗೆ ಕುಳಿತೇ ಸಮಾವೇಶ ವೀಕ್ಷಿಸಿದ್ದರು. ನೀವು ವೇದಿಕೆಯಲ್ಲಿರಬೇಕಿತ್ತು ಎಂದು ಹಿತೈಷಿಗಳು ಹೇಳುತ್ತಿದ್ದಾಗ, ನಿತೀಶ್ ಮೌನವೇ ಉತ್ತರವಾಗುತ್ತಿತ್ತು. ಪಕ್ಷದಿಂದ ಹೊರನಡೆಯುವ ಮನಸ್ಸಿದ್ದರೂ, ಬಹಿರಂಗ ಸಮರ ಸಾರಲು ನಿತೀಶ್ ಹಿಂಜರಿಯುತ್ತಿದ್ದರು. ಬಹುಶಃ ಅದಕ್ಕೆ ಮತ್ತಷ್ಟು ರಾಜಕೀಯ ಶಕ್ತಿ-ಸಾಮರ್ಥ್ಯ ಬೇಕು ಎಂದು ಅನ್ನಿಸಿದ್ದಿರಬಹುದು.

ಆದರೆ, 1994ರಲ್ಲಿ ಪಟ್ನಾಕ್ಕೆ ಸನಿಹವಿರುವ ವೈಶಾಲಿ ಲೋಕಸಭೆ ಉಪ ಚುನಾವಣೆಯಲ್ಲಿ ಬಿಹಾರ ಪೀಪಲ್ಸ್ ಪಾರ್ಟಿ ಅಭ್ಯರ್ಥಿಯಾಗಿದ್ದ ಗ್ಯಾಂಗ್‌ಸ್ಟರ್ ಆನಂದ್ ಮೋಹನ್ ಸಿಂಗ್ ಪತ್ನಿ ಲವ್ಲಿ ಆನಂದ್ ವಿರುದ್ಧ ಮಾಜಿ ಸಿಎಂ ಸತ್ಯೇಂದ್ರ ನಾರಾಯಣ ಸಿನ್ಹಾ ಪತ್ನಿ ಕಿಶೋರಿ ಸಿನ್ಹಾರನ್ನು ಜನತಾದಳದ ಅಭ್ಯರ್ಥಿಯಾಗಿ ಲಾಲೂ ಕಣಕ್ಕಿಳಿಸಿದ್ದರು. ಲಾಲೂಗೆ ಬಿಸಿಮುಟ್ಟಿಸಬೇಕೆಂದೇ ಪ್ರಚಾರದಿಂದ ದೂರ ಉಳಿದ ನಿತೀಶ್, ಯಾದವೇತರ ಸಮುದಾಯಗಳು ಲವ್ಲಿ ಆನಂದ್ ಪರ ಒಗ್ಗೂಡುವ ಸಂದೇಶ ರವಾನಿಸಿದ್ದರು. ಉಪ ಚುನಾವಣೆ ಸೋತು ಲಾಲೂ ತೀವ್ರ ಮುಜುಗರ ಅನುಭವಿಸಿದ್ದರು. ನಿತೀಶ್ ಹಿರಿ ಹಿಗ್ಗಿದ್ದರು ಮತ್ತು ಲಾಲೂ ವಿರೋಧಿ ದಳ ಸ್ಥಾಪಿಸುವ ಲೆಕ್ಕಾಚಾರಕ್ಕೆ ಬಲ ಬಂದಿತ್ತು.

1994ರ ಫೆಬ್ರವರಿ ತಿಂಗಳು. ಲಾಲೂ ಆಡಳಿತ ನೀತಿ ಖಂಡಿಸಿ ಬಿಹಾರದ ಕುರ್ಮಿ-ಕೊಯೆರಿ ಸಮಾಜದವರು ಭಾರೀ ಸಂಖ್ಯೆಯಲ್ಲಿ ಪಟ್ನಾದ ಗಾಂಧಿ ಮೈದಾನದ ಕುರ್ಮಿ ಚೇತನಾ ರ‍್ಯಾಲಿಯಲ್ಲಿ ಜಮಾಯಿಸಿದ್ದರು. ಈ ರ‍್ಯಾಲಿಯನ್ನು ನಿತೀಶ್ ಆಯೋಜಿಸದಿದ್ದರೂ, ನಿತೀಶ್ ಪಾಲ್ಗೊಳ್ಳಬೇಕೆಂದು ಹಿತೈಷಿಗಳು ಬಯಸಿದ್ದರು. ಹೋಗಬೇಕೆ/ಬೇಡವೇ ಎನ್ನುವುದನ್ನು ಅಳೆದುತೂಗಿ, ಕೊನೆಗೂ ಮಧ್ಯಾಹ್ನದ ವೇಳೆ ಗಾಂಧಿ ಮೈದಾನ ತಲುಪಿದ್ದ ನಿತೀಶ್, ಭೀಕ್ ನಹೀ ಹಿಸ್ಸೇದಾರಿ ಚಾಹಿಯೇ (ಭಿಕ್ಷೆಯಲ್ಲ, ನ್ಯಾಯಯುತ ಪಾಲು ಬೇಕು) ಎಂದು ಲಾಲೂ ವಿರೋಧಿ ಬಂಡಾಯವನ್ನು ಅಧಿಕೃತವಾಗಿ ಮೊಳಗಿದ್ದರು. ಅಲ್ಲಿಗೆ, ಜನತಾದಳ ತೊರೆಯುವ ತಮ್ಮ ನಿಲುವನ್ನು ದೃಢಪಡಿಸಿದ್ದರು.

ಅಂದಿನ ಕುರ್ಮಿ-ಕೊಯೆರಿ ಸಮಾಜದ ಒಗ್ಗಟ್ಟು ನಿತೀಶ್ ನೈತಿಕ ಸ್ಥೈರ್ಯವನ್ನು ಹಿಗ್ಗಿಸಿತ್ತು. ನಿತೀಶ್ ಒಳಗಿದ್ದ ನಾಯಕನನ್ನು ಅದು ಬಡಿದೆಬ್ಬಿಸಿತ್ತು. ಹೀಗಿದ್ದರೂ, ನಿತೀಶ್ ತುಮ್ ಆಗೇ ಬಢೋ, ಹಮ್ ತುಮಾರೇ ಸಾಥ್ ಹೇ ಎಂದು ಕುರ್ಮಿಗಳು ಘೋಷಣೆ ಕೂಗಿದರೂ, ರಾಜ್ಯವ್ಯಾಪ್ತಿ ಜನರು ನಮ್ಮನ್ನು ಸ್ವೀಕರಿಸುತ್ತಾರಾ? ನನ್ನ ಹಿಂದೆ ಎಷ್ಟು ಮಂದಿ ಬಂದಾರು ಎಂಬ ಪ್ರಶ್ನೆಗಳಿಗೆ ಉತ್ತರ ಸಿಗುತ್ತಿರಲಿಲ್ಲ. ಆದರೂ ಆ ದಿನ ಬಂದೇ ಬಿಟ್ಟಿತ್ತು.

1994, ಏಪ್ರಿಲ್ 21ರಂದು ಜನತಾದಳದ 14 ಸಂಸದರು ಪಕ್ಷದಿಂದ ಹೊರನಡೆದು, ಜನತಾದಳ (ಜಾರ್ಜ್) ಎಂಬ ಹೆಸರಲ್ಲಿ ತಮ್ಮನ್ನು ಗುರುತಿಸಿಕೊಂಡರು. ನಿತೀಶ್ ಬಂಡಾಯಕ್ಕೆ ಜಾರ್ಜ್ ಸಂಪೂರ್ಣ ಬೆಂಬಲವಿತ್ತು ಮತ್ತು ಅದೇ ವರ್ಷದ ಅಕ್ಟೋಬರ್ 19ರಂದು ಸಮತಾ ಪಾರ್ಟಿ ಎಂಬ ಹೊಸ ಪಕ್ಷದ ಘೋಷಣೆಗೆ ಗಾಂಧಿ ಮೈದಾನದಲ್ಲಿ ನಾಯಕರೆಲ್ಲರೂ ಸೇರಿದ್ದರು. ಬಿಹಾರ್ ಬಚಾವೋ ಆಂದೋಲನಕ್ಕೆ ಕರೆಕೊಟ್ಟರು. ಆದರೆ, 1995ರ ವಿಧಾನಸಭೆ ಚುನಾವಣೆಯಲ್ಲಿ ಸಮತಾಪಾರ್ಟಿಯು ಜನತಾದಳ ವಿರುದ್ಧ ಹೀನಾಯ ಸೋಲು ಕಂಡಿತು. 324 ಕ್ಷೇತ್ರಗಳಲ್ಲಿ 310ರಲ್ಲಿ ಸ್ಪರ್ಧಿಸಿದ್ದ ಸಮತಾಪಾರ್ಟಿಯ ಅಭ್ಯರ್ಥಿಗಳು, 271ರಲ್ಲಿ ಠೇವಣಿ ಕಳೆದುಕೊಂಡಿದ್ದರು. 2000ದ ಚುನಾವಣೆಯಲ್ಲಿ ಸಮತಾಪಾರ್ಟಿ, ಶರದ್ ಯಾದವ್ ನೇತೃತ್ವದ ಜನತಾದಳ ಮತ್ತು ಬಿಜೆಪಿ ಒಳಗೊಂಡ ಎನ್‌ಡಿಎ ಮೈತ್ರಿಕೂಟ ಸರ್ಕಾರ ರಚನೆಗೆ ಮುಂದಾಗಿ ನಿತೀಶ್ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದರು. ಆದರೆ, ಅವರ ಅವಧಿ 7 ದಿನಕ್ಕಷ್ಟೇ ಸೀಮಿತವಾಗಿತ್ತು. 2005ರಲ್ಲಿ ಬಿಜೆಪಿ ಬೆಂಬಲದಿಂದ ಗೆದ್ದು ನಗೆಬೀರಿದ ನಿತೀಶ್, ಬಿಜೆಪಿಯ ಎಲ್.ಕೆ. ಆಡ್ವಾಣಿ, ವಾಜಪೇಯಿ, ಅರುಣ್ ಜೇಟ್ಲಿ ಅವರೊಂದಿಗೆ ಉತ್ತಮ ಬಾಂಧವ್ಯ ಸಾಧಿಸಿದ್ದರು.

ಬಿಹಾರದಲ್ಲಿ ಬಿಜೆಪಿ ಜತೆ ಕೈಜೋಡಿಸುವ ಮುನ್ನ 1992ರ ರಥಯಾತ್ರೆ ವಿರೋಧಿ ವಿಚಾರಗಳು ಕಣ್ಣಮುಂದೆ ಆವರಿಸಿದರೂ, ಲಾಲೂ ಕಟ್ಟಿ ಹಾಕಲು ಬಿಜೆಪಿ ಸಖ್ಯ ಅನಿವಾರ್ಯ ಎನ್ನುವುದು ನಿತೀಶ್ ಅರ್ಥವಾಗಿತ್ತು. ಹಾಗಾಗಿ, 1996ರಲ್ಲಿ ಬಿಜೆಪಿ-ಸಮತಾಪಾರ್ಟಿ ಒಟ್ಟಾಗಿ ಲೋಕಸಭೆ ಚುನಾವಣೆ ಸ್ಪರ್ಧಿಸಿದ್ದವು. ಸೆಕ್ಯುಲರ್ ವಾದಿ ಎನ್ನುವ ನೀವು 2002ರ ಗುಜರಾತ್ ಗಲಭೆ ಬಳಿಕವೂ, ಎನ್‌ಡಿಎ ಸರ್ಕಾರದಲ್ಲಿ ಏಕೆ ಮುಂದುವರಿಯುತ್ತಿದ್ದೀರಿ ಎಂಬ ಪ್ರಶ್ನೆಗಳೆದುರಾದಾಗ ಮೋದಿಯವರಿಗೆ ವಾಜಪೇಯಿಯವರು ರಾಜಧರ್ಮ ಬೋಧನೆ ಮಾಡಿದ್ದಾರೆ. ಅಷ್ಟಕ್ಕೂ ನಾನು ವಾಜಪೇಯಿ ನೇತೃತ್ವದ ಸರ್ಕಾರದಲ್ಲಿದ್ದೇನೆಯೇ ವಿನಃ ಮೋದಿ ನೇತೃತ್ವದ್ದಲ್ಲ ಎಂದಿದ್ದರು ನಿತೀಶ್.

ಬಿಹಾರದ ವಿಕಾಸ್ ಪುರುಷ್ ಎಂದು ಖ್ಯಾತಿ ಪಡೆದ ಬಳಿಕ ಸಮಕಾಲೀನರಾಗಿದ್ದ ನರೇಂದ್ರ ಮೋದಿ ಪ್ರಧಾನಿಯಾಗುವುದನ್ನು ಒಪ್ಪಲು ನಿತೀಶ್‌ಗೆ ಪ್ರತಿಷ್ಠೆ ಅಡ್ಡಿಯಾಗಿತ್ತು. 2013ರಲ್ಲಿ ಜೆಡಿಯು-ಬಿಜೆಪಿ ಮೈತ್ರಿ ಮುರಿದುಬಿತ್ತು. 2015ರಲ್ಲಿ ಲಾಲೂ ಜತೆ ಸೇರಿ ಸರ್ಕಾರ ರಚಿಸಿದರೂ, 2017ರಲ್ಲಿ ಲಾಲೂ ಸಹವಾಸ ಸಾಕೆಂದು ಎನ್‌ಡಿಎ ಸೇರಿಕೊಂಡರು. ಮೋದಿ ನಾಯಕತ್ವ ಒಪ್ಪಿಕೊಂಡರು. 2020ರಲ್ಲಿ ವಿಧಾನಸಭೆ ಗೆದ್ದರೂ, ಬಿಜೆಪಿ ಜತೆ ಮುನಿಸಿಕೊಂಡು 2022ರಲ್ಲಿ ಮತ್ತೆ ಆರ್‌ಜೆಡಿ ಜತೆ ಕೈಜೋಡಿಸಿದರು. 2024ರಲ್ಲಿ ಎನ್‌ಡಿಎ ಮನೆಯೊಳಗೆ ಮತ್ತೆ ಸೇರ್ಪಡೆಯಾದರು. 2025ರಲ್ಲಿ ಮತ್ತೆ ದಿಗ್ವಿಜಯ. ಒಟ್ಟಿನಲ್ಲಿ ಹಲವು ಏಳುಬೀಳುಗಳನ್ನೊಳಗೊಂಡ ನಿತೀಶ್ ರಾಜಕೀಯ ಪಯಣ ರಾಜಕೀಯ ಆಸಕ್ತರಿಗೆ ಅಧ್ಯಯನ ಯೋಗ್ಯ.

ರಾಜಕೀಯ ಮಿತ್ರರನ್ನು ಆಗಿಂದಾಗ್ಗೆ ಬದಲಿಸುತ್ತಾ, 2005ರಿಂದ ಮುಖ್ಯಮಂತ್ರಿ ಕುರ್ಚಿ ಬಿಗಿಹಿಡಿದು ಕುಳಿತು ಬಿಹಾರವನ್ನು ಅರಾಜಕತೆಯ ಸಂಕೋಲೆಯಿಂದ ಬಿಡಿಸಿ, ಅಲ್ಲಿನ ಜನರಿಗೆ ವಿಕಾಸ ಎಂದರೆ ಹೀಗೆ ಎನ್ನುವುದನ್ನು ತೋರಿಸಿದ್ದು ನಿತೀಶ್. ರಾಜ್ಯದ ಅತಿ ಹಿಂದುಳಿದವರನ್ನು (ಇಬಿಸಿ) ಗುರುತಿಸಿದರು. ಶಾಲೆಗೆ ಹೋಗುವ ಬಡ ಬಾಲಕಿಯರಿಗೆ ಸೈಕಲ್ ಕೊಡಿಸಿ, ಅವರಲ್ಲಿ ಮನೋಬಲ ವೃದ್ಧಿಸಿದರು. ಮಹಿಳೆಯರಿಗೆ ಕಡಿಮೆ ದರದಲ್ಲಿ ಬ್ಯಾಟರಿ ರಿಕ್ಷಾಗಳನ್ನು ಕೊಡಿಸಿ, ಸ್ವಾವಲಂಬಿಗಳನ್ನಾಗಿ ಮಾಡಿದರು. ರಸ್ತೆ ನಿರ್ಮಾಣದ ಹರಿಕಾರರಾದರು. ಗಂಡಂದಿರ ಶರಾಬು ಚಟದಿಂದ ನಾಶವಾಗುತ್ತಿದ್ದ ಸಂಸಾರಗಳನ್ನು ತಕ್ಕಮಟ್ಟಿಗೆ ಸರಿಪಡಿಸಲು ಪ್ರಾಮಾಣಿಕ ಪ್ರಯತ್ನ ಮಾಡಿದರು. ಅಭಿಮಾನಿಗಳು, ಮುಖ್ಯವಾಗಿ ಮಹಿಳೆಯರು ನಿತೀಶ್ ನಮ್ಮ ಪಾಲಿನ ದೇವರು ಎನ್ನುತ್ತಾ ಅವರ ದೆಹಲಿ ಪ್ರಯಾಣ ವಿರೋಧಿಸುತ್ತಿರುವುದು ಸುಮ್ಮನೆಯೇನಲ್ಲ ಅಲ್ಲವೇ?

ಯುದ್ಧೋನ್ಮಾದ, ಇದ್ದವರ ಹುಚ್ಚಾಟ-ಇಲ್ಲದವರ ಗೋಳಾಟ

ಯುದ್ಧ ಯಾರಿಗೆ ಬೇಕು ಎಂಬುದು ಮಿಲಿಯನ್ ಡಾಲರ್ ಪ್ರಶ್ನೆ. ಜನಸಾಮಾನ್ಯರಿಗಂತೂ ಖಂಡಿತವಾಗಿಯೂ ಅಲ್ಲ. ಯುದ್ಧದಲ್ಲಿ ಭಾಗಿಯಾಗಿರುವವರೂ ಸಹ ಯುದ್ಧವನ್ನು ಮುಂದುವರಿಸುತ್ತಾ ಶಾಂತಿ, ಸೌಹಾರ್ದತೆ ಕುರಿತು ಮಾತನಾಡುತ್ತಿರುವುದು ಆಶ್ಚರ್ಯಕರ ಸಂಗತಿ. ಯುದ್ಧವೆಂಬುದು ವಿಜಯಪತಾಕೆ ಹಾರಿಸುವುದಕ್ಕೆ ಅಥವಾ ಪ್ರತಿಷ್ಠೆಯ ಸಂಕೇತವೂ ಅಲ್ಲ.

ಪ್ರಸ್ತುತ

ಜಯಶ್ರೀ ಕಾಲ್ಕುಂದ್ರಿ, ಬೆಂಗಳೂರು
vveditoped@gmail.com

ಯುದ್ಧ ಮುಂದುವರಿಯುತ್ತಿರುವುದನ್ನು ಕುರಿತು, ಮಾಧ್ಯಮಗಳಲ್ಲಿ ಬಿತ್ತರವಾಗುತ್ತಿರುವ ವಿಷಯಗಳು ಜನಸಾಮಾನ್ಯರ ನಿದ್ದೆಗೆಡಿಸಿವೆ. ಯುದ್ಧದಲ್ಲಿ ಭಾಗಿಯಾಗಿರುವ ರಾಷ್ಟ್ರಗಳ ಮನಸ್ಥಿತಿಯೇ ರಣಾಂಗಣವಾಗಿರುವಾಗ, ಸಮರ ಸಂಧಾನದ ಸಾಧ್ಯತೆ ಗೋಚರವಾಗುವುದು ಅಸಾಧ್ಯವೆಂಬ ಮಾತಿನಲ್ಲಿ ಸತ್ಯಾಂಶವಿಲ್ಲದಿಲ್ಲ. ಸಮರಕ್ಕೆ ವಿರಾಮ ಘೋಷಿಸಿದಂತೆ ನಟಿಸುವುದು, ಯುದ್ಧ ಕೊನೆಗೊಳಿಸುವುದಾಗಿ ಹೇಳಿಕೆಗಳನ್ನು ಕೊಡುವುದು, ಮಾತುಕತೆಗೆ ಸಿದ್ಧವೆಂದು ಹುಸಿ ಭರವಸೆ ನೀಡುವುದು, ಯುದ್ಧವನ್ನು ಕೊನೆಗೊಳಿಸಲು ತಮ್ಮ ದೇಶಕ್ಕೆ ಮಾತ್ರ ಉಪಯುಕ್ತವಾಗುವಂತಹ ಷರತ್ತುಗಳನ್ನು ವಿಧಿಸುವುದು, ತಾವು ವಿಧಿಸುವ ಷರತ್ತುಗಳನ್ನು ತಿರಸ್ಕರಿಸಿದರೆ ಅಂತಹ ದೇಶವನ್ನೇ ನಾಶ ಮಾಡುವುದಾಗಿ ಬೆದರಿಕೆಯೊಡ್ಡುವುದು ಮುಂತಾದ ಸಮರ ಪ್ರಹಸನಗಳಿಗೆ ಇಡೀ ವಿಶ್ವವೇ ಸಾಕ್ಷಿಯಾಗಿದೆ.

ಯುದ್ಧ ಯಾರಿಗೆ ಬೇಕು ಎಂಬುದು ಮಿಲಿಯನ್ ಡಾಲರ್ ಪ್ರಶ್ನೆ. ಜನಸಾಮಾನ್ಯರಿಗಂತೂ ಖಂಡಿತವಾಗಿಯೂ ಅಲ್ಲ. ಯುದ್ಧದಲ್ಲಿ ಭಾಗಿಯಾಗಿರುವವರೂ ಸಹ ಯುದ್ಧವನ್ನು ಮುಂದುವರಿಸುತ್ತಾ ಶಾಂತಿ, ಸಹನೆ ಮತ್ತು ಸೌಹಾರ್ದತೆಗಳನ್ನು ಕುರಿತು ಮಾತನಾಡುತ್ತಿರುವುದು ನಿಜಕ್ಕೂ ಆಶ್ಚರ್ಯಕರ ಸಂಗತಿ. ಯುದ್ಧವೆಂಬುದು ಕೇವಲ ವಿಜಯಪತಾಕೆ ಹಾರಿಸುವುದಕ್ಕೆ ಮಾತ್ರವಲ್ಲ ಅಥವಾ ಕೇವಲ ಪ್ರತಿಷ್ಠೆಯ ಸಂಕೇತವೂ ಅಲ್ಲ. ತನ್ನನ್ನು ತಾನು ಹಿರಿಯಣ್ಣ ಇಲ್ಲವೇ ದೊಡ್ಡಣ್ಣನಂತೆ ಭಾವಿಸಿಕೊಂಡ ದೇಶವೊಂದು ತನ್ನ ಮಾತುಗಳನ್ನು ಮಿಕ್ಕ ದೇಶಗಳು ಪಾಲಿಸುವುದು ಕಡ್ಡಾಯ ಎಂದು ಆದೇಶಿಸುವ ಸಮಯವೊಂದಿತ್ತು. ಈಗ ಕಾಲ ಬದಲಾಗಿದೆ. ದೊಡ್ಡಣ್ಣನ ಮಾತುಗಳೆಲ್ಲವೂ ಸ್ವಾರ್ಥಪೂರಿತವೆಂದು ಮನಗಂಡಿರುವ ಇನ್ನಿತರ ದೇಶಗಳು ಆತನಿಗೆ ಸಡ್ಡು ಹೊಡೆದು ನಿಂತಿವೆ. ಗೋದಾಮಿನಲ್ಲಿ ಶಸ್ತ್ರಾಸ್ತ್ರಗಳನ್ನು ಧಾನ್ಯಗಳಂತೆ ತುಂಬಿರಿಸಿಕೊಂಡಿರುವ ದೇಶವೊಂದು, ತನ್ನನ್ನು ಮೀರಿ ಬೆಳೆಯುತ್ತಿರುವ ದೇಶಗಳನ್ನು ನೋಡಿ, ಸಹಿಸಲಾಗದೆ, ಕಿರುಕುಳ ನೀಡುವುದು ಅಥವಾ ಯುದ್ಧಕ್ಕೆ ತಾನು ಸಿದ್ಧವೆಂದು ಘೋಷಿಸುತ್ತಿದೆ. ಅಣ್ವಸ್ತ್ರಗಳನ್ನು ಇರಿಸಿಕೊಳ್ಳುವ ಪರಮಾಧಿಕಾರ ಕೇವಲ ನನ್ನದು, ಇತರ ದೇಶಗಳು ಇರಿಸಿಕೊಳ್ಳುವಂತಿಲ್ಲ ಎನ್ನುವ ದೇಶಗಳೂ ಸಹ ಯುದ್ಧಕ್ಕೆ ಸಜ್ಜಾಗುತ್ತಿವೆ. ಇತರ ದೇಶಗಳಲ್ಲಿರುವ ಸಂಪನ್ಮೂಲಗಳ ಮೇಲೆ ತನಗೆ ಪರಮಾಧಿಕಾರವಿರಬೇಕೆಂಬ ದೇಶಗಳು ರಣಾಂಗಣವನ್ನು ಪ್ರವೇಶಿಸುತ್ತಿವೆ. ದೇಶವೊಂದು ಹಬ್ಬದ ಸಂಭ್ರಮದಲ್ಲಿದ್ದಾಗ, ಅಲ್ಲಿಯ ಅಮಾಯಕರ ಪ್ರಾಣಗಳನ್ನು ತೆಗೆದು, ಸಾಮಾನ್ಯ ನಾಗರಿಕರನ್ನು ಒತ್ತೆಯಾಳಾಗಿರಿಸಿಕೊಂಡು ಕ್ರೌರ್ಯ ಮೆರೆದ ನೆರೆಯ ದೇಶಗಳೂ ಯುದ್ಧಕ್ಕೇ ಆಹ್ವಾನವಿತ್ತಿವೆ. ವಿಸ್ತಾರವಾದವನ್ನೇ ಬಂಡವಾಳವಾಗಿಸಿಕೊಂಡು ನೆರೆದೇಶಗಳ ಶಾಂತಿಗೆ ಕುಂದುಂಟು ಮಾಡುವ ದೇಶಗಳೂ ಸಹ ಯುದ್ಧೋನ್ಮಾದಿಗಳೇ. ಬಲಿಷ್ಠ ರಾಷ್ಟ್ರದ ಜೊತೆ, ನೇರ ಸಂಘರ್ಷ ಸಾಧ್ಯವಿಲ್ಲವೆಂದು ಮನಗಂಡು, ಆ ದೇಶಕ್ಕೆ ಉಗ್ರವಾದಿಗಳನ್ನು ಹಾಗೂ ನುಸುಳುಕೋರರನ್ನು ರವಾನಿಸುವ ದೇಶಗಳೂ ಸಹ ಯುದ್ಧಾಕಾಂಕ್ಷಿಗಳೇ. ಮನುಷ್ಯನ ದೇಹದ ಬಣ್ಣವೂ ಯುದ್ಧಕ್ಕೆ ನಾಂದಿಯಾಗಬಹುದು. ಇನ್ನು ಕೆಲ ದೇಶಗಳು, ಇತರ ದೇಶಗಳ ಬಗ್ಗೆ ವೈಯಕ್ತಿಕ ಮತ್ತು ಸಾಮೂಹಿಕ ಅಹಂಕಾರದಿಂದ ಯುದ್ಧವನ್ನು ಆರಂಭಿಸುತ್ತವೆ. ನೆರೆದೇಶಗಳ ಜನರ ಅಕ್ರಮ ಪ್ರವೇಶದ ಸಮಸ್ಯೆಯಿಂದ ಉಂಟಾಗುತ್ತಿರುವ ಜನಸಂಖ್ಯಾ ಅಸಮತೋಲನವೂ ಯುದ್ಧಕ್ಕೆ ಕಾರಣವೆನಿಸಬಹುದು. ಧರ್ಮಾಂಧತೆಯೂ ಯುದ್ಧಕ್ಕೆ ನಾಂದಿ ಹಾಡಬಲ್ಲದು. ಯುದ್ಧದಲ್ಲಿ ಗೆದ್ದವರು ದೊಡ್ಡಣ್ಣನೆನಿಸಿಕೊಂಡರೆ, ಗೆಲ್ಲಲಾಗದವರು ಸೋತು ಸುಣ್ಣವಾಗಿ ಬಿಡುತ್ತಾರೆ. ವಾರಗಳು, ತಿಂಗಳುಗಳು ಮಾತ್ರವಲ್ಲ, ವರ್ಷಗಟ್ಟಲೆ ಕಾದಾಡಿದ ದೇಶಗಳಿವೆ. ಕೆಲವೊಂದು

ದೇಶಗಳಿಗೆ ಯುದ್ಧದ ಸಮಯದಲ್ಲಿ, ಒಂದು ದೇಶದಿಂದುಂಟಾದ ಗಾಯ ಮಾಯುವಷ್ಟರಲ್ಲಿ, ಮತ್ತೊಂದು ದೇಶದ ಇರಿತವನ್ನು ಎದುರಿಸುವ ಸಮಸ್ಯೆ ಕಾಡುತ್ತದೆ.

ಯುದ್ಧಗಳಿಂದ ಈ ಜಗತ್ತು ನೆಮ್ಮದಿಯಾಗಿರಲು ಸಾಧ್ಯವಿಲ್ಲವೆಂಬ ಮಾತು ಸರ್ವವಿದಿತ. 1914ರಿಂದ 1918ರವರೆಗೆ ನಡೆದ ಮೊದಲ ಮಹಾಯುದ್ಧದಲ್ಲಿ ಸತ್ತವರು 22 ಮಿಲಿಯನ್ (2.2 ಕೋಟಿ) ಜನರು ಮತ್ತು 1939ರಿಂದ 1945ರವರೆಗೆ ನಡೆದ ಎರಡನೆಯ ಮಹಾಯುದ್ಧದಲ್ಲಿ, ಪ್ರಾಣ ಕಳೆದುಕೊಂಡವರ ಸಂಖ್ಯೆ ಸುಮಾರು 75 ಮಿಲಿಯನ್ (7.5 ಕೋಟಿ) ಎಂದು ಅಂಕಿ-ಅಂಶಗಳು ನಿರೂಪಿಸುತ್ತವೆ. ಬಾಂಗ್ಲಾದೇಶ ವಿಮೋಚನಾ ಯುದ್ಧದಲ್ಲಿ (1971) ಸುಮಾರು ಮೂರು ಲಕ್ಷ ಜನ ಸಾವಿಗೀಡಾಗಿದ್ದಾರೆ. ಇಷ್ಟು ಮಾತ್ರವಲ್ಲ, ಬಗೆಹರಿಯದೆ ಉಳಿದಿರುವ ಪ್ಯಾಲೆಸ್ತೀನ್-ಇಸ್ರೇಲ್ ಸಂಘರ್ಷದಲ್ಲಿ ಇತ್ತೀಚಿನ ವರ್ಷಗಳಲ್ಲಿ ಸತ್ತವರು ಸುಮಾರು 55,000 ಜನ.

ಯುದ್ಧವೊಂದು ಮಾನವತೆಯ ಮಹಾ ವೈಫಲ್ಯವೆಂಬುದು ಸರ್ವವಿದಿತ. ಯುದ್ಧವು ತಕ್ಷಣದ ನ್ಯಾಯವನ್ನು ಬಯಸುವವರಿಗೆ ಭಾವನಾತ್ಮಕವಾಗಿ ತೃಪ್ತಿಕರವೆನಿಸಿದರೂ, ಅದು ವಿನಾಶಕಾರಿ ವೆಚ್ಚಗಳನ್ನು ಹೊತ್ತು ತರುತ್ತದೆಂಬ ಮಾತನ್ನೂ ಅಲ್ಲಗಳೆಯುವಂತಿಲ್ಲ. ಯುದ್ಧ ಆರಂಭವಾಗುತ್ತಿದ್ದಂತೆಯೇ ಹಲವಾರು ದೇಶಗಳ ನಾಗರಿಕರ ಬದುಕು ಅಸ್ತವ್ಯಸ್ತವಾಗಿಬಿಡುತ್ತದೆ. ಶಾಲೆಗಳ ಬಾಗಿಲು ಮುಚ್ಚಿ ಮಕ್ಕಳ ಕಿಲಕಿಲ ನಗು ಮಾಯವಾಗುತ್ತದೆ. ಇನ್ನೊಂದು ದೇಶ ಅನುಭವಿಸುತ್ತಿರುವ ಆರ್ಥಿಕ ಸಂಕಷ್ಟ, ನೋವು ಮತ್ತು ಆತಂಕಗಳನ್ನೇ ಬಂಡವಾಳವಾಗಿಸಿಕೊಂಡು ಆ ದೇಶದ ಯುವಕರನ್ನು ದಾರಿ ತಪ್ಪಿಸಿ, ಗ್ರಹ ಯುದ್ಧವೊಂದನ್ನು ಸೃಷ್ಟಿಸಿ, ಬಂಡವಾಳ ಮಾಡಿಕೊಳ್ಳುವ ಸ್ವಾರ್ಥ ಬುದ್ಧಿಯ ದೇಶದ ಆಳುಗರನ್ನು ಏನೆಂದು ಕರೆಯುವುದು? ಅಂತಹ ದೇಶಗಳ ನಾಗರಿಕರ ಬದುಕೇ ಚೆಲ್ಲಾಪಿಲ್ಲಿಯಾಗುತ್ತದೆ. ಆರ್ಥಿಕತೆ ನೆಲ ಕಚ್ಚುತ್ತದೆ. ಉದ್ಯೋಗಾವಕಾಶಗಳು ಸಿಗುವುದಿಲ್ಲ. ಅಲ್ಲಿ ನೆಲೆಸಿರುವ ಅಲ್ಪಸಂಖ್ಯಾತ ವಿದೇಶಿ ನಾಗರಿಕರ ಜೀವನವೂ ದುರ್ಭರವಾಗಿಬಿಡುತ್ತದೆ.

ಯುದ್ಧ ಆರಂಭವಾದ ದಿನವನ್ನು ನಿಖರವಾಗಿ ಹೇಳಬಹುದೇ ಹೊರತು ಅಂತ್ಯವಾಗುವ ದಿನವನ್ನಲ್ಲ. ಯುದ್ಧ ಭೀತಿ ಮಾತ್ರದಿಂದಲೇ, ದೇಶದ ಸಂಪನ್ಮೂಲಗಳು, ಯುದ್ಧ ಸಾಮಗ್ರಿಗಳಿಗೆ, ಮತ್ತು ಶಸ್ತ್ರಾಸ್ತ್ರಗಳಿಗಾಗಿ ವೆಚ್ಚವಾಗಿ ಆರ್ಥಿಕತೆ ಸಂಪೂರ್ಣವಾಗಿ ಕುಂಠಿತಗೊಳ್ಳುತ್ತದೆ. ಮನೆಗಳು, ಶಾಲೆಗಳು, ಆಸ್ಪತ್ರೆಗಳು ಮತ್ತು ರಸ್ತೆಗಳು ಬಾಂಬ್ ದಾಳಿಗೆ ತುತ್ತಾಗಿ ನಾಶವಾಗುತ್ತವೆ. ಆರ್ಥಿಕತೆ ಮಾತ್ರವಲ್ಲ, ಯುದ್ಧದಲ್ಲಿ ಬಳಸುವ ರಾಸಾಯನಿಕ ಮತ್ತು ಬಾಂಬ್‌ಗಳಿಂದ ಪರಿಸರ ಮಾಲಿನ್ಯ ಉಂಟಾಗಿ, ಪ್ರಾಣಿ ಮತ್ತು ಸಸ್ಯವರ್ಗಗಳ ಮೇಲೆ ದೀರ್ಘಕಾಲೀನ ದುಷ್ಪರಿಣಾಮ ಬೀರುತ್ತದೆ. ಲಕ್ಷಾಂತರ ಜನಸಾಮಾನ್ಯರು ಮನೆ, ಮಠಗಳನ್ನು ಕಳೆದುಕೊಂಡು, ಸಂಕಷ್ಟ ಎದುರಿಸುತ್ತಾರೆ. ಯುದ್ಧವು ಕೊನೆಗೊಂಡರೂ ಯುದ್ಧಪೀಡಿತ ದೇಶಗಳ ಮಧ್ಯೆ ಆಕ್ರೋಶ ಮತ್ತು ಸೇಡಿನ ಜ್ವಾಲೆಗಳು ಹೊಗೆಯಾಡುತ್ತಲೇ ಇರುತ್ತವೆ. ಯುದ್ಧದಲ್ಲಿ ಗೆದ್ದವರದೂ ನಿಜವಾದ ಗೆಲುವೇನೂ ಆಗಿರುವುದಿಲ್ಲ. ಅವರು ಹೆಚ್ಚಿನ ಪ್ರಮಾಣದಲ್ಲಿ ಆರ್ಥಿಕತೆಯ ನಷ್ಟವನ್ನು ಅನುಭವಿಸುತ್ತಾರೆ. ಜನಸಾಮಾನ್ಯರು ತಾವು ಗಳಿಸಿ, ಉಳಿಸಿದ ಹಣದಿಂದ ಕಟ್ಟಿದ ಕನಸಿನ ಮನೆ ಮಣ್ಣಿನ ಪಾಲಾದಾಗ ಅವರು ಅನುಭವಿಸುವ ವೇದನೆಯನ್ನು ಶಬ್ದಗಳಲ್ಲಿ ಹಿಡಿದಿಡಲಾಗದು. ಎರಡೂ ದೇಶಗಳ ಗಡಿ ಭಾಗ ಮತ್ತು ದಂಡೆಗಳಲ್ಲಿ ಸಂಸ್ಕಾರವಿಲ್ಲದೆ ಬಿದ್ದಿರುವ ಹೆಣಗಳ ರಾಶಿಯನ್ನು ಕಂಡಾಗ ಪ್ರಜ್ಞಾವಂತ ನಾಗರಿಕರ ಕಣ್ಣುಗಳಲ್ಲಿ ಕಂಬನಿ ಜಿನುಗದಿರಲಾರದು. ಯುದ್ಧ ಕಾಲದಲ್ಲಿ ಬಳಕೆಯಾಗುವ ಕ್ಷಿಪಣಿಗಳು, ಬಾಂಬು ಮತ್ತು ಬುಲೆಟ್ಟುಗಳಿಂದ ಭೂಮಿಯು ಬರಡಾಗುತ್ತದೆ. ಯುದ್ಧಗ್ರಸ್ತ ದೇಶದ ಜನರು ಜೀವಿಸಲು ಅನ್ಯ ದೇಶಗಳಿಗೆ ಗುಳೆ ಹೋಗಿ, ವಲಸಿಗರೆಂಬ ಹಣೆಪಟ್ಟಿ ಹೊತ್ತು ತಿರಸ್ಕಾರಕ್ಕೆ ಒಳಗಾಗುತ್ತಾರೆ.

ಎಲ್ಲೋ ದೂರದಲ್ಲಿ ಸಂಭವಿಸುತ್ತಿರುವ ಯುದ್ಧ ನಮ್ಮ ಅಡುಗೆಯ ಮನೆಯ ಮೇಲೂ ಪರಿಣಾಮ ಬೀರಿದೆ. ನಮ್ಮ ದೇಶಕ್ಕೆ ಸಂಬಂಧವೇ ಇಲ್ಲವೆನಿಸಿರುವ ಈ ಯುದ್ಧ, ನಮ್ಮ ಮೇಲೆ ಗಂಭೀರ ಆರ್ಥಿಕ ಮತ್ತು ಸಾಮಾಜಿಕ ಪರಿಣಾಮಗಳನ್ನು ಬೀರಿದೆ. ಅಡುಗೆ ಅನಿಲದ ಸಮಸ್ಯೆ ಹೆಚ್ಚಿದೆ. ತೈಲ ಬೆಲೆ ಏರುತ್ತಿದೆ. ರುಪಾಯಿ ಮೌಲ್ಯ ಕುಸಿತ ಕಂಡಿದೆ. ಸರಕು ಸಾಗಾಣೆಯ ವೆಚ್ಚದಲ್ಲಿ ಏರಿಕೆ ಕಂಡಿದೆ. ರಫ್ತು ಕುಸಿತದಿಂದ ಕೃಷಿ ಮತ್ತು ಕೈಗಾರಿಕೆಗಳು ನಷ್ಟ ಅನುಭವಿಸುತ್ತಿವೆ. ಯುದ್ಧ ಮುಗಿದದ ನಂತರ ಮೂಡುವುದು ಅಸಹನೀಯ ನೀರವತೆ ಮಾತ್ರ. ಯುದ್ಧದ ಪರಿಣಾಮಗಳನ್ನು ಬಹುಕಾಲ ಅನುಭವಿಸಬೇಕಾಗಬಹುದೆಂದು ಯುದ್ಧಪೀಡಿತ ದೇಶಗಳಿಗೆ ಚೆನ್ನಾಗಿ ಗೊತ್ತು. ಆದರೆ ಯುದ್ಧವನ್ನು ಕೊನೆಗಾಣಿಸುವ ಮನಸ್ಥಿತಿಯಲ್ಲಿ ಅಂತಹ ದೇಶಗಳ ಸರ್ಕಾರಗಳಿಲ್ಲವೆಂಬ ಮಾತೂ ಸಹ ಗಮನಾರ್ಹ. ನನ್ನ ಒಂದು ಕಣ್ಣು ಹೋದರೆ ತೊಂದರೆಯಿಲ್ಲ. ವಿರೋಧಿಗಳ ಎರಡೂ ಕಣ್ಣುಗಳನ್ನೂ ತೆಗೆದೇ ಸಿದ್ಧ, ಎಂಬ ಯುದ್ಧೋನ್ಮಾದಿಗಳಿಗೆ ಶಾಂತಿ ಮಂತ್ರ ರುಚಿಸುವುದೇ? ಇಷ್ಟಕ್ಕೂ ಯುದ್ಧದಲ್ಲಿ ಗೆಲ್ಲುವವರು ಆಯುಧ ವ್ಯಾಪಾರಿಗಳು ಮತ್ತು ಸಾವಿನ ವ್ಯಾಪಾರಿಗಳು ಮಾತ್ರ. ಯುದ್ಧೋನ್ಮಾದ ಉಲ್ಬಣವಾಗದಂತೆ ಜನಸಾಮಾನ್ಯರು ಎಚ್ಚರಿಕೆ ವಹಿಸುವುದೂ ಅತ್ಯಗತ್ಯ. ಯುದ್ಧವನ್ನು ಕುರಿತು ಪ್ರಚೋದಕ ಸುಳ್ಳು ಸುದ್ದಿಗಳನ್ನು ಹರಡುವ ಸಾಮಾಜಿಕ ಜಾಲತಾಣಗಳ ಬಗ್ಗೆಯೂ ಗಮನವಿರಿಸುವುದಗತ್ಯ. ವಾಹಿನಿಗಳಲ್ಲಿ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಅನಪೇಕ್ಷಿತ ಸಂದೇಶಗಳನ್ನು ಹರಿಬಿಡುತ್ತಾರೆ.

ತಲೆಮಾರುಗಳ ಸುಖೀ ಜೀವನವನ್ನು ಕಸಿದುಕೊಂಡು, ಮೂಲಸೌಕರ್ಯಗಳನ್ನು ನಾಶಪಡಿಸಿ, ಅಭಿವೃದ್ಧಿಯನ್ನು ದಶಕಗಳಷ್ಟು ಹಿಂದೆ ತಳ್ಳುವುದು ಮಾತ್ರವಲ್ಲ, ಪ್ರೀತಿಪಾತ್ರರನ್ನು ಕಳೆದುಕೊಂಡ ಕುಟುಂಬಗಳ ದುಃಖವನ್ನು ಯಾವ ಪರಿಹಾರದ ಹಣವೂ ತುಂಬಿಕೊಡಲಾರದು. ಅನಾಗರಿಕ ಮನುಷ್ಯರಾದರೂ ಬದುಕು ನಡೆಸಬಲ್ಲರು. ಮನುಷ್ಯತ್ವವೇ ಇಲ್ಲದವರು ಬೆಚ್ಚಗಿನ ಅರಮನೆಯಲ್ಲಿ ಕುಳಿತು ಯುದ್ಧವನ್ನು ನಿಯಂತ್ರಿಸುತ್ತಾರೆ. ಶಸ್ತ್ರಾಸ್ತ್ರಗಳ ಸಂಗ್ರಹಕಾರರ ಹುಚ್ಚಾಟ ಮತ್ತು ಇಲ್ಲದವರ ಗೋಳಾಟವೆನಿಸುವ ಹಾಗೂ ವಿನಾಶಕ್ಕೆ ಕಾರಣವಾಗುವ ಯುದ್ಧೋನ್ಮಾದವೆಂಬುದು, ಆವೇಶ, ಆಕ್ರೋಶಗಳಲ್ಲಿ ತೆಗೆದುಕೊಳ್ಳುವ ನಿರ್ಧಾರವೇ ಸರಿ. ಯುದ್ಧವೆಂಬುದು ಕಟ್ಟಕಡೆಯ ಆಯ್ಕೆಯಾಗಿರಲಿ.

ಭಟ್ಟರ್ ಸ್ಕಾಚ್

- **ಜನಾರ್ದನ ಕುದೂರು, ಮಂಗಳೂರು**
ಭಟ್ರೇ, ಅಶೋಕ ಭಟ್ಟರ ಯಕ್ಷಗಾನಕ್ಕೆ ಹೋಗುವಾಗ ಏನು ಮಾಡಬೇಕು?
– **ವಿಶಲ್ ಅನ್ನು ಮನೆಯಲ್ಲೇ ಬಿಟ್ಟು ಹೋಗಬೇಕು!**

- **ಸ್ನೇಹ ಬಂಡೂರು, (ಇಮೇಲ್ ಮೂಲಕ)**
ಭಟ್ರೇ, ಯಕ್ಷಗಾನದಲ್ಲಿ ಶಿಳ್ಳೆ ಹೊಡೆದ ಪ್ರೇಕ್ಷಕನಿಗೆ ಆ ಕ್ಷಣದಲ್ಲಿ ಏನನ್ನಿಸಿತು?
– **ತಾನು 'ಯಕ್ಷಗಾನ' ನೋಡಲು ಬಂದಿದ್ದೇನೋ ಅಥವಾ 'ಪೊಲೀಸ್ ಟ್ರೈನಿಂಗ್'ಗೆ ಬಂದಿದ್ದೇನೋ ಅಂತ ಡೌಟ್ ಬಂತು!**

- **ರಾಜಿ, ಬೆಂಗಳೂರು**
ಭಟ್ರೇ, ನೀವು ಅವಿವೇಕಿ ಎಂದು ಬೈದಿದ್ದು ಈ 'ಶಿಳ್ಳೆಖ್ಯಾತ'ನಿಗೇ ಅಲ್ಲವಾ?
– **ಆದರೆ ಬೈದಿದ್ದನ್ನು ಸಾಬೀತು ಮಾಡ್ತಾನೆ ಎಂಬುದು ಗೊತ್ತಿರಲಿಲ್ಲ!**

- **ಲಾವಣ್ಯ, (ಇಮೇಲ್ ಮೂಲಕ)**
ಭಟ್ರೇ, ಸೂರ್ಯ ಯಾಕೆ ಸಂಜೆ ಹೊತ್ತು ಮನೆಗೆ ಹೋಗ್ತಾನೆ?
– **ಡೇ ಶಿಫ್ಟ್ ಮುಗಿಸಿ ನೈಟ್ ಶಿಫ್ಟ್‌ಗೆ ಚಂದಿರನಿಗೆ ಚಾನ್ಸ್ ಕೊಡಬೇಕಲ್ಲ!?**

- **ನೂತನ ರಾವ್, ಬೆಂಗಳೂರು**
ಭಟ್ರೇ, ರಸ್ತೆಗೆ ಯಾಕೆ ಕೊನೆಯಿಲ್ಲ?
– **ಎಲ್ಲಿಗೆ ಹೋಗಬೇಕು ಅಂತ ಅನ್ನೋದನ್ನು ಅದು ಇನ್ನು ಡಿಸೈಡ್ ಮಾಡಿಲ್ಲ!**

- **ರಮೇಶ ವಿಸ್ತಾರೆ, (ಇಮೇಲ್ ಮೂಲಕ)**
ಭಟ್ರೇ, ಕ್ರಿಕೆಟ್‌ನಲ್ಲಿ ಬ್ಯಾಟರ್ ಯಾಕೆ ಹೆಲ್ಮೆಟ್ ಹಾಕ್ತಾನೆ?
– **ಬಾಲ್‌ಗೆ ಅವನ ತಲೆ ಮೇಲೆ ಪ್ರೀತಿ ಜಾಸ್ತಿ ಅಂತ ಗೊತ್ತಿರುತ್ತದೆ!**

- **ಚಂದ್ರು, ಹಾಸನ**
ಭಟ್ರೇ, ಗಾಳಿಪಟದ ಅಸಲಿ ಸಮಸ್ಯೆ ಏನು?
– **ಯಾರೋ ತನ್ನ ಬಾಲವನ್ನು ಹಿಡಿದು ಜಗ್ಗುತ್ತಾರೆ ಅಂತ ಅದಕ್ಕೆ ಸದಾ ಕಿರಿಕಿರಿ!**

- **ಕೆ.ಸಿ.ಪಾಂಡು, ಕೆಂಗೇರಿ**
ಭಟ್ರೇ, ಅಡುಗೆ ಮನೆಯಲ್ಲಿ ಯಾವ ವಸ್ತು ಸದಾ ಕೋಪದಲ್ಲಿರುತ್ತದೆ?
– **ಸಾಸಿವೆ, ಯಾಕಂದ್ರೆ ಒಗ್ಗರಣೆ ಹಾಕಿದ ಕೂಡಲೇ ಸಿಡಿಯುತ್ತದಲ್ಲ?!**

- **ವಿನಾಯಕ ಹಿರೇಮಠ, ಬಾಗಲಕೋಟ**
ಭಟ್ರೇ, ಕನ್ನಡಿ ಮುಂದೆ ನಿಂತು ಕಣ್ಣು ಮುಚ್ಚಿದರೆ ಏನಾಗುತ್ತದೆ?
– **ನೀವು ಕಾಣದಿದ್ದರೂ, ಕನ್ನಡಿ ಮಾತ್ರ ನಿಮ್ಮನ್ನ ನೋಡ್ತಾ ಇರುತ್ತದೆ!**

- **ನಾರಾಯಣ ಸಿ.ಮಾನೆ, (ಇಮೇಲ್ ಮೂಲಕ)**
ಭಟ್ರೇ, ಡಾಕ್ಟರ್ ಯಾಕೆ ಎಲ್ಲರನ್ನೂ ನಾಲಿಗೆ ತೋರಿಸಿ ಅಂತಾರೆ?
– **ಅದೇ ವಾಸಿ, ಬೇರೆಯದನ್ನು ತೋರಿಸಿ ಅಂದಿದ್ರೆ?!**

- **ನವೀನ್ ಭಟ್, ಹೊಸನಗರ**
ಭಟ್ರೇ, ಪರೀಕ್ಷೆ ಬರೆಯುವಾಗ ವಿದ್ಯಾರ್ಥಿಗಳು ಯಾಕೆ ಆಕಾಶದ ಕಡೆ ನೋಡುತ್ತಾರೆ?
– **ಯಾಕಂದ್ರೆ ಎಲ್ಲೋ ಓದಿದ ಉತ್ತರ ಆಕಾಶಕ್ಕೆ ಹಾರಿಹೋಗಿರುತ್ತದೆ ಅಲ್ವಾ, ಅದನ್ನ ಹುಡುಕಲು!**

ಗುಡ್ ಬೈ ನಕ್ಸಲಿಸಂ, ಆರ್‌ಐಪಿ ಮಾವೋಯಿಸಂ

2026, ಮಾರ್ಚ್ 31ರಂದು ಭಾರತವು ನಕ್ಸಲ್ ಮುಕ್ತ ಎಂದು ಕೇಂದ್ರ ಗೃಹಸಚಿವ ಅಮಿತ್ ಶಾ ಘೋಷಿಸಿದ್ದಾರೆ. ದಶಕಗಳಿಂದ ದೇಶವನ್ನು ಕಾಡಿದ ಪಿಡುಗಿದು. ಮಾವೋವಾದದಿಂದ ದೇಶದ ವಿವಿಧೆಡೆಯ ದಟ್ಟ ಕಾಡಿನ ಸುತ್ತಮುತ್ತಲ ಪ್ರದೇಶದಲ್ಲಿ ಅಭಿವೃದ್ಧಿ ಮರೀಚಿಕೆಯಾಗಿ ಉಳಿದಿತ್ತು. ಅಲ್ಲಿನ ಜನರು ಮುಖ್ಯವಾಹಿನಿಗೆ ಬರಲು ನಕ್ಸಲಿಸಂ ಅಡ್ಡಿಯಾಗಿತ್ತು. ಈಗ ಎಲ್ಲವೂ ಅಂತ್ಯಗೊಂಡಿದೆ!



ಮುಕ್ತಮುಕ್ತ
ರವೀ ಸಜಂಗದ್ದೆ
vveditoped@gmail.com

ಭಾರತವು ಉತ್ಕೃಷ್ಟ, ವಿಶಾಲ ಮತ್ತು ಸಮೃದ್ಧ ಅರಣ್ಯ ಸಂಪತ್ತನ್ನು ಹೊಂದಿದೆ. ನಮ್ಮಲ್ಲಿನ ಈ ದಟ್ಟ ಅರಣ್ಯಗಳ ಗರ್ಭದಲ್ಲಿ ಸ್ವಾತಂತ್ರ್ಯೋತ್ತರದ ದಶಕಗಳಿಂದ ಕೇಳಿಬರುತ್ತಿದ್ದ ಗುಂಡಿನ ಸದ್ದುಗಳು ಈಗ ಬಹುತೇಕ ಶಾಂತವಾಗಿವೆ! ಒಂದು ಕಾಲದಲ್ಲಿ ದೇಶದ ಭೌಗೋಳಿಕ ನಕ್ಷೆಯ ಮೇಲೆ ರಕ್ತಸಿಕ್ತ ಗೆರೆಯಂತೆ ಮೂಡಿದ್ದ ಮಾವೋವಾದದ ಸಿದ್ಧಾಂತ ಈಗ ಇತಿಹಾಸದ ಪುಟಗಳಲ್ಲಿ ಮರೆಯಾಗಿದೆ. ಈ ನಕ್ಸಲಿಸಂ ಭಾರತದ ಆಂತರಿಕ ಭದ್ರತೆಗೆ, ಹಳ್ಳಿಗಳ ಮೂಲ ಸೌಕರ್ಯ ಅಭಿವೃದ್ಧಿ ಮತ್ತು ಜನರ ಜೀವನ ಮಟ್ಟ ಸುಧಾರಿಸುವ ಯೋಜನೆಗಳ ಅನುಷ್ಠಾನಕ್ಕೆ ಅತಿದೊಡ್ಡ ಶತ್ರುವಾಗಿತ್ತು. ಕೇಂದ್ರದ ದೃಢ ಸಂಕಲ್ಪ, ನಿರಂತರ ಹೋರಾಟ ಮತ್ತು ನಿರ್ದಾಕ್ಷಿಣ್ಯ 'ನಕ್ಸಲಿಸಂ ದಮನ ನೀತಿ'ಯ ಫಲಶ್ರುತಿಯಾಗಿ ಆ ಸಶಸ್ತ್ರ ದಂಗೆ ಸಂಪೂರ್ಣ ಮಣಿದು-ಅಳಿದು 2026ರ ಮಾರ್ಚ್ 31ಕ್ಕೆ ಭಾರತವೀಗ 'ನಕ್ಸಲ್ ಮುಕ್ತ ದೇಶ'.

1967ರಲ್ಲಿ ಪಶ್ಚಿಮ ಬಂಗಾಳದ ನಕ್ಸಲ್ಬಾರಿಯಲ್ಲಿ ಮೊಳಕೆಯೊಡೆದ ನಕ್ಸಲಿಸಂ ಹೆಸರಿನ ಸಶಸ್ತ್ರ ದಂಗೆಯು ಒಂದು ಕಾಲದಲ್ಲಿ ನೇಪಾಳದ ಪಶುಪತಿಯಿಂದ ಆಂಧ್ರದ ತಿರುಪತಿಯವರೆಗೆ ವ್ಯಾಪಿಸಿತ್ತು! ಭೂವಿವಾದದ ಕಾರಣಕ್ಕೆ ರೈತನೊಬ್ಬನಿಗೆ ಸ್ಥಳೀಯ ಭೂಮಾಲೀಕ ಥಳಿಸಿದ ಕ್ಷುಲ್ಲಕ ಘಟನೆಯಿಂದ ಈ ಚಳುವಳಿ ಜನ್ಮ ತಾಳಿತು. ಕ್ರಮೇಣವಾಗಿ ಅದು ಛತ್ತೀಸ್‌ಗಢ, ಒಡಿಶಾ, ಆಂಧ್ರ, ಮಹಾರಾಷ್ಟ್ರ, ಕರ್ನಾಟಕ ಸೇರಿದಂತೆ ದೇಶದ 12 ರಾಜ್ಯಗಳ ಸುಮಾರು 200ಕ್ಕೂ ಹೆಚ್ಚು ಜಿಲ್ಲೆಗಳಿಗೆ ವ್ಯಾಪಿಸಿತು. ಈ 'ಕೆಂಪು ನೆರಳು' ಸಾವಿರಾರು ಅಮಾಯಕ-ನತದೃಷ್ಟ ಕುಟುಂಬಗಳ ಕಣ್ಣೀರನ್ನು ಆಪೋಶನ ತೆಗೆದುಕೊಂಡು ಹಲವರ ಬದುಕು ನರಕಸದೃಶವಾಯಿತು.

ನಕ್ಸಲಿಸಂ ಹಿಂಸಾಚಾರದಿಂದ ಭಾರತ ಅನುಭವಿಸಿದ ಕಷ್ಟ-ನಷ್ಟ ಅಪಾರ. ನಕ್ಸಲ್-ಸರಕಾರ-ಸ್ಥಳೀಯರ ನಡುವಿನ ಸಂಘರ್ಷದಲ್ಲಿ ಸುಮಾರು 15,000ಕ್ಕೂ ಹೆಚ್ಚು ಅಮಾಯಕ ನಾಗರಿಕರು ಮತ್ತು 5,000ಕ್ಕೂ ಹೆಚ್ಚು ಭದ್ರತಾ ಸಿಬ್ಬಂದಿ ಪ್ರಾಣ ಕಳೆದುಕೊಂಡಿದ್ದಾರೆ. ನಕ್ಸಲ್ ಪೀಡಿತ ಪ್ರದೇಶಗಳ ಅಭಿವೃದ್ಧಿಯು ದಶಕಗಳ ಕಾಲ ಬಹುತೇಕ ಮರೀಚಿಕೆಯಾಗಿ ಉಳಿದದ್ದು ನಿಜಕ್ಕೂ ಖೇದಕರ! ರೈಲ್ವೆ ಹಳಿಗಳು, ಮೊಬೈಲ್ ಟವರ್‌ಗಳು, ಶಾಲಾ ಕಟ್ಟಡಗಳು, ತಮ್ಮ ವಾಸ್ತವ್ಯ ಇರುವ ಹಳ್ಳಿಗಳಿಗೆ/ಪ್ರದೇಶಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳು ಮತ್ತು ಸೇತುವೆಗಳನ್ನು ಗುರಿಯಾಗಿಸಿಕೊಂಡು ನಕ್ಸಲರು ಸ್ಫೋಟಿಸಿ, ಧ್ವಂಸಗೊಳಿಸುತ್ತಿದ್ದರು. ನಾಗರಿಕ ಸಮಾಜದ ಈ ಎಲ್ಲಾ ವ್ಯವಸ್ಥೆಗಳು ನಕ್ಸಲ್ ಚಟುವಟಿಕೆಗಳನ್ನು ಹತ್ತಿಕ್ಕುವ ಹುನ್ನಾರ ಮತ್ತು ಸ್ಥಳೀಯರನ್ನು ತಮ್ಮ ಪರಿಧಿಯಿಂದ ವಿಮುಖಗೊಳಿಸುವ ಯೋಜನೆ ಎಂದು ನಂಬಿದ್ದರು.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕಳೆದ ಹನ್ನೆರಡು ವರ್ಷಗಳಲ್ಲಿ ಸಾವಿರಾರು ಕೋಟಿ ರೂಪಾಯಿಗಳನ್ನು ಭದ್ರತಾ ಸಂಬಂಧಿತ ವೆಚ್ಚ (SRE), ನಕ್ಸಲ್ ನಿಗ್ರಹ ಕಾರ್ಯಾಚರಣೆ ಮತ್ತು ಮೂಲಸೌಕರ್ಯ ರಕ್ಷಣೆ-ಅಭಿವೃದ್ಧಿಗಾಗಿ ವ್ಯಯಿಸಿವೆ. ನಕ್ಸಲರಿಂದ ವಶಪಡಿಸಿಕೊಳ್ಳಲಾದ ಶಸ್ತ್ರಾಸ್ತ್ರಗಳ ಪಟ್ಟಿಯಲ್ಲಿ ಸಾವಿರಾರು ಎಕೆ-47ಗಳು, ಇನ್ಸಾಸ್ ರೈಫಲ್‌ಗಳು, ಅತ್ಯಾಧುನಿಕ ಐಇಡಿ ಸ್ಫೋಟಕಗಳು ಮತ್ತು ಗ್ರೆನೇಡ್ ಲಾಂಚರ್‌ಗಳು ಇದ್ದವು ಎನ್ನುವ ಅಂಶ ಈ ಸಿದ್ಧಾಂತದ ಆಳ-ಅಗಲ-ಭೀಕರತೆಗೆ ಸಾಕ್ಷಿ.

2000ರಿಂದ 2020ರವರೆಗಿನ ಸಮಯದಲ್ಲಿ ದೇಶದಲ್ಲಿ ನಕ್ಸಲಿಸಂ ಉಚ್ಛ್ರಾಯ ಸ್ಥಿತಿಗೆ ತಲುಪಿತ್ತು. ಒಂದು ಸಿದ್ಧಾಂತದ ಹೆಸರಿನಲ್ಲಿ ಅದೆಷ್ಟೋ ಜನರು ಹತರಾಗಿದ್ದಾರೆ, ಶಾಶ್ವತವಾಗಿ ಅಂಗವಿಕಲರಾಗಿದ್ದಾರೆ, ಬಂಧುಗಳನ್ನು ಕಳಕೊಂಡಿದ್ದಾರೆ! ಕರ್ನಾಟಕದ ಗಡಿ ಭಾಗಕ್ಕೆ ಹೊಂದಿಕೊಂಡಿರುವ ಆಂಧ್ರದ ಭಾಗದಲ್ಲಿ ಪ್ರಭಾವಿಯಾಗಿದ್ದ ಟಿ.ಪರಮೇಶ್ವರಪ್ಪ 1990ರ ದಶಕದಲ್ಲಿ ನಕ್ಸಲರಿಂದ ಹತರಾದರು. ಮುಂದೆ ಆಂಧ್ರದ ದೃಗ್ಗಿ ಶ್ರೀನಿವಾಸ್ ರಾವ್ (2004) ಅವರನ್ನು ತನ್ನ ನಿವಾಸದ ಬಳಿಯೇ ನಕ್ಸಲರು ಗುಂಡಿಕ್ಕಿ ಕೊಂದರು. ತೆಲಂಗಾಣದ ಪ್ರಭಾವಿ ನಾಯಕ-ಶಾಸಕ ಸಿ.ನರಸಿಂಹ ರೆಡ್ಡಿಯವರನ್ನು (2005) ಹತ್ಯೆ ಮಾಡಲಾಯಿತು. 2013ರಲ್ಲಿ ನಡೆದ ಝೀರಮ್ ಘಾಟಿ ದಾಳಿಯು ಅತ್ಯಂತ ಭೀಕರವಾಗಿತ್ತು! ಇಲ್ಲಿ ಮಹೇಂದ್ರ ಕರ್ಮ, ವಿದ್ಯಾಚರಣ್ ಶುಕ್ಲಾ ಮತ್ತು ನಂದಕುಮಾರ್ ಪಟೇಲ್ ಸೇರಿದಂತೆ ಛತ್ತೀಸ್‌ಗಢದ ಇಡೀ ಕಾಂಗ್ರೆಸ್ ನಾಯಕತ್ವವನ್ನೇ ಮಾವೋವಾದಿಗಳು ಬಲಿಪಡೆದು ಕೇಕೆ ಹಾಕಿದರು. ನಕ್ಸಲ್ ಚಳುವಳಿ ತೀವ್ರವಾಗಿದ್ದ ರಾಜ್ಯಗಳ ಅನೇಕ ರಾಜಕೀಯ ಮುಖಂಡರು ಇವರ ದಾಳಿಗೆ ಬಲಿಯಾಗಿದ್ದಾರೆ. ಕರ್ನಾಟಕದ ಶೇಷಪ್ಪ ಮತ್ತು ಸವಿತಾ ಎಂಬುವರು 'ನಕ್ಸಲರಿಗೆ ಮಾಹಿತಿ ನೀಡುತ್ತಿದ್ದಾರೆ' ಎಂಬ ಸಂಶಯದ ಮೇಲೆ ಹತರಾದ ಸಾಮಾನ್ಯ ನಾಗರಿಕರು!

ಕರ್ನಾಟಕದಲ್ಲೂ ನಕ್ಸಲಿಸಂ ಚಟುವಟಿಕೆಗಳು 2000ದಲ್ಲಿ ಪಶ್ಚಿಮ ಘಟ್ಟಗಳ ಮಡಿಲಲ್ಲಿ ಅಂಬೆಗಾಲಿಟ್ಟವು! ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ಭೂಮಿ ಹಕ್ಕುಗಳ ಹೋರಾಟವನ್ನು ದಾಳವಾಗಿ ಬಳಸಿಕೊಂಡ ಮಾವೋವಾದಿಗಳು 'ಮಲೆನಾಡು ತಮ್ಮ ನೆಲೆ' ಎಂದು ಘೋಷಿಸಿಕೊಂಡರು. ಆರಂಭದಲ್ಲಿ ಇದು ರೈತರು ಮತ್ತು ಬುಡಕಟ್ಟು ಪ್ರದೇಶಗಳ ಜನರ ಪರವಾದ ಹೋರಾಟದಂತೆ ಕಂಡರೂ, ಅದು ಅತ್ಯಂತ ವೇಗವಾಗಿ 'ಬಂದೂಕು ಹಿಡಿದು ಹೋರಾಡುವ ಉಗ್ರ ಮಾದರಿಯ ಸಿದ್ಧಾಂತ'ವಾಗಿ ರೂಪುಗೊಂಡಿತು. 2005ರಲ್ಲಿ ಕಾರ್ಕಳದ ಬಳಿ ನಡೆದ ಸಾಕೇತ್ ರಾಜನ್ (ಪ್ರೇಮ್) ಎನ್‌ಕೌಂಟರ್ ಕರ್ನಾಟಕದ ನಕ್ಸಲ್ ಇತಿಹಾಸದಲ್ಲಿ ಪ್ರಮುಖ ಘಟನೆ-ತಿರುವು. ನಕ್ಸಲ್ ಚಳುವಳಿಯಲ್ಲಿ ಮಹಿಳೆಯರ ಸಂಖ್ಯೆಯೂ ಗಮನಾರ್ಹವಾಗಿತ್ತು! ಕವಿತಾ, ಶಾಂತಿ (ಪಾರ್ವತಿ), ಲಲಿತಾ ಮುಂತಾದ ಮಹಿಳಾ ಕಮಾಂಡರ್‌ಗಳು ಎನ್‌ಕೌಂಟರ್‌ನಲ್ಲಿ ಹತರಾದರು. ಇತ್ತೀಚೆಗೆ ಮಲೆನಾಡಿನ ಭಾಗದಲ್ಲಿ ಶ್ರೀಮತಿ ಎಂಬ ಮಹಿಳಾ ನಕ್ಸಲ್ ಹತರಾದದ್ದು ಕರ್ನಾಟಕದಲ್ಲಿ ಸಂಘಟನೆಯ ಸಂವಹನ ಮತ್ತು ನೈತಿಕ ಸ್ಥೈರ್ಯವನ್ನು ಕುಗ್ಗಿಸಿತು. ಹಜೇಮಾ, ದಿನಕರನ್ ಮುಂತಾದ ತೀವ್ರಗಾಮಿ ನಾಯಕರ ನಿರ್ಮೂಲನೆ ಮತ್ತು ಸರ್ಕಾರದ ಪರಿಣಾಮಕಾರಿ 'ನಕ್ಸಲ್ ಪುನರ್ವಸತಿ ನೀತಿ'ಯಿಂದಾಗಿ ಬಹುತೇಕ ರಾಜ್ಯಗಳು ಈಗ ನಕ್ಸಲ್ ಮುಕ್ತ.

ಕೇಂದ್ರ ಗೃಹ ಸಚಿವಾಲಯವು ನಕ್ಸಲಿಸಂ ಅನ್ನು ಬೇರುಸಹಿತ ಕಿತ್ತೊಗೆಯಲು ಮಾರ್ಚ್ 31, 2026 ಅಂತಿಮ ಗಡುವು ಎಂದು ಘೋಷಿಸಿತ್ತು. ಈ ಗಡುವು ಕೇವಲ ಘೋಷಣೆಯಾಗಿ ಉಳಿಯದೆ ಸತತವಾದ ಕೂಂಬಿಂಗ್, ಕಾರ್ಯಾಚರಣೆ, ವ್ಯೂಹಾತ್ಮಕ ಯೋಜನೆಗಳಿಂದಾಗಿ ನಕ್ಸಲರ ನೈತಿಕ ಸ್ಥೈರ್ಯ ಕುಗ್ಗಿಸುವ ನಿರಂತರ ಕಾರ್ಯಕ್ಷಮತೆಯು ಈಗಿನ 'ನಕ್ಸಲ್ ಮುಕ್ತ ಹಂತ'ವನ್ನು ತಲುಪಲು ನೆರವಾಯಿತು. ಗೃಹ ಸಚಿವ ಅಮಿತ್ ಶಾ ಅವರು ಮಾವೋವಾದಿಗಳಿಗೆ 'ಶಸ್ತ್ರತ್ಯಜಿಸಿ ಮುಖ್ಯವಾಹಿನಿಗೆ ಬನ್ನಿ, ಇಲ್ಲದಿದ್ದರೆ ಭದ್ರತಾ ಪಡೆಗಳ ನಿರ್ದಾಕ್ಷಿಣ್ಯ ಕ್ರಮವನ್ನು ಎದುರಿಸಿ' ಎಂದು ತಿಂಗಳುಗಳ ಹಿಂದೆ ಎಚ್ಚರಿಕೆ ನೀಡಿದ್ದರ ಪರಿಣಾಮ, ಸಾವಿಗೆ ಹೆದರಿದ ಹಲವಾರು ನಕ್ಸಲರು ಶರಣಾದರು. ಕೇಂದ್ರ ಸರ್ಕಾರ ರೂಪಿಸಿದ 'ಸಮಾಧಾನ್' (SAMADHAN) ಕಾರ್ಯತಂತ್ರವು ನಕ್ಸಲರ ಆರ್ಥಿಕ ಮತ್ತು ಶಸ್ತ್ರಾಸ್ತ್ರ ಮೂಲಗಳನ್ನು ನಿವಾಳಿಸಿತು!

ಕೆಲ ದಿನಗಳ ಹಿಂದೆ ಛತ್ತೀಸ್‌ಗಢದ ಬಸ್ತಾರ್ ಪ್ರದೇಶದ ಪಾಪಾ ರಾವ್ ಮತ್ತು ಸುಕ್ರು ಹೆಸರಿನ ಭಯಾನಕ-ಹಿರಿಯ ಇಬ್ಬರು ಮಾವೋವಾದಿ ಕಮಾಂಡರ್‌ಗಳು, ಎಂಟು ಮಹಿಳಾ ಮಾವೋವಾದಿಗಳೊಂದಿಗೆ ಒಟ್ಟು 17 ನಕ್ಸಲರು ಸರ್ಕಾರಕ್ಕೆ ಶರಣಾದರು. ಇದು ಭಾರತದಲ್ಲಿ ನಕ್ಸಲ್ ಸಿದ್ಧಾಂತಕ್ಕೆ ಹೊಡೆದ ಕೊನೆಯ ಮೊಳೆ! ಕಳೆದ ಹನ್ನೆರಡು ವರ್ಷಗಳಲ್ಲಿ 10,000ಕ್ಕೂ ಹೆಚ್ಚು ಮತ್ತು ಕಳೆದ ಮೂರು ವರ್ಷಗಳಲ್ಲಿ 4,839 ನಕ್ಸಲೀಯರು ಶಸ್ತ್ರಾಸ್ತ್ರ ತ್ಯಜಿಸಿ ಶರಣಾಗಿದ್ದಾರೆ. 2025ರಲ್ಲಿ ದೇಶಾದ್ಯಂತ 2,300 ಮಂದಿ ನಕ್ಸಲರು ಶರಣಾಗಿದ್ದಾರೆ. 2026ರ ಮೊದಲ ಮೂರು ತಿಂಗಳಲ್ಲಿ ಅಳಿದುಳಿದು ಬಾಕಿಯಾಗಿದ್ದ 650 ಮಾವೋವಾದಿಗಳು 'ಶಸ್ತ್ರ ಸನ್ಯಾಸ' ಪಡೆದು ಮುಖ್ಯವಾಹಿನಿಗೆ ಬಂದಿದ್ದಾರೆ. 2,218 ನಕ್ಸಲಿಯರನ್ನು ಬಂಧಿಸಿ ಜೈಲಿಗೆ ಅಟ್ಟಲಾಗಿದೆ. ಹಲವು ಎನ್‌ಕೌಂಟರ್‌ಗಳಲ್ಲಿ 706 ತೀವ್ರಗಾಮಿಗಳನ್ನು ಹೊಡೆದುರುಳಿಸಲಾಗಿದೆ. ನಕ್ಸಲಿಸಂನಿಂದ ದೇಶಾದ್ಯಂತ 20 ಕೋಟಿಗಿಂತ ಹೆಚ್ಚಿನ ಜನಸಂಖ್ಯೆ ಬಾಧಿತವಾಗಿತ್ತು! ನಕ್ಸಲ್ ಪೀಡಿತ ಪ್ರದೇಶಗಳ ಸುಮಾರು 126 ಜಿಲ್ಲೆಗಳ 'ಕೆಂಪು ಕಾರಿಡಾರ್' ಪ್ರದೇಶಗಳು ಈಗ ಹಸಿರು, ಶಾಂತಿ ಮತ್ತು ನೆಮ್ಮದಿಯಿಂದ ಕೂಡಿದ 'ಅಭಿವೃದ್ಧಿ ಕಾರಿಡಾರ್'ಗಳಾಗಿ ಬದಲಾಗಿವೆ-ಬದಲಾಗುತ್ತಿವೆ!

ನಕ್ಸಲಿಸಂನಿಂದ ಭಾರತ ಮುಕ್ತವಾದ ಸಂದರ್ಭದಲ್ಲಿ ಪ್ರಧಾನಿ ಸನ್ಮಾನ್ಯ ನರೇಂದ್ರ ಮೋದಿ ಮಾತನಾಡುತ್ತಾ 'ನಕ್ಸಲಿಸಂ ಭಾರತದ ಪ್ರಜಾಪ್ರಭುತ್ವದ ಮೇಲಿದ್ದ ಕಪ್ಪು ಚುಕ್ಕೆ. ಅದನ್ನು ತೊಡೆದು ಹಾಕುವುದು ಕೇವಲ ಭದ್ರತೆಯ ಪ್ರಶ್ನೆಯಲ್ಲ, ಬದಲಿಗೆ ಬುಡಕಟ್ಟು ಪ್ರದೇಶಗಳ ಹಳ್ಳಿಗಳಿಗೆ ಅಭಿವೃದ್ಧಿಯನ್ನು ತಲುಪಿಸುವ ನಮ್ಮ ಕರ್ತವ್ಯ ಯೋಜನೆಯ ಭಾಗ. ಭಾರತವು ಈಗ ನಕ್ಸಲ್ ಪಿಡುಗಿನಿಂದ ಮುಕ್ತವಾಗಿದೆ' ಎಂದು ಹೆಮ್ಮೆಯಿಂದ ಹೇಳಿದರು. ತೀವ್ರಗಾಮಿ ನಕ್ಸಲ್ ಚಟುವಟಿಕೆಗಳಿಗೆ ಹೆಸರಾಗಿದ್ದ ಛತ್ತೀಸ್‌ಗಢದ ನಾರಾಯಣಪುರ ಜಿಲ್ಲೆಯ ಅಬುಜ್‌ಮದ್‌ನಂತಹ ದಟ್ಟ-ದುರ್ಗಮ ಅರಣ್ಯ ಪ್ರದೇಶದಲ್ಲೂ ನಕ್ಸಲ್ ಬಾವುಟಗಳು, ನಕ್ಸಲ್ ಪರವಾದ ಘೋಷಣೆಗಳ ಬದಲಾಗಿ ಇಂದು ರಾಷ್ಟ್ರಧ್ವಜ ಹಾರಾಡುತ್ತಿರುವುದು, ರಾಷ್ಟ್ರಗೀತೆ ಅನುರಣಿಸುತ್ತಿರುವುದು ಮಾವೋವಾದವು ಭಾರತದಲ್ಲಿ ಸಂಪೂರ್ಣ ಸೋತುಹೋಗಿ ನಾಗರಿಕತೆ ಮತ್ತು ಸಂವಿಧಾನಬದ್ಧ ಶಾಸನ ಮರುಸ್ಥಾಪನೆಯಾದ ಅದ್ಭುತ ವಿಜಯದ ಸಂಕೇತ!

ಈ ಪ್ರಚಂಡ ಯಶಸ್ಸಿನ ಹಿಂದೆ ಸಿಆರ್‌ಪಿಎಫ್, ಗ್ರೇಹೌಂಡ್ಸ್ ಮತ್ತು ಸ್ಥಳೀಯ ಪ್ರದೇಶಗಳ ಪೊಲೀಸ್ ಪಡೆಗಳ ಅಪ್ರತಿಮ ತ್ಯಾಗ-ಶೌರ್ಯವಿದೆ. ಮಹಾರಾಷ್ಟ್ರದ ಗಡ್ಚಿರೋಲಿ ಮತ್ತು ಛತ್ತೀಸ್‌ಗಢದ ದಾಂತೇವಾಡದಂತಹ ತೀವ್ರ ನಕ್ಸಲ್ ಪೀಡಿತ ಪ್ರದೇಶಗಳಲ್ಲಿ ತಿಂಗಳುಗಳ ಕಾಲ ನಡೆದ ಸರಣಿ ಎನ್‌ಕೌಂಟರ್‌ಗಳು ನಕ್ಸಲ್ ಕೇಂದ್ರ ಸಮಿತಿಯ ಮಾನಸಿಕ ಸ್ಥೈರ್ಯ ಮತ್ತು ಬೆನ್ನೆಲುಬನ್ನೇ ಮುರಿದುವಲ್ಲ! ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಇಲ್ಲಿನ ನಕ್ಸಲ್ ಕರ್ಮಕಾಂಡ ಮತ್ತು ಅವ್ಯವಸ್ಥೆಯನ್ನು ಸರಿಪಡಿಸಲು ಕೇವಲ ಬಂದೂಕಿನಿಂದ ಉತ್ತರಿಸದೆ, ನಕ್ಸಲ್ ಪೀಡಿತ ಪ್ರದೇಶಗಳಲ್ಲಿ ರಸ್ತೆ, ಬ್ಯಾಂಕ್, ಶಾಲೆ, ಪಡಿತರ ವಿತರಣೆ ಮತ್ತಿತರ ಮೂಲಸೌಕರ್ಯಗಳನ್ನು ನಿರಂತರ ಒದಗಿಸುವ ಮೂಲಕ, ಕಾಲಕ್ರಮೇಣ ಸ್ಥಳೀಯರ ಮನ ಗೆದ್ದವು. ಒಂದು ಕಾಲದಲ್ಲಿ ಕೇವಲ ನಕ್ಸಲರಿಗೆ ಮಾತ್ರ ಸಹಕರಿಸುತ್ತಿದ್ದ ಮನಸ್ಥಿತಿ ಮತ್ತು ಪರಿಸ್ಥಿತಿಯಿಂದ ವಿಮುಖರಾಗಿ ಅಲ್ಲಿನ ಜನರು ನಕ್ಸಲಿಸಂ ಹತ್ತಿಕ್ಕಲು ಸರ್ಕಾರಗಳಿಗೆ ನೆರವು ನೀಡಲು ಶುರುಮಾಡಿದರು. 'ಅಭಿವೃದ್ಧಿಯೇ ಅತ್ಯುತ್ತಮ ಅಸ್ತ್ರ' ಎಂಬ ಮಂತ್ರ ಇಲ್ಲಿ ಜಯ ಕಂಡಿತು!

'ಬಂದೂಕಿನ ನಳಿಕೆಯಿಂದ ಮಾತ್ರ ಕ್ರಾಂತಿ ಹುಟ್ಟುತ್ತದೆ' ಎಂದು ನಂಬಿದವರು ಇಂದು ವಿದ್ಯುನ್ಮಾನ ಮತಯಂತ್ರದ (EVM) ಮಹತ್ವವನ್ನು ಅರಿತು ಮುಖ್ಯವಾಹಿನಿಯಲ್ಲಿ ನಮ್ಮೊಂದಿಗೆ ಜೊತೆಯಾಗಿದ್ದಾರೆ. ನಕ್ಸಲಿಸಂ ಎಂಬ ಮಹಾಮಾರಿಗೆ ಮದ್ದು ಅರೆದು ಅದೀಗ ದೇಶಾದ್ಯಂತ ಶಮನವಾಗಿದೆ! ಭಾರತದ ಸಂಪದ್ಭರಿತ ಅರಣ್ಯಗಳಲ್ಲಿ, ಅದರ ಅಂಚಿನ ಹಳ್ಳಿಗಳಲ್ಲಿ ಯಾವುದೋ ಸಿದ್ಧಾಂತಕ್ಕೆ ಕಟ್ಟುಬಿದ್ದು, ಭಯದ ನೆರಳಿನಡಿ, ದೇಶಹಿತಕ್ಕೆ ವಿಹಿತವಾದ ಮತ್ತು ಪ್ರಜಾಪ್ರಭುತ್ವ ವಿರೋಧಿ ಧೋರಣೆಗಳೊಂದಿಗೆ ಬದುಕುತ್ತಿದ್ದ ಸಾವಿರಾರು ಜೀವಗಳು ಇಂದು 'ಎಲ್ಲರೂ ಸಮಾನರು' ಎನ್ನುವ ಪ್ರಜಾಪ್ರಭುತ್ವದ ಶ್ರೇಷ್ಠ ಸಿದ್ಧಾಂತದಡಿ ಗೌರವಯುತ ಬದುಕನ್ನು ಆರಂಭಿಸಿದ್ದಾರೆ. ಇದು ಸ್ವಸ್ಥ ಸಮಾಜದ ಸ್ಥಾಪನೆಯ ವಿಚಾರದಲ್ಲಿ ಭಾರತಕ್ಕೆ ದಕ್ಕಿದ ಅತಿದೊಡ್ಡ ಗೆಲುವು-ಗರಿಮೆ!

ಸಾಮಾನ್ಯವಾಗಿ ಸೂರ್ಯಾಸ್ತದ ವೇಳೆಯಲ್ಲಿ ಕೆಂಪು ಬಣ್ಣವು ನಿಧಾನವಾಗಿ ಮಾಯವಾಗಿ ಹೇಗೆ ಪ್ರಶಾಂತವಾದ ಕತ್ತಲು ಆವರಿಸಿ, ಮತ್ತೆ ಶುಭ್ರ ಮುಂಜಾವು ಮೂಡುತ್ತದೆಯೋ, ಅದೇ ರೀತಿ ಭಾರತದ ಭೌಗೋಳಿಕ ನಕ್ಷೆಯಲ್ಲಿ ದಶಕಗಳಿಂದ ಹಾಸುಹೊಕ್ಕಾಗಿದ್ದ ನಕ್ಸಲಿಸಂ ಸಿದ್ಧಾಂತ ಕೊನೆಗೂ ಅಳಿಸಿಹೋಗಿದೆ! ಸಾವಿರಾರು ಕುಟುಂಬಗಳ ಕಣ್ಣೀರು ಮತ್ತು ರಕ್ಷಣಾ ಪಡೆಗಳ ರಕ್ತ-ಜೀವ ಹಿಂಡಿ ಉಸಿರಾಡುತ್ತಿದ್ದ ಮಾವೋವಾದವು ಈಗ ಧೂಳೀಪಟವಾಗಿ ಮುಗಿದ ಅಧ್ಯಾಯ! ಕ್ರೌರ್ಯದಿಂದ ಕೂಡಿದ ಸಿದ್ಧಾಂತವೊಂದು ಇತಿಹಾಸದ ಗೋರಿಯಲ್ಲಿ ಮುದುಡಿಕೊಂಡು ಮಲಗಿದೆ, ಮನುಕುಲಕ್ಕಂಟಿದ ಶಾಪ ತೊಲಗಿದೆ! ಇದು ಕೇಂದ್ರದ ಸಾಧನೆ ಮತ್ತು ದೇಶದ ಏಕತೆ, ಭವ್ಯತೆ, ಅವಿಚ್ಛಿನ್ನತೆಯ ದಿವ್ಯ ದ್ಯೋತಕ. 'ಅಹಿಂಸಾ ಪರಮೋ ಧರ್ಮಃ' ಎಂದು ಸಾರುವ ಶ್ರೇಷ್ಠ ಪರಂಪರೆ ನಮ್ಮದು!

-ಗುಡ್ ಬೈ ನಕ್ಸಲಿಸಂ, ಆರ್‌ಐಪಿ ಮಾವೋಯಿಸಂ

(ಲೇಖಕರು ಪ್ರಚಲಿತ ವಿದ್ಯಮಾನಗಳ ವಿಶ್ಲೇಷಕರು)

ಪೌರಕಾರ್ಮಿಕರಿಗೆ ಯೋಗ್ಯ ಬದುಕು ಮನುಷ್ಯತ್ವದ ಜರೂರು

ಪೌರ ಹಿತ
ಡಾ.ಎಚ್.ಜಿ.ದಡ್ಡಿ, ಜಮಖಂಡಿ
vveditoped@gmail.com

ಭಾರತದ ಸಾಧನೆಗಳು ಬೆಟ್ಟದಷ್ಟಿವೆ ನಿಜ. ನಮ್ಮಲ್ಲಿ ವೇದೋಪನಿಷತ್ತುಗಳು, ಮಹಾಕಾವ್ಯಗಳು, ಹಲವು ಧರ್ಮಗಳು, ಒಳ್ಳೆಯ ಸಂವಿಧಾನ, ಅಧ್ಯಾತ್ಮ ವಿದ್ಯೆ, ಸಂತ ಪರಂಪರೆ, ಆಧುನಿಕ ಪ್ರಗತಿ, ಕೈಗಾರಿಕೆ ಮತ್ತು ತಂತ್ರಜ್ಞಾನ ಬೆಳವಣಿಗೆ, ವಿಶ್ವದ ಮೂರನೇ ಅತಿದೊಡ್ಡ ಆರ್ಥಿಕತೆಯಾಗುವತ್ತ ನಡೆಯುತ್ತಿರುವ ಪ್ರಗತಿ. ಹೀಗೆ ನಾವು ಮೆಚ್ಚುಗೆಯಿಂದ ಮಾತನಾಡಲು ಹತ್ತಾರು ಸಂಗತಿಗಳಿವೆ. ಆದರೆ, ಈ ಸಮಾಜವನ್ನು ಸ್ವಚ್ಛವಾಗಿಡಲು ದಿನವಾಗಿ ಶ್ರಮಿಸುವ ಪೌರಕಾರ್ಮಿಕ ಸಮುದಾಯದ ಸಬಲೀಕರಣ ನಮ್ಮಲ್ಲಿನ್ನೂ ಸಾಧ್ಯವಾಗಿಲ್ಲ ಎನ್ನುವುದು ಕೇವಲ ಬೇಸರದ ವಿಚಾರ ಮಾತ್ರವಲ್ಲ, ಅದಕ್ಕಿಂತ ಹೆಚ್ಚಾಗಿ ತಲೆ ತಗ್ಗಿಸುವಂತಹ ವಾಸ್ತವ.

ಪೌರಕಾರ್ಮಿಕರು, ಸವಿತಾ ಸಮಾಜದ ಬಂಧುಗಳು, ಬಟ್ಟೆ ಹೊಲಿಯುವ ಸಿಂಪಿಗರು, ನಮ್ಮ ಚಪ್ಪಲಿ-ಬೂಟುಗಳನ್ನು ಹೊಲಿಯುವ ಮತ್ತು ಅವು ಮಿರಮಿರನೆ ಮಿಂಚುವಂತೆ ಮಾಡುವ ಚಮ್ಮಾರರು ಮತ್ತು ಅಡುಗೆ ಕೆಲಸ ಮಾಡುವವರೆಲ್ಲ ನಾಗರಿಕ ಸಮಾಜವು ಬಯಸುವ ಸೌಂದರ್ಯ ಮತ್ತು ಶುಚಿತ್ವಗಳ ನಿರ್ಮಾತೃಗಳು ಎನ್ನುವುದು ನನ್ನ ಅಭಿಪ್ರಾಯ. ಇವರುಗಳಿಲ್ಲದ ಸಮಾಜ, ಸಂಸ್ಕೃತಿ ಮತ್ತು ನಾಗರಿಕತೆಗಳನ್ನು ಸುಮ್ಮನೆ ನಾಲ್ಕು ದಿನಗಳ ಮಟ್ಟಿಗೆ ಕಲ್ಪಿಸಿಕೊಂಡು ನೋಡಿದರೆ, ಇವರೆಲ್ಲರೂ ಈ ಸಮಾಜದ ಚೆಲುವಿಗೆ ಎಷ್ಟೊಂದು ಅನಿವಾರ್ಯ ಮತ್ತು ಅಗತ್ಯ ಎನ್ನುವುದು ಗೊತ್ತಾಗುತ್ತದೆ. ನಾವು ಬೇಕಾದರೆ ಒಂದಿಷ್ಟು ದಿನಗಳ ಮಟ್ಟಿಗೆ ಸರಕಾರ ಇಲ್ಲದೆ ಇದ್ದರೂ ಇರಬಹುದು. ಅದೇ ಒಂದು ವೇಳೆ, ಪೌರಕಾರ್ಮಿಕರು ಒಂದು ವಾರ ಮುಷ್ಕರ ಹೂಡಿದರೆ ನಮ್ಮ ಅವಸ್ಥೆ ಏನಾಗಬಹುದು? ಮನೆಯಲ್ಲಿ ಕಸ ಕೊಳೆಯುತ್ತದೆ, ಬೀದಿಗಳು ಗಬ್ಬೆದ್ದು ನಾರುತ್ತವೆ, ಕಸದ ತೊಟ್ಟಿಗಳು ತುಂಬಿ ತುಳುಕುತ್ತವೆ, ರೋಗರುಜಿನಗಳು ಹರಡುತ್ತವೆ. ಆದರೆ, ಈ 'ಸಭ್ಯ ಸಮಾಜ'ವು ಪೌರಕಾರ್ಮಿಕರ ಕೆಲಸಕ್ಕಿರುವ ಮಹತ್ವವನ್ನು ಅರಿತುಕೊಂಡಿಲ್ಲ; ಅವರನ್ನು ಮಾನವ ಘನತೆಯಿಂದ ನಡೆಸಿಕೊಳ್ಳುತ್ತಿಲ್ಲ. ಬದಲಿಗೆ ಪೌರಕಾರ್ಮಿಕರಲ್ಲಿ ಕೀಳರಿಮೆ ಹುಟ್ಟಿಸಿ, ಅವರ ಬದುಕು 'ಶಾಪಗ್ರಸ್ತ' ಎನ್ನುವಂತೆ ಮಾಡಲಾಗಿದೆ. ತನ್ನ ಅರ್ಥಪೂರ್ಣ ಅಸ್ತಿತ್ವದಲ್ಲಿ ನಂಬಿಕೆ ಇಟ್ಟುಕೊಂಡಿರುವ ಒಂದು ಸಮಾಜ ಇದಕ್ಕೆ ರಚನಾತ್ಮಕ ಕ್ರಮಗಳ ರೂಪದಲ್ಲಿ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕು.

ಆದರೆ, ಇಲ್ಲೊಂದು ದುರಂತ ನೋಡಿ. ಕರ್ನಾಟಕ ಸರಕಾರದ ಅಂಕಿಅಂಶಗಳ ಪ್ರಕಾರ, ನಮ್ಮಲ್ಲಿರುವ ಪೌರಕಾರ್ಮಿಕರ ಸಂಖ್ಯೆ ಕೇವಲ 7-8 ಸಾವಿರವಂತೆ! ಇನ್ನು ಭಾರತದ ಮಟ್ಟದಲ್ಲಿ ಇರುವ ಈ ಬಂಧುಗಳ ಸಂಖ್ಯೆ 60 ಸಾವಿರದ ಆಸುಪಾಸು ಎಂದು ಹೇಳಲಾಗುತ್ತಿದೆ!! ಇದು ಸತ್ಯವನ್ನು ಮರೆಮಾಚುವ ಆತ್ಮವಂಚನೆ. ಏಕೆಂದರೆ, ಬೆಂಗಳೂರು ನಗರವೊಂದರಲ್ಲೇ 50 ಸಾವಿರಕ್ಕಿಂತ ಹೆಚ್ಚು ಪೌರಕಾರ್ಮಿಕರು ದಿನ ಬೆಳಗಾದರೆ ಕೆಲಸ ಮಾಡುತ್ತಿದ್ದಾರೆ. ಇನ್ನು ನಮ್ಮಲ್ಲಿರುವ ಪುರಸಭೆಗಳು, ಪಟ್ಟಣ ಪಂಚಾಯಿತಿಗಳು, ನಗರಸಭೆಗಳು, ಮಹಾನಗರ ಪಾಲಿಕೆಗಳು, ಗ್ರೇಟರ್ ಎನ್ನುವ ಹೆಸರಿನ ನಗರಗಳು ಇವೆಲ್ಲವನ್ನೂ ಪರಿಗಣಿಸಿ, ಇವುಗಳ ವ್ಯಾಪ್ತಿಯಲ್ಲಿರುವ ಜನಸಂಖ್ಯೆ, ಪೇಟೆ-ಪಟ್ಟಣಗಳ ಸ್ವರೂಪವನ್ನು ಕಣ್ಮುಂದೆ ತಂದುಕೊಂಡರೆ, ನಮ್ಮಲ್ಲಿ ಎಷ್ಟು ಲಕ್ಷ ಪೌರಕಾರ್ಮಿಕರು ವೃತ್ತಿನಿರತರಾಗಿದ್ದಾರೆ ಎನ್ನುವುದರ ಚಿತ್ರಣ ಖಂಡಿತ ಗೊತ್ತಾಗುತ್ತದೆ.

ಇದು 21ನೇ ಶತಮಾನದ ಅತ್ಯಾಧುನಿಕ ಯುಗ. ವಿಜ್ಞಾನ-ತಂತ್ರಜ್ಞಾನಗಳ ಪರಾಕಾಷ್ಠೆಯ ಯುಗವಿದು. ನಮ್ಮ ಒಳಿತಿಗೆ ಬೇಕಾದ ತಂತ್ರಜ್ಞಾನವನ್ನು ಕೆಲವೇ ತಿಂಗಳುಗಳಲ್ಲಿ ನಾವು ಅಭಿವೃದ್ಧಿ ಪಡಿಸಬಹುದಾದ ಪರಿಣತಿಯನ್ನು ಸಾಧಿಸಿದ್ದೇವೆ. ಆದರೆ ಈ ಹೆಮ್ಮೆಯು ಎಲ್ಲರಂತೆಯೇ ಮನುಷ್ಯರಾಗಿರುವ ಪೌರಕಾರ್ಮಿಕರ ಸಬಲೀಕರಣಕ್ಕೆ ಒದಗಿಬಂದಿಲ್ಲ ಎನ್ನುವುದು ದುರ್ದೈವದ ಸಂಗತಿ. ಹೀಗಾಗಿಯೇ, ಈಗಲೂ ಯಾವುದೇ ಕನಿಷ್ಠ ಸುರಕ್ಷತಾ ಕ್ರಮಗಳೂ ಇಲ್ಲದೆ ಕೈಯಲ್ಲಿ ಮಲದ ಗುಂಡಿಯನ್ನು ಸ್ವಚ್ಛ ಮಾಡುವ ಅಮಾನುಷತೆ ನಮ್ಮಲ್ಲಿದೆ. ಇದೊಂದು ರೌರವ ನರಕದ ಬರ್ಬರತೆ. ಹಾಗಾದರೆ, ಘನತೆಯ ಬದುಕಿನ ಕಲ್ಪನೆಗೆ ಅರ್ಥವೇನು? ಇವೆಲ್ಲ ಬರೀ ಭಾಷಣಕ್ಕೆ ಸೀಮಿತವೇ? ಈ ಅಮಾನವೀಯತೆ ನಮ್ಮ ಅಂತರಂಗವನ್ನು ಕಲಕಬೇಡವೇ? ನಮ್ಮ ಅಭಿವೃದ್ಧಿ, ಸುಸ್ಥಿರತೆ ಇವಕ್ಕೆಲ್ಲ ಅರ್ಥವೆಲ್ಲಿದೆ? ಇದು ನಿಜಕ್ಕೂ ಪಿಚ್ಚೆನಿಸುವ ಚಿತ್ರಣ. ಅದರಲ್ಲೂ ಪೌರಕಾರ್ಮಿಕರಲ್ಲಿ ಮುಕ್ಕಾಲು ಪಾಲು ಮಹಿಳೆಯರೇ ಇದ್ದಾರೆ ಎನ್ನುವುದು ಸಮಾಜದ ಆತ್ಮಸಾಕ್ಷಿಯನ್ನು ಕಲಕಬೇಕು.

ಮೊದಲಿನಿಂದಲೂ ಈ ಕಸುಬನ್ನು ಮಾಡುತ್ತಿರುವವರು ಸಾಮಾಜಿಕವಾಗಿ ಕಟ್ಟಕಡೆಯ ಸ್ಥಾನದಲ್ಲಿರುವ ಸಮುದಾಯದ ಸೋದರ-ಸೋದರಿಯರು. ಇವರ ಬದುಕಿನಲ್ಲಿ ಆರ್ಥಿಕ ಸಂಕಷ್ಟ, ಜಾತಿ ವ್ಯವಸ್ಥೆಯ ಸಂಕೋಲೆ, ಗುತ್ತಿಗೆದಾರರಿಂದ ನಡೆಯುವ ಶೋಷಣೆ, ಬೇರೆ ವೃತ್ತಿಗಳು ಗೊತ್ತಿಲ್ಲದ ಮಿತಿ, ಶಿಕ್ಷಣದ ಕೊರತೆ, ಬಡತನದ ಬವಣೆ... ಇವುಗಳ ಚಕ್ರವ್ಯೂಹ ಇದ್ದೇಇದೆ. ನಿಜ ಹೇಳಬೇಕೆಂದರೆ, ದೇಶದಲ್ಲಿ ಎಲ್ಲ ಕಡೆಗಳಲ್ಲೂ 'ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್' ಅನ್ನು ನಿಷೇಧಿಸಲಾಗಿದೆ. ಆದರೆ, ಎಲ್ಲ ಚಾರಿತ್ರಿಕ ಕಾನೂನುಗಳಂತೆಯೇ ಇದು ಕೂಡ ಹೆಚ್ಚಾಗಿ ಕಾಗದದ ಮೇಲೆಯೇ ಇದೆ. ಹೀಗಾಗಿ ಕೈಗವಸು, ಮಾಸ್ಕ್, ಹೆಲ್ಮೆಟ್ ಏನೂ ಇಲ್ಲದೆ, ಜೀವದ ಬಗ್ಗೆ ಲೆಕ್ಕಿಸದೆ ಮಲದ

ಗುಂಡಿ, ಚರಂಡಿ ಇತ್ಯಾದಿಗಳಿಗೆ ಇಳಿದು, ಇವರೆಲ್ಲ ಸಾವನ್ನು ಬರಮಾಡಿಕೊಳ್ಳುತ್ತಿದ್ದಾರೆ. ಅಥವಾ ಈ ವ್ಯವಸ್ಥೆಯೇ ಅವರನ್ನೆಲ್ಲ ಮೃತ್ಯುವಿನ ದವಡೆಗೆ ನೂಕುತ್ತಿದೆ. ಏಕೆಂದರೆ, ಮಲದ ಗುಂಡಿಯಲ್ಲಿ ಸೃಷ್ಟಿಯಾಗುವ ವಿಷಕಾರಿ ಮೀಥೇನ್ ಅನಿಲ ಇವರ ಪ್ರಾಣವನ್ನೇ ಕ್ಷಣಾರ್ಧದಲ್ಲಿ ಕಸಿದುಕೊಂಡು ಬಿಡುತ್ತದೆ. ಬದುಕುಳಿದಿರುವವರಲ್ಲಿ ಕೀಳರಿಮೆಯ ಮಾನಸಿಕ ಸಮಸ್ಯೆಯ ಜೊತೆಗೆ ಶ್ವಾಸಕೋಶದ ಸೋಂಕು ಇತ್ಯಾದಿ ದೈಹಿಕ ಅನಾರೋಗ್ಯವೂ ಕಾಡುತ್ತದೆ. ಇವರಿಗೆ ಆಯುಷ್ಮಾನ್ ಭಾರತ್ ತರಹದ ಯೋಜನೆಗಳ ಸೌಲಭ್ಯವಿದೆ, ನಿಜ. ಆದರೆ, ಆಧುನಿಕ ತಂತ್ರಜ್ಞಾನಾಧಾರಿತ ಸ್ಕ್ಯಾವೆಂಜಿಂಗ್ ವ್ಯವಸ್ಥೆಯನ್ನೇ ನಾವು ಸೃಷ್ಟಿಸಿ, ಪ್ರಾಮಾಣಿಕವಾಗಿ ಜಾರಿಗೆ ತರಬೇಕಾಗಿದೆ. ಇದೇ ಮಾನವೀಯತೆಗೆ ನಿಜವಾದ ಭೂಷಣ!

ರಾಷ್ಟ್ರೀಯ ಸಫಾಯಿ ಕರ್ಮಚಾರಿಗಳ ಆಯೋಗ ಅಸ್ತಿತ್ವಕ್ಕೆ ಬಂದು 32 ವರ್ಷಗಳೇ ಆಗಿವೆ. ಆದರೆ, ಅದು ಸಾಧಿಸಿರುವ ಪ್ರಗತಿ ನಿರೀಕ್ಷಿತ ವೇಗದಲ್ಲಿಲ್ಲ. ಪುನರ್ವಸತಿ, ಒಳ್ಳೆಯ ವೇತನ, ಸುರಕ್ಷತಾ ಕ್ರಮಗಳು, ಉಚಿತ ಆರೋಗ್ಯಸೇವೆ, ಈ ಕುಟುಂಬಗಳ ಮಕ್ಕಳಿಗೆ ಆಧುನಿಕ ಶಿಕ್ಷಣ, ಜಾಗೃತಿ ಇವೆಲ್ಲವನ್ನೂ ನಾವು ಒದಗಿಸಬೇಕಾಗಿದೆ. 2013ರ ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್ ನಿಷೇಧ ಕಾಯ್ದೆಯ ಪ್ರಕಾರ, ನಮ್ಮ ಸಮಾಜವು ರೋಬೋಟಿಕ್ ಸ್ಕ್ಯಾವೆಂಜಿಂಗ್ ಯಂತ್ರಗಳ ಆವಿಷ್ಕಾರದ ಕಡೆಗೆ ಹೋಗಬೇಕಾಗಿದೆ.

ಕೇಂದ್ರ ಸರಕಾರವು 2023ರ ಜುಲೈನಲ್ಲಿ ಪೌರಕಾರ್ಮಿಕರ ಶ್ರೇಯಸ್ಸಿಗೆಂದು 'ನಮಸ್ತೆ' (NAMASTE- National Action for Mechanised Sanitation Ecosystem) ಯೋಜನೆಯನ್ನು ರೂಪಿಸಿ, ಇದಕ್ಕೆಂದು 359 ಕೋಟಿ ರೂಪಾಯಿ ಕೊಟ್ಟಿದೆ. ನಗರ ಸ್ಥಳೀಯ ಸಂಸ್ಥೆಗಳ ಮಟ್ಟದಲ್ಲಿನ ಈ ಯೋಜನೆಯಡಿ 'ಸ್ಯಾನಿಟೇಶನ್ ಯಂತ್ರ'ಗಳ ಖರೀದಿಗೆಂದು 3.75 ಲಕ್ಷ ರುಪಾಯಿ ಸಬ್ಸಿಡಿ ಕೊಡಲಾಗುತ್ತಿದೆ. ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯವು ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯದ ಜತೆಗೂಡಿ ಜಾರಿಗೆ ತರುತ್ತಿರುವ ಈ ಯೋಜನೆಯಡಿ ಸೂಕ್ತ ತರಬೇತಿ, ಸ್ವಸಹಾಯ ಗುಂಪುಗಳ ರಚನೆ, ಆರೋಗ್ಯ ವಿಮೆ, ಸುರಕ್ಷತಾ ಕ್ರಮಗಳು, ಆರ್ಥಿಕ ನೆರವು, ಸ್ಯಾನಿಪ್ರೆನ್ಯೂರ್ ಬೆಳೆಸುವ ಪರಿಕಲ್ಪನೆ ಮುಂತಾದ ಉದ್ದೇಶಗಳಿವೆ.

ಪೌರಕಾರ್ಮಿಕರ ಸಬಲೀಕರಣ ಕೇವಲ ಸರಕಾರಗಳಿಂದ ಆಗುವಂಥದ್ದಲ್ಲ. ಬದಲಿಗೆ, ನಮ್ಮ ಸಮಾಜದ ಮನೋಭಾವದ ಬಗೆಯಲ್ಲಿ ಕ್ರಾಂತಿಕಾರಕ ಪರಿವರ್ತನೆ ಆಗಬೇಕಾಗಿದೆ. ಅಂತಹ ಸಂಕಲ್ಪ ನಮ್ಮೆಲ್ಲರದೂ ಆಗಬೇಕು. ಈ ಹೊಣೆಗಾರಿಕೆಯನ್ನು ನಾವೆಲ್ಲರೂ ಅರಿತು, ಮುಂದಡಿ ಇಡಬೇಕು. ಕುವೆಂಪು ತಮ್ಮ 24ನೇ ವಯಸ್ಸಿನಲ್ಲಿ ಬರೆದ 'ಜಲಗಾರ' ನಾಟಕದಲ್ಲಿ, ಸಾಕ್ಷಾತ್ ಶಿವನನ್ನೇ ಜಾಡಮಾಲಿಯ ಮುಂದೆ ತಂದು ನಿಲ್ಲಿಸುತ್ತಾರೆ. ಇದರಲ್ಲಿ ಅಪಮಾನಿತ ಬದುಕು ನಡೆಸುವವರ ಉನ್ನತೀಕರಣವಿದೆ. ಈಗ ತಂತ್ರಜ್ಞಾನದ ಮೂಲಕ ನಾವಿದನ್ನು ಸಾಧಿಸಬೇಕು.

ಓದುಗರ ಓಣಿ
ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಮಾನ್ಯ ಶಿಕ್ಷಣ ಸಚಿವರೇ ಗಮನಿಸಿ

ಹಿಂದಿ ಭಾಷೆಯನ್ನು ವಿದ್ಯಾರ್ಥಿಗಳಿಗೆ ಕಷ್ಟವಾಗದಂತೆ ಪಠ್ಯ ತಯಾರಿಸಿದರೆ, ಅದರಿಂದ ಅವರು ಭವಿಷ್ಯದಲ್ಲಿ ಬ್ಯಾಂಕುಗಳಲ್ಲೋ, ರೈಲ್ವೇ ಇಲಾಖೆಯಲ್ಲೋ, ಅಂಚೆ ಕಚೇರಿಯಲ್ಲೋ, ಭಾರತೀಯ ಸೇನೆಯಲ್ಲೋ ನೌಕರಿ ಪಡೆದುಕೊಳ್ಳುತ್ತಾರೆ. ನಿಮ್ಮ ಕ್ರಮದಿಂದ ವಿದ್ಯಾರ್ಥಿಗಳ ಹಿಂದಿ ಕಲಿಕೆಗೆ ಕಲ್ಲು ಹಾಕುವುದರ ಜೊತೆಗೆ, ಹಿಂದಿ ಶಿಕ್ಷಕರ ಜೀವನಕ್ಕೂ ಕಲ್ಲು ಹಾಕಿದಂತಾಗುತ್ತಿದೆ. ವಿದ್ಯಾರ್ಥಿಗಳಿಗೆ ಹಿಂದಿ ಖಂಡಿತ ಹೊರೆಯಾಗುತ್ತಿಲ್ಲ. ಕೆಲ ಕುತಂತ್ರಿ ಸಂಘಟನೆಗಳಿಗೆ ಹೆದರಿದ್ದೀರಿ ನೀವು. ಹಿಂದಿಯಲ್ಲಿ ವಿದ್ಯಾರ್ಥಿಗಳು ಹೆಚ್ಚಾಗಿ ನಪಾಸು ಆಗುತ್ತಿದ್ದಾರೆ ಎಂದು ಹಿಂದಿ ಅಥವ ತೃತೀಯ ಭಾಷೆಗೆ ಗ್ರೇಡ್ ಕೊಡುವುದಾದರೆ, ಪ್ರತಿ ಬಾರಿ ಹತ್ತನೇ ತರಗತಿ ಫಲಿತಾಂಶ ನೋಡಿ. ಹಿಂದಿಗಿಂತ ಇಂಗ್ಲಿಷ್ ಮತ್ತು ಕನ್ನಡದಲ್ಲಿ ನಪಾಸು ಆಗುತ್ತಿದ್ದಾರೆ. ಹಾಗಾದರೆ ಪ್ರಥಮ ಭಾಷೆ ಕನ್ನಡ ಮತ್ತು ದ್ವಿತೀಯ ಭಾಷೆಗೂ ಗ್ರೇಡ್ ಕೊಡುತ್ತೀರಾ? ಭಾಷೆಗಳಿಗಿಂತ ಗಣಿತ ಮತ್ತು ವಿಜ್ಞಾನದಲ್ಲಿಯೂ ಹೆಚ್ಚಾಗಿ ನಪಾಸು ಆಗುತ್ತಿದ್ದಾರೆ. ಈ ವಿಷಯಗಳಿಗೂ ಗ್ರೇಡ್ ಕೊಡುತ್ತೀರಾ? ಹಿಂದಿ ಭಾಷೆಯ ಜ್ಞಾನವಿಲ್ಲದೇ, ಹಿಂದಿ ಹೇರಿಕೆಯ ಹೆಸರಿನಲ್ಲಿ ಹಿಂದಿ ಎಂದರೆ ಕೀಳು ಭಾವನೆ ಬರುವಂತೆ ಪ್ರಚಾರ ಮಾಡುತ್ತಿವೆ ಕೆಲ ಸಂಘಟನೆಗಳು. ವಿದ್ಯಾರ್ಥಿಗಳು ಹಿಂದಿಯನ್ನು ತುಂಬಾ ಚೆನ್ನಾಗಿ ಕಲಿಯುತ್ತಿದ್ದಾರೆ. ಒಂದು ವೇಳೆ ಮಕ್ಕಳು ಹಿಂದಿ ಕಲಿತಿಲ್ಲ ಎಂದರೆ ಅದು ಹಿರಿಯ ಪ್ರಾಥಮಿಕ ಸರ್ಕಾರಿ ಶಾಲೆಗಳಲ್ಲಿ ಮಾತ್ರ. ಭಾರತದ ಎಲ್ಲಾ ಭಾಷೆಗಳಿಗೂ ಅವುಗಳದೇ ಆದ ಸ್ಥಾನಮಾನವಿದೆ. ಯಾವ ಭಾಷೆಯನ್ನೂ ಕೀಳರಿಮೆ ಮೂಡುವಂತೆ ನೋಡಬಾರದು. ಭಾರತೀಯ ಭಾಷೆಗಳಿಗೆ ಸ್ಥಾನಮಾನ ನೀಡದೆ ವಿದೇಶಿ ಭಾಷೆಗೆ ಮಣೆ ಹಾಕುವುದು ಎಷ್ಟು ಸೂಕ್ತವಾಗಿ ಕಾಣುತ್ತಿದೆಯೇ? ಗ್ರೇಡ್ ಕೊಡುವುದೋ, ಅಂಕ ಕೊಡುವುದೋ ಎನ್ನುವುದನ್ನು ವಿದ್ಯಾರ್ಥಿಗಳ ಆಯ್ಕೆಗೆ ಬಿಡಿ. ಆಗ ಹಿಂದಿಯನ್ನು ಓದಲು ಎಷ್ಟು ವಿದ್ಯಾರ್ಥಿಗಳು ಸಿದ್ಧರಿರುತ್ತಾರೆ ಎಂಬುದು ಗೊತ್ತಾಗುತ್ತದೆ.

-ಪಾಂಚಜನ್ಯ ಪ್ರದೀಪ್, ಮೈಸೂರು

ರಂಜಿತ್ ಅಶ್ವತ್ಥ ಲೇಖನ ಸಕಾಲಿಕ

ಮಾ.31ರಂದು ಪ್ರಕಟವಾದ ರಂಜಿತ್ ಅಶ್ವತ್ಥ ಅವರ ಲೇಖನ ಸಕಾಲಿಕವಾಗಿದೆ. ತೃತೀಯ ಭಾಷೆಗೆ ಗ್ರೇಡಿಂಗ್ ನೀಡುವ ಸರ್ಕಾರದ ನೀತಿಯನ್ನು ಬೆಂಬಲಿಸುವ ಉತ್ಸಾಹದಲ್ಲಿ ಒಂದು ಅಂಶವನ್ನು ಮರೆತಂತೆ ಕಾಣುತ್ತದೆ. ಈ ಬಗ್ಗೆ ವಿಶ್ವವಾಣಿ ಪತ್ರಿಕೆಯಲ್ಲಿ ರಂಜಿತ್ ಬರೆದ ಲೇಖನದಲ್ಲಿ ವಿಷಯ ಪ್ರಸ್ತಾಪಿಸಲಾಗಿದೆ. ಅವರು ತಿಳಿಸಿದಂತೆ ಕರ್ನಾಟಕದಲ್ಲಿ ಹಿಂದಿ ಮಾತ್ರ ತೃತೀಯ ಭಾಷೆಯಲ್ಲ. ಪ್ರಥಮ ಭಾಷೆಯನ್ನಾಗಿ ತಮ್ಮ ಮಾತೃಭಾಷೆಯನ್ನು, ದ್ವಿತೀಯ ಭಾಷೆಯಾಗಿ ಇಂಗ್ಲಿಷ್ ಅನ್ನು ಆಯ್ಕೆ ಮಾಡಿಕೊಂಡ, ಇತರೆ ಮಾತೃ ಭಾಷಿಕರು ಕನ್ನಡವನ್ನು ತೃತೀಯ ಭಾಷೆಯನ್ನಾಗಿ ಆಯ್ಕೆ ಮಾಡಿಕೊಳ್ಳಲೂ ಅವಕಾಶವಿದೆ. ಹಿಂದಿ ಭಾಷೆಯ ಹೇರಿಕೆಯನ್ನು ವಿರೋಧಿಸುವ ನೆಪದಲ್ಲಿ, ತೃತೀಯಭಾಷೆ ಕನ್ನಡಕ್ಕೆ ನೀಡುವ ಸ್ಥಾನವೇನು ಎಂದು ಸರಕಾರ ಯೋಚಿಸಬೇಕಿತ್ತಲ್ಲವೇ? ನನ್ನ ವಿರೋಧ ಇರುವುದು ತೃತೀಯ ಭಾಷೆಗೆ ಗ್ರೇಡಿಂಗ್ ನೀಡುವ ಕ್ರಮಕ್ಕೆ ಖಂಡಿತ ಅಲ್ಲ. ಈ ನಿರ್ಣಯ ತೆಗೆದುಕೊಂಡ ಸಮಯದ ಬಗ್ಗೆ. ಕನ್ನಡಿಗನಾದರೆ ಮಾತ್ರ ಉತ್ತಮ ಭಾರತೀಯನಾಗಲು ಸಾಧ್ಯ ಎಂಬ ನಿಮ್ಮ ನಿಲುವು ನನಗೆ ತುಂಬಾ ಇಷ್ಟವಾಯಿತು.

-ನಾಗಭೂಷಣ ಶರ್ಮಾ

'ವಿಶ್ವರಂಗ' ಲೇಖನ ಅರ್ಥಪೂರ್ಣ

ಮಾ.31ರಂದು ವಿಶ್ವವಾಣಿಯಲ್ಲಿ ವಿಶ್ವರಂಗ ಅಂಕಣದಲ್ಲಿ ಪ್ರಕಟವಾದ ರಂಗಸ್ವಾಮಿಯವರ ಲೇಖನ (ಕನ್ನಡ ಎನ್ನುವುದು ನಮ್ಮ ಗುರುತಾಗಬೇಕು) ಅರ್ಥಪೂರ್ಣವಾಗಿದೆ. ಕನ್ನಡನಾಡಿನಲ್ಲಿ ಕನ್ನಡ ಈಗಾಗಲೇ ಕಣ್ಮರೆಯಾಗುತ್ತಿದೆ. ಉತ್ತರ ಭಾರತದ ಸಾಕಷ್ಟು ಜನರು ಕರ್ನಾಟಕದಲ್ಲಿ ಬದುಕು ಕಟ್ಟಿಕೊಂಡಿದ್ದಾರೆ. ಇನ್ನೂಇನ್ನೂ ಬರುತ್ತಲೇ ಇದ್ದಾರೆ. ನಮ್ಮ ದುರಂತವೆಂದರೆ ಅವರು ಕನ್ನಡವನ್ನು ಅನ್ನದ ಭಾಷೆ ಎಂದು ಪರಿಗಣಿಸಿಲ್ಲ. ಹಲವು ಉತ್ತರ ಭಾರತೀಯರು ವರ್ಷಗಳಿಂದ ಇಲ್ಲಿ ಇದ್ದರೂ ಒಂದಕ್ಷರ ಕನ್ನಡ ಕಲಿತಿಲ್ಲ. ಯಾಕ್ರಯ್ಯಅಂತ ಕೇಳಿದರೆ ಅವರು ನೀವೇ ಹಿಂದಿಯಲ್ಲಿ ಮಾತಾಡುತ್ತೀರ ಎಂದು ಉಲ್ಟಾ ಹೊಡೀತಾರೆ. ಇದು ಸ್ವಲ್ಪ ನಿಜವೂ ಹೌದು. ನಾವು ಹಿಂದಿಯವರಿಗಿಂತ ಚೆನ್ನಾಗಿ ಹಿಂದಿಯನ್ನು, ತಮಿಳಿನವರಿಗಿಂತ ಚೆನ್ನಾಗಿ ತಮಿಳನ್ನು ಮಾತಾಡುತ್ತೇವೆ. ಬೇರೆ ಭಾಷೆಗಳ ಭರಾಟೆಯಲ್ಲಿ ಕನ್ನಡ ಸೊರಗಬಾರದು. ಹಲವು ಕನ್ನಡ ಶಾಲೆಗಳಿಗೆ ಬೀಗ ಬಿದ್ದಿದೆ. ಬೆಂಗಳೂರಿನ ಜಯನಗರದಲ್ಲಿ ಒಂದು ಶಾಲೆ ಇದೆ. ಅಜಮಾಸು ನೂರು ಮಕ್ಕಳು ಈ ಶಾಲೆಯಲ್ಲಿ ಕಲಿಯುತ್ತಿದ್ದಾರೆ. ಇದು ಅಪ್ಪಟ ಕನ್ನಡ ಶಾಲೆ. ಒಂದು ಕನ್ನಡ ಪ್ರೇಮಿ ಸಹೃದಯ ಕುಟುಂಬ ಈ ವಿದ್ಯಾಮಂದಿರವನ್ನು ನಡೆಸಿಕೊಂಡು ಬರುತ್ತಿದ್ದಾರೆ. ಅದೂ ಸರಿಸುಮಾರು ಐವತ್ತು ವರ್ಷಗಳಿಂದ ಅಂತಲೇ, ಯಾರಿಂದಲೂ ಯಾವ ಸಹಾಯವನ್ನು ಕೇಳದೇ ಕನ್ನಡದ ಕೆಲಸವನ್ನು ಸೇವಾಭಾವನೆಯಿಂದ ಮಾಡುತ್ತಿದ್ದಾರೆ. ಶಾಲೆಯ ಮುಖ್ಯೋಪಾಧ್ಯಾಯಿನಿಯನ್ನು ಮಾತಾಡಿಸಿದೆ. ಅವರು ಹೇಳಿದ್ದು, ನಾನು ಇಲ್ಲಿ ನಲವತ್ತು ವರ್ಷ ಕೆಲಸ ಮಾಡಿದ್ದೇನೆ. ನಿವೃತ್ತಿಯ ನಂತರವೂ ಇಲ್ಲೇ ಮುಂದುವರಿಯುತ್ತಿದ್ದೇನೆ. ಈ ಶಾಲೆಯ ಎಲ್ಲಾ ಖರ್ಚು ವೆಚ್ಚಗಳನ್ನು ಆ ಕುಟುಂಬವೇ ನೋಡಿಕೊಳ್ಳುತ್ತಿದೆ. ನಾವು ಯಾರನ್ನು ಸಹಾಯ ಕೇಳುವುದಿಲ್ಲ, ತಾವಾಗೇ ಮುಂದೆ ಬಂದರೆ ಸ್ವೀಕರಿಸುತ್ತೇವೆ. ಇದು ಅವರ ವಿನಯದ ಆದರೆ ಸ್ಪಷ್ಟ ನಿಲುವು. ಸರ್ಕಾರ ಇಂತಹ ಶಿಕ್ಷಣ ಸಂಸ್ಥೆಗಳ ಬಗ್ಗೆ ಗಮನ ಹರಿಸಬೇಕು. ಹಾಗೆ ನಾವು ಕನ್ನಡಿಗರು ನಮ್ಮ ನಿರಭಿಮಾನವನ್ನು ಬಿಟ್ಟು ಕನ್ನಡಾಭಿಮಾನವನ್ನು ಬೆಳೆಸಿ ಉಳಿಸಿಕೊಳ್ಳಬೇಕು. ರಂಗಸ್ವಾಮಿಯವರು ಹೇಳಿದಂತೆ ಮೊದಲು ನಾವು ಉತ್ತಮ ಕನ್ನಡಿಗರಾಗಬೇಕು.

-ಬಿ.ಎಸ್.ಮೋಹನ್ ಕುಮಾರ್, ಬೆಂಗಳೂರು

ಪಾರಂಪರಿಕ ಕಟ್ಟಡಗಳನ್ನು ಸಂರಕ್ಷಿಸುವುದು ಸಾಧ್ಯವೇ?

ಮೈಸೂರಿನಲ್ಲಿ ಪಾರಂಪರಿಕ ಕಟ್ಟಡಗಳ ಸಂರಕ್ಷಣೆಗೆ ಪ್ರತಿ ದಿನ ಒಂದಿಲ್ಲೊಂದು ಸಮಸ್ಯೆಗಳು ಹುಟ್ಟಿಕೊಳ್ಳುತ್ತಿವೆ. ಪಾರಂಪರಿಕ ಕಟ್ಟಡಗಳು ಇರುವ ಜಾಗದಿಂದ 200 ಮೀಟರ್ ಪರಿಮಿತಿಯಲ್ಲಿ ಯಾವುದೇ ಹೊಸಕಟ್ಟಡ ನಿರ್ಮಿಸುವಂತಿಲ್ಲ ಎಂಬ ನಿಯಮ ಇದ್ದರೂ, ಪಾರಂಪರಿಕ ಕಟ್ಟಡವಾದ ಹಳೇ ಜಿಲ್ಲಾಧಿಕಾರಿ ಕಚೇರಿ ಮುಂಭಾಗವಿರುವ ಕ್ಯಾಂಟೀನ್ ಕಟ್ಟಡದ ಛಾವಣಿಯನ್ನು ತೆರವುಗೊಳಿಸಿ, ಎರಡು ಮಹಡಿಯ ಕಟ್ಟಡ ನಿರ್ಮಿಸಿ ಮತ್ಸ್ಯದರ್ಶಿನಿ ಆರಂಭಿಸುತ್ತಿದ್ದೇವೆ ಎಂದು ಮೀನುಗಾರಿಕೆ ಇಲಾಖೆ ಅಧಿಕಾರಿಗಳು ಹೇಳಿರುವುದು ಹಾಸ್ಯಾಸ್ಪದ. ಮೀನೂಟದ ಕ್ಯಾಂಟೀನ್ ಅನ್ನು ಬೇರೆ ಕಡೆ ಮಾಡಿಕೊಳ್ಳಲಿ. ನಮ್ಮ ಪಾರಂಪರಿಕ ಕಟ್ಟಡಗಳ ಬಳಿ ನಿಯಮ ಬಾಹಿರವಾಗಿ ಕ್ಯಾಂಟೀನ್ ನಿರ್ಮಿಸುವುದು ಸರಿಯಲ್ಲ. ಜಿಲ್ಲಾಧಿಕಾರಿಗಳು ಈ ವಿಷಯದಲ್ಲಿ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಪಾರಂಪರಿಕ ತಜ್ಞರಾದ ಎನ್.ಎಸ್. ರಂಗರಾಜು ಅವರು ಆಗ್ರಹಿಸಿರುವುದು ತುಂಬ ಶ್ಲಾಘನೀಯ. ಮೈಸೂರಿನಲ್ಲಿ ಪಾರಂಪರಿಕ ಕಟ್ಟಡಗಳ ಸಂರಕ್ಷಣೆ ಹೇಗೆ ಮಾಡಬೇಕು ಎಂದು ತಿಳಿಸುವ ಪಾರಂಪರಿಕ ತಜ್ಞರು ಇದ್ದಾರೆ. ಇನ್ನು ಮುಂದಿನ ದಿನಗಳಲ್ಲಿ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಇವರುಗಳ ಅಭಿಪ್ರಾಯ ಸಂಗ್ರಹಿಸಿ ಪಾರಂಪರಿಕ ಕಟ್ಟಡಗಳನ್ನು ಉಳಿಸಿಕೊಳ್ಳುವತ್ತ ಗಮನ ಹರಿಸುವುದು ಒಳ್ಳೆಯದು.

-ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು

ಓದುಗರ ಓಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಅಚ್ಚುಕಟ್ಟು ಪ್ರದೇಶ
RNI no: 3918/59

VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.

Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:68, Issue: 257

ಸಮಾಚಾರ ಸಣ್ಣದಲ್ಲ

ಮಹಾವೀರ ಜಯಂತಿ ಗಣ್ಯರ ಶುಭಾಶಯ

ದೆಹಲಿ: ದೇಶಾದ್ಯಂತ ಮಂಗಳವಾರ ಮಹಾವೀರ ಜಯಂತಿ ಆಚರಿಸಲಾಗಿದೆ. ರಾಷ್ಟ್ರಪತಿ ದ್ರೌಪದಿ

ಮುರ್ಮು ಮತ್ತು ಪ್ರಧಾನಿ ನರೇಂದ್ರ ಮೋದಿ ಅವರು ಜೈನ ಸಮುದಾಯದವರು ಸೇರಿದಂತೆ ದೇಶವಾಸಿಗಳಿಗೆ ಮಹಾವೀರ ಜಯಂತಿ ದಿನದ ಶುಭಾಶಯ ಕೋರಿದ್ದಾರೆ. ಎಲ್ಲರನ್ನೂ ಒಳಗೊಳ್ಳುವಂತಹ, ಶಾಂತಿ-ಸಹನೆ-ಸೌಹಾರ್ದ ಹಾಗೂ ಸೂಕ್ಷ್ಮ ಸಂವೇದನೆಯ ಸಮಾಜ ನಿರ್ಮಾಣಕ್ಕೆ ಎಲ್ಲರೂ ಕೈಜೋಡಿಸಬೇಕು ಎಂದು ಕರೆ ನೀಡಿದ್ದಾರೆ. ಭಗವಾನ್ ಮಹಾವೀರರ ಬೋಧನೆಗಳನ್ನು ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು ಎಂದೂ ರಾಷ್ಟ್ರಪತಿ ಹೇಳಿದ್ದಾರೆ. ಮಹಾವೀರರ ಬೋಧನೆಗಳು ಜನ ರನ್ನು ಸತ್ಯ, ಅಹಿಂಸೆ, ಕರುಣೆ, ಸೇವೆಯ ಹಾದಿಯಲ್ಲಿ ಕರೆದೊಯ್ಯುತ್ತವೆ ಎಂದೂ ಹೇಳಿದ್ದಾರೆ.

ಜಯಲಲಿತಾ ಬಂಗಲೆ ತೆರಿಗೆ ಬಾಕಿ-ಸೀಲ್

ಹೈದರಾಬಾದ್: ತೆಲಂಗಾಣ ರಾಜಧಾನಿ ಹೈದರಾಬಾದ್‌ನಲ್ಲಿರುವ ತಮಿಳುನಾಡು ಮಾಜಿ ಸಿಎಂ, ದಿ. ಜೆ.ಜಯಲಲಿತಾ ಅವರ ಒಡೆತನಕ್ಕೆ ಸೇರಿದ

ಬಂಗಲೆಗೆ ಮಂಗಳವಾರ ಬೀಗ ಹಾಕಿ 'ಸೀಲ್' ಮಾಡಿರುವ ಗ್ರೇಟರ್ ಹೈದರಾಬಾದ್ ಮುನಿಸಿಪಲ್ ಕಾರ್ಪೊರೇಷನ್ (ಜಿಎಚ್‌ಎಂಸಿ) ಅಧಿಕಾರಿಗಳು, ಬಾಗಿಲಿಗೆ ತೆರಿಗೆ ಬಾಕಿಯ ನೋಟಿಸ್ ಅಂಟಿಸಿದ್ದಾರೆ. '2016ರಲ್ಲಿ ಜಯಲಲಿತಾ ಅವರು ನಿಧನರಾದ ಬಳಿಕ, ಅವರ ವಾರಸುದಾರರಿಗೆ ಹಲವು ಬಾರಿ ನೋಟಿಸ್‌ಗಳನ್ನು ನೀಡಲಾಗಿದೆ. ಹಾಗಿದ್ದರೂ ಮನೆಯ ತೆರಿಗೆ ಪಾವತಿಸಿಲ್ಲ. ಕಡೆಯದಾಗಿ ಸೋಮವಾರಕ್ಕೆ ಗಡುವು ನೀಡಲಾಗಿತ್ತು. ಗಡುವು ಮುಗಿದಿದ್ದರಿಂದ ಮಂಗಳವಾರ ಬಂಗಲೆಗೆ ಬೀಗ ಹಾಕಿ ಸೀಲ್ ಮಾಡಲಾಗಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಇಂಡಿಗೊಗೆ ಹೊಸ 'ಸಿಇಒ' ವಿಲಿಯಂ

ದೆಹಲಿ: 4 ತಿಂಗಳ ಹಿಂದೆ ವಾರಗಟ್ಟಲೆ ವಿಮಾನಯಾನ ಸೇವೆ ಅಸ್ತವ್ಯಸ್ತಗೊಳ್ಳಲು, ಸಾವಿರಾರು ಪ್ರಯಾಣಿಕರು ಪರಿತಪಿಸುವಂತಾಗಲು ಕಾರಣ

ವಾಗಿದ್ದ ಇಂಡಿಗೊ ವಿಮಾನಯಾನ ಸಂಸ್ಥೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ (ಸಿಇಒ) ಪೀಟರ್ ಎಲ್‌ಬರ್ಸ್ ನಿರ್ಗಮನವಾಗಿ ಮೂರು ವಾರಗಳೇ ಕಳೆದಿವೆ. ನಂತರದಲ್ಲಿ ಈಗ ಆ ಸ್ಥಾನಕ್ಕೆ ಹೊಸಬರ ಆಗಮನವಾಗಿದೆ. ಬ್ರಿಟಿಷ್ ಏರ್‌ವೇಸ್‌ನ ಮಾಜಿ ಮುಖ್ಯಸ್ಥ ವಿಲಿಯಂ ವಾಲ್ಷ್ ಇಂಡಿಗೊ ಏರ್‌ಲೈನ್ ನ ನೂತನ ಸಿಇಒ ಆಗಿ ನೇಮಕಗೊಂಡಿದ್ದಾರೆ. 'ವಿಲ್ಲಿ' ಎಂದೇ ವಿಮಾನಯಾನ ಕ್ಷೇತ್ರದಲ್ಲಿ ಗುರುತಿಸಿಕೊಂಡಿರುವ ವಿಲಿಯಂ ವಾಲ್ಷ್, ಪ್ರಸ್ತುತ 'ಇಂಟರ್‌ನ್ಯಾಷನಲ್ ಏರ್ ಟ್ರಾನ್ಸ್‌ಪೋರ್ಟ್ ಅಸೋಸಿಯೇಷನ್' (ಐಎಟಿಎ) ಮಹಾ ನಿರ್ದೇಶಕರಾಗಿದ್ದಾರೆ. ಅಲ್ಲಿನ ಸೇವಾವಧಿ ಜು.31ಕ್ಕೆ ಕೊನೆಗೊಂಡ ಬಳಿಕ ಆ.3ರಂದು ಇಂಡಿಗೊ ಸಿಇಒ ಜವಾಬ್ದಾರಿ ವಹಿಸಿಕೊಳ್ಳಲಿದ್ದಾರೆ ಎಂದು ವರದಿಯಾಗಿದೆ.

ನೆದರ್ಲೆಂಡ್ ಪ್ರಧಾನಿ ರಾಬ್-ಮೋದಿ ಚರ್ಚೆ

ದೆಹಲಿ: ಪಶ್ಚಿಮ ಏಷ್ಯಾ ಭಾಗದಲ್ಲಿ ಇರಾನ್ ವಿರುದ್ಧ ಅಮೆರಿಕ-ಇಸ್ರೇಲ್ ನಡೆಸುತ್ತಿರುವ ಯುದ್ಧದಿಂದಾಗಿ ಹಲವು ದೇಶಗಳಲ್ಲಿ ಅಪಾರ ಪ್ರಮಾಣದ

ಹಾನಿಯಾಗಿದೆ. ಆದಷ್ಟು ಬೇಗ ಪಶ್ಚಿಮ ಏಷ್ಯಾ ಪ್ರದೇಶದಲ್ಲಿ ಶಾಂತಿ ನೆಲೆಸಬೇಕಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ನೆದರ್ಲೆಂಡ್ ಪ್ರಧಾನಿಯಾಗಿ ಕಳೆದ ತಿಂಗಳು ಅಧಿಕಾರ ಸ್ವೀಕರಿಸಿದ ರಾಬ್ ಜೆಟ್ಟೆನ್ ಅವರ ಜತೆಗೆ ಸೋಮವಾರ ರಾತ್ರಿ ದೂರವಾಣಿಯಲ್ಲಿ ಮಾತುಕತೆ ನಡೆಸಿದ ಮೋದಿ, ಪಶ್ಚಿಮ ಏಷ್ಯಾದಲ್ಲಿನ ಸದ್ಯದ ಪರಿಸ್ಥಿತಿ ಬಗ್ಗೆ ಚರ್ಚಿಸಿದರು. ಬಳಿಕ ಉಭಯ ನಾಯಕರು ಭಾರತ ಮತ್ತು ನೆದರ್ಲೆಂಡ್ ದ್ವಿಪಕ್ಷೀಯ ಸಂಬಂಧ ವೃದ್ಧಿ ಕುರಿತೂ ಸಮಾಲೋಚನೆ ನಡೆಸಿದರು. ಅಲ್ಲದೇ, ರಕ್ಷಣಾ ವಲಯದಲ್ಲಿ ಸಹಕಾರ, ಪ್ರತಿಭಾವಂತರಿಗೆ ಉದ್ಯೋಗಾವಕಾಶಗಳು, ಹಸಿರು ಜಲಜನಕ, ಸೆಮಿ ಕಂಡಕ್ಟರ್ ಕ್ಷೇತ್ರಗಳಲ್ಲಿ ಕೊಡುಕೊಳ್ಳುವಿಕೆ, ಭಾರೀ ನೀರಾವರಿ ಯೋಜನೆಗಳು ಮತ್ತು ವ್ಯಾಪಾರ ವಹಿವಾಟು ವಿಚಾರಗಳಲ್ಲಿ ನೆರವು ಕುರಿತೂ ಮಾತುಕತೆ ನಡೆಸಿದ್ದಾರೆ.

{ ಕನಿಮೋಳಿ } ಡಿಎಂಕೆ ಸಂಸದೆ

ಚುನಾವಣೆ ಸಂದರ್ಭ ಪಕ್ಷಗಳು ಘೋಷಿಸುವ ಉಚಿತ ಕೊಡುಗೆಗಳು ವಾಸ್ತವದಲ್ಲಿ ಜನ ಕಲ್ಯಾಣ ಕಾರ್ಯಕ್ರಮಗಳೇ ಆಗಿವೆ. ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ಸೇವೆ ಒದಗಿಸುವುದು, ಆರ್ಥಿಕ ಭದ್ರತೆ ನೀಡುವುದು ಸಾಮಾಜಿಕ ನ್ಯಾಯಕ್ಕಾಗಿ ಮಾಡುವ ಹೂಡಿಕೆಗಳು. ಸಾಮಾಜಿಕ ನ್ಯಾಯವನ್ನು ವಿರೋಧಿಸುವವರು ಮಾತ್ರವೇ ಈ ಕೊಡುಗೆಗಳನ್ನು ಟೀಕಿಸುಬಲ್ಲರು.

3500 ನೌಕಾದಳ ಯೋಧರ ಸಹಿತ ದೊಡ್ಡ ಸಂಖ್ಯೆ ಸೈನಿಕರನ್ನು ರವಾನಿಸಿರುವ ಅಮೆರಿಕ | ರಷ್ಯಾ ಥೆಬೆನ್ ಯುನಿಟ್ ಪ್ರವೇಶ ನಿರೀಕ್ಷೆ

ಇರಾನ್‌ಗೆ ಕಾಲಿಟ್ಟರೆ ಕಾಲು ಕತ್ತರಿಸುತ್ತೇವೆ: ಐಆರ್‌ಜಿಸಿ

ಯುದ್ಧಕ್ಕೆ ಸಜ್ಜಾಗಿರುವ ಇರಾನ್‌ನ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ (ಐಆರ್‌ಜಿಸಿ)

ಟೆಹರಾನ್: ಇರಾನ್ ನೆಲಕ್ಕೇನಾದರೂ ನಿಮ್ಮ ಸೈನಿಕರು ಕಾಲಿಟ್ಟರೆ ಅವರ ಕಾಲುಗಳನ್ನೇ ಕತ್ತರಿಸಿ ಹಾಕುತ್ತೇವೆ ಎಂದು ಇರಾನ್‌ನ 'ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್' (ಐಆರ್‌ಜಿಸಿ) ಅಮೆರಿಕಕ್ಕೆ ಮಂಗಳವಾರ ಎಚ್ಚರಿಕೆ ನೀಡಿದೆ.

ಫೆ.18ರಂದು ಇರಾನ್ ವಿರುದ್ಧ ಅಮೆರಿಕ-ಇಸ್ರೇಲ್ ಯುದ್ಧ ಆರಂಭಿಸಿದಾಗಿನಿಂದಲೂ ವೈಮಾನಿಕವಾಗಿಯಷ್ಟೇ ದಾಳಿ ನಡೆಸುತ್ತಿವೆ. ಸೇನಾಪಡೆಯನ್ನಾಗಲೀ, ನೌಕಾಪಡೆಯನ್ನಾಗಲೀ ಬಳಸಿಕೊಳ್ಳಲು ಹೋಗಿಲ್ಲ.

ಅಮೆರಿಕ ಇರಾನ್‌ನ ಸುತ್ತಮುತ್ತಲೂ ಇರುವ ಗಲ್ಫ್

ದೇಶಗಳಲ್ಲಿ ತನ್ನ ಸೇನಾಪಡೆಗಳನ್ನು, ವಾಯುನೆಲೆಗಳನ್ನೂ ಯುದ್ಧ ಆರಂಭಕ್ಕೂ ಮುಂಚಿತವಾಗಿಯೇ ನೆಲೆಗೊಳಿಸಿತ್ತು. ಅಲ್ಲಿಂದಲೇ ಇರಾನ್ ಮೇಲೆ ಕ್ಷಿಪಣಿಗಳನ್ನು, ಬಾಂಬ್‌ಗಳನ್ನೂ ಬಳಸಿಕೊಂಡು ದಾಳಿ ಮಾಡುತ್ತಿದೆ. ಇನ್ನೊಂದೆಡೆ ಇಸ್ರೇಲ್ ಕೂಡಾ ತನ್ನ ನೆಲದಿಂದಲೇ ಖಂಡಾಂತರ ಕ್ಷಿಪಣಿಗಳನ್ನು ಇರಾನ್‌ನತ್ತ ಹಾರಿಸಿ ದಾಳಿ ನಡೆಸುತ್ತಿದೆ.

ಇರಾನ್ ಕೂಡಾ ಅಷ್ಟೇ ತೀವ್ರವಾಗಿ ಅಮೆರಿಕ-ಇಸ್ರೇಲ್‌ಗೆ ಪ್ರತಿರೋಧ ಒಡ್ಡುತ್ತಿದೆ. ಅದರಲ್ಲೂ ಇರಾನ್ ಹೊರ್ಮುಝ್ ಜಲಸಂಧಿಯನ್ನು ಬಂದ್ ಮಾಡಿದ ಬಳಿಕ ಯುದ್ಧದಲ್ಲಿ ಇರಾನ್ ಕೈ ಮೇಲಾದಂತಾಗಿದೆ. ಕಚ್ಚಾತೈಲ, ನೈಸರ್ಗಿಕ ಅನಿಲದ ಕೊರತೆ ಆಗಿದ್ದರಿಂದ ಯೂರೋಪ್ ದೇಶಗಳಿಗೂ ಅದರ ಬಿಸಿ ತಾಗಿದೆ. ಈಗ ನ್ಯಾಟೊ ದೇಶಗಳೇ ಮಿತ್ರರಾಷ್ಟ್ರ ಅಮೆರಿಕಕ್ಕೆ ವಿರೋಧವಾಗಿ ಪ್ರತಿಕ್ರಿಯಿಸಲಾರಂಭಿಸಿವೆ. ತಿಂಗಳಾದರೂ ಇರಾನ್ ಮಣಿಯದೇ ಇದ್ದಾಗ ಅಮೆರಿಕ, ಹೊರ್ಮುಝ್ ಜಲಸಂಧಿ ಮತ್ತು ಖರ್ಗ್ ದ್ವೀಪ ವಶಕ್ಕೆ ಮುಂದಾಗಿದ್ದು, ಇರಾನ್ ನೆಲಕ್ಕೆ 3500 ನೌಕಪಡೆ ಯೋಧರು ಸೇರಿದಂತೆ ದೊಡ್ಡ ಸಂಖ್ಯೆಯ ಸೈನಿಕರನ್ನು, ಕಮಾಂಡೊ ಪಡೆಗಳನ್ನೂ ರವಾನಿಸಿದೆ. ಅಮೆರಿಕ ಸೈನಿಕರು, ಯುದ್ಧ ನೌಕೆಗಳು ಇರಾನ್‌ನತ್ತ ಸಾಗಿಬಂದಿರುವುದರಿಂದ ಇರಾನ್ ಕೆರಳಿ ನಿಂತಿದೆ.

ಅಮೆರಿಕವೇನಾದರೂ ತನ್ನ ಸೈನಿಕರನ್ನು ಇರಾನ್‌ನ ನೆಲದ ಮೇಲೆ ಕಾಲಿಡುವಂತೆ ಮಾಡಿದರೆ ಅವರ ಕಾಲುಗಳನ್ನೇ ಕತ್ತರಿಸಿ ಬಿಸಾಡುತ್ತೇವೆ. ಅವರ ತಲೆಯ ಮೇಲೆ ಬೆಂಕಿಯ ಮಳೆ ಸುರಿಸುತ್ತೇವೆ ಎಂದು 'ಐಆರ್‌ಜಿಸಿ'ಯ ಪ್ರಧಾನ ಕಚೇರಿ ಖಾತಂ ಅಲ್ ಅನ್ಬಿಯಾದಲ್ಲಿನ ವಕ್ತಾರ ಇಬ್ರಾಹಿಂ ಝೊಲ್‌ಫಘಾರಿ ಎಚ್ಚರಿಕೆ ನೀಡಿದ್ದಾರೆ. ಇಬ್ರಾಹಿಂ ಅವರ ಈ ಎಚ್ಚರಿಕೆ ಸಂದೇಶವನ್ನು ಇರಾನ್ ಸರಕಾರದ ಅಧಿಕೃತ ಮಾಧ್ಯಮ 'ಪ್ರೆಸ್ ಟಿವಿ' ಮಂಗಳವಾರ ಪ್ರಸಾರ ಮಾಡಿದೆ.

ಇಟಲಿಯಿಂದಲೂ ನಕಾರ

32 ದಿನಗಳ ದೀರ್ಘ ಯುದ್ಧದಿಂದ ಅಮೆರಿಕವೂ ಬಸವಳಿದಿದೆ. ನೆರವಿನ ಹಸ್ತಕ್ಕಾಗಿ ಆಚೀಚೆ ನೋಡುತ್ತಿದೆ. ಇಂಥ ಸಮಯದಲ್ಲೇ

ಸ್ಪೇನ್ ಅಮೆರಿಕ ವಿರುದ್ಧ ತಿರುಗಿಬಿದ್ದಿದೆ. ಅಮೆರಿದ ವಿಮಾನಗಳಿಗೆ ತನ್ನ ವಾಯುಪ್ರದೇಶದಲ್ಲಿ ಹಾರಾಟ ನಡೆಸಲು ಅವಕಾಶ ಕೊಡುವುದಿಲ್ಲ ಎಂದು ಸೋಮವಾರ ಹೇಳಿತ್ತು. ಈಗ ಇಟಲಿ ಕೂಡಾ ಅಮೆರಿಕಕ್ಕೆ ನೆರವಾಗಲು ನಿರಾಕರಿಸಿದೆ. ಅಮೆರಿಕದ ಯುದ್ಧ ವಿಮಾನಗಳ ನಿಲುಗಡೆಗೆ ತನ್ನ ನೆಲದಲ್ಲಿ ಅವಕಾಶ ಮಾಡಿಕೊಡಲು ಇಟಲಿ ಸರಕಾರ ನಿರಾಕರಿಸಿದೆ ಎಂದು ಮಂಗಳವಾರ ವರದಿಯಾಗಿದೆ. ಇರಾನ್ ವಿರುದ್ಧದ ಅಮೆರಿಕ-ಇಸ್ರೇಲ್ ಯುದ್ಧದ ಭಾಗವಾಗಲು ಇಟಲಿ ಇಚ್ಛಿಸುವುದಿಲ್ಲ. ಇಟಲಿಯ ನೆಲವನ್ನು ಯುದ್ಧದ ಕಾರಣಗಳಿಗೆ ಬಳಸಿಕೊಳ್ಳಲು ಅಮೆರಿಕಕ್ಕೆ ಅವಕಾಶವನ್ನೂ ಕೊಡುವುದಿಲ್ಲ ಎಂದು ಇಟಲಿ ಪ್ರಧಾನಿ ಜಾರ್ಜಿಯಾ ಮೆಲೋನಿ ಮಂಗಳವಾರ ಸ್ಪಷ್ಟವಾಗಿ ಹೇಳಿದ್ದಾರೆ.

5-6 ವಾರಕ್ಕೆ ಯುದ್ಧ ಅಂತ್ಯ?

ಮುಂದಿನ 5-6 ವಾರಗಳಲ್ಲಿ ಇರಾನ್ ಮೇಲಿನ ಯುದ್ಧವನ್ನು ಕೊನೆಗೊಳಿಸಲಿದ್ದೇನೆ ಎಂದು ಅಮೆರಿಕ



ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಮ್ಮ ಆಪ್ತರ ಬಳಿ ಹೇಳಿಕೊಂಡಿರುವುದಾಗಿ ಮೂಲಗಳನ್ನು ಉಲ್ಲೇಖಿಸಿ ಅಮೆರಿಕ ಮಾಧ್ಯಮಗಳು ವರದಿ ಮಾಡಿವೆ. ಇರಾನ್‌ನ ಹೊರ್ಮುಝ್ ಜಲಸಂಧಿ ಮುಕ್ತವಾಗಲಿ, ಆಗದೇ ಇರಲಿ ಸೇನಾ ಕಾರ್ಯಾಚರಣೆಯನ್ನು ಕೆಲವೇ ವಾರಗಳಲ್ಲಿ ಕೊನೆಗೊಳಿಸಲು ಯೋಜಿಸಿರುವೆ. ಇರಾನ್‌ನ ಸೇನಾಬಲ ಕುಗ್ಗಿದೆ, ಕ್ಷಿಪಣಿಗಳೆಲ್ಲಾ ಖಾಲಿ ಆಗುತ್ತಾ ಬಂದಿವೆ. ಅಲ್ಲಿಗೆ ಯುದ್ಧ ಸಾಕು ಎಂದು ಟ್ರಂಪ್ ತಮ್ಮ ಆಪ್ತರು ಮತ್ತು ಸಹಾಯಕರ ಬಳಿ ಹೇಳಿಕೊಂಡಿದ್ದಾರೆ ಎಂದೂ ವಾಲ್‌ಸ್ಟ್ರೀಟ್ ಜರ್ನಲ್ ವರದಿ ಪ್ರಕಟಿಸಿದೆ.

ರಷ್ಯಾ ಪಡೆ: ಅಮೆರಿಕದ ಸೈನಿಕರೇನಾದರೂ ಇರಾನ್ ಭೂಭಾಗವನ್ನು ಪ್ರವೇಶಿಸಿದರೆ ರಷ್ಯಾದ ಥೆಬೆನ್ ಸಶಸ್ತ್ರ ಘಟಕ ಇರಾನ್‌ಗೆ ಧಾವಿಸಿ ಬರಲಿದೆ. ಅಮೆರಿಕ ಭೂಸೇನಾಪಡೆಯ ಯೋಧರನ್ನು ಅಟ್ಟಾಡಿಸಿಕೊಂಡು ಕೊಲ್ಲಲಿದೆ ಎಂದೂ 'ಪ್ರೆಸ್ ಟಿವಿ' ವರದಿ ಬಿತ್ತರಿಸಿದೆ.

ತೆರಿಗೆ, ವಿಮೆ, ರಜೆ, ಕಾರು, ಸಾಲ ಇಂದಿನಿಂದ ಹಲವು ಬದಲಾವಣೆ

ದೆಹಲಿ: ಇಂದಿನಿಂದ ಹೊಸ ಹಣಕಾಸು ವರ್ಷ ಆರಂಭಗೊಂಡಿದೆ. 2026-27ನೇ ಹಣಕಾಸು ವರ್ಷದ ಮೊದಲ ದಿನದಿಂದಲೇ ದೇಶದಲ್ಲಿ ಕೇಂದ್ರದ ಮುಂಗಡಪತ್ರದ ಘೋಷಣೆಗಳು, ನಿಯಮಗಳು ಜಾರಿಗೊಂಡಿವೆ. ತೆರಿಗೆ ನಿಯಮಗಳು, ಕಾರ್ಮಿಕ ಕಾಯಿದೆಗಳಲ್ಲಿನ ಬದಲಾವಣೆಗಳು, ವಾಹನಗಳ ಬೆಲೆ ಏರಿಕೆ ಮೊದಲಾದ ಕ್ರಮಗಳಿಂದ ಜನರ ಮೇಲೇನು ಪರಿಣಾಮವಾಗಲಿದೆ ಎಂಬ ನೋಟ ಇಲ್ಲಿದೆ.

ಹೊಸ ಆದಾಯ ತೆರಿಗೆ ಕಾಯಿದೆ

ದಶಕಗಳಷ್ಟು ಹಳೆಯ ಆದಾಯ ತೆರಿಗೆ ಕಾಯಿದೆ-1961ರ ಬದಲಾಗಿ 'ಆದಾಯ ತೆರಿಗೆ ಕಾಯಿದೆ-2025' ಏ.1ರಿಂದ ಜಾರಿಗೆ ಬಂದಿದೆ. ಇದು ಆದಾಯ ತೆರಿಗೆ ಪಾವತಿದಾರರಿಗೆ ಹಲವು ಪ್ರಯೋಜನ ತಂದುಕೊಡಲಿದೆ. ಆದಾಯ ತೆರಿಗೆ ಕಾಯಿದೆ ನಿಯಮ 87ಎ ಅನ್ವಯ ರಿಯಾಯಿತಿ ಪ್ರಮಾಣ ಹೆಚ್ಚಳವಾಗಿದ್ದು, ಆದಾಯ ತೆರಿಗೆ ಪಾವತಿ ದಾರರಿಗೆ ವಾರ್ಷಿಕ ಒಟ್ಟು ಗಳಿಕೆಯಲ್ಲಿ 12 ಲಕ್ಷ ರು.ವರೆಗೂ ತೆರಿಗೆ ವಿನಾಯಿತಿ ಪಡೆಯಲು ಅವಕಾಶವಾಗಿದೆ.

ಅಪಘಾತ ಪರಿಹಾರ ತೆರಿಗೆ ಮುಕ್ತ

ವಾಹನ ಅಪಘಾತದಲ್ಲಿ ಗಾಯಗೊಂಡವರು ಅಥವಾ ಸಾವು ಉಂಟಾಗಿದ್ದರೆ ಅವರ ಕುಟುಂಬದ ವರು ವಿಮಾ ಕಂಪನಿಗಳಿಂದ ಪಡೆಯುತ್ತಿದ್ದ ಪರಿಹಾರ ಧನ ಹಾಗೂ ಅದಕ್ಕೆ ನ್ಯಾಯಲಯ ಕೊಡಿಸುವ ಬಡ್ಡಿ ಮೊತ್ತಕ್ಕೂ ಇಂದಿನಿಂದಲೇ ತೆರಿಗೆ ವಿನಾಯಿತಿ ಸಿಗಲಿದೆ.

ತೆರಿಗೆ ನಿಯಮ ಬದಲಾವಣೆ

ತೆರಿಗೆ ಫಾರ್ಮ್‌ಗಳಲ್ಲಿಯೂ ಬದಲಾವಣೆಯಾಗಿದ್ದು, (ವೇತನ ಟಿಡಿಎಸ್) ಫಾರ್ಮ್ 16 ಮತ್ತು 16ಎ ಇನ್ನು ಮುಂದೆ ಫಾರ್ಮ್ 130 ಮತ್ತು 131 ಎಂದಾಗಲಿವೆ. ವಾರ್ಷಿಕ ಲೆಕ್ಕಪತ್ರ ಆಡಿಟ್ ಆಗಿರದ ತೆರಿಗೆ ಪಾವತಿ ದಾರರು ಐಟಿಆರ್-3 ಮತ್ತು ಐಟಿಆರ್-4 ಸಲ್ಲಿಸಲು ಆ.31 ಕಡೆ ದಿನವಾಗಿದೆ. ತೆರಿಗೆ ನಿಯಮಗಳ ಸಂಖ್ಯೆ 399ರಿಂದ 190ಕ್ಕೆ ಇಳಿಕೆಯಾಗಿದ್ದು, ಆದಾಯ ತೆರಿಗೆದಾರರು ಮತ್ತು ವರ್ತಕರಿಗೆ ತೆರಿಗೆ ವ್ಯವಸ್ಥೆ ಸರಳಗೊಂಡಿದೆ.

ಕಾರುಗಳು ತುಟ್ಟಿ

ಮ್ಯಾರಿಸನ್ ಗ್ಯಾರೇಜ್ (ಎಂಜಿ), ಮರ್ಸಿಡಿಸ್ ಬೆಂಜ್, ಟಾಟಾ ಮೋಟಾರ್ಸ್ ಕಂಪನಿಗಳು ಕೆಲವು ಮಾದರಿ ಕಾರುಗಳ ಬೆಲೆ ಏರಿಕೆ ಮಾಡಿದ್ದು, ಏ.1ರಿಂದಲೇ ಈ ಕಾರುಗಳು ತುಟ್ಟಿಯಾಗಿವೆ.

ರೈಲು ಟಿಕೆಟ್ ರದ್ದು

ಮುಂಗಡ ಕಾಯ್ದಿರಿಸಿದ ರೈಲು ಟಿಕೆಟ್ ರದ್ದುಗೊಳಿಸುವ ನಿಯಮಗಳಲ್ಲಿಯೂ ಇಂದಿನಿಂದಲೇ ಕೆಲವು ಬದಲಾವಣೆಗಳಾಗಿವೆ. ಪ್ರಯಾಣ ಸಮಯದ 8 ಗಂಟೆಯೊಳಗೆ ಟಿಕೆಟ್ ರದ್ದುಗೊಳಿಸಿದವರಿಗೆ ಹಣ ಮರುಪಾವತಿ ಇರುವುದಿಲ್ಲ. 8ರಿಂದ 24 ಗಂಟೆ ಅವಧಿಯಲ್ಲಿ ಟಿಕೆಟ್ ರದ್ದುಗೊಳಿಸಿದವರಿಗೆ ಶೇ.50, 24ರಿಂದ 72 ಗಂಟೆಗಳೊಳಗಾದರೆ ಶೇ.75ರಷ್ಟು ಹಣ ಮರುಪಾವತಿಯಾಗಲಿದೆ.

ಎಂಎಸ್‌ಇಗೆ ಸುಲಭ ಸಾಲ

ಅತಿಸಣ್ಣ, ಸಣ್ಣ ಉದ್ಯಮ(ಎಂಎಸ್‌ಇ)ಗಳಿಗೆ ಅವುಗಳ ವಹಿವಾಟು/ಹಣಕಾಸು ಸ್ಥಿತಿಗತಿ ಆಧರಿಸಿ ಯಾವುದೇ ಅಡಮಾನ ಕೇಳದೇ ಬ್ಯಾಂಕ್‌ಗಳು ಗರಿಷ್ಠ 25 ಲಕ್ಷ ರು. ವರೆಗೂ ಸಾಲ ನೀಡಬಹುದಾಗಿದೆ.

ಫಾಸ್ಟ್ಯಾಗ್ ತುಸು ತುಟ್ಟಿ

ವಾಹನಗಳು ಹೆದ್ದಾರಿಯ ಟೋಲ್‌ಪ್ಲಾಜಾಗಳಲ್ಲಿ ಶುಲ್ಕ ಪಾವತಿಸಲು ಖರೀದಿಸುವ ವಾರ್ಷಿಕ ಪಾಸ್ ದರ ಇಂದಿನಿಂದ 3000 ರು.ಗೆ ಬದಲಾಗಿ 3075 ರು.ಗೆ ಏರಿಕೆಯಾಗಿದೆ.

ಪ್ಯಾನ್ ನಿಯಮ ಬದಲು

ಪ್ಯಾನ್ ಕಾರ್ಡ್ ಮೇಲಿನ ಹೆಸರು ಇನ್ನು ಮುಂದೆ ಆಧಾರ್‌ನಲ್ಲಿ ಇರುವಂತೆಯೇ ಇರಲಿದೆ. 20 ಲಕ್ಷ ರು. ಮೌಲ್ಯ ಮೀರಿದ ಸ್ಥಿರಾಸ್ತಿ ವಹಿವಾಟುಗಳಿಗೆ ಪ್ಯಾನ್ ನಮೂದು ಕಡ್ಡಾಯ. ಈವರೆಗೆ 10 ಲಕ್ಷ ರು. ಮೀರಿದ ಆಸ್ತಿಗೂ ಪ್ಯಾನ್ ಕಡ್ಡಾಯವಿತ್ತು.

2 ಬಗೆ ದೃಢೀಕರಣ

ಡಿಜಿಟಲ್ ಪಾವತಿ ವಹಿವಾಟಿಗೆ ಎಸ್‌ಎಂಎಸ್ ಆಧಾರಿತ ಒಟಿಪಿ ಮಾತ್ರವಲ್ಲದೇ, ಹೊಸದಾಗಿ 2 ಬಗೆಯ ದೃಢೀಕರಣ ಅಗತ್ಯ ಎಂಬ ನಿಯಮ ಏ.1ರಿಂದ ಜಾರಿಗೆ ಬಂದಿದೆ.

ನೌಕರರ ರಜೆ-ಭವಿಷ್ಯ ನಿಧಿ

- ಕಾರ್ಮಿಕ ಕಾಯಿದೆಯಲ್ಲಿಯೂ ಬದಲಾವಣೆ ಬಂದಿದ್ದು, ವರ್ಷದಲ್ಲಿ ಕನಿಷ್ಠ 240 ದಿನ ಕೆಲಸ ಮಾಡಿದ್ದರಷ್ಟೇ ರಜೆಯ ಹಕ್ಕು ಸಿಗುತ್ತಿತ್ತು. ಈ ನಿಯಮ ಇಂದಿನಿಂದ ಕನಿಷ್ಠ 180 ದಿನಗಳ ಸೇವೆಗೆ ಬದಲಾಗಿದೆ.
- ಕಂಪನಿಗಳು ನೌಕರರ ಮೇಲಿನ ಒಟ್ಟು ವೇತನ ವೆಚ್ಚದ(ಸಿಟಿಸಿ) ಶೇ.50ರಷ್ಟು ಮೂಲ ವೇತನ ಪಾವತಿಸಬೇಕಿದೆ. ಹಾಗಾಗಿ ಬೇಸಿಕ್ ಪೇ ಹೆಚ್ಚಲಿದೆ. ಆಗ ಉದ್ಯೋಗಿ ಮತ್ತು ಉದ್ಯೋಗದಾತರು ಪಾವತಿಸಬೇಕಾದ ನೌಕರರ ಭವಿಷ್ಯ ನಿಧಿ(ಇಪಿಎಫ್) ಪ್ರಮಾಣ ಏರಿಕೆಯಾಗಲಿದೆ. ಪರಿಣಾಮ ನೌಕರರ 'ಟೇಕ್‌ಹೋಂ ಸ್ಯಾಲರಿ' ಸ್ವಲ್ಪ ತಗ್ಗಲಿದೆ. ಆದರೆ, ಭವಿಷ್ಯ ನಿಧಿ ಮೊತ್ತ ಗಣನೀಯ ಏರಿಕೆಯಾಗಲಿದೆ. ಇದು ಏ.1ರಿಂದಲೇ ಜಾರಿ.

ವಿಮಾ ಮೊತ್ತಕ್ಕೆ ತೆರಿಗೆ

ಯುನಿಟ್ ಲಿಂಕ್ಡ್ ವಿಮಾ ಯೋಜನೆಗಳ ವಾರ್ಷಿಕ ಪ್ರೀಮಿಯಂ ಮೊತ್ತ 2.50 ಲಕ್ಷ ರು. ದಾಟಿದರೆ ಕ್ಯಾಪಿಟಲ್ ಗೇನ್ ತೆರಿಗೆ ಬೀಳಲಿದೆ.

ಎಚ್‌ಆರ್‌ಎ- ತೆರಿಗೆ ವಿನಾಯಿತಿ

- ದೆಹಲಿ, ಮುಂಬೈ, ಕೋಲ್ಕತ್ತ ಮತ್ತು ಚೆನ್ನೈ ಮಾತ್ರವಿದ್ದ ದೇಶದ ಮೆಟ್ರೊ ನಗರಗಳ ಪಟ್ಟಿಗೆ ಈಗ ಬೆಂಗಳೂರು, ಅಹಮದಾಬಾದ್, ಹೈದರಾಬಾದ್ ಮತ್ತು ಪುಣೆ ಮಹಾನಗರಗಳೂ ಸೇರಿದ್ದು, ಏ.1ರಿಂದ ಈ 4 ನಗರಗಳ ನಿವಾಸಿ ಆದಾಯ ತೆರಿಗೆ ಪಾವತಿದಾರರಿಗೆ 'ಹೌಸ್ ಅಂಡ್ ರೆಂಟಲ್ ಅಲೊಯೆನ್ಸ್'(ಎಚ್‌ಆರ್‌ಎ) ವಿನಾಯಿತಿ ಶೇ.50ರಷ್ಟು ಪಡೆಯಲು ಅವಕಾಶವಾಗಿದೆ.
- ಮಕ್ಕಳ ಶೈಕ್ಷಣಿಕ ಶುಲ್ಕ ಮತ್ತು ಹಾಸ್ಟೆಲ್ ಶುಲ್ಕಕ್ಕೆ ಪೋಷಕರು ಪಡೆಯಬಹುದಾಗಿದ್ದ ಮಾಸಿಕ ಆದಾಯ ತೆರಿಗೆ ವಿನಾಯಿತಿ ಮಿತಿಯೂ ಕ್ರಮವಾಗಿ 3000 ಮತ್ತು 9000 ರು.ವರೆಗೂ ಏರಿಕೆಯಾಗಿದೆ.
- ಉದ್ಯೋಗಿಯು ಉದ್ಯೋಗದಾತರಿಂದ 2 ಲಕ್ಷ ರು.ಗಿಂತ ಕಡಿಮೆ ಮೊತ್ತದ ಮುಂಗಡ ಪಡೆದರೆ ತೆರಿಗೆ ವಿನಾಯಿತಿ ಇರಲಿದೆ. ಇದು ಈವರೆಗೆ 20 ಸಾವಿರ ರು. ವರೆಗಷ್ಟೇ ಇದ್ದಿತು.

ಸೋನಿಯಾ ಗಾಂಧಿ ಆಸ್ಪತ್ರೆಯಿಂದ ಮನೆಗೆ

ದೆಹಲಿ: ಉಸಿರಾಟದಲ್ಲಿ ಏರುಪೇರು, ಎದೆಗೂಡಿನಲ್ಲಿ ಬಿಗಿತ, ಪರಿಣಾಮವಾಗಿ ಜ್ವರ ಕಾಣಿಸಿಕೊಂಡಿದ್ದರಿಂದ ತಪಾಸಣೆಗಾಗಿ ದೆಹಲಿಯ ಸರ್ ಗಂಗಾರಾಮ್ ಆಸ್ಪತ್ರೆಗೆ ಮಾ.24ರಂದು ತೆರಳಿದ್ದ ಕಾಂಗ್ರೆಸ್ ಸಂಸದೀಯ ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಅವರನ್ನು

ಪರೀಕ್ಷಿಸಿದ್ದ ವೈದ್ಯರು, ಒಳರೋಗಿಯಾಗಿ ದಾಖಲಿಸಿಕೊಂಡು ಚಿಕಿತ್ಸೆ ಆರಂಭಿಸಿದ್ದರು. ಒಂದು ವಾರದ ಬಳಿಕ ಸೋನಿಯಾ ಗಾಂಧಿ ಅವರು ಚೇತರಿಸಿಕೊಂಡಿದ್ದು, ಅವರನ್ನು ಮಂಗಳವಾರ ಡಿಸ್ಚಾರ್ಜ್ ಮಾಡಲಾಗಿದೆ.

ಸೋನಿಯಾ ಗಾಂಧಿ ಅವರ ಶ್ವಾಸನಾಳದಲ್ಲಿ ಸೋಂಕು ಉಂಟಾಗಿತ್ತು. ಡಾ. ಡಿ.ಎಸ್.ರಾಣಾ, ಡಾ. ಎಸ್.ನಂದಿ ಮತ್ತು ಡಾ.ಅರೂಪ್ ಬಸು ಅವರ ಮೇಲ್ವಿಚಾರಣೆಯಲ್ಲಿ ಸೋನಿಯಾ ಅವರಿಗೆ ಉಸಿರಾಟದ ಸೋಂಕಿಗೆ ಸೂಕ್ತ ಆಂಟಿಬಯಾಟಿಕ್‌ಗಳನ್ನು ನೀಡಿ ಗುಣಪಡಿಸಲಾಗಿದೆ. ಅವರು ಚಿಕಿತ್ಸೆಗೆ ಉತ್ತಮವಾಗಿ ಸ್ಪಂದಿಸಿದ್ದಾರೆ. ಆರೋಗ್ಯದಲ್ಲಿ ಗಮನಾರ್ಹ ಸುಧಾರಣೆ ಕಂಡುಬಂದಿದ್ದರಿಂದ ಅವರನ್ನು ಮಂಗಳವಾರ ಬೆಳಗ್ಗೆ ಮನೆಗೆ ಕಳುಹಿಸಿಕೊಡಲಾಗಿದೆ. ಉಳಿದಂತೆ ಮನೆಯಲ್ಲಿಯೇ ಅವರಿಗೆ ಚಿಕಿತ್ಸೆ ಮುಂದುವರಿಸಲಾಗುವುದು ಎಂದು ಸರ್ ಗಂಗಾರಾಮ್ ಆಸ್ಪತ್ರೆ ಅಧ್ಯಕ್ಷ ಡಾ.ಅಜಯ್ ಸ್ವರೂಪ್ ಸುದ್ದಿಸಂಸ್ಥೆಗೆ ವಿವರಿಸಿದ್ದಾರೆ. ಸೋನಿಯಾ ಗಾಂಧಿ ಅವರು ಈ ಮೊದಲೊಮ್ಮೆ(ಜನವರಿ) ದೆಹಲಿಯಲ್ಲಿನ ಮಾಲಿನ್ಯದಿಂದಾಗಿ ಆಸ್ತಮಾ ಲಕ್ಷಣ ಕಾಣಿಸಿಕೊಂಡಿದ್ದರಿಂದ ಅವರನ್ನು ಸರ್ ಗಂಗಾ ರಾಮ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಹಿಮಾಚಲ ಪ್ರದೇಶಕ್ಕೆ ತೆರಳಿದ್ದಾಗಲೂ ಆರೋಗ್ಯ ಕೆಟ್ಟಿತ್ತು.

'ಸಾಮ್ರಾಟ್ ಸಂಪ್ರತಿ ಮ್ಯೂಸಿಯಂ' ಉದ್ಘಾಟನೆ

ಪ್ರಾಚೀನ ಹಸ್ತಪ್ರತಿಗಳು ದೇಶದ ಅಮೂಲ್ಯ ಸಂಪತ್ತು: ಮೋದಿ

ಗಾಂಧಿನಗರ: ಗುಜರಾತ್ ರಾಜ್ಯದ ಗಾಂಧಿನಗರದಲ್ಲಿನ ಕೋಬಾ ತೀರ್ಥ ಗೃಹದಲ್ಲಿ ಜೈನ ಧರ್ಮದ ಅಪರೂಪದ ಹಸ್ತಪ್ರತಿಗಳು, ಇತಿಹಾಸದ ಗುರುತುಗಳನ್ನು ಒಳಗೊಂಡ 2 ಸಾವಿರ ಅಪರೂಪದ ವಸ್ತುಗಳಿರುವ 'ಸಾಮ್ರಾಟ್ ಸಂಪ್ರತಿ ಮ್ಯೂಸಿಯಂ' ಅನ್ನು ಪ್ರಧಾನಿ ಮೋದಿ ಮಂಗಳವಾರ ಉದ್ಘಾಟಿಸಿದರು.

ಈ ಸಂದರ್ಭ ಮಾತನಾಡಿದ ಅವರು, ದೇಶಕ್ಕೆ ಸ್ವಾತಂತ್ರ್ಯ ಸಿಕ್ಕ ಬಳಿಕ ದೇಶದ ಅಮೂಲ್ಯ ಸಂಪತ್ತಾಗಿರುವ ಹಸ್ತಪ್ರತಿಗಳನ್ನು ಹುಡುಕಿ ಸಂರಕ್ಷಿಸುವ ಕೆಲಸ ಆಗಬೇಕಿತ್ತು. ಅದೊಂದು ರಾಷ್ಟ್ರೀಯ ಹೊಣೆಗಾರಿಕೆಯಾಗಿತ್ತು. ಆದರೆ, ಆಗ ಇದ್ದ ಕಾಂಗ್ರೆಸ್ ಸರಕಾರ ದೇಶದ ಅಮೂಲ್ಯ ಸಂಪತ್ತಾಗಿರುವ ಹಸ್ತಪ್ರತಿಗಳನ್ನು ಸಂರಕ್ಷಿಸಿಡುವುದನ್ನೇ ನಿರ್ಲಕ್ಷ್ಯ ಮಾಡಿತ್ತು. ಇಂತಹ ಕಾರ್ಯದಲ್ಲಿಯೂ ಆ ಪಕ್ಷದ ಸರಕಾರ ರಾಜಕೀಯ ಕಾರಣಗಳನ್ನು ಹುಡುಕುತ್ತಿತ್ತು ಎಂದು ಖಂಡಿಸಿದರು.ಸಂತರಾದ ಜೈನಾಚಾರ್ಯ ಶ್ರೀ ಪದ್ಮಸಾಗರ್ ಸುರೀಶ್ವರ್ ಜಿ ಮಹಾರಾಜ್ ಸಾಹೆಬ್ ಅವರು 60

ಗುಜರಾತ್‌ನ ಗಾಂಧಿನಗರದಲ್ಲಿ ಪ್ರಧಾನಿ ಮೋದಿ ಮಂಗಳವಾರ 'ಸಾಮ್ರಾಟ್ ಸಂಪ್ರತಿ ಮ್ಯೂಸಿಯಂ' ಉದ್ಘಾಟಿಸಿದರು.

ವರ್ಷಗಳ ಕಾಲ ದೇಶ ಪರ್ಯಟನೆ ಮಾಡಿ ಅಮೂಲ್ಯ ಹಸ್ತಪ್ರತಿಗಳನ್ನು ಸಂಗ್ರಹಿಸಿ ಕಾಪಾಡಿದರು. ಜ್ಞಾನ ಭಾರತಂ ಮಿಷನ್ ಕೂಡಾ ಅದೇ ಕಾರ್ಯದಲ್ಲಿದೆ ಎಂದು ಪ್ರಧಾನಿ ಶ್ಲಾಘಿಸಿದರು. ಕ್ರಿಸ್ತಪೂರ್ವ 224-215ರಲ್ಲಿ ಆಳ್ವಿಕೆ ನಡೆಸಿದ, ಅಹಿಂಸೆಯನ್ನು ಬೋಧಿಸಿದ ಸಾಮ್ರಾಟ್ ಸಂಪ್ರತಿ ಮಹಾರಾಜರ ಸ್ಮರಣಾರ್ಥ 'ಸಾಮ್ರಾಟ್ ಸಂಪ್ರತಿ ಮ್ಯೂಸಿಯಂ' ಆರಂಭಿಸಲಾಗಿದೆ.

ಪಾಕ್ ಉಗ್ರ ಮಸೂದ್ ಅಜರ್ ಸೋದರ ತಾಹಿರ್ ಅನ್ವರ್ ಸಾವು

ಇಸ್ಲಾಮಾಬಾದ್: ಪಾಕಿಸ್ತಾನದ ಉಗ್ರ ಸಂಘಟನೆ 'ಜೈಶ್-ಎ-ಮೊಹಮ್ಮದ್'ನ ಮುಖ್ಯಸ್ಥ ಮಸೂದ್ ಅಜರ್‌ನ ಸಹೋದರ ಮೊಹಮ್ಮದ್ ತಾಹಿರ್ ಅನ್ವರ್ ಶಂಕಾಸ್ಪದ ರೀತಿ ಸಾವಿಗೀಡಾಗಿದ್ದಾನೆ. ಆತನ, ಸಾವಿಗೆ ಕಾರಣ ಏನು ಎಂಬುದು ತಿಳಿದುಬಂದಿಲ್ಲ.

ಸೋದರ ತಾಹಿರ್ ಸಾವು ಹೇಗಾಯಿತು ಎಂಬ ಬಗ್ಗೆ ಮಸೂದ್ ಅಜರ್ ಆಗಲೀ, ಜೈಶ್ ಸಂಘಟನೆಯಾಗಲೀ ಬಾಯಿಬಿಟ್ಟಿಲ್ಲ. ಬಹಾವಲ್‌ಪುರದ ಜಾಮಿಯಾ ಮಸೀದಿ ಉಸ್ಮಾನ್ ವಾಲಿ ಬಳಿ ಸೋಮವಾರ ತಡರಾತ್ರಿ ತಾರಿಕ್ ಸಮಾಧಿ ಮಾಡಲಾಗಿದೆ ಎಂದಷ್ಟೇ ಸಂಘಟನೆ ಚಾನೆಲ್ ಸುದ್ದಿ ಬಿತ್ತರಿಸಿದೆ.

ಜೈಶ್-ಎ-ಮೊಹಮ್ಮದ್ ಉಗ್ರ ಸಂಘಟನೆ ಮುಖ್ಯಸ್ಥ ಮೌಲಾನಾ ಮಸೂದ್ ಅಜರ್‌ಗೆ 5 ಸೋದರರು. ತಾಹಿರ್ ಅನ್ವರ್ ಹಿರಿಯ ಸಹೋದರ. ತಾಹಿರ್ ಹಲವು ವರ್ಷಗಳಿಂದ ಜೈಶ್ ಚಟುವಟಿಕೆಗಳಲ್ಲಿ ಸಕ್ರಿಯನಾಗಿದ್ದ. ಆತನ ಸಾವು ಪಾಕ್‌ನಲ್ಲಿ ಇತ್ತೀಚೆಗೆ ನಡೆಯುತ್ತಿರುವ ಪ್ರಮುಖ ಭಯೋತ್ಪಾದಕರ ನಿಗೂಢ ಸಾವಿನ ಸರಣಿಯ ಭಾಗ ಆಗಿರಬಹುದು ಎಂದು ಊಹಿಸಲಾಗಿದೆ.

ಭಾರತ 'ಆಪರೇಷನ್ ಸಿಂಧೂರ್' ನಡೆಸಿದಾಗ ಬಹಾವಲ್‌ಪುರದ ಮೇಲೆ ನಡೆದ ವೈಮಾನಿಕ ದಾಳಿಯಲ್ಲಿ ಮಸೂದ್‌ನ ಸೋದರಿ, ಸೋದರಳಿಯ ಸೇರಿ ಕುಟುಂಬದ 10 ಜನ ಮತ್ತು ಕೆಲವು ಸಹಚರರು ಹತರಾದರು. ಈಗ ಸೋದರನೂ ಸಾವಿಗೀಡಾಗಿದ್ದಾನೆ. ಜೈಶ್ ಉಗ್ರ ಸಂಘಟನೆ ಭಾರತದ ಸಂಸತ್ ಭವನದ ಮೇಲೆ 2001ರಲ್ಲಿ ದಾಳಿ, 2008ರಲ್ಲಿ ಮುಂಬೈ ದಾಳಿ, 2016ರಲ್ಲಿ ಪಠಾಣ್ ಕೋಟ್ ದಾಳಿ ಮತ್ತು 2019ರಲ್ಲಿ ಪುಲ್ವಾಮಾ ದಾಳಿ ನಡೆಸಿದೆ. ಹಾಗಾಗಿ ಮಸೂದ್ ಅಜರ್ ಭಾರತಕ್ಕೆ ಬೇಕಾಗಿರುವ ಉಗ್ರನಾಗಿದ್ದಾನೆ. ಆದರೆ, ಆತ ಬಹಳ ದಿನಗಳಿಂದ ಸಾರ್ವಜನಿಕವಾಗಿ ಕಾಣಿಸಿಕೊಂಡಿಲ್ಲ.

ಒಂದೇ ತಿಂಗಳಲ್ಲಿ ಷೇರುಪೇಟೆ ಹೂಡಿಕೆದಾರರಿಗೆ 51 ಲಕ್ಷ ಕೋಟಿ ರು. ನಷ್ಟ

ಇರಾನ್ ಯುದ್ಧದ ಕಾರಣ ಷೇರುಪೇಟೆ ತಲ್ಲಣ

ಮುಂಬೈ: ಫೆ.28ರಂದು ಇರಾನ್ ವಿರುದ್ಧ ಅಮೆರಿಕ-ಇಸ್ರೇಲ್ ಆರಂಭಿಸಿ ಯುದ್ಧಕ್ಕೀಗ(ಮಂಗಳವಾರ) 32 ದಿನಗಳು. ಕಳೆದೊಂದು ತಿಂಗಳ ಅವಧಿಯಲ್ಲಿ ಭಾರತದ ಷೇರುಪೇಟೆ ಹಿಂದೆಂದೂ ಇಲ್ಲದಷ್ಟು ಸಂಕಷ್ಟಕ್ಕೀಡಾಗಿದೆ. ದೇಶದ ಷೇರುಪೇಟೆ ಹೂಡಿಕೆದಾರರು ಅಪಾರ ಪ್ರಮಾಣದಲ್ಲಿ ನಷ್ಟ ಅನುಭವಿಸಿದ್ದಾರೆ. ಅಷ್ಟೇ ಅಲ್ಲದೇ, ಮುಂಬೈ ಷೇರುಪೇಟೆಗಳಲ್ಲಿ ಬಂಡವಾಳ ತೊಡಗಿಸಿದ್ದ ವಿದೇಶಿ ಸಾಂಸ್ಥಿಕ ಹೂಡಿಕೆದಾರರೂ ಭಾರೀ ಪ್ರಮಾಣದಲ್ಲಿ ತಮ್ಮ ಬಂಡವಾಳವನ್ನು ವಾಪಸ್ ತೆಗೆದುಕೊಂಡಿದ್ದಾರೆ.

2020ರ ಮಾರ್ಚ್ ತಿಂಗಳ ಬಳಿಕ ದೇಶದ ಷೇರುಪೇಟೆ ಅತ್ಯಂತ ಗರಿಷ್ಠ ಪ್ರಮಾಣದಲ್ಲಿ ಕುಸಿತ ಕಂಡಿದೆ. ಬಾಂಬೆ ಸ್ಟಾಕ್ ಎಕ್ಸ್‌ಚೇಂಜ್(ಬಿಎಸ್‌ಇ)ನ ಸಂವೇದಿ ಸೂಚ್ಯಂಕದಲ್ಲಿನ ಷೇರುಗಳ ಮೌಲ್ಯ ತೀವ್ರ ಸ್ವರೂಪದಲ್ಲಿ ನಷ್ಟಕ್ಕೀಡಾಗಿದೆ. ಯುದ್ಧ ಆರಂಭಕ್ಕೆ ಮುನ್ನ 463 ಲಕ್ಷ ಕೋಟಿಗಳಷ್ಟಿದ್ದ 'ಬಿಎಸ್‌ಇ'ಯ ಒಟ್ಟಾರೆ ಬಂಡವಾಳ ಮೌಲ್ಯ ಇದೇ ಸೋಮವಾರದ ವೇಳೆಗೆ 412 ಲಕ್ಷ ಕೋಟಿ ಲೆಕ್ಕಕ್ಕೆ ಬಂದುನಿಂತಿದೆ. ಅಂದರೆ, ಇರಾನ್ ಯುದ್ಧದ ಈ 32 ದಿನಗಳ ಅವಧಿಯಲ್ಲಿ ಒಟ್ಟು 51 ಲಕ್ಷ ಕೋಟಿ ರು. ನಷ್ಟ ಅನುಭವಿಸಿದೆ.

ವಿದೇಶಿ ಸಾಂಸ್ಥಿಕ ಹೂಡಿಕೆದಾರರೂ ಭಾರತದ ಷೇರುಪೇಟೆಗಳಲ್ಲಿನ ತಮ್ಮ ಬಂಡವಾಳದಲ್ಲಿ 1.20 ಲಕ್ಷ

ಕೋಟಿ ರು.ಗಳಷ್ಟು ದೊಡ್ಡ ಮೊತ್ತವನ್ನು ವಾಪಸ್ ತೆಗೆದುಕೊಂಡಿದ್ದಾರೆ.

ಕಳೆದ 32 ದಿನಗಳಲ್ಲಿ ದೇಶದ ಷೇರುಪೇಟೆ ಹೂಡಿಕೆದಾರರು ಒಂದಲ್ಲ ಎರಡಲ್ಲ ಹಲವು ಬಾರಿ ಸರಾಸರಿ 10 ಲಕ್ಷ ಕೋಟಿ ರು.ಗಳಷ್ಟು ಬಂಡವಾಳವನ್ನು ಕಳೆದುಕೊಂಡಿದ್ದಾರೆ.

ಇದೇ ವರ್ಷದ ಆರಂಭದಲ್ಲಿ 85,762 ಅಂಶಗಳಷ್ಟು ಗರಿಷ್ಠ ಮಟ್ಟದಲ್ಲಿ ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ(ಬಿಎಸ್‌ಇ ಸೆನ್ಸೆಕ್ಸ್) ಇರಾನ್ ಮೇಲೆ ಅಮೆರಿಕ ಯುದ್ಧ ಆರಂಭಿಸಲಿದೆ ಎಂಬ ಆತಂಕದ ಕಾರಣದಿಂದಾಗಿ ಕುಸಿತ ಕಂಡು 2026 ಫೆ.27ರಂದು 81,239 ಅಂಶಗಳಲ್ಲಿ ವಹಿವಾಟು ನಡೆಸಿತ್ತು. ನಂತರದ ದಿನಗಳಲ್ಲಿ ಇಳಿಕೆಯ

ಹಣಕಾಸು ಮಾರುಕಟ್ಟೆ ಪರಿಣಾಮ

- ಮುಂಬೈ ಷೇರುಪೇಟೆ ಸೂಚ್ಯಂಕ ಶೇ.11ರಷ್ಟು ಕುಸಿತ
- ವಿದೇಶಿ ಸಾಂಸ್ಥಿಕ ಹೂಡಿಕೆ 1.20 ಲಕ್ಷ ಕೋಟಿ ಹೊರಕ್ಕೆ
- ಡಾಲರ್ ಎದುರು ರುಪಾಯಿ ಮೌಲ್ಯ 95 ರು.ಗೆ ಕುಸಿತ
- ಬ್ರೆಂಟ್ ಕಚ್ಚಾತೈಲ ಬ್ಯಾರಲ್‌ಗೆ 115 ಡಾಲರ್‌ಗೆ ಏರಿಕೆ

ಬಿಎಸ್‌ಇ ಸೆನ್ಸೆಕ್ಸ್ ಕುಸಿತ	
2026 ಜ.2	85,762
2026 ಫೆ.27	81,239
2026 ಮಾ.30	71,947

ಹಾದಿಯಲ್ಲಿಯೇ ಸಾಗಿ ಮಾ.30ರ ಸೋಮವಾರ ಸಂಜೆ 71,947.55 ಅಂಶಗಳಲ್ಲಿ ದಿನದ ವಹಿವಾಟು ಕೊನೆಗೊಳಿಸಿದೆ. ಆ ಮೂಲಕ ಸಂವೇದಿ ಸೂಚ್ಯಂಕ ಸೋಮವಾರ ಒಂದೇ ದಿನ ಬಿಎಸ್‌ಇ ಸೆನ್ಸೆಕ್ಸ್ 1,635.67 ಅಂಶಗಳ(ಶೇ.2.22) ನಷ್ಟ ಅನುಭವಿಸಿದೆ.

ಸಾನಂದ್‌ನಲ್ಲಿ ಕೇನ್ಸ್ ಸೆಮಿಕಾನ್‌ಗೆ ಪ್ರಧಾನಿ ನರೇಂದ್ರ ಮೋದಿ ಚಾಲನೆ

ಗುಜರಾತಲ್ಲಿ 3,300 ಕೋಟಿ ರು. ಸೆಮಿಕಂಡಕ್ಟರ್ ಘಟಕ

ಅಹಮದಾಬಾದ್: 3,300 ಕೋಟಿ ರು. ಬಂಡವಾಳ ಹೂಡಿಕೆಯೊಂದಿಗೆ ಅಹಮದಾಬಾದ್ ಸಮೀಪದ ಸಾನಂದ್‌ನಲ್ಲಿ ನಿರ್ಮಾಣಗೊಂಡಿರುವ ನೂತನ 'ಕೇನ್ಸ್ ಸೆಮಿಕಾನ್' ಕಂಪನಿಯ ಸೆಮಿಕಂಡಕ್ಟರ್ ಘಟಕಕ್ಕೆ ಪ್ರಧಾನಿ ನರೇಂದ್ರ ಮೋದಿ ಮಂಗಳವಾರ ಚಾಲನೆ ನೀಡಿದ್ದಾರೆ.

'ಇಂಡಿಯ ಸೆಮಿಕಂಡಕ್ಟರ್ ಮಿಷನ್'ನಡಿ ಆರಂಭವಾಗಿರುವ 2ನೇ ಚಿಪ್ ಮ್ಯಾನುಫ್ಯಾಕ್ಚರಿಂಗ್ ಘಟಕ ಇದಾಗಿದೆ. ಈ ಸೆಮಿಕಂಡಕ್ಟರ್ ಘಟಕದಲ್ಲಿ ಅಸೆಂಬ್ಲಿ(ಜೋಡಣೆ) ಮತ್ತು ಟೆಸ್ಟಿಂಗ್ ಫೆಸಿಲಿಟಿ(ಪರೀಕ್ಷಾ ಸೌಲಭ್ಯ) ಇದೆ.

ಮೈಸೂರಿನ ಕೇನ್ಸ್ ಟೆಕ್ನಾಲಜಿ ಕಂಪನಿ ಗುಜರಾತ್‌ನಲ್ಲಿ 'ಕೇನ್ಸ್ ಸೆಮಿಕಾನ್' ಹೆಸರಿನಲ್ಲಿ ಸೆಮಿಕಂಡಕ್ಟರ್ ಮತ್ತು ಚಿಪ್ ತಯಾರಕ ಘಟಕ ಆರಂಭಿಸಿದೆ. ಆಟೊಮೋಟಿವ್ ಮತ್ತು ಇಂಡಸ್ಟ್ರಿಯಲ್ ಅಪ್ಲಿಕೇಶನ್‌ಗಳಿಗೆ ಬಳಸಲಾಗುವ ಇಂಟೆಲಿಜೆಂಟ್ ಪವರ್ ಮಾಡ್ಯೂಲ್‌ಗಳನ್ನು (ಐಪಿಎಂ) ಈ ಘಟಕದಲ್ಲಿ ತಯಾರಿಸಲಾಗುತ್ತದೆ. ಒಂದು ಮಾಡ್ಯೂಲ್‌ನಲ್ಲಿ 17 ಚಿಪ್‌ಗಳನ್ನು ಜೋಡಿಸಲಾಗುತ್ತದೆ. ಘಟಕ ಪೂರ್ಣ ಪ್ರಮಾಣದಲ್ಲಿ ಕಾರ್ಯ ನಿರ್ವಹಿಸುವಂತಾದಾಗ ದಿನಕ್ಕೆ 60 ಲಕ್ಷ ಚಿಪ್ ಯುನಿಟ್‌ಗಳನ್ನು ತಯಾರಿಸಬಹುದಾಗಿದೆ. ಇದಕ್ಕೆ ಮುನ್ನ ಮಾರ್ಚ್‌ನಲ್ಲಿ ಗುಜರಾತ್‌ನಲ್ಲಿ ಅಮೆರಿಕದ ಮೈಕ್ರಾನ್ ಟೆಕ್ನಾಲಜಿ ಕಂಪನಿ ಭಾರತದ ಮೊದಲ ಸೆಮಿಕಂಡಕ್ಟರ್ ಘಟಕ ಆರಂಭಿಸಿತ್ತು.

ಸಮಾಚಾರ ಸಣ್ಣದಲ್ಲ

ಏ.2 ರಂದು ಪೊಲೀಸ್ ಧ್ವಜ ದಿನಾಚರಣೆ

ಬಳ್ಳಾರಿ: ಜಿಲ್ಲಾ ಪೊಲೀಸ್ ಇಲಾಖೆಯ ವತಿಯಿಂದ ಏ.2 ರಂದು ಬೆಳಗ್ಗೆ 8 ಗಂಟೆಗೆ ನಗರದ ಜಿಲ್ಲಾ ಸಶಸ್ತ್ರ ಪೊಲೀಸ್ ಕವಾಯತು ಮೈದಾನದಲ್ಲಿ ''ಪೊಲೀಸ್ ಧ್ವಜ ದಿನಾಚರಣೆ'' ಕಾರ್ಯಕ್ರಮ ಆಯೋಜಿಸಲಾಗಿದೆ. ಮುಖ್ಯ ಅತಿಥಿಯಾಗಿ ಬಳ್ಳಾರಿ ಗ್ರಾಮೀಣ ಪೊಲೀಸ್ ಠಾಣೆಯ ನಿವೃತ್ತ ಸಹಾಯಕ ಸಬ್-ಇನ್‌ಸ್ಪೆಕ್ಟರ್‌ಆದ ಶ್ರೀನಿವಾಸಲು ಎಂ. ಕಾರ್ಯಕ್ರಮದಲ್ಲಿ ಭಾಗವಹಿಸಿ ಗೌರವ ವಂದನೆ ಸ್ವೀಕರಿಸಲಿದ್ದಾರೆ. ಬಳ್ಳಾರಿ ವಲಯದ ಪೊಲೀಸ್ ಮಹಾನಿರೀಕ್ಷಕ ಡಾ.ಪಿ.ಎಸ್. ಹರ್ಷ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಜಿಲ್ಲಾ ಪೊಲೀಸ್ ಅಧೀಕ್ಷಕ ಡಾ.ಸುಮನ್ ಡಿ. ಪೆನ್ನೇಕರ್, ಹೆಚ್ಚುವರಿ ಪೊಲೀಸ್ ಅಧೀಕ್ಷಕರುಗಳಾದ ಕೆ.ಪಿ. ರವಿಕುಮಾರ್‌ಮತ್ತು ಎಸ್. ನವೀನ್‌ಕುಮಾರ್ ಸೇರಿದಂತೆ ಜಿಲ್ಲೆಯ ಎಲ್ಲಾ ಪೊಲೀಸ್ ಅಧಿಕಾರಿ-ಸಿಬ್ಬಂದಿ ವರ್ಗ ಉಪಸ್ಥಿತರಿರಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಉಚಿತ ವಸತಿ ಶಾಲೆಗೆ ಅರ್ಜಿ ಆಹ್ವಾನ

ಬಳ್ಳಾರಿ: ಮೈಸೂರಿನ ಸುತ್ತೂರು ಕ್ಷೇತ್ರದ ಜೆ.ಎಸ್.ಎಸ್ ಉಚಿತ ವಸತಿ ಶಾಲೆಯಲ್ಲಿ 2026-27ನೇ ಶೈಕ್ಷಣಿಕ ಸಾಲಿನ ಪ್ರವೇಶಾತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. ಗ್ರಾಮೀಣ ಭಾಗದ ಬಡ ಮತ್ತು ಅರ್ಹ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡುವ ಉದ್ದೇಶದಿಂದ, 1 ರಿಂದ 8ನೇ ತರಗತಿಯವರೆಗೆ ಹೊಸದಾಗಿ ಪ್ರವೇಶ ಪಡೆಯಲು ಇಚ್ಛಿಸುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ. ಆಸಕ್ತ ಪೋಷಕರು ಶಾಲೆಯ ಅಧಿಕೃತ ವೆಬ್ಸೈಟ್ಗಳಾದ www.jssschoolsuttur.org ಅಥವಾ www.jssonline.org ಮೂಲಕ ಅರ್ಜಿಗಳನ್ನು ಡೌನ್ಲೋಡ್ ಮಾಡಿಕೊಳ್ಳಬಹುದು. ಈ ಸಂಸ್ಥೆಯಲ್ಲಿ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣದ ಜೊತೆಗೆ ವಸತಿ ಮತ್ತು ಊಟದ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತದೆ. ಏಪ್ರಿಲ್ 2 ರಿಂದ ಅರ್ಜಿ ವಿತರಣೆ ಪ್ರಾರಂಭ, ಮೇ 16 ಅರ್ಜಿ ಸಲ್ಲಿಸಲು ಕೊನೆಯ ದಿನ. ಭರ್ತಿ ಮಾಡಿದ ಅರ್ಜಿಗಳನ್ನು ಅಗತ್ಯ ದಾಖಲೆಗಳೊಂದಿಗೆ 'ಮುಖ್ಯೋಪಾಧ್ಯಾಯರು, ಜೆ.ಎಸ್.ಎಸ್. ಸಂಸ್ಥೆಗಳು, ಸುತ್ತೂರು, ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ - 571129' ಈ ವಿಳಾಸಕ್ಕೆ ನೇರವಾಗಿ ಅಥವಾ ಅಂಚೆ ಮೂಲಕ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಮೊ.7411486938, ದೂ.08221-232332 ಗೆ ಸಂಪರ್ಕಿಸಬಹುದು ಎಂದು ಸಂಸ್ಥೆಯ ಆಡಳಿತಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಜಮಟ್ಟ ಸಮಾವೇಶದ ಪೋಸ್ಟರ್ ಬಿಡುಗಡೆ

ಹೊಸಪೇಟೆ: ನಗರದಲ್ಲಿ ಜರುಗಿದ ಜಿಲ್ಲಾ ಮಟ್ಟದ ಶಿಕ್ಷಣ ಉಳಿಸಿ ಸಮಿತಿಯ ಸಭೆಯಲ್ಲಿ ಸರಕಾರಿ ಶಾಲೆಗಳನ್ನು ಉಳಿಸಲು ಏಪ್ರಿಲ್ 10 ರಂದು ಬೆಂಗಳೂರಿನಲ್ಲಿ ನಡೆಯಲಿರುವ ರಾಜಮಟ್ಟದ ಸಮಾವೇಶದ ಪೋಸ್ಟರ್‌ಬಿಡುಗಡೆ ಮಾಡಲಾಯಿತು. ಎಐಡಿಎಸ್‌ಒ ಜಿಲ್ಲಾಧ್ಯಕ್ಷ ರವಿಕಿರಣ್ ಮಾತನಾಡಿ, ಕೆಪಿಎಸ್ ಮ್ಯಾಗ್ನೆಟ್ ಯೋಜನೆ ಹೆಸರಿನಲ್ಲಿ ರಾಜ್ಯದಲ್ಲಿ 40,000 ಸರಕಾರಿ ಶಾಲೆ ಹಾಗೂ ವಿಜಯನಗರ ಜಿಲ್ಲೆಯ 700 ಕ್ಕೂ ಹೆಚ್ಚು ಸರಕಾರಿ ಶಾಲೆಗಳನ್ನು ಮುಚ್ಚಲು ಸರಕಾರ ಮುಂದಾಗಿದ್ದು ಈ ನೀತಿಯ ವಿರುದ್ಧ ಎಐಡಿಎಸ್‌ಒ ನೇತೃತ್ವದಲ್ಲಿ ಈಗಾಗಲೇ ಜಿಲ್ಲೆಯ ಜನತೆ ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿಗಳನ್ನು ರಚಿಸಿಕೊಂಡು ಕಳೆದ ನಾಲ್ಕು ತಿಂಗಳಿನಿಂದ ಎಐಡಿಎಸ್‌ಒ ವಿದ್ಯಾರ್ಥಿ ಸಂಘಟನೆ ನೇತೃತ್ವದಲ್ಲಿ ಹೋರಾಟ ನಡೆಸುತ್ತಿದ್ದಾರೆ ಎಂದರು. ಕೆಪಿಎಸ್ ಮ್ಯಾಗ್ನೆಟ್ ಯೋಜನೆ ಕೈ ಬಿಟ್ಟು, ನಮ್ಮೂರ ಶಾಲೆ ಉಳಿಸಿ ಎಂದು ಆಗ್ರಹಿಸಿ ಹಳ್ಳಿಯಲ್ಲಿ ಹೋರಾಟ ನಡೆಸಿ ತಾಲೂಕು ಹಾಗೂ ಜಿಲ್ಲಾ ಮಟ್ಟದ ವಿದ್ಯಾರ್ಥಿ ಪೋಷಕರ ಪ್ರತಿಭಟನಾ ಸಮಾವೇಶಗಳು ನಡೆದಿವೆ. ಈ ಹೋರಾಟದ ಮುಂದುವರಿಕೆಯಾಗಿ ಕೆಪಿಎಸ್ ಯೋಜನೆ ಕೈ ಬಿಟ್ಟು ನಮ್ಮೂರ ಶಾಲೆ ಉಳಿಸಿ ಎಂಬ ಧ್ವನಿಯನ್ನು ರಾಜಧಾನಿಯಲ್ಲಿ ಮೊಳಗಿಸಲು ಏ.10 ರಂದು ಬೆಂಗಳೂರಿನ ಫ್ರೀಡಂ ಪಾರ್ಕ್ ನಲ್ಲಿ ರಾಜ್ಯಮಟ್ಟದ ಸಮಾವೇಶವನ್ನು ಆಯೋಜಿಸಲಾಗಿದ್ದು ಈ ಹಿನ್ನೆಲೆಯಲ್ಲಿ ಜಿಲ್ಲೆಯ ಜನತೆ ಹೆಚ್ಚಿನ ಸಂಖ್ಯೆಯಲ್ಲಿ ಈ ಸಮಾವೇಶದಲ್ಲಿ ಭಾಗವಹಿಸಬೇಕೆಂದರು.

ಸಹಕಾರ ಸಂಘಗಳ ಸಮೀಕ್ಷೆಗೆ ಸಜ್ಜು

ಬಳ್ಳಾರಿ: ನಿಖರವಾದ ಅಂಕಿ-ಅಂಶಗಳನ್ನು ಸಂಗ್ರಹಿಸುವ ನಿಟ್ಟಿನಲ್ಲಿ ರಾಷ್ಟ್ರೀಯ ಸಾಂಖ್ಯಿಕ ಕಾರ್ಯಾಲಯವು ಸಹಕಾರ ಸಂಘಗಳ ಸಮೀಕ್ಷೆಯನ್ನು ಕೈಗೆತ್ತಿಕೊಳ್ಳುತ್ತಿದ್ದು, ಈ ಸಮೀಕ್ಷೆಯು ಅತ್ಯಂತ ಮಹತ್ವದ್ದಾಗಿದೆ ಎಂದು ಬೆಳಗಾವಿ ವಿಭಾಗದ ಸಹಕಾರ ಸಂಘಗಳ ಜಂಟಿ ನಿಬಂಧಕ ಕಲಪ್ಪ ಒಬಣ್ಣಗೋಳ ತಿಳಿಸಿದರು. ಹುಬ್ಬಳ್ಳಿ ನಗರದ ರಾಷ್ಟ್ರೀಯ ಸಾಂಖ್ಯಿಕ ಕಾರ್ಯಾಲಯದ ಸಭಾ ಭವನದಲ್ಲಿ ಸೋಮವಾರ ಆಯೋಜಿಸಲಾಗಿದ್ದ 'ಸಹಕಾರ ಸಂಘಗಳ ತ್ವರಿತ ಸಮೀಕ್ಷೆ''ಯ ತರಬೇತಿ ಶಿಬಿರ ಉದ್ಘಾಟಿಸಿ ಮಾತನಾಡಿದರು.

{ಡಿ.ಕೆ.ಶಿವಕುಮಾರ್ } ಡಿಸಿಎಂ

ಅಲ್ಪಸಂಖ್ಯಾತರಿಗೆ ಕಾಂಗ್ರೆಸ್ ಪಕ್ಷ ಬೇರೆ ಬೇರೆ ಅವಕಾಶ ನೀಡಿದೆ. ಅಲ್ಪಸಂಖ್ಯಾತರಿಗೆ 16 ನಿಗಮ ಮಂಡಳಿಗಳಲ್ಲಿ ಅವಕಾಶ ನೀಡಿದೆ. ದಾವಣಗೆರೆಯ ಅಬ್ದುಲ್ ಜಬ್ಬಾರ್‌ಸಾಬ್ ಪರಿಷತ್ ಸದಸ್ಯ ಸ್ಥಾನ ಸೇರಿದಂತೆ ಹಲವು ಅವಕಾಶ ನೀಡಿದೆ. ಇದನ್ನೇ ಗುರಿಯಾಗಿಸಿ ಬಿಜೆಪಿ ಟೀಕೆ ಮಾಡಿದರೂ ನಾವು ಹಿಂಜರಿಯದೇ ಅವಕಾಶ ನೀಡುವ ಮೂಲಕ ಕಾಂಗ್ರೆಸ್ ಅಲ್ಪಸಂಖ್ಯಾತರ ಪರವಿದೆ.



ಸಂಭ್ರಮದ ಭಗವಾನ್ ಮಹಾವೀರ ಜಯಂತ್ಯುತ್ಸವ | ಲಿಡ್ಕರ್ ಅಧ್ಯಕ್ಷ ಮುಂಡರಗಿ ನಾಗರಾಜ ಅಭಿಮತ

ಮಹಾವೀರರ ತತ್ವ ಸಮಾಜಕ್ಕೆ ದಾರಿದೀಪ

ಬಳ್ಳಾರಿ: ಭಗವಾನ್ ಮಹಾವೀರರ ತತ್ತ್ವಗಳು ಸಮಾಜಕ್ಕೆ ದಾರಿದೀಪವಾಗಿವೆ ಎಂದು ಡಾ.ಬಾಬು ಜಗಜೀವನ್ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷ ಮುಂಡರಗಿ ನಾಗರಾಜ್ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮಹಾನಗರ ಪಾಲಿಕೆ ಸಹಯೋಗದಲ್ಲಿ ನಗರದ ತೇರು ಬೀದಿಯ ಶ್ರೀ ಪಾರ್ಶ್ವನಾಥ್ ಭವನದಲ್ಲಿ ಏರ್ಪಡಿಸಿದ್ದ ಭಗವಾನ್ ಮಹಾವೀರ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಮಹಾವೀರರು ಪಂಚ ತತ್ತ್ವಗಳನ್ನು ಬೋಧಿಸಿದವರು. ಅಹಿಂಸೆಯ ಮೂಲಕ ಪ್ರತಿಯೊಂದು ಜೀವಿಯಲ್ಲೂ ಆತ್ಮವಿದ್ದು, ಯಾವುದೇ ಪ್ರಾಣಿ ಅಥವಾ ಮನುಷ್ಯನಿಗೆ ಹಿಂಸೆ ನೀಡಬಾರದು.

ಸತ್ಯದ ಮೂಲಕ ಸುಳ್ಳಿನ ಪ್ರಪಂಚದಲ್ಲಿ ಕನಿಷ್ಠ ಪಕ್ಷ ಸತ್ಯವನ್ನಾದರೂ ಮಾತನಾಡಬೇಕು. ಅಸ್ತೇಯ ಎಂದರೆ ನಮಗೆ ಸೇರದ ಯಾವುದೇ ವಸ್ತುವನ್ನು ಅಥವಾ ಆಸ್ತಿಯನ್ನು ಮುಟ್ಟಬಾರದು. ಬ್ರಹ್ಮಚರ್ಯ ಮೂಲಕ ಶಿಸ್ತಿನ ಜೀವನ ನಡೆಸುವುದು ಮತ್ತು ಸಂಯಮವನ್ನು ಪಾಲಿಸುವುದು. ಅಪರಿಗ್ರಹದಿಂದ ಭೌತಿಕ ಆಸೆಗಳನ್ನು ತ್ಯಜಿಸುವುದು ಎಂದು ತಮ್ಮ ಪಂಚ ತತ್ತ್ವಗಳನ್ನು ಒತ್ತಿ ತಿಳಿಸಿದ್ದಾರೆ ಎಂದರು.

ಸರಕಾರವು ಅಧಿಕೃತವಾಗಿ ಮಹಾವೀರ ಜಯಂತಿಯನ್ನು ಆಚರಿಸಿಕೊಂಡು ಬರುತ್ತಿದೆ. ಮಹಾವೀರರ ತ್ಯಾಗ, ಅವರ ವಿಚಾರಧಾರೆಗಳು ಕೇವಲ ಓದಿಕೊಂಡವರಿಗೆ ಮಾತ್ರವಲ್ಲದೆ, ಇಡೀ ಸಮಾಜಕ್ಕೆ ತಲುಪಬೇಕು ಎಂಬ ಉದ್ದೇಶ ಸರಕಾರ ಹೊಂದಿದೆ ಎಂದು ತಿಳಿಸಿದರು.

ಮುಂದಿನ ವರ್ಷಗಳಲ್ಲಿ ಮಹಾವೀರರ ಸಂದೇಶಗಳನ್ನು ಜನಸಾಮಾನ್ಯರಿಗೆ ತಲುಪಿಸಲು ಜಿಲ್ಲಾ ಕೇಂದ್ರದಲ್ಲಿ ದೊಡ್ಡ ಮಟ್ಟದ ಕಾರ್ಯಕ್ರಮದ ಮೂಲಕ ಉಪನ್ಯಾಸ ಆಯೋಜಿಸಲಾಗುವುದು ಎಂದು ಹೇಳಿದರು.

ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಇರಾನ್, ಅಮೆರಿಕ ಮತ್ತು ಇಸ್ರೇಲ್ ನಡುವೆ ನಡೆಯುತ್ತಿರುವ ಸಂಘರ್ಷದಂತಹ ಜಾಗತಿಕ ಅಶಾಂತಿಯ ಸಂದರ್ಭದಲ್ಲಿ, ಮಹಾವೀರರು ಬೋಧಿಸಿದ ಶಾಂತಿ ಮತ್ತು ಅಹಿಂಸೆಯ ಸಂದೇಶಗಳು ಅತ್ಯಂತ ಅವಶ್ಯಕವಾಗಿದೆ ಎಂದು ಅಭಿಪ್ರಾಯಪಟ್ಟರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮಹಾನಗರ ಪಾಲಿಕೆ ಸಹಯೋಗದಲ್ಲಿ ನಗರದ ತೇರು ಬೀದಿಯ ಶ್ರೀ ಪಾರ್ಶ್ವನಾಥ್ ಭವನದಲ್ಲಿ ಏರ್ಪಡಿಸಿದ್ದ ಭಗವಾನ್ ಮಹಾವೀರ ಜಯಂತಿ ಕಾರ್ಯಕ್ರಮವನ್ನು ಡಾ.ಬಾಬು ಜಗಜೀವನರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷ ಮುಂಡರಗಿ ನಾಗರಾಜ್ ಉದ್ಘಾಟಿಸಿದರು.

> ಮಹಾವೀರರು ಜಗತ್ತಿಗೆ ನೀಡಿದ ಶಾಂತಿ ಮತ್ತು ಅಹಿಂಸೆಯ ಸಂದೇಶಗಳು ಇಂದಿನ ಸಮಾಜಕ್ಕೆ ಅತ್ಯಗತ್ಯ. ಮಹಾವೀರರ ಬೋಧನೆಯಂತೆ ದಾನ, ಧರ್ಮ ಮತ್ತು ಸತ್ಯದ ಹಾದಿಯಲ್ಲಿ ನಡೆಯುವ ಸಂಕಲ್ಪವನ್ನು ಈ ಸಮಾಜದವರು ಹೊಂದಿದ್ದಾರೆ.
> -ಪಿ.ಗಾದೆಪ್ಪ, ಮಹಾನಗರ ಪಾಲಿಕೆಯ ಮಹಾಪೌರ

ಕೇವಲ ಮನುಷ್ಯರಿಗಷ್ಟೇ ಅಲ್ಲದೆ ಪ್ರಾಣಿ-ಪಕ್ಷಿ, ಕ್ರಿಮಿಕೀಟಗಳಿಗೂ ತೊಂದರೆಯಾಗದಂತೆ ಬದುಕಬೇಕು. ಉಸಿರಾಡುವಾಗಲೂ ಕ್ರಿಮಿಕೀಟಗಳಿಗೆ ಹಾನಿಯಾಗಬಾರದೆಂದು ಮಾಸ್ಕ್ ಧರಿಸುವ ಮತ್ತು ಪಾದರಕ್ಷೆಗಳಿಲ್ಲದೆ ನಡೆಯುವ ಸಂಪ್ರದಾಯಗಳನ್ನು ಜೈನ ಧರ್ಮದ ಅನುಯಾಯಿಗಳು ಅನುಸರಿಸುವ ಉನ್ನತ ತತ್ವಗಳನ್ನು ಇದೇ ಸಂದರ್ಭದಲ್ಲಿ ಪ್ರಶಂಶಿಸಿದರು.

ಸತ್ಯಂ ಶಿಕ್ಷಣ ಮಹಾವಿದ್ಯಾಲಯದ ಪ್ರಾಧ್ಯಾಪಕ ಆಲಂಭಾಷ ಜಯಂತಿ ಕುರಿತು ವಿಶೇಷ ಉಪನ್ಯಾಸದಲ್ಲಿ ಮಾತನಾಡಿ, ಜೈನ ಧರ್ಮವು ಸುಮಾರು 2625 ವರ್ಷಗಳ ಹಿಂದೆ ಸ್ಥಾಪನೆಯಾದ ಅತ್ಯಂತ ಪುರಾತನ ಧರ್ಮಗಳಲ್ಲಿ ಒಂದಾಗಿದೆ ಎಂದು ತಿಳಿಸುವ ಮೂಲಕ ಭಗವಾನ್ ಮಹಾವೀರರ ಜೀವನ ಚರಿತ್ರೆ ಪ್ರಸ್ತುತಪಡಿಸಿದರು.

ಕಾರ್ಯಕ್ರಮ ಆರಂಭಕ್ಕೂ ಮುನ್ನ ಸಂವಿಧಾನ ಪ್ರಸ್ತಾವನೆ ಬೋಧಿಸಲಾಯಿತು. ಶ್ರೀ ಶಿರಡಿ ಸಾಯಿ ಸೇವಾ ಸತ್ಸಂಗ ಟ್ರಸ್ಟ್ ವತಿಯಿಂದ ಭಕ್ತಿ ಸಂಗೀತ ಪ್ರಸ್ತುತಪಡಿಸಿದರು. ಭಗವಾನ್ ಮಹಾವೀರರ ಜಯಂತಿ ಅಂಗವಾಗಿ ನಗರದ ಪ್ರಮುಖ ಬೀದಿಗಳಲ್ಲಿ ಭವ್ಯ ಮೆರವಣಿಗೆ ನಡೆಯಿತು. ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಜರುಗಿದವು.

ಈ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ, ಜಿಲ್ಲಾ ಜೈನ್ ಸಂಘದ ಅಧ್ಯಕ್ಷ ಸುರಜ್ ಮಲ್ ಜೈನ್ ಸೇರಿದಂತೆ ಸಮಾಜದ ಮುಖಂಡರು, ಸಾರ್ವಜನಿಕರು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ಸಮಾಜಮುಖಿ ಕಾರ್ಯಗಳು ಮಾಡಿ

ಭಾರತದ ವೈವಿಧ್ಯಮಯ ಧರ್ಮಗಳ ನಡುವೆ ಜೈನ ಧರ್ಮದ ಅಹಿಂಸೆ ಮತ್ತು ನೈತಿಕತೆಯ ತತ್ತ್ವಗಳು ಸಮಾಜದಲ್ಲಿ ಒಗ್ಗಟ್ಟು ಮೂಡಿಸಲು ಸಹಕಾರಿ. ಜೈನ್ ಸಮಾಜದವರು ಬಡವರಿಗೆ ಬಟ್ಟೆ ವಿತರಣೆ, ಕಡಿಮೆ ದರದಲ್ಲಿ ಊಟ ನೀಡುವುದು ಮತ್ತು ಅರವಟ್ಟಿಗೆಗಳ ಸ್ಥಾಪನೆಯಂತಹ ಮಹತ್ವದ ಸಮಾಜಮುಖಿ ಕೆಲಸಗಳನ್ನು ಮಾಡುತ್ತಿದ್ದು, ಇನ್ನು ಹೆಚ್ಚು ಹೆಚ್ಚು ಸಮಾಜಮುಖಿ ಕಾರ್ಯ ಮಾಡಬೇಕು ಎಂದು ಡಾ.ಬಾಬು ಜಗಜೀವನ್ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷ ಮುಂಡರಗಿ ನಾಗರಾಜ್ ಹೇಳಿದರು.

ಮುದಗಲ್ ಕುಡಿವ ನೀರಿನ ಸಮಸ್ಯೆ ಪರಿಶೀಲನೆ

ಮುದಗಲ್: ಸ್ಥಳೀಯ ಪಟ್ಟಣದ ನಾಗರಿಕರಿಗೆ ಕಳೆದ ನಾಲ್ಕು ವರ್ಷಗಳಿಂದ ತಲೆದೋರಿರುವ ಕುಡಿವ ನೀರಿನ ಸಮಸ್ಯೆ ಸೂಕ್ತ ಪರಿಹಾರ ಕಲ್ಪಿಸಬೇಕಾಗಿದೆ. ಈ ನಿಟ್ಟಿನಲ್ಲಿ ಇಲಾಖೆಯ ಮಂತ್ರಿಗಳ ಜತೆ ಮಾತನಾಡಿದ್ದು ಸಕರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದು ಗ್ರಾಮೀಣ ಅಭಿವೃದ್ದಿ ಮತ್ತು ಪಂಚಾಯತ್ ರಾಜ್ಯ ಇಲಾಖೆ ರಾಜ್ಯ ವಿಶೇಷ ಕಾರ್ಯದರ್ಶಿ ಎಂ. ಚಂದ್ರಶೇಖರ ದಫೆದಾರ್‌ತಿಳಿಸಿದರು.

ಪಟ್ಟಣಕ್ಕೆ ಕುಡಿವ ನೀರು ಸರಬರಾಜು ಮಾಡುವ ನವಲಿ ಹತ್ತಿರದ ಜಾಕ್ವೆಲ್ ಪಂಪ್ ಹೌಸ್ ಹಾಗೂ ಕನ್ನಾಪೂರಹಟ್ಟಿ ಹತ್ತಿರದ ಜಲ ಶುದ್ಧೀಕರಣ ಘಟಕ ಸ್ಥಳಕ್ಕೆ ಭೇಟಿ ನೀಡಿ ಅಧಿಕಾರಿಗಳಿಂದ ತಾಂತ್ರಿಕ ಮಾಹಿತಿ ಪಡೆದು, ನಂತರ ಮಾತನಾಡಿ, ಈಗಾಗಲೇ ಪಟ್ಟಣಕ್ಕೆ ಸರಬರಾಜು ಮಾಡಲಾಗುವ ನಿರಂತರ ಕುಡಿವ ನೀರಿನ ಯೋಜನೆ ಅಡಿ ಪಂಪ್ ಹೌಸ್ ದಿಂದ ಪ್ರತಿ ಸೆಕೆಂಡಿಗೆ ಹತ್ತು ಲೀಟರ್ ನೀರು ಹೊರ ಬರುತ್ತೆ. ಆದರೆ ಇನ್ನೂ 60 ಎಚ್ ಪಿ. ಶಕ್ತಿಯ ಎರಡು ಪಂಪ್ ಮೋಟರ್ ಹೆಚ್ಚುವರಿಯಾಗಿ ಅಳವಡಿಸಿದರೆ, ಪ್ರತಿ ಸೆಕೆಂಡಿಗೆ ಇಪ್ಪತ್ತು ಲೀಟರ್‌ನೀರು ಸಿಗಲಿದೆ. ಇದರಿಂದ ಪ್ರತಿ ಹತ್ತರಿಂದ ಹನ್ನೆರಡು ದಿನಗಳಿಗೊಮ್ಮೆ ಸರಬರಾಜು ಮಾಡಲಾಗುವ ನೀರು 5-6 ದಿನಗಳಿಗೊಮ್ಮೆಯಾದರೂ ಸರಬರಾಜು ಮಾಡಬಹುದಾಗಿದೆ ಎಂದು ಸಿಬ್ಬಂದಿಗಳು ಕೆಲ ತಾಂತ್ರಿಕ ಕಾರಣಗಳ ಮಾಹಿತಿ ನೀಡಿದರು.

ಅಧಿವೇಶನದ ವೇಳೆ ಇಲಾಖೆ ಮಂತ್ರಿ ಅವರ ಜತೆ ಸಮಾಲೋಚನೆ ಮಾಡಲಾಗಿದೆ. ಕೆಲ ತಾಂತ್ರಿಕ ಕಾರಣಗಳ ನೆಪ ಹೇಳುತಿದ್ದು, ಯಾವುದೇ ಕಾರಣಕ್ಕೂ ಮುದಗಲ್ ಪಟ್ಟಣಕ್ಕೆ ಕುಡಿವ ನೀರು ಕಲ್ಪಿಸುವ ಯೋಜನೆ ಮಂಜೂರು ಮಾಡಲು ಬಿಗಿಪಟ್ಟು ಹಿಡಿಯಲಾಗಿದೆ. ಈ ಬಗ್ಗೆ ರಾಜಕೀಯ ಮುಖಂಡರು ಸಹಕಾರ ನೀಡುವ ಮೂಲಕ ಜನರ ಸಮಸ್ಯೆಗೆ ಸ್ಪಂದಿಸುವಂತ ಕೆಲಸವಾಗಬೇಕು. ಶೀಘ್ರದಲ್ಲಿ ಕುಡಿವ ನೀರಿನ ಸಮಸ್ಯೆಗೆ ಸೂಕ್ತ ಪರಿಹಾರ ಕಲ್ಪಿಸುವದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಲಾಗುವದು ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಮುದಗಲ್ ಪುರಸಭೆ ಮುಖ್ಯಾಧಿಕಾರಿ ಪ್ರವೀಣ ಬೋಗಾರ್, ಸಿಬ್ಬಂದಿ ರಂಗನಾಥ, ಪ್ರಮುಖರಾದ ಮಂಜುನಾಥ ಬನ್ನಿಗೋಳ್ಕರ್, ಕಾರ್ಯನಿರತ ಪತ್ರಕರ್ತ ಸಂಘದ ಜಿಲ್ಲಾ ಕಾರ್ಯದರ್ಶಿ ಶರಣಯ್ಯ ಒಡೆಯರ್, ಬಸಣ್ಣ ನಕಲದಿನ್ನಿ, ರಮೇಶ ತೊಗರಿ, ಶರಣಪ್ಪ ಸೇರಿದಂತೆ ಅನೇಕರು ಇದ್ದರು.

ನವಲಿ ಹತ್ತಿರದ ಜಾಕ್ವೆಲ್ ಪಂಪ್ ಹೌಸ್ ಹಾಗೂ ಕನ್ನಾಪೂರಹಟ್ಟಿ ಹತ್ತಿರದ ಜಲ ಶುದ್ಧಿಕರಣ ಘಟಕ ಸ್ಥಳಕ್ಕೆ ಎಂ. ಚಂದ್ರಶೇಖರ ದಫೆದಾರ್‌ನೀಡಿ ಅಧಿಕಾರಿಗಳಿಂದ ತಾಂತ್ರಿಕ ಮಾಹಿತಿ ಪಡೆದರು.

ಅಕ್ರಮ ನೀರು ಘಟಕಗಳ ವಿರುದ್ಧ ಕ್ರಮಕ್ಕೆ ಆಗ್ರಹ



ಪಟ್ಟಣದ ವ್ಯಾಪ್ತಿಯಲ್ಲಿ ಸರಕಾರದ ನಿಯಮಗಳನ್ನು ಉಲ್ಲಂಘಿಸಿ ಅಕ್ರಮವಾಗಿ ನಡೆಯುತ್ತಿರುವ ನೀರು ಶುದ್ಧೀಕರಣ ಘಟಕಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ, ನಮ್ಮ ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರು ಸಹಾಯಕ ಆಯುಕ್ತರಿಗೆ ಮನವಿ ಸಲ್ಲಿಸಿದರು.

ಲಿಂಗಸುಗೂರು: ಪಟ್ಟಣದ ವ್ಯಾಪ್ತಿಯಲ್ಲಿ ಸರಕಾರದ ನಿಯಮಗಳನ್ನು ಉಲ್ಲಂಘಿಸಿ ಅಕ್ರಮವಾಗಿ ನಡೆಯುತ್ತಿರುವ ನೀರು ಶುದ್ಧೀಕರಣ ಘಟಕಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ, ನಮ್ಮ ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರು ಸಹಾಯಕ ಆಯುಕ್ತರಿಗೆ ಮನವಿ ಸಲ್ಲಿಸಿದರು.

ಪಟ್ಟಣದಲ್ಲಿ ಕಾರ್ಯನಿರ್ವಹಿಸುತ್ತಿರುವ ಹಲವಾರು ನೀರು ಶುದ್ಧೀಕರಣ ಘಟಕಗಳು ಯಾವುದೇ ಅಧಿಕೃತ ಪರವಾನಗಿ ಪಡೆದಿಲ್ಲ ಮತ್ತು ಮಾನದಂಡಗಳನ್ನು ಪಾಲಿಸುತ್ತಿಲ್ಲ. ಈ ಘಟಕಗಳಲ್ಲಿ ನೀರಿನ ಗುಣಮಟ್ಟದ ಪರೀಕ್ಷೆಗಳು ನಡೆಯುತ್ತಿಲ್ಲ. ಇದರಿಂದಾಗಿ ಸಾರ್ವಜನಿಕರಿಗೆ ಪೂರೈಕೆಯಾಗುತ್ತಿರುವ ಕುಡಿಯುವ ನೀರಿನ ಗುಣಮಟ್ಟದ ಬಗ್ಗೆ ತೀವ್ರ ಅನುಮಾನಗಳು ವ್ಯಕ್ತವಾಗಿದ್ದು, ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಆತಂಕ ಎದುರಾಗಿದೆ.

ಅಕ್ರಮ ಚಟುವಟಿಕೆಗಳ ಬಗ್ಗೆ ಪುರಸಭೆ ಮುಖ್ಯಾಧಿಕಾರಿ ಕಣ್ಣುಮುಚ್ಚಿ ಕುಳಿತಿದ್ದಾರೆ. ಜವಾಬ್ದಾರಿಯುತ ಅಧಿಕಾರಿಗಳು ಯಾವುದೇ ಪರಿಶೀಲನೆ ನಡೆಸದೆ ನಿರ್ಲಕ್ಷ್ಯ ವಹಿಸುತ್ತಿರುವುದು ಸಾರ್ವಜನಿಕರ ಅಸಮಾಧಾನಕ್ಕೆ ಕಾರಣವಾಗಿದೆ.

ಈಗಾಗಲೇ ಬೇಸಿಗೆ ಕಾಲ ಪ್ರಾರಂಭವಾಗಿದ್ದು, ಶುದ್ಧ ಕುಡಿಯುವ ನೀರು ಜನರ ಮೂಲಭೂತ ಹಕ್ಕಾಗಿದೆ. ಆದ್ದರಿಂದ ತಕ್ಷಣವೇ ಒಂದು ವಾರದ ಒಳಗಾಗಿ ಈ ಅಕ್ರಮ ಘಟಕಗಳ ಮೇಲೆ ದಾಳಿ ನಡೆಸಿ, ನಿಯಮ ಬಾಹಿರವಾಗಿ ಕಾರ್ಯನಿರ್ವಹಿಸುತ್ತಿರುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಪುರಸಭೆ ಮುಖ್ಯಾಧಿಕಾರಿಗೆ ಸೂಚಿಸಬೇಕು ಎಂದು ಮನವಿ ಸಲ್ಲಿಸಿ ಒತ್ತಾಯಿಸಿದ್ದಾರೆ.

ಈ ಸಂದರ್ಭದಲ್ಲಿ ತಾಲೂಕು ಅಧ್ಯಕ್ಷ ತಿಮ್ಮರೆಡ್ಡಿ ಮುನ್ನೂರು, ರಮೇಶ್ ಗುತ್ತೇದಾರ, ಬಸವರಾಜ್ ಕಕ್ಕೇರಾ, ಯಲ್ಲಪ್ಪ ಬಂಡಿ, ರವಿ, ಅಶೋಕ್, ಪ್ರವೀಣ, ಶ್ರೀಕಾಂತ, ಈರಣ್ಣ, ಶ್ರೀರಾಮ್, ಮೌನೇಶ್ ಸೇರಿದಂತೆ ಸಂಘಟನೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಸಹಕಾರ ಸಂಘ ಸಮೀಕ್ಷೆ ಇಂದು

ರಾಷ್ಟ್ರೀಯ ಸಾಂಖ್ಯಿಕ ಕಾರ್ಯಾಲಯದ ಸಭಾ ಭವನದಲ್ಲಿ ಆಯೋಜಿಸಲಾಗಿದ್ದ 'ಸಹಕಾರ ಸಂಘಗಳ ತ್ವರಿತ ಸಮೀಕ್ಷೆ''ಯ ತರಬೇತಿ ಶಿಬಿರದಲ್ಲಿ ಕಲಪ್ಪ ಒಬಣ್ಣಗೋಳ ಮಾತನಾಡಿದರು.

ಬಳ್ಳಾರಿ: ನಿಖರವಾದ ಅಂಕಿ-ಅಂಶಗಳನ್ನು ಸಂಗ್ರಹಿಸುವ ನಿಟ್ಟಿನಲ್ಲಿ ರಾಷ್ಟ್ರೀಯ ಸಾಂಖ್ಯಿಕ ಕಾರ್ಯಾಲಯವು ಸಹಕಾರ ಸಂಘಗಳ ಸಮೀಕ್ಷೆಯನ್ನು ಕೈಗೆತ್ತಿಕೊಳ್ಳುತ್ತಿದ್ದು, ಈ ಸಮೀಕ್ಷೆಯು ಅತ್ಯಂತ ಮಹತ್ವದ್ದಾಗಿದೆ ಎಂದು ಬೆಳಗಾವಿ ವಿಭಾಗದ ಸಹಕಾರ ಸಂಘಗಳ ಜಂಟಿ ನಿಬಂಧಕ ಕಲಪ್ಪ ಒಬಣ್ಣಗೋಳ ತಿಳಿಸಿದರು.

ಹುಬ್ಬಳ್ಳಿ ನಗರದ ರಾಷ್ಟ್ರೀಯ ಸಾಂಖ್ಯಿಕ ಕಾರ್ಯಾಲಯದ ಸಭಾ ಭವನದಲ್ಲಿ ಆಯೋಜಿಸಲಾಗಿದ್ದ 'ಸಹಕಾರ ಸಂಘಗಳ ತ್ವರಿತ ಸಮೀಕ್ಷೆ''ಯ ತರಬೇತಿ ಶಿಬಿರ ಉದ್ಘಾಟಿಸಿ ಮಾತನಾಡಿ, ದೇಶದ ಆರ್ಥಿಕ ಪ್ರಗತಿ ಮತ್ತು ಉದ್ಯೋಗ ಸೃಷ್ಟಿಯಲ್ಲಿ ಸಹಕಾರ ಸಂಘಗಳ ಪಾತ್ರವೇನು ಎಂಬುದನ್ನು ತಿಳಿಯಲು ಈ ಸಮೀಕ್ಷೆ ಸಹಕಾರಿಯಾಗಲಿದೆ. ಈ ಸಮೀಕ್ಷೆಗೆ ಸಹಕಾರ ಇಲಾಖೆಯು ಸಂಪೂರ್ಣ ಸಹಕಾರ ನೀಡಲಿದೆ ಎಂದರು. ಕಾರ್ಯಾಲಯದ ನಿರ್ದೇಶಕ ಹರೀಶ್ವರನ್ ಮಾತನಾಡಿ, ಸಹಕಾರ ಸಂಘಗಳ ಕುರಿತಾದ ಸಮೀಕ್ಷೆಯು ಇದೇ ಮೊದಲ ಬಾರಿಗೆ ನಡೆಯುತ್ತಿದೆ. ಈ ವೇಳೆ ಸಂಘಗಳ ಒಟ್ಟು ಮೌಲ್ಯ ವರ್ಧನೆ, ಒಟ್ಟು ಉತ್ಪಾದನಾ ಮೌಲ್ಯ ಹಾಗೂ ಉದ್ಯೋಗದ ಕುರಿತಾದ ಸಮಗ್ರ ಮಾಹಿತಿಯನ್ನು ಸಂಗ್ರಹಿಸಲಾಗುವುದು ಎಂದರು.

ಕೇಂದ್ರ ಸಹಕಾರ ಸಚಿವಾಲಯದ ಕೋರಿಕೆಯಂತೆ ಈ ಸಮೀಕ್ಷೆ ನಡೆಯುತ್ತಿದ್ದು, ಏಪ್ರಿಲ್ 1 ರಿಂದ ಆರಂಭಗೊಂಡು ಮುಂಬರುವ ಸೆಪ್ಟೆಂಬರ್‌ವೇಳೆಗೆ ಪೂರ್ಣಗೊಳ್ಳಲಿದೆ ಎಂದರು.

ಈ ತರಬೇತಿ ಶಿಬಿರದಲ್ಲಿ ಬೆಳಗಾವಿ ಉಪ ಪ್ರಾದೇಶಿಕ ಕಾರ್ಯಾಲಯದ ಸಹಾಯಕ ನಿರ್ದೇಶಕ ಮೋಹನ ಕಾರ್ಜೋಳ ಸೇರಿದಂತೆ ಹುಬ್ಬಳ್ಳಿ, ಬೆಳಗಾವಿ, ಬಳ್ಳಾರಿ ಹಾಗೂ ಕಲಬುರಗಿ ಕಾರ್ಯಾಲಯಗಳ ಹಿರಿಯ ತಾಂತ್ರಿಕ ಅಧಿಕಾರಿಗಳು ಉಪಸ್ಥಿತರಿದ್ದರು.

ಬೆಂಗಳೂರಿನ ಕರ್ನಾಟಕ ಚಿತ್ರಕಲಾ ಪರಿಷತ್ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಂಡೂರಿನ ಖ್ಯಾತ ಕಲಾವಿದ ನಾಡೋಜ ಡಾ. ವಿ. ಟಿ. ಕಾಳೆ ಅವರಿಗೆ ಕರ್ನಾಟಕ ಇಂಟರ್ನ್ಯಾಷನಲ್ ಆರ್ಟಿಸ್ಟ್ ವಿಲೇಜ್ ಚಾರಿಟೇಬಲ್ ಟ್ರಸ್ಟ್ ವತಿಯಿಂದ ''ಶ್ರೇಷ್ಠ ಕಲಾ ಸಾಧಕರ ಪ್ರಶಸ್ತಿ'' ಪ್ರದಾನ ಮಾಡಲಾಯಿತು. ಈ ಸಂದರ್ಭದಲ್ಲಿ ನಿವೃತ್ತ ಡಿಸಿ ಡಾ. ಸಿ. ಸೋಮಶೇಖರ್,ಕರ್ನಾಟಕ ಲಲಿತಕಲಾ ಅಕಾಡೆಮಿಯ ಅಧ್ಯಕ್ಷ ಪಾ. ಸಾ. ಕುಮಾರ್,ಕೆಐಎವಿಸಿಟಿ ಅಧ್ಯಕ್ಷ ಡಾ. ಬಿ. ಜಿ. ಅವಟಿ, ಉಪಾಧ್ಯಕ್ಷ ಡಾ. ಬಿ. ಎಸ್. ದೇಶಾಯಿ, ಶಂಕರಾಚಾರಿ, ಅಪ್ಪು ಗಾಣಿಗೇರ್ ಸೇರಿದಂತೆ ಇತರರಿದ್ದರು.

ಒಳಮೀಸಲಿನಲ್ಲಿ ಕೆನೆಪದರು ಜಾರಿಗೊಳಿಸಿ

ರಾಯಚೂರು: ಪರಿಶಿಷ್ಟ ಜಾತಿಗಳ ಒಳ ಮೀಸಲಾತಿಗೆ ಸುಪ್ರಿಂಕೋರ್ಟ ನೀಡಿದ್ದ ತೀರ್ಪಿನ ಮೇರೆಗೆ ಉಪ ಜಾತಿಗಳ ಅಂಕಿ ಅಂಶಗಳೊಂದಿಗೆ ಕೆನೆಪದರ ಜಾರಿಗೆ ಸೂಚಿಸಿತ್ತು. ಆದರೆ ಒಳ ಮೀಸಲಾತಿ ಪ್ರಮಾಣ ಹಂಚಿಕೆ ಮಾಡಲಾಗಿದೆ ಹೊರತು, ಕೆನೆಪದರ ಉಲ್ಲೇಖವಿಲ್ಲದೇ ಇರುವುರಿಂದ ಹೈಕೋರ್ಟನಲ್ಲಿ ಮೀಸಲಾತಿ ಪ್ರಮಾಣ ಹಂಚಿಕೆ ಕುರಿತಾದ ವಿಚಾರಣೆಯಲ್ಲಿ ಪ್ರಶ್ನಿಸಲಾಗುತ್ತದೆ ಎಂದು ಡಾ.ಅಂಬೇಡ್ಕರ ಪಿಪುಲ್ ಪಾರ್ಟಿ ಕಾರ್ಯಾಧ್ಯಕ್ಷ ಮಹೇಂದ್ರ ಕುಮಾರ ಮಿತ್ರ ಹೇಳಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸುಪ್ರಿಂಕೋರ್ಟಿ ತೀರ್ಪಿನ ಅನ್ವಯ ಉಪ ಜಾತಿವಾರು ಜನ ಸಂಖ್ಯೆಯೊಂದಿಗೆ ಒಳ ಮೀಸಲಾತಿ ಹಾಗೂ ಕೆನೆಪದರು ಅಳವಡಿಸಲು ಸೂಚಿಸಲಾಗಿತ್ತು. ಮೀಸಲಾತಿ ಹಂಚಿಕೆ ವಿಷಯವಷ್ಟೆ ಸರಕಾರ ಮತ್ತು ಆಯೋಗ ಗಮನಹರಿಸಿದೆ ಹೊರತು ಕೆನೆಪದರು ಅಳವಡಿಸಲು ಮುಂದಾಗುತ್ತಿಲ್ಲ, ಬ್ರಿಜ್ ಮೋಹನ್ ಲಾಲ್ ವಿರುದ್ದ ಯುನಿಯೂನ್ ಆಫ್ ಇಂಡಿಯಾ 2012 ಪ್ರಕರಣದಲ್ಲಲಿ ಭಾರತ ಸಂವಿಧಾನದ 141 ಮತ್ತು 144 ಅನುಚ್ಛೇದಗಳು ಸರ್ವೋಚ್ಛ ನ್ಯಾಯಾಲಯದ ಘೋಷಣೆ ಮಾಡಿದ್ದ ಹಿನ್ನಲೆಯಲ್ಲ ಎಲ್ಲಾ ನ್ಯಾಯಾಲಯಗಳು ಮತ್ತು ಪ್ರಾಧಿಕಾರಗಳು ನಿರ್ಬಂಧಕ್ಕೆ ಒಳಪಟ್ಟಿವೆ ಎಂದರು. ಜಾತಿಗಳನ್ನು ಎಸ್ಸಿ ಪಟ್ಟಿಯಿಂದ ಕೈಬಿಡಲು ನ್ಯಾಯಮೂರ್ತಿ ಸಂತೋಷ ಹೆಗ್ಡೆ ನೇತೃತ್ವದಲ್ಲಿ ಆಯೋಗ ರಚಿಸಬೇಕು. ಒಳ ಮೀಸಲು ಜಾರಿಗೊಂದಲದ ಹಿನ್ನಲೆಯಲ್ಲಿ ಸರ್ಕಾರಿ ನೇಮಕಾತಿಗೆ ಅಡ್ಡಿಯಾಗುತ್ತಿದ್ದು, ಶೈಕ್ಷಣಿಕ ಮತ್ತು ನೇಮಕಾತಿಯಲ್ಲಿ ಸಾಮಾನ್ಯ ವರ್ಗಕ್ಕೆ ಮೀಸಲಿಟ್ಟ ಶೇ.40 ರಲ್ಲಿ ಪರಿಶಿಷ್ಟ ಜಾತಿಗಳಿಗೆ ಅವಕಾಶ ನೀಡಬೇಕೆಂದರು. ಮಾದಿಗ ಸಮಾಜದ ಹೋರಾಟಗಾರರು ಮೀಸಲು ಮಾತ್ರ ಕೇಳುತ್ತಿದ್ದಾರೆ. ಕೆನೆಪದರು ಕೇಳುತ್ತಿಲ್ಲ ಎಂದು ತಿಳಿಸಿದರು. ಸುದ್ದಿಗೋಷ್ಟಿಯಲ್ಲಿ ಹುಸೇನ ಬಾಷಾ ಪಲಕನಮರಡಿ, ನರಸಿಂಹ ಗಧಾರ ಉಪಸ್ಥಿತರಿದ್ದರು.

ಸುದ್ದಿಗೋಷ್ಠಿಯಲ್ಲಿ ಡಾ.ಅಂಬೇಡ್ಕರ ಪಿಪುಲ್ಸ್ ಪಾರ್ಟಿ ಕಾರ್ಯಾಧ್ಯಕ್ಷ ಮಹೇಂದ್ರ ಕುಮಾರ ಮಿತ್ರ ಮಾತನಾಡಿದರು.

ಸುವಿದ್ಯೇಂದ್ರ ತೀರ್ಥರ ಪಟ್ಟಾಭಿಷೇಕ ಉತ್ಸವ ನಾಳೆಯಿಂದ

ರಾಯಚೂರು: ಶ್ರೀ ಸುಷಮೀಂದ್ರ ತೀರ್ಥರ ಸೇವಾ ಸಮಿತಿ ಹಾಗೂ ಶ್ರೀ ಸುವಿದ್ಯೇಂದ್ರ ತೀರ್ಥರ ಭಕ್ತರ ಸಹಯೋಗದೊಂದಿಗೆ ಏ.2 ರಿಂದ ಏ.6 ವರೆಗೆ ನಗರದ ಮುಂಗ್ಲಿ ಪ್ರಾಣದೇವರ ದೇವಸ್ಥಾನದಲ್ಲಿ ಶ್ರೀ ಸುಶಮೀಂದ್ರ ತೀರ್ಥರ ಜನ್ಮ ಶತಮಾನೋತ್ಸವ ಹಾಗೂ 18 ನೇ ಮಹಾಸಮಾರಾಧನೆ

ಶ್ರೀ ಸುವಿದ್ಯೇಂದ್ರ ತೀರ್ಥರ 25ನೇ ವರ್ಷ ಪಟ್ಟಾಭಿಷೇಕ ಮಹೋತ್ಸವ ಅಂಗವಾಗಿ ಐದು ದಿನಗಳ ಜ್ಞಾನ ಸತ್ರ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಸಮಿತಿ ಮುಖ್ಯಸ್ಥ ಸುರೇಂದ್ರ ಆಚಾರ್ಯ ಕೊರ್ತಕುಂದಿ ಹೇಳಿದರು.

ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು ಏ.2 ರಂದು ಸಂಜೆ 6 .30 ಗಂಟೆಗೆ ಗೋಪೂಜೆ, ಧ್ವಜಾರೋಹಣ, ಧಾನ್ಯ ಪೂಜೆ, ಸಾಹೋತ್ಸವದೊಂದಿಗೆ ಕಾರ್ಯಕ್ರಮ ಚಾಲನೆ ಪಡೆಯಲಿದೆ. ಶ್ರೀ ಸುವಿದ್ಯೇಂದ್ರ ತೀರ್ಥರು ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ಪ್ರಾರಂಭವಾಗಲಿದೆ. ಕಾರ್ಯಕ್ರಮವನ್ನು ಬ್ರಹ್ಮಸ್ ಡೈರೆಕ್ಟರ್ ಜನರಲ್ ಡಾ.ಜಯತೀರ್ಥ ಜೋಷಿ ಉದ್ಘಾಟಿಸಲಿದ್ದಾರೆ. ಪಂಡಿತ ಖೇಡಾವೇದವ್ಯಾಸಾಚಾರ್ ಇವರಿಂದ ಪ್ರವಚನ ನಡೆಯಲಿದೆ. ನಂತರ ಶ್ರೀಗಳಿಂದ ಅನುಗ್ರಹ ಸಂದೇಶ ನಡೆಯಲಿದೆ ಎಂದರು.

ಏ.3 ರಂದು ಗಣಹೋಮ, ಪವಮಾನ ಹೋ ಮ, ಸಂಸ್ಥಾನ ಪೂಜೆ ಅನ್ನಸಂತರ್ಪಣೆ ನಡೆಯಲಿದೆ. ಸಂಜೆ 6 ಗಂಟೆಗೆ ಮಹಾಭಾರತ ಕುರಿತು ಪ್ರಶ್ನೆ ತ್ತರ ಕಾರ್ಯಕ್ರಮ ನಡೆಯಲಿದ್ದು, ಪಂಡಿತ ಸತ್ಯನಾರಾಯಣಾಚಾರ್, ಪಂಡಿತಕೃಷ್ಣರಾಜಕುತ್ಪಾಡಿ ಭಾಗ ವಹಿಸಲಿದ್ದಾರೆ. ನಂತರ ಶ್ರೀಗಳ ಅನುಗ್ರಹ ಸಂದೇಶ ವಿರುತ್ತದೆ. ಏ.4 ರಂದು ಬೆಳಗ್ಗೆ 7.30ಕ್ಕೆ ಅಷ್ಟೋತ್ತರ, ಬೃಹತಿ ಸಹಸ್ರಯಾಗ ಅಂಗವಾಗಿ ಕಳಶ ಸ್ಥಾಪನೆ, ಸಂಸ್ಥಾನ ಪೂಜೆ, ಸಂಜೆ ರಾಮಾಯಣ ಕುರಿತಾದ ಪ್ರಶ್ನೋತ್ತರ ಕಾರ್ಯಕ್ರಮದಲ್ಲಿ ಪಂಡಿತ ರಾಮವಿಠಲಾಚಾರ್, ಪಂಡಿತ ಸತ್ಯ ಮೂರ್ತಿ ಆಚಾರ್ ನಂತರ ಶ್ರೀಗಳಿಂದ ಅನುಗ್ರಹ ಸಂದೇಶ ನಡೆಯಲಿದೆ.

ಏ.5 ರಂದು ಬೆಳಗ್ಗೆ ಅಷ್ಟೋತ್ತರ, ಬೃಹತಿ ಸಹಸ್ರಯಾಗದ ಹೋಮ, ಪೂರ್ಣಾಹುತಿ, ಸಂಸ್ಥಾನ ಪೂಜೆ ನಡೆಯಲಿದೆ. ಸಂಜೆ ಚಕ್ರವರ್ತಿ ಸೂಲಿಬೆಲೆಯವರಿಂದ ಉಪನ್ಯಾಸ, ಮೈಸೂರು ರಾಮಾಚಂದ್ರಾಚಾರ ಇವರಿಂದ ದಾಸವಾಣಿ ಕಾರ್ಯಕ್ರಮ ನಡೆಯಲಿದೆ. ಶ್ರೀಗಳಿಂದ ಅನುಗ್ರಹ ಸಂದೇಶ ನಡೆಯಲಿದೆ. ಏ.6 ರಂದು ಬೆಳಗ್ಗೆ ಅಷ್ಟೋತ್ತರ ನಂತರ ಧನ್ವಂತರಿ ಹೋಮ ಶ್ರೀಗಳ ಸಾಮೂಹಿಕ ಪಾದಪೂಜೆ, ಪೂರ್ಣಾಹುತಿ, ಸಂಸ್ಥಾನ ಪೂಜೆ ನಡೆಯಲಿದೆ. ಸಂಜೆ ಕ್ರಿಕೆಟಿಗ ವಿಜಯ ಭಾರದ್ವಾಜ್ ಹಾಗೂ ಕೇಂದ್ರ ಮಾಜಿ ಸಚಿವ ಬಸನಗೌಡ ಯತ್ನಾಳ ಭಾಗವಹಿಸಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ರಾಮರಾವ್ ದೇಸಾಯಿ, ವೇಣುಗೋಪಾಲ ಇನಾಂಧಾರ, ವಿಷ್ಣುತೀರ್ಥ ಸಿರವಾರ, ಪ್ರಾಣೇಶಾಚಾರ್ಯ ಉಪಸ್ಥಿತರಿದ್ದರು.

ಗಜವಾಹನದಲ್ಲಿ ಮೆರವಣಿಗೆ

ಶ್ರೀ ಸುಶಮೀಂದ್ರ ತೀರ್ಥರ ಪಾದುಕೆ ಗಜವಾಹನದಲ್ಲಿ ಮೆರವಣಿಗೆ ಹಮ್ಮಿಕೊಂಡಿದ್ದು, ಗಾಂಧಿಚೌಕ ಶ್ರೀ ಹನುಮಾನ ಮಂದಿರದಿಂದ ಕರ್ನಾಟಕ ಸಂಘದವರೆಗೆ ನಡೆಯುತ್ತದೆ. ನಂತರ ಶ್ರೀಸುವಿದ್ಯೇಂದ್ರ ತೀರ್ಥರ ಅಧ್ಯಕ್ಷತೆಯಲ್ಲಿ ಶ್ರೀ ಸುಶಮೀಂದ್ರ ತೀರ್ಥರ ಅನುಗ್ರಹ ಪ್ರಶಸ್ತಿ ಪ್ರಧಾನ ಹಾಗೂ ಅನುಗ್ರಹ ಸಂದೇಶ ನಡೆಯಲಿದೆ. ಭಕ್ತಾಧಿಗಳು ಐದು ದಿನಗಳ ಜ್ಞಾನಸತ್ರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆಮನವಿ ಮಾಡಿದರು.

ರೈಲ್ವೇ ಪ್ರಯಾಣಿಕರಿಗೆ ಜಾಗೃತಿ ಅಭಿಯಾನ

ಕೊಪ್ಪಳ ನಗರದ ರೈಲ್ವೇ ನಿಲ್ದಾಣದಲ್ಲಿ ಪ್ರಯಾಣದ ವೇಳೆ ವೈಯಕ್ತಿಕ ಹಾಗೂ ವಸ್ತುಗಳ ಸುರಕ್ಷತೆ ಹಾಗೂ ಪ್ರಯಾಣಿಕರು ಪಾಲಿಸಬೇಕಾದ ನಿಯಮಗಳ ಬಗ್ಗೆ ಜಾಗೃತಿ ಅಭಿಯಾನ ಜರುಗಿತು.

ಕೊಪ್ಪಳ: ನಗರದ ರೈಲ್ವೇ ನಿಲ್ದಾಣದಲ್ಲಿ ಪ್ರಯಾಣದ ವೇಳೆ ವೈಯಕ್ತಿಕ ಹಾಗೂ ವಸ್ತುಗಳ ಸುರಕ್ಷತೆ ಹಾಗೂ ಪ್ರಯಾಣಿಕರು ಪಾಲಿಸಬೇಕಾದ ನಿಯಮಗಳ ಬಗ್ಗೆ ಜಾಗೃತಿ ಅಭಿಯಾನ ಜರುಗಿತು.

ರೈಲ್ವೇ ಪ್ರಯಾಣ: ಜಾಗೃತಿ ಅಭಿಯಾನ : ಕಳ್ಳರು ಪ್ರಯಾಣಿಕರ ಲಗೇಜ್, ಬ್ಯಾಗ್, ಪರ್ಸ್, ಮೊಬೈಲ್ ಕಳ್ಳತನ ಮಾಡುವ ರೀತಿ ಬಗ್ಗೆ ಪ್ರಾತ್ಯಕ್ಷಿಕೆ ಪ್ರದರ್ಶಿಸಿ ಎಚ್ಚರ ವಹಿಸಬೇಕಾದ ನಿಯಮದ ಬಗ್ಗೆ ಮಾಹಿತಿ ನೀಡಿದರು. ಅಪರಿಚಿತರು ತಮ್ಮನ್ನು ಪರಿಚಯಿಸಿಕೊಂಡು ಸಹಾಯ ಕೇಳಿಕೊಂಡು, ಆತ್ಮೀಯತೆಯಿಂದ ನಟಿಸಿ ಮತ್ತಿನ ವಸ್ತು ಮಿಶ್ರಿತ ಸಿಹಿ ತಿನಿಸು, ಆಹಾರ ನೀಡಿ ಪ್ರಜ್ಞೆ ತಪ್ಪಿಸಿ ಕಳ್ಳತನ ಮಾಡುವ ಬಗ್ಗೆ ಜಾಗೃತಿ ಮೂಡಿಸಿದರು. ಇದೇ ವೇಳೆ ರೈಲು ಮತ್ತು ರೈಲ್ವೆ ಸ್ವತ್ತುಗಳಿಗೆ ಕಲ್ಲು ಎಸೆಯುವ, ಹಾನಿ ಮಾಡುವ ಕೃತ್ಯಗಳಿಗೆ ಇರುವ ಶಿಕ್ಷೆ, ರೈಲು ಹಳಿ ದಾಟದೇ ಅಂಡರ್‌ಪಾಸ್, ಮೇಲ್ಸೇತುವೆ ಮೂಲಕ ಸಂಚರಿಸುವ ನಿಯಮಗಳ ಬಗ್ಗೆಯೂ ತಿಳಿ ಹೇಳಲಾಯಿತು.

ಆರ್‌ಪಿಎಫ್ ಇನ್ಸಪೆಕ್ಟರ್‌ರಿತೀಶ್ ಕುಮಾರ್, ಪಿಎಸ್‌ಐ ಬಸವರಾಜ ದಿವಟರ್, ಎಎಸ್‌ಐ ಉಮೇಶ ಕರಿಸಕ್ರಣ್ಣವರ, ಮುಖ್ಯ ಪೇದೆ ನವ್ಯ ಹಾಗೂ ಸಿಬ್ಬಂದಿ ಇದ್ದರು.

ಪಂಚರಾಜ್ಯ ಪವರ್ ವಾರ್

ಚುನಾವಣಾ ಚುರುಮುರಿ

ಹಿಮಂತ ಶರ್ಮಾ ಭರ್ಜರಿ ಭರವಸೆ

ಗುವಾಹಟಿ: ಅಸ್ಸಾಂ ರಾಜ್ಯದಲ್ಲಿ ಬಿಜೆಪಿಯೇ ಮತ್ತೆ ಅಧಿಕಾರಕ್ಕೆ ಬಂದಲ್ಲಿ, ಮೂರೇ ತಿಂಗಳಲ್ಲಿ ಏಕ ರೂಪ ನಾಗರಿಕ ಸಂಹಿತೆಯನ್ನು (ಯುಸಿಸಿ) ಜಾರಿಗೆ ತರಲಾಗುವುದು ಎಂದು ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಹೇಳಿದ್ದಾರೆ. ಈ ತಿಂಗಳ 9ರಂದು ನಡೆಯಲಿರುವ ಅಸ್ಸಾಂ ವಿಧಾನಸಭಾ ಚುನಾವಣೆಗೆ ಸಂಬಂಧಿ ಸಿದ ಬಿಜೆಪಿ ಪ್ರಣಾಳಿಕೆ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತ ನಾಡಿದ ಅವರು, ''ನಾವು 'ಲವ್ ಆ್ಯಂಡ್ ಲ್ಯಾಂಡ್ ಜಿಹಾದ್' ವಿರುದ್ಧ ಕಠಿಣ ಕಾನೂನನ್ನು ಜಾರಿಗೆ ತರುತ್ತಿದ್ದೇವೆ. ರಾಜ್ಯದ ಬುಡಕಟ್ಟು ಜನರು ಹಾಗೂ ಇತರ ಜನಾಂಗೀಯ ಸಮು ದಾಯದ ಹಕ್ಕುಗಳಿಗೆ ಧಕ್ಕೆಯಾಗದ ರೀತಿಯಲ್ಲಿ ಏಕರೂಪ ನಾಗರಿಕ ಸಂಹಿತೆಯನ್ನು ಜಾರಿ ಮಾಡಲಾಗುವುದು. 'ಅಕ್ರಮ ವಲಸಿಗರ ಗಡಿಪಾರು ಕಾಯ್ದೆ, 1950' ಅನ್ನು ಜಾರಿಗೆ ತರಲು ರಾಜ್ಯದ ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಲಾಗುವುದು'' ಎಂದರು. ''ಬಾಂಗ್ಲಾದೇಶವು ಅಸ್ತಿತ್ವದಲ್ಲಿ ಇರುವವರೆಗೂ ನುಸುಳುಕೋರರು ಬರುತ್ತಲೇ ಇರುತ್ತಾರೆ, ಹೀಗಾಗಿ ಅವರೊಂದಿಗೆ ನಾವು ಸೆಣಸುತ್ತಲೇ ಇರಬೇಕಾಗುತ್ತದೆ. ಕಳೆದ ಐದು ವರ್ಷಗಳಲ್ಲಿ ನಾವು ಬಾಂಗ್ಲಾದೇಶಿ ಮಿಯಾಗಳ ಧಾರ್ಷ್ಟ್ಯಕ್ಕೆ ತಕ್ಕ ಪಾಠವನ್ನು ಕಲಿಸಿದ್ದೇವೆ. ಈ ಬಾರಿ ಈ ಕ್ರಮವು ಇನ್ನೂ ತೀವ್ರವಾಗಲಿದೆ'' ಎಂದು ಹಿಮಂತ ಬಿಸ್ವ ಶರ್ಮಾ ಅವರು ಇದೇ ಸಂದರ್ಭದಲ್ಲಿ ನುಡಿದರು.

ಪ್ರಣಾಳಿಕೆ ಪ್ರವರ

ಏನೈತಿ ಒಳಗಾ ಏನೇನೈತಿ?

ಚುನಾವಣೆಯನ್ನು ಪ್ರಜಾಪ್ರಭುತ್ವದ ಹಬ್ಬ ಎಂದು ಕರೆಯುವುದುಂಟು. ಅಂತೆಯೇ, ಈ ಸಂಬಂಧವಾಗಿ ರಾಜಕೀಯ ಪಕ್ಷಗಳು ಬಿಡುಗಡೆ ಮಾಡುವ ಪ್ರಣಾಳಿಕೆಗಳು ಮತದಾರರ ಪಾಲಿಗೆ 'ಹಬ್ಬದೂಟ'ದಂತೆಯೇ ಕಾಣುವುದಿದೆ ಅಥವಾ ಹಾಗೆ ಕಾಣುವಂತೆ ಅವನ್ನು ರೂಪಿಸುವುದಿದೆ. ಈ ವಿಷಯಕ್ಕೆ ಸಂಬಂಧಿಸಿ ತಮಿಳುನಾಡು ರಾಜ್ಯದ ಕಡೆಗೊಮ್ಮೆ ಇಣುಕುನೋಟ ಬೀರೋಣ...

ಡಿಎಂಕೆ ಪ್ರಣಾಳಿಕೆ

- ರಾಜ್ಯದ 1.37 ಕೋಟಿ ಮಹಿಳೆಯರಿಗೆ ನೀಡುತ್ತಿದ್ದ ಮಾಸಿಕ 1,000 ರುಪಾಯಿ ಆರ್ಥಿಕ ನೆರವು 2,000 ರು.ಗೆ ಹೆಚ್ಚಳ.
- ಮಹಿಳಾ ಸ್ವಸಹಾಯ ಗುಂಪುಗಳಿಗೆ 5 ಲಕ್ಷ ರು.ವರೆಗೆ ಬಡ್ಡಿರಹಿತ ಸಾಲ.
- ಹಳೆಯ ಫ್ರಿಜ್, ವಾಷಿಂಗ್ ಮಷಿನ್, ಮಿಕ್ಸರ್/ಗ್ರೈಂಡರ್, ಟಿವಿ ಮುಂತಾದ ಉಪಕರಣಗಳ ಬದಲಿಕೆಗೆ ಅಥವಾ ಹೊಸದರ ಖರೀದಿಗೆ ಮಹಿಳೆಯರಿಗೆ 8,000 ರು. ಮೌಲ್ಯದ ಕೂಪನ್.
- 20 ಲಕ್ಷ ರೈತರಿಗೆ ಹೊಸದಾಗಿ ಮೀಟರ್ ರಹಿತ ಪಂಪ್‌ಸೆಟ್ ವಿತರಣೆ; ಭತ್ತದ ಬೆಂಬಲ ಬೆಲೆ ಹೆಚ್ಚಳ.
- ವೃದ್ಧರ ಮಾಸಿಕ ಪಿಂಚಣಿ 2,000 ರು.ಗೆ ಏರಿಕೆ
- 35 ಲಕ್ಷ ವಿದ್ಯಾರ್ಥಿಗಳ ಉನ್ನತ ಶಿಕ್ಷಣಕ್ಕಾಗಿ ಉಚಿತ ಲ್ಯಾಪ್‌ಟಾಪ್ ವಿತರಣೆ.
- ಆರೋಗ್ಯ ವಿಮಾ ಪ್ರಯೋಜನ 1 ಲಕ್ಷ ರು.ಗೆ ಹೆಚ್ಚಳ; ಈಗಿರುವ ಡಯಾಲಿಸಿಸ್ ಕೇಂದ್ರಗಳನ್ನು ದುಪ್ಪಟ್ಟು ಮಾಡಲು ಕ್ರಮ.

ಲಿಯಾಂಡರ್ ಪೇಸ್ ರಿವರ್ಸ್ ಶಾಟ್!



ಕೋಲ್ಕತ್ತಾ: ಒಂದು ಕಾಲಕ್ಕೆ ಟೆನಿಸ್ ಅಂಕಣದಲ್ಲಿ ಮಿಂಚಿದ್ದ ಲಿಯಾಂಡರ್ ಪೇಸ್ ಯಾರಿಗೆ ತಾನೇ ಗೊತ್ತಿಲ್ಲ? ಅವರೀಗ 'ಕಮಲ' ಪಾಳಯದ ಪಾಲಾಗಿದ್ದಾರೆ. ಪಶ್ಚಿಮ ಬಂಗಾಳದ ವಿಧಾನಸಭಾ ಚುನಾವಣೆಯ ಕಾವು ಏರುತ್ತಿರುವ ಸಂದರ್ಭದಲ್ಲೇ ಲಿಯಾಂಡರ್ ಪೇಸ್ ಹೀಗೆ 'ರಿವರ್ಸ್ ಶಾಟ್' ಹೊಡೆದಿರುವುದು ಬಹುತೇಕರ ಹುಬ್ಬೇರಿಸಿದೆ. ಕಾರಣ, ಇದೇ ಪೇಸ್ ಅವರು ಮಮತಾ ಬ್ಯಾನರ್ಜಿ ನೇತೃತ್ವದ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಕ್ಷಕ್ಕೆ 2021ರಲ್ಲಿ ಸೇರ್ಪಡೆಗೊಂಡಿದ್ದರು ಹಾಗೂ 2022ರಲ್ಲಿ ನಡೆದ ಗೋವಾ ವಿಧಾನಸಭಾ ಚುನಾವಣೆಯಲ್ಲಿ ಪಕ್ಷದ ಪರವಾಗಿ ಪ್ರಚಾರವನ್ನೂ ಮಾಡಿದ್ದರು. ಆದರೆ ಅವರು ಚುನಾವಣೆಯಲ್ಲಿ ಸ್ಪರ್ಧಿಸಿರಲಿಲ್ಲ. ಕೆಲ ದಿನಗಳ ಹಿಂದಷ್ಟೇ ಪೇಸ್ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಅವರನ್ನು ಭೇಟಿಯಾದಾಗ, ಅವರ ಬಿಜೆಪಿ ಸೇರ್ಪಡೆಯ ಕುರಿತು ಗಾಳಿಸುದ್ದಿಗಳು ಹರಿದಾಡಿದ್ದವು. ಈಗ ಕೇಂದ್ರ ಸಚಿವ ಕಿರಣ್ ರಿಜಿಜು, ಪಶ್ಚಿಮ ಬಂಗಾಳ ಬಿಜೆಪಿಯ ಮಾಜಿ ರಾಜ್ಯಾಧ್ಯಕ್ಷ ಮತ್ತು ಸಂಸದ ಸುಕಾಂತ ಮಜುಂದಾರ್ ಸಮ್ಮುಖದಲ್ಲಿ ಅವರು ಬಿಜೆಪಿಗೆ ಸೇರಿಕೊಂಡಿದ್ದು, ಚುನಾವಣೆಯ ಬಿಸಿ ಮುಗಿಲುಮುಟ್ಟಿರುವ ವೇಳೆಯಲ್ಲಿ ಆಗಿರುವ ಈ ಬೆಳವಣಿಗೆಯು ಮಮತಾ ಬ್ಯಾನರ್ಜಿ ನೇತೃತ್ವದ ತೃಣಮೂಲ ಕಾಂಗ್ರೆಸ್ ಪಕ್ಷಕ್ಕೆ ಒಂದಿಷ್ಟು ಬಿಸಿಮುಟ್ಟಿಸಲಿದೆ ಎನ್ನಲಾಗುತ್ತಿದೆ. ಪಕ್ಷ ಸೇರ್ಪಡೆಯ ವೇಳೆ ಲಿಯಾಂಡರ್ ಪೇಸ್ ಮಾತನಾಡಿ, 'ಪ್ರಧಾನಿ ನರೇಂದ್ರ ಮೋದಿಯವರ ದೂರದೃಷ್ಟಿಯಿಂದ ಪ್ರಭಾವಿತನಾಗಿ ಹಾಗೂ ದೇಶದ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ಈ ತೀರ್ಮಾನವನ್ನು ಕೈಗೊಂಡಿರುವೆ. ಪಶ್ಚಿಮ ಬಂಗಾಳದ ಜನರ ಸೇವೆ ಮಾಡಲು ನನಗೆ ಇದೊಂದು ಸದವಕಾಶ' ಎಂದಿದ್ದಾರೆ. ಟೆನಿಸ್ ಅಂಕಣದಲ್ಲಿ ಹತ್ತು ಹಲವು 'ಗ್ರ್ಯಾಂಡ್ ಸ್ಲ್ಯಾಮ್' ಗಳನ್ನು ಗೆದ್ದಿರುವ ಪೇಸ್, ಈಗ ಬದಲಾದ ರಾಜಕೀಯ ಅಂಕಣದಲ್ಲಿ 'ಸರ್ವ್' ಮಾಡಲು ಹೀಗೆ ಸಜ್ಜಾಗಿರುವುದು ಹಲವರ ಕುತೂಹಲವನ್ನು ಕೆರಳಿಸಿದೆ.

ಮಾಜಿ ಡ್ರೈವರ್ ಮಗನಿಗೆ ಟಿಕೆಟ್ ಘೋಷಿಸಿದ ವಿಜಯ್

ದಳಪತಿಯ ಹೃದಯವೈಶಾಲ್ಯ

ಚೆನ್ನೈ: 'ಸ್ವಜನ ಪಕ್ಷಪಾತ', 'ಕುಟುಂಬ ರಾಜಕಾರಣ' ಇವು ದೇಶದ ರಾಜಕೀಯ ಕ್ಷೇತ್ರದಲ್ಲಿ ಆಗಾಗ ಕಿವಿಗೆ ಅಪ್ಪಳಿಸುವ ಪದಗುಚ್ಛಗಳು. ಚುನಾವಣೆಯಲ್ಲಿ ಟಿಕೆಟ್ ಘೋಷಿಸುವಾಗಲೋ ಅಥವಾ ತರುವಾಯದಲ್ಲಿ ಮಂತ್ರಿಗಿರಿಯನ್ನು ನೀಡುವಾಗಲೋ, ವರ್ಷಗಳವರೆಗೆ ಪಕ್ಷದ ಕಾರ್ಯಕರ್ತರಾಗಿ ಪ್ರಾಮಾಣಿಕ ಸೇವೆ ಸಲ್ಲಿಸಿದವರಿಗೆ ಆದ್ಯತೆ ನೀಡುವುದನ್ನು ಬಿಟ್ಟು, ಕುಟುಂಬಿಕರಿಗೆ ಮಣೆಹಾಕುವ ಪರಿಪಾಠ ಕಂಡುಬಂದಾಗ ಈ ಮಾತುಗಳು ಅಪ್ರಯತ್ನವಾಗಿ ನೆನಪಾಗುತ್ತವೆ.

ಆದರೆ ತಮಿಳುನಾಡಿನ ರಾಜಕೀಯ ಉದ್ಯಾನದಲ್ಲಿ ಅರಳಲು ಈಗಷ್ಟೇ ಸಜ್ಜಾಗಿರುವ ನಟ ಮತ್ತು 'ತಮಿಳಗ ವೆಟ್ರಿ ಕಳಗಂ' (ಟಿವಿಕೆ) ಪಕ್ಷದ ನಾಯಕ 'ದಳಪತಿ' ವಿಜಯ್ ಅವರು ಈ ನಿಟ್ಟಿನಲ್ಲಿ ವಿಭಿನ್ನತೆಯನ್ನು ಮೆರೆದಿದ್ದಾರೆ. 'ಟಿವಿಕೆ' ಪಕ್ಷವು ರಾಜ್ಯ ವಿಧಾನಸಭೆಯ ಎಲ್ಲ 234 ಕ್ಷೇತ್ರಗಳಿಗೂ ತನ್ನ ಅಭ್ಯರ್ಥಿಗಳನ್ನು ಘೋಷಿಸಿರುವುದು ಒಂದೆಡೆಯಾದರೆ, ಆ ಪೈಕಿ ವಿಜಯ್ ಅವರ ಕಾರು ಚಾಲಕರಾಗಿ ಕಾರ್ಯ ನಿರ್ವಹಿಸುತ್ತಿದ್ದ ರಾಜೇಂದ್ರನ್ ಎಂಬುವರ ಪುತ್ರ ಶಬರಿನಾಥನ್ ಅವರಿಗೂ ಟಿಕೆಟ್ ಘೋಷಣೆ ಯಾಗಿರುವುದು ಹಲವರ ಹುಬ್ಬೇರಿಸಿದೆ.

ಯಾರು ಈ ರಾಜೇಂದ್ರನ್?: ರಾಜೇಂದ್ರನ್ ಅವರು ಸುದೀರ್ಘ ಅವಧಿಯವರೆಗೆ ವಿಜಯ್ ಅವರ ವಿಶ್ವಾಸಾರ್ಹ ಕಾರು ಚಾಲಕರಾಗಿದ್ದು, ಈಗ ಅವರ ಆಪ್ತ ಸಹಾಯಕರಾಗಿ (ಪಿಎ) ಕಾರ್ಯ ನಿರ್ವಹಿಸುತ್ತಿದ್ದಾರೆ.

ಇವರದ್ದು ಸಾಮಾನ್ಯ ಹಿನ್ನೆಲೆಯ ಕುಟುಂಬವಾಗಿದ್ದು, ಟಿಕೆಟ್ ಘೋಷಣೆಯ ಸಂದರ್ಭದಲ್ಲಿ ರಾಜೇಂದ್ರನ್ ಮತ್ತು ಮಗ ಶಬರಿನಾಥನ್

ವೇದಿಕೆಯಲ್ಲೇ ಇದ್ದರು. ಅಚ್ಚರಿಯೆಂಬಂತೆ ಶಬರಿನಾಥನ್ ಅವರ ಹೆಸರು ಕೂಡ ಘೋಷಣೆಯಾದಾಗ ವೇದಿಕೆಯ ಮೇಲಿದ್ದವರೆಲ್ಲಾ ನಿಬ್ಬೆರಗಾದರೆ, ರಾಜೇಂದ್ರನ್ ಮತ್ತು ಶಬರಿನಾಥನ್ ಭಾವುಕರಾಗಿ ಕಣ್ಣೀರು ಸುರಿಸತೊಡಗಿದರು. ಈ ಸಂದರ್ಭದ ವಿಡಿಯೋ ಈಗ ವೈರಲ್ ಆಗಿದೆ.

ಹೊಸ ಸಂದೇಶದ ರವಾನೆ: ಹೇಳಿ ಕೇಳಿ ತಮಿಳುನಾಡಿನಲ್ಲಿ ಚಿತ್ರನಟರ ಕ್ರೇಜ್ ಹೆಚ್ಚು. ವಿಜಯ್ ಕೂಡ ತಮ್ಮ ಸಹೋದ್ಯೋಗಿ ನಟರ ಪೈಕಿ ಯಾರನ್ನಾದರೂ ಪಕ್ಷಕ್ಕೆ ಸೇರಿಸಿಕೊಂಡು ಟಿಕೆಟ್ ಘೋಷಿಸಿ, ಜನರ ಚಪ್ಪಾಳೆ-ಶಿಳ್ಳೆಯನ್ನು ಗಿಟ್ಟಿಸಿಕೊಳ್ಳಬಹುದಿತ್ತು; ಆದರೆ ಅವರು ಹಾಗೆ ಮಾಡದೆ ತಮ್ಮ ನಂಬಿಕಸ್ತ ಸಹವರ್ತಿಯ ಮಗನಿಗೆ ಟಿಕೆಟ್ ನೀಡುವ ಮೂಲಕ 'ಕುಟುಂಬ ರಾಜಕಾರಣ' ವನ್ನು ಅಪ್ಪಿರುವ ಪಕ್ಷಗಳಿಗೆ ಒಂದು ಅನುಸರಣೀಯ ಮೇಲ್ಪಂಕ್ತಿಯ ಸಂದೇಶವನ್ನು ರವಾನಿಸಿದ್ದಾರೆ. ತಮಗೆ ಇಷ್ಟೊಂದು ದೊಡ್ಡ ಹೊಣೆಗಾರಿಕೆ ಸಿಕ್ಕಿದ್ದನ್ನು ಕಂಡು ಕಣ್ಣೀರಾಗಿ ಬೆರಗಾದ ಶಬರಿ ನಾಥನ್ ಬಳಿಗೆ ಸಾಗಿದ ನಟ ವಿಜಯ್, ಆತನ ಕಣ್ಣೀರು ಒರೆಸಿ ಸಂತೈಸಿದ್ದು ಹೃದಯಸ್ಪರ್ಶಿಯಾಗಿತ್ತು.

ಅಭಿಮಾನಿಗಳ ಸಂಭ್ರಮ: ತಮಿಳುನಾಡಿನಲ್ಲಿ ವಿಜಯ್ ಅವರಿಗೆ ಅವರದ್ದೇ ಆದ ಅಭಿಮಾನಿ ವೃಂದವಿದೆ. ಕೆಲ ತಿಂಗಳ ಹಿಂದೆ ವಿಜಯ್ ಅವರು ಬಹಿರಂಗ ರ್‍ಯಾಲಿಯೊಂದನ್ನು ಹಮ್ಮಿಕೊಂಡಿದ್ದಾಗ ಸೇರಿದ್ದ ಜನಸಂದಣಿಯೇ ಇದಕ್ಕೆ ಸಾಕ್ಷಿ. ಇಂಥ ಒಬ್ಬೊಬ್ಬ 'ಅಭಿಮಾನಿ'ಗಳೂ ವಿಜಯ್ ಅವರ ಮತ್ತು ಅವರ 'ಟಿವಿಕೆ' ಪಕ್ಷದ ಪಾಲಿಗೆ 'ಮತದಾರ'ರಾಗಿ ರೂಪಾಂತರಗೊಳ್ಳುವರೋ ಇಲ್ಲವೋ ಎಂಬುದನ್ನು ಚುನಾವಣಾ ಫಲಿತಾಂಶವಷ್ಟೇ ಹೇಳಬಲ್ಲದು. ಆದರೆ, ರಾಜಕೀಯದ ಹಿನ್ನೆಲೆ ಮತ್ತು ದುಡ್ಡಿನ ಗಂಟು ಇರುವ ಕುಳಗಳಿಗೆ ಮಾತ್ರವೇ ಮಣೆ ಹಾಕುವ ಸಂಪ್ರದಾಯಕ್ಕೆ ತಿಲಾಂಜಲಿಯಿತ್ತು, ಹೀಗೆ ಶ್ರಮಜೀವಿಗಳಿಗೂ ಆ ಭಾಗ್ಯವನ್ನು ಕರುಣಿಸಿದ ವಿಜಯ್‌ರವರ ನಡೆಗೆ ಅವರ ಅಭಿಮಾನಿಗಳು ಸಂಭ್ರಮಿಸುತ್ತಿರುವುದಂತೂ ಹೌದು.

ಬೆಳ್ಳಿತೆರೆಯ ನಂಟು

ಹಾಗೆ ನೋಡಿದರೆ ತಮಿಳುನಾಡಿನ ರಾಜಕಾರಣ ಮತ್ತು ಚಿತ್ರರಂಗದ ನಡುವೆ ವಿಶೇಷ ನಂಟಿದೆ. ಗಣನೀಯ ಅವಧಿಯವರೆಗೆ ತಮಿಳುನಾಡಿನ ಮುಖ್ಯಮಂತ್ರಿಯಾಗಿದ್ದ ಎಂ.ಜಿ. ರಾಮಚಂದ್ರನ್ (ಎಂಜಿಆರ್) ಅವರು ಒಂದು ಕಾಲಕ್ಕೆ ಬೆಳ್ಳಿತೆರೆಯಲ್ಲಿ ಸೂಪರ್ ಸ್ಟಾರ್ ಆಗಿದ್ದವರು. ಎಂಜಿಆರ್ ಮರಣಾನಂತರ ಸಿಎಂ ಗದ್ದುಗೆಯಲ್ಲಿ ಸಾಕಷ್ಟು ವರ್ಷ ರಾರಾಜಿಸಿದ ಎಂ. ಜಯಲಲಿತಾ ಅವರೂ ಬೆಳ್ಳಿತೆರೆಯಲ್ಲಿ ನಾಯಕಿಯಾಗಿ ಮಿಂಚಿದವರೇ. ಮತ್ತೊಂದೆಡೆ, ತಮಿಳುನಾಡಿನ ಮೊದಲ ಮುಖ್ಯಮಂತ್ರಿ ಸಿ.ಎನ್. ಅಣ್ಣಾದುರೈ, ಕಾಲಾನಂತರದಲ್ಲಿ ಸಿಎಂ ಆದ ಎಂ.ಕರುಣಾನಿಧಿ ಅವರು ಚಲನಚಿತ್ರಗಳ ಚಿತ್ರಕಥೆ ಮತ್ತು ಸಂಭಾಷಣೆಯ ರಚನೆಯಲ್ಲಿ ಎತ್ತಿದ ಕೈ ಎನಿಸಿಕೊಂಡಿದ್ದರು. ಮಿಕ್ಕಂತೆ, ಕೆ.ಆರ್. ರಾಮಸ್ವಾಮಿ, ಎನ್.ಎಸ್.ಕೃಷ್ಣನ್, ಶಿವಾಜಿ ಗಣೇಶನ್, ಎಂ.ಆರ್. ರಾಧಾ, ಎಸ್.ಎಸ್. ರಾಜೇಂದ್ರನ್, ವಿಜಯಕಾಂತ್ ಮುಂತಾದವರು ಕೂಡ ಚಿತ್ರರಂಗದ ಹಿನ್ನೆಲೆಯವರೇ. ಕಮಲಹಾಸನ್ ಕೂಡ ತಮ್ಮದೇ ರಾಜಕೀಯ ಪಕ್ಷವನ್ನು ಕಟ್ಟಿಕೊಂಡಿದ್ದಾರಾದರೂ, ಹೇಳಿಕೊಳ್ಳುವಂಥ ಯಶಸ್ಸು ಅವರಿಗಿನ್ನೂ ಸಿಕ್ಕಿಲ್ಲ ಎಂಬುದು ಗಮನಾರ್ಹ.

ಶಬರಿಮಲೆ ವಿಷಯದಲ್ಲಿ ಮೌನವೇಕೆ?: ರಾಹುಲ್

ಕಣ್ಣೂರು: 'ಬೇರೆಡೆಗಳಲ್ಲಿ ಧರ್ಮ ಮತ್ತು ದೇವರ ಬಗ್ಗೆ ಮಾತನಾಡುವ ಪ್ರಧಾನಿ ನರೇಂದ್ರ ಮೋದಿಯವರು, ಶಬರಿಮಲೆ ದೇಗುಲದ ಚಿನ್ನ ಕಳವು ಪ್ರಕರಣದಲ್ಲಿ ಮೌನವಾಗಿರುವುದೇಕೆ? ಈ ಪ್ರಕರಣದಲ್ಲಿ ಸಿಪಿಐ(ಎಂ) ನಾಯಕರು ಭಾಗಿಯಾಗಿದ್ದರೂ ಬಿಜೆಪಿ ಮೌನವಾಗಿದೆ. ಹಿಂದೂ ಧರ್ಮದ ಸಂರಕ್ಷಕರು ಎಂದು ಹೇಳಿಕೊಳ್ಳುವವರು ಕೇರಳಕ್ಕೆ ಬಂದಾಗ ಶಬರಿಮಲೆ ವಿಷಯದ ಬಗ್ಗೆ ಮಾತನಾಡುವುದಿಲ್ಲ, ರಾಜ್ಯದಲ್ಲಿ ಎಡರಂಗವು ಗೆಲ್ಲಬೇಕೆಂದು ಅವರು ಆಶಿಸುತ್ತಾರೆ' ಎಂದು ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ ಆರೋಪಿಸಿದ್ದಾರೆ.

ಕೇರಳ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಕಣ್ಣೂರು ಜಿಲ್ಲೆಯಲ್ಲಿ ಆಯೋಜಿಸಲಾಗಿದ್ದ ಕಾಂಗ್ರೆಸ್‌ನ ಪ್ರಚಾರ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡುತ್ತಿದ್ದ ಅವರು, ''ಈ ಚುನಾವಣೆಯು ಎರಡು ಸಿದ್ಧಾಂತಗಳ ನಡುವಿನ ಸ್ಪರ್ಧೆಯಾಗಿದ್ದು ಬಿಜೆಪಿ ಮತ್ತು ಎಡರಂಗದ ನಡುವೆ ಇದೇ ಮೊದಲ ಬಾರಿಗೆ ಒಪ್ಪಂದ ಏರ್ಪಟ್ಟಿದೆ. ಸಿದ್ಧಾಂತಗಳು ಬೇರೆಯಾಗಿದ್ದರೂ ಈ ಪಕ್ಷಗಳು ಹೊಂದಾಣಿಕೆ ಮಾಡಿಕೊಂಡಿರುವುದು ಅಚ್ಚರಿಯ ಸಂಗತಿ. ರಾಜ್ಯದಲ್ಲಿ ಸತತ 3ನೇ ಬಾರಿಗೆ ಎಡರಂಗವು ಗೆಲ್ಲಬೇಕೆಂಬುದು ಪ್ರಧಾನಿ ಮೋದಿಯವರ ಬಯಕೆ. ಆದರೆ ಎಡರಂಗ ಮತ್ತು ಬಿಜೆಪಿಯ ವಿರುದ್ಧ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಸೆಣಸುತ್ತಿದೆ. ಎಡರಂಗವು ಕಾರ್ಪೊರೇಟ್ ಪಕ್ಷವಾಗಿರುವುದರಿಂದ ಬಿಜೆಪಿಯೊಂದಿಗೆ ಪಾಲುದಾರಿಕೆ ಹೊಂದಿದೆ ಹಾಗೂ ಅದು ಈಗ ಜನಪರ ಪಕ್ಷವಾಗಿ ಉಳಿದಿಲ್ಲ'' ಎಂದರು.

ಅಸ್ಸಾಂ: ಬಿಜೆಪಿ ಭರಪೂರ ಭರವಸೆ

ಗುವಾಹಟಿ: ಅಸ್ಸಾಂ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಬಿಜೆಪಿಯ ಪ್ರಣಾಳಿಕೆಯನ್ನು ಬಿಡುಗಡೆಗೊಳಿಸಿದ್ದಾರೆ.

'ಬಿಜೆಪಿ ಸಂಕಲ್ಪ ಪತ್ರ' ಶೀರ್ಷಿಕೆಯ ಈ ಪ್ರಣಾಳಿಕೆಯಲ್ಲಿ 31 ಭರವಸೆಗಳಿದ್ದು, ಅಸ್ಸಾಂನ ಸ್ಥಳೀಯ ಜನರ ಘನತೆ, ಭೂಮಿ ಮತ್ತು ಪರಂಪರೆಯನ್ನು ಸಂರಕ್ಷಿಸುವುದಾಗಿ ಅದರಲ್ಲಿ ಬಿಜೆಪಿ ಒತ್ತಿಹೇಳಿದೆ. ಮಾತ್ರವಲ್ಲದೆ, ಏಕರೂಪ ನಾಗರಿಕ ಸಂಹಿತೆಯ ಜಾರಿ, ಯುವಕರಿಗೆ ಉದ್ಯೋಗಾವಕಾಶ, ಅಭಿವೃದ್ಧಿ ಯೋಜನೆಗಳು ಹಾಗೂ ಬಾಂಗ್ಲಾದೇಶದ ಮಿಯಾಸ್‌ಗಳು ಅತಿಕ್ರಮಿಸಿರುವ ಭೂಮಿಯ ಮರುವಶ ಮುಂತಾದ ಆಶ್ವಾಸನೆಗಳೂ ಇದರಲ್ಲಿ ಸೇರಿವೆ. ಪ್ರಣಾಳಿಕೆ ಬಿಡುಗಡೆಯ ತರುವಾಯ ಮಾತನಾಡಿದ ನಿರ್ಮಲಾ ಸೀತಾರಾಮನ್ ಅವರು, 'ಕಾಂಗ್ರೆಸ್ ಪಕ್ಷವು ಕಳೆದ 60 ವರ್ಷಗಳಲ್ಲಿ ಮಾಡದ ಅಭಿವೃದ್ಧಿಯನ್ನು ಬಿಜೆಪಿಯು ಒಂದೇ ದಶಕ

ದಲ್ಲಿ ಮಾಡಿದೆ. ಬಿಜೆಪಿಯು ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ನಂತರ ಭಾರಿ ಯೋಜನೆಗಳ ಅನುಷ್ಠಾನವಾಗುತ್ತಿದೆ ಮತ್ತು ಉದ್ಯೋಗಾವಕಾಶಗಳ ಸೃಷ್ಟಿಯಾಗುತ್ತಿದೆ. ಹೀಗಾಗಿ ಜೀವನೋಪಾಯಕ್ಕೆಂದು ಇತರೆಡೆಗಳಿಗೆ ವಲಸೆ ಹೋಗಿದ್ದ ಅಸ್ಸಾಂನ ಯುವಜನರು ರಾಜ್ಯಕ್ಕೆ ಮರಳುತ್ತಿದ್ದಾರೆ' ಎಂದರು. ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ, ಕೇಂದ್ರ ಸಚಿವರಾದ ಸರ್ಬಾನಂದ ಸೋನೋವಾಲ್ ಮತ್ತು ಪಬಿತ್ರಾ ಮಾರ್ಗರಿಟಾ ಹಾಗೂ ರಾಜ್ಯ ಬಿಜೆಪಿಯ ಅಧ್ಯಕ್ಷ ದಿಲೀಪ್ ಸೈಕಿಯಾ ಹಾಜರಿದ್ದರು.

ಪ.ಬಂಗಾಳದಲ್ಲಿ 78 ಅಭ್ಯರ್ಥಿಗಳ ನಾಮಪತ್ರ | ಮಮತಾ-ಸುವೇಂದು ಮುಖಾಮುಖಿ

ಮೊದಲ ದಿನವೇ ಭಾರಿ ಬೋಣಿ!

ಕೋಲ್ಕತ್ತಾ: 2026ರ ರಾಜ್ಯ ವಿಧಾನಸಭಾ ಚುನಾವಣೆಗೆ ನಾಮಪತ್ರ ಸಲ್ಲಿಕೆಯ ಮೊದಲ ದಿನವಾದ ಸೋಮವಾರದಂದೇ ರಾಜ್ಯದ ವಿವಿಧೆಡೆ 78 ಅಭ್ಯರ್ಥಿಗಳು ನಾಮಪತ್ರವನ್ನು ಸಲ್ಲಿಸಿದ್ದಾರೆ. ಪೂರ್ವ ಮೇದಿನಿಪುರ ಜಿಲ್ಲೆಯ ನಂದಕುಮಾರ್, ಮಹಿಷದಲ್ ಮತ್ತು ನಂದಿಗ್ರಾಮ ಕ್ಷೇತ್ರಗಳಲ್ಲಿ ತಲಾ ಮೂರು ನಾಮಪತ್ರಗಳ ಸಲ್ಲಿಕೆಯಾಗಿದ್ದರೆ, ಪಶ್ಚಿಮ ಮೇದಿನಿಪುರದ ಖರಗ್‌ಪುರ ಕ್ಷೇತ್ರದಲ್ಲೂ ಮೂರು ನಾಮಪತ್ರ ಸಲ್ಲಿಕೆಯಾಗಿದೆ.

ಪೂರ್ವ ಮೇದಿನಿಪುರ ಜಿಲ್ಲೆಯ ನಂದಿಗ್ರಾಮದಲ್ಲಿ ನಾಮಪತ್ರ ಸಲ್ಲಿಸಿದ ಪಶ್ಚಿಮ ಬಂಗಾಳ ವಿಧಾನಸಭೆಯ ವಿಪಕ್ಷ ನಾಯಕ ಸುವೇಂದು ಅಧಿಕಾರಿ ಈ ಪೈಕಿ ಪ್ರಮುಖರು. ಸುವೇಂದು ಅವರೊಂದಿಗೆ ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್ ಮತ್ತು ರಾಜ್ಯ ಬಿಜೆಪಿಯ ಮಾಜಿ ಅಧ್ಯಕ್ಷ ದಿಲೀಪ್ ಘೋಷ್ ಹಾಗೂ ಪಕ್ಷದ ಇತರ ಹಿರಿಯ ನಾಯಕರಿದ್ದರು. ಈ ಸಂದರ್ಭದಲ್ಲಿ ಮಾತನಾಡಿದ ಸುವೇಂದು ಅಧಿಕಾರಿ, 'ಈ ಚುನಾವಣೆಯಲ್ಲಿ ಬಿಜೆಪಿ ನಿರ್ಣಾಯಕ ಗೆಲುವನ್ನು ಸಾಧಿಸಿ ಅಧಿಕಾರಕ್ಕೆ ಬರಲಿದೆ.

ಮಮತಾ ಬ್ಯಾನರ್ಜಿಯವರು ಈ ಸಲ ಭವಾನಿಪುರದಲ್ಲೂ ಸೋಲುಣ್ಣಲಿದ್ದಾರೆ' ಎಂದು ವಿಶ್ವಾಸವನ್ನು ವ್ಯಕ್ತಪಡಿಸಿದರು.

ತೀವ್ರ ಕುತೂಹಲ ಕೆರಳಿಸಿರುವ ಈ ಚುನಾವಣೆಯಲ್ಲಿ ನಂದಿಗ್ರಾಮ ಮತ್ತು ಭವಾನಿಪುರ ಕ್ಷೇತ್ರಗಳಲ್ಲಿ ಸುವೇಂದು ಅಧಿಕಾರಿ ಸ್ಪರ್ಧಿಸುತ್ತಿದ್ದಾರೆ. ಈ ಪೈಕಿ ನಂದಿಗ್ರಾಮದಲ್ಲಿ ಅವರು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿಯವರನ್ನು 2021ರಲ್ಲಿ ಸೋಲಿಸಿದ್ದರು. ಇನ್ನು ಭವಾನಿಪುರವು ಮಮತಾ ಬ್ಯಾನರ್ಜಿಯವರ ತವರು ಕ್ಷೇತ್ರವಾಗಿದ್ದು, ಇಲ್ಲಿ ಅವರು ಕಳೆದ ಮೂರು ಚುನಾವಣೆಗಳಿಂದ ಗೆಲುವು ಸಾಧಿಸುತ್ತಿದ್ದಾರೆ ಎಂಬುದು ಗಮನಾರ್ಹ. ಈ ಸಲ ಭವಾನಿಪುರದಲ್ಲಿ ತೃಣಮೂಲ ಕಾಂಗ್ರೆಸ್‌ನ ಮಮತಾ ಬ್ಯಾನರ್ಜಿ ಹಾಗೂ ಬಿಜೆಪಿಯ ಸುವೇಂದು ಅಧಿಕಾರಿ ಮತ್ತೊಮ್ಮೆ ಮುಖಾಮುಖಿಯಾಗಿರುವುದರಿಂದ, ಇದೊಂದು ಪ್ರತಿಷ್ಠೆಯ ಕಣವಾಗಿ ಮಾರ್ಪಟ್ಟಿದೆ. ಬಿಜೆಪಿಯು ಹಾಕುತ್ತಿರುವ 'ಜಾತಿ ಲೆಕ್ಕಾಚಾರ' ಫಲ ನೀಡುವುದೇ ಅಥವಾ 'ಮಮತಾ ಮ್ಯಾಜಿಕ್' ಇಲ್ಲಿ ಮತ್ತೊಮ್ಮೆ ಕೆಲಸ ಮಾಡುವುದೇ ಎಂಬುದನ್ನು ಕಾದು ನೋಡುವಂತಾಗಿದೆ.

ದಕ್ಷಿಣ ಕೋಲ್ಕತ್ತ ಕ್ಷೇತ್ರವು ತೃಣಮೂಲ ಕಾಂಗ್ರೆಸ್‌ನ ಭದ್ರಕೋಟೆ ಎಂಬುದನ್ನು ಮನಗಂಡಿರುವ ಬಿಜೆಪಿ, ಇದನ್ನು ಶತಾಯಗತಾಯ ತನ್ನದಾಗಿಸಿಕೊಳ್ಳಲು ವ್ಯೂಹಾತ್ಮಕ ಕಾರ್ಯತಂತ್ರಗಳನ್ನು ಹೆಣೆಯುತ್ತಿದೆ. ಅದು ಕೈಗೂಡಿದಲ್ಲಿ ಈ ಕ್ಷೇತ್ರದಲ್ಲಿ ಅಚ್ಚರಿಯ ಫಲಿತಾಂಶ ಹೊಮ್ಮಬಲ್ಲದು ಎನ್ನುತ್ತಾರೆ ಚುನಾವಣಾ ವೀಕ್ಷಕರು.

ಬಿಜೆಪಿಗೆ ತ್ರಿಶೂರ್, ಪಾಲಕ್ಕಾಡ್‌ನಲ್ಲಿ ಗೆಲುವಿನ ನಿರೀಕ್ಷೆ

2024ರ ಲೋಕಸಭಾ ಚುನಾವಣೆಯಲ್ಲಿ ಕೇರಳದ ಆಡಳಿತ ಪಕ್ಷವಾಗಿದ್ದ ಎಲ್‌ಡಿಎಫ್ ಗೆದ್ದಿರುವುದು ಕೇವಲ 1 ಸ್ಥಾನ. ಅದೇ ಚುನಾವಣೆಯಲ್ಲಿ ಬಿಜೆಪಿ ಕೂಡಾ ತ್ರಿಶೂರ್ ಸ್ಥಾನ ಗಳಿಸಿ ಕೇರಳದ ಒಂದು ಸಂಸತ್ ಸ್ಥಾನವನ್ನು ತನ್ನ ಬುಟ್ಟಿಗೆ ಹಾಕಿಕೊಂಡಿತು. ಆ ಕಾರಣಕ್ಕಾಗಿಯೇ ಕೇರಳದ ತ್ರಿಶೂರ್ ಮತ್ತು ಅದರ ನೆರೆ ಜಿಲ್ಲೆಯಾದ ಪಾಲಕ್ಕಾಡ್ ಈ ಸಲದ ಚುನಾವಣೆಯಲ್ಲಿ ಪಕ್ಷಕ್ಕೆ ವರವಾಗಬಹುದು ಎಂಬ ನಿರೀಕ್ಷೆ ಪ್ರಧಾನಿ ಮೋದಿಗೂ ಇದ್ದಂತಿದೆ.

ನರೇಂದ್ರ ಪಾರೆಕಟ್

ಕಳೆದ ಭಾನುವಾರ ಪ್ರಧಾನಿ ಮೋದಿ ವಿಧಾನಸಭಾ ಚುನಾವಣಾ ಪ್ರಚಾರಕ್ಕಾಗಿ ಕೇರಳಕ್ಕೆ ಬಂದಿದ್ದರು. ಅಲ್ಲಿ ಅವರದ್ದು ಕೇವಲ 2 ಕಾರ್ಯಕ್ರಮ. ತ್ರಿಶೂರ್‌ನಲ್ಲಿ ರೋಡ್ ಶೋ, ಪಾಲಕ್ಕಾಡ್‌ನಲ್ಲಿ ಒಂದು ಚುನಾವಣಾ ಪ್ರಚಾರ ಭಾಷಣ.

ಮೋದಿಗೆ ಕೇರಳದ ತ್ರಿಶೂರ್ ಅಂದರೆ ಬಹಳ ಅಚ್ಚುಮೆಚ್ಚಿನ ಮತ್ತು ವಿಶೇಷ ಒಲವಿನ ತಾಣ. ಅದಕ್ಕೆರಡು ಕಾರಣ, ಒಂದು ಕೇರಳದ ಮೊತ್ತ ಮೊದಲ ಬಿಜೆಪಿ ಸಂಸತ್ ಸದಸ್ಯ ಅಲ್ಲಿಂದ ಆಯ್ಕೆಯಾಗಿ ಪಕ್ಷದ ಪಾಲಿಗೆ ಹೊಸ ಇತಿಹಾಸ ಸೃಷ್ಟಿ, ಇನ್ನೊಂದು ಕಾರಣ ಕೇರಳದ ಇತಿಹಾಸ ಪ್ರಸಿದ್ಧ ಗುರುವಾಯೂರು ಶ್ರೀಕೃಷ್ಣ ದೇಗುಲ ಇರುವುದು ಕೂಡಾ ಇದೇ ತ್ರಿಶೂರ್ ಜಿಲ್ಲೆಯಲ್ಲೇ.

2019ರ ಲೋಕಸಭಾ ಚುನಾವಣೆಯಲ್ಲಿ ತ್ರಿಶೂರ್ ಲೋಕಸಭಾ ಚುನಾವಣೆಯಲ್ಲಿ ಕೇರಳದ ಖ್ಯಾತ ಚಿತ್ರನಟ, ರಾಜ್ಯಸಭಾ ನಾಮನಿರ್ದೇಶಿತ ಸದಸ್ಯರಾಗಿದ್ದ ಸುರೇಶ್ ಗೋಪಿ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು. ಆಗ ಅವರು ಬರೋಬರಿ 3 ಲಕ್ಷದಷ್ಟು ಮತ ಗಳಿಸಿ 3ನೇ ಸ್ಥಾನದಲ್ಲಿ ತೃಪ್ತಿಪಟ್ಟರು. ಆ ಕ್ಷೇತ್ರದಲ್ಲಿ ಗೆದ್ದ ಅಭ್ಯರ್ಥಿಯ ಮತ ಮತ್ತು ಸುರೇಶ್ ಗೋಪಿ ಗಳಿಸಿದ ಮತಗಳ ಅಂತರ 1 ಲಕ್ಷ 20 ಸಾವಿರ.

ಪ್ರಧಾನಿ ನರೇಂದ್ರ ಮೋದಿ ಆ ನಂತರವೂ ಸುರೇಶ್ ಗೋಪಿ ಮತ್ತು ತ್ರಿಶೂರ್ ಲೋಕಸಭಾ ಕ್ಷೇತ್ರದ ಮತದಾರರ ಮೇಲೆ ಭಾರೀ ಭರವಸೆಯನ್ನೇ ಇಟ್ಟರು. 2024ರ ಲೋಕಸಭಾ ಚುನಾವಣೆಯಲ್ಲಿ ತ್ರಿಶೂರ್ ಲೋಕಸಭಾ ಕ್ಷೇತ್ರದಲ್ಲಿ ಸುರೇಶ್ ಗೋಪಿ ಅವರನ್ನೇ ಬಿಜೆಪಿ ಕಣಕ್ಕಿಳಿಸಿ ಕೇರಳ ರಾಜ್ಯದ ಇತಿಹಾಸದಲ್ಲಿ ತನ್ನ ಮೊತ್ತಮೊದಲ ಲೋಕಸಭಾ ಕ್ಷೇತ್ರವನ್ನು ಗೆದ್ದುಕೊಂಡಿತು. ಸುರೇಶ್ ಗೋಪಿ ಚುನಾವಣೆಯಲ್ಲಿ ತನ್ನ ಪ್ರತಿಸ್ಪರ್ಧಿಗಿಂತ ಸುಮಾರು 75000 ಮತಗಳ ಅಂತರದಲ್ಲಿ ಗೆದ್ದು ಕೇರಳ ಬಿಜೆಪಿ ಪಾಲಿನ ಹೀರೋ ಆದರಲ್ಲದೆ, ಕೇಂದ್ರ ಸರಕಾರದಲ್ಲಿ ಪೆಟ್ರೋಲಿಯಂ, ಪ್ರವಾಸೋದ್ಯಮ ಖಾತೆಯ ರಾಜ್ಯ ಸಚಿವರೂ ಆದರು.

ಕೇರಳದ ತ್ರಿಶೂರ್ ಜಿಲ್ಲೆಯಲ್ಲಿ 13 ವಿಧಾನಸಭಾ ಕ್ಷೇತ್ರಗಳಿವೆ. ಅವುಗಳೆಂದರೆ ಚಾಲಕ್ಕುಡಿ, ಚೇಲಕ್ಕೆರ, ಗುರುವಾಯೂರ್, ಇರಿಞಾಲಕ್ಕುಡ, ಕೈಪಮಂಗಲಂ, ಕೊಡುಂಗಲ್ಲೂರ್, ಕುನ್ನಮಂಗಲಂ, ಮಾನಲ್ಲೂರ್, ನಾಟ್ಟಿಕ, ಒಲ್ಲೂರ್, ಪುತುಕ್ಕಾಡ್, ತ್ರಿಶೂರ್ ಮತ್ತು ವಡಕ್ಕಾಂಚೇರಿ.

ಈ ಪೈಕಿ ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಅಲ್ಲಿ ಗಮನಸೆಳೆಯುತ್ತಿರುವ ಪ್ರಮುಖ ಕ್ಷೇತ್ರಗಳ ಪೈಕಿ ಒಂದಾದ ತ್ರಿಶೂರ್ ವಿಧಾನಸಭಾ ಕ್ಷೇತ್ರ. ಅದು ತ್ರಿಶೂರ್ ನಗರಪಾಲಿಕೆಯ 14 ವಾರ್ಡ್‌ಗಳನ್ನು ಹೊಂದಿದೆ. ಎಲ್‌ಡಿಎಫ್ ಇಲ್ಲವೇ ಯುಡಿಎಫ್‌ನ ಅಭ್ಯರ್ಥಿಗಳೇ ಇಲ್ಲಿ ಗೆದ್ದಿರುವವರು. 2021ರಲ್ಲಿ ನಡೆದ ಚುನಾವಣೆಯಲ್ಲಿ ನಟ ಸುರೇಶ್ ಗೋಪಿಯನ್ನು ಬಿಜೆಪಿ ಇಲ್ಲಿ ಕಣಕ್ಕಿಳಿಸಿ 3ನೇ ಸ್ಥಾನ ಗಳಿಸಿತಾದರೂ 31% ಮತಗಳನ್ನು ಪಡೆಯುವಲ್ಲಿ ಸಫಲವಾಯಿತು.

ಮಾಜಿ ಸಿಎಂ ಕರುಣಾಕರನ್ ಮಗಳು ಬಿಜೆಪಿ ಅಭ್ಯರ್ಥಿ: 2021ರ ಚುನಾವಣೆಯಲ್ಲಿ ತ್ರಿಶೂರ್‌ನಲ್ಲಿ 946 ಮತಗಳಿಂದ ಸೋತಿದ್ದ ಯುಡಿಎಫ್ ಒಕ್ಕೂಟದ ಪದ್ಮಜಾ ಈ ಸಲ ತ್ರಿಶೂರ್‌ನಲ್ಲಿ ಬಿಜೆಪಿ ಅಭ್ಯರ್ಥಿ. ಅದೇ ಊರಿನವರಾದ ಪದ್ಮಜಾ ಹೆಸರು ರಾಜ್ಯದಲ್ಲೇ ಸುಪರಿಚಿತ, ಕಾಂಗ್ರೆಸ್ ಪಕ್ಷದ ಹಿರಿಯ ನೇತಾರಾಗಿ ಮತ್ತು ಕೇರಳದಲ್ಲಿ 3 ಬಾರಿ ಸಿ.ಎಂ ಆಗಿದ್ದ ಕೆ. ಕರುಣಾಕರನ್ ಅವರ ಮಗಳು. ಕೇರಳದ ಕಾಂಗ್ರೆಸ್ ಪಕ್ಷದಲ್ಲಿ (ಕೆಪಿಸಿಸಿ) 30 ವರ್ಷಗಳ ಕಾಲ ಪದ್ಮಜಾ ವಿವಿಧ ಹುದ್ದೆಗಳನ್ನು ನಿರ್ವಹಿಸಿದವರು, 2004ರಲ್ಲಿ ಕಾಂಗ್ರೆಸ್‌ನಿಂದ ಸಂಸತ್ ಸದಸ್ಯೆ ಕೂಡ ಆಗಿದ್ದವರು.

ಕಳೆದ ವರ್ಷ ಕಾಂಗ್ರೆಸ್ ತೊರೆದು ಬಿಜೆಪಿ ಸೇರ್ಪಡೆಗೊಂಡರು. ಹಾಗಾಗಿ ಈ ಸಲ ಹುಟ್ಟೂರ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಪದ್ಮಜಾ ಸ್ಪರ್ಧಿಸುತ್ತಿದ್ದು, ಈಗಾಗಲೇ ಕೇಂದ್ರ ಸಚಿವ ಸುರೇಶ್ ಗೋಪಿ ಮತ್ತು ಪ್ರಧಾನಿ ಮೋದಿ ವರ್ಚಸ್ಸು ಇಲ್ಲಿ ಗಾಢ ಪ್ರಭಾವ ಬೀರಿದೆ ಎಂಬ ಆತ್ಮವಿಶ್ವಾಸ ಪಕ್ಷದ ಕಾರ್ಯಕರ್ತರಲ್ಲಿದೆ. ಕೇರಳದಲ್ಲಿ ಈ ಬಾರಿ ಗೆಲ್ಲುವ ನಿರೀಕ್ಷೆಯಲ್ಲಿರುವ ಸುಮಾರು ಎಂಟು-ಹತ್ತು ಕ್ಷೇತ್ರಗಳ ಪೈಕಿ ತ್ರಿಶೂರ್ ಕೂಡಾ ಒಂದೆಂಬ ನಿರೀಕ್ಷೆ ಬಿಜೆಪಿಯದಾಗಿದೆ.

ಈ ಕ್ಷೇತ್ರದಲ್ಲಿ ಎಡಪಕ್ಷಗಳ ಒಕ್ಕೂಟದಿಂದ ಆಲಂಕೋಡ್ ಲೀಲಾಕೃಷ್ಣನ್ ಮತ್ತು ಯುಡಿಎಫ್‌ನಿಂದ ರಾಜನ್ ಪಲ್ಲನ್ ಅವರು ಪದ್ಮಜಾ ವಿರುದ್ಧ ಸ್ಪರ್ಧಿಸುತ್ತಿದ್ದಾರೆ. ತ್ರಿಶೂರ್‌ನಲ್ಲಿ ಹಿಂದುಗಳೂ ಹಾಗೂ ಕ್ರಿಶ್ಚಿಯನ್ನರೂ ಇದ್ದಾರೆ. ಕಾಂಗ್ರೆಸ್‌ಗೆ ಕ್ರಿಶ್ಚನ್ ಧರ್ಮೀಯರದ್ದೇ ಇಲ್ಲಿನ ದೊಡ್ಡ ವೋಟ್ ಬ್ಯಾಂಕ್.

ತ್ರಿಶೂರ್ ವಿಧಾನಸಭಾ ಕ್ಷೇತ್ರವನ್ನು ಹೊರತುಪಡಿಸಿದರೆ ಗುರುವಾಯೂರು ಸೇರಿದಂತೆ ಉಳಿದ ವಿಧಾನಸಭಾ ಕ್ಷೇತ್ರಗಳಲ್ಲಿ ಐಕ್ಯರಂಗ ಮತ್ತು ಎಡರಂಗಗಳ ಮಧ್ಯೆಯೇ ತುರುಸಿನ ಸ್ಪರ್ಧೆ. ಜಿಲ್ಲೆಯ ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲೂ ಬಿಜೆಪಿ ನೇತೃತ್ವದ ಎನ್‌ಡಿಎ ಸ್ಪರ್ಧಿಸುತ್ತಿದ್ದು 15ರಿಂದ 20 ಶೇಕಡಾ ಮತಗಳಿಕೆಯನ್ನು ಪಡೆಯಬಹುದೆಂಬ ನಿರೀಕ್ಷೆ ಆ ಒಕ್ಕೂಟದ್ದಾಗಿದೆ.

ಪಾಲಕ್ಕಾಡ್‌ನಲ್ಲಿ ರೋಚಕ ಹಣಾಹಣಿ: ಕೇರಳದಲ್ಲಿ ಈ ಸಲ ಬಿಜೆಪಿ ಕಣ್ಣಿಟ್ಟಿರುವ ಕೆಲವೇ ಕೆಲವು ಕ್ಷೇತ್ರಗಳ ಪೈಕಿ ಪಾಲಕ್ಕಾಡ್ ಕೂಡ ಒಂದಾಗಿದೆ. ಕಳೆದ ಹಲವಾರು ವರ್ಷಗಳಿಂದ ಅಲ್ಲಿನ ಕೆಲವು ಪಂಚಾಯತ್‌ಗಳಲ್ಲಿ ಬಿಜೆಪಿ ಆಡಳಿತ ನಡೆಸುತ್ತಾ ಬಂದಿದೆ. ಹಾಗೆಯೇ ಪಾಲಕ್ಕಾಡ್ ನಗರಸಭೆಯನ್ನು ಕೂಡ ತನ್ನ ತೆಕ್ಕೆಗೆ ಪಡೆದದ್ದಿದೆ.

ಪಾಲಕ್ಕಾಡ್ ಜಿಲ್ಲೆಯಲ್ಲಿ ಒಟ್ಟು 12 ವಿಧಾನಸಭಾ ಕ್ಷೇತ್ರಗಳಿವೆ, ಅವುಗಳು ಯಾವುವೆಂದರೆ ಆಲತ್ತೂರ್, ಚಿಟ್ಟೂರ್, ಕೊಂಗಾಡ್, ಮಲಂಪುಝು, ಮಣ್ಣಾರ್‌ಕಾಡ್, ನೇನ್ಮರ, ಒತ್ತಪಾಲಂ, ಪಾಲಕ್ಕಾಡ್, ಪಟ್ಟಾಂಬಿ, ಶೊರ್ನೂರ್, ಥಾರೂರ್ ಮತ್ತು ತೀರ್ಥಲ. ಒಂದು ಕಡೆ ತ್ರಿಶೂರ್ ಜಿಲ್ಲೆಗೆ, ಮತ್ತೊಂದು ಕಡೆ ತಮಿಳುನಾಡಿನ ಕೊಯಂಬತ್ತೂರಿಗೆ ಚಾಚಿರುವ ಗಡಿ ಜಿಲ್ಲೆಯಾಗಿದೆ ಪಾಲಕ್ಕಾಡ್. ಜಿಲ್ಲೆಯ ತಮಿಳುನಾಡು ಗಡಿಪ್ರದೇಶದಲ್ಲಿ ವಾಸಿಸುವವರ ಮಾತೃಭಾಷೆ ತಮಿಳು. ಹಾಗಾಗಿ ಆ ಪ್ರದೇಶಗಳಲ್ಲಿ ತಮಿಳು ಬ್ರಾಹ್ಮಣರ ಸಂಖ್ಯೆ ಬಹಳ ಹೆಚ್ಚು. ಅದೇ ಕಾರಣಕ್ಕಾಗಿ ತಮಿಳು ಅಗ್ರಹಾರದ (ಸಾಲು ಮನೆ) ವಿಹಂಗಮನ ನೋಟವೂ ಈ ಜಿಲ್ಲೆಯಲ್ಲಿ ಲಭ್ಯ. ಪ್ರತೀ ವರ್ಷದ ಪಾಲಕ್ಕಾಡ್‌ನ ಕಲ್ಪಾತಿ ರಥೋತ್ಸವ ರಾಜ್ಯದಲ್ಲೇ ಬಹಳ ಜನಪ್ರಿಯ ಜಾತ್ರೋತ್ಸವವಾಗಿದೆ.

ಪಾಲಕ್ಕಾಡ್ ವಿಧಾನಸಭಾ ಕ್ಷೇತ್ರವನ್ನು ಹೊರತುಪಡಿಸಿದರೆ ಜಿಲ್ಲೆಯಲ್ಲಿಡೀ ಯುಡಿಎಫ್-ಎಲ್‌ಡಿಎಫ್ ಮಧ್ಯೆ ಸಮಬಲದ ಹೋರಾಟ. ಪಾಲಕ್ಕಾಡ್ ನಗರ ವ್ಯಾಪ್ತಿಯಲ್ಲಿ ಬಿಜೆಪಿ ಬಹಳ ಪ್ರಬಲವಾಗಿರುವುದರಿಂದ ಕಳೆದ ಒಂದೆರಡು ಚುನಾವಣೆಗಳಲ್ಲಿ ಚಿಕ್ಕ ಅಂತರದಲ್ಲಿ ಪಕ್ಷ ಸೋತ ಉದಾಹರಣೆಗಳಿವೆ. 2021ರ ವಿಧಾನಸಭಾ ಚುನಾವಣೆ ಕೂಡ ಇಲ್ಲಿ ಬಹಳ ಪ್ರಚಾರ ಗಿಟ್ಟಿಸಿತ್ತು. ದೇಶದ ಪ್ರಥಮ ಮೆಟ್ರೋ ರೈಲು ರೂವಾರಿ 'ಮೆಟ್ರೋ ಮ್ಯಾನ್' ಎಂದೇ ಖ್ಯಾತರಾಗಿದ್ದ ಇ. ಶ್ರೀಧರನ್ ಅವರು ಬಿಜೆಪಿಯಿಂದ ಕಣಕ್ಕಿಳಿದಿದ್ದರು. ತನ್ನ ಪ್ರತಿಸ್ಪರ್ಧಿಗೆ ಭಾರೀ ಪೈಪೋಟಿ ನೀಡಿ, ಕೇವಲ ಮರ್‍ನಾಲ್ಕು ಸಾವಿರ ಮತಗಳ ಅಂತರದಿಂದ ಅವರು ಅಲ್ಲಿ ಅವರು ಪರಾಜಿತರಾಗಿದ್ದರು.

ಶೋಭಾ ಸುರೇಂದ್ರನ್ ಬಿಜೆಪಿ ಅಭ್ಯರ್ಥಿ: ಈ ಸಲ ಬಿಜೆಪಿಯು ಕೇರಳದ ಹಿರಿಯ ಬಿಜೆಪಿ ನಾಯಕಿ ಮತ್ತು ಪಕ್ಷದ ಜನಪ್ರಿಯ ಅಭ್ಯರ್ಥಿ ಶೋಭಾ ಸುರೇಂದ್ರನ್ ಅವರನ್ನು ಪಾಲಕ್ಕಾಡ್‌ನಿಂದ ಕಣಕ್ಕಿಳಿಸಿದೆ. ಈಗಾಗಲೇ ಪ್ರಧಾನಿ ಮೋದಿ ಪಾಲಕ್ಕಾಡ್‌ಗೆ ಬಂದು ಚುನಾವಣಾ ಪ್ರಚಾರ ಭಾಷಣ ಮಾಡಿರುವ ಕಾರಣ ಬಿಜೆಪಿ ಪಾಳಯದಲ್ಲಿ ಗೆಲುವಿನ ಕನಸು ಚಿಗುರಿದೆ.

ಈ ಸಲ ಕಾಂಗ್ರೆಸ್ ಒಕ್ಕೂಟದ ಯುಡಿಎಫ್ ಪಾಳಯದಿಂದ ಪಾಲಕ್ಕಾಡಿನಲ್ಲಿ ಮಲಯಾಳಂ ಚಿತ್ರನಟ ರಮೇಶ್ ಪಿಶಾರಡಿ ಸ್ಪರ್ಧಿಸುತ್ತಿದ್ದು ರಾಜ್ಯ ಕಾಂಗ್ರೆಸ್‌ನ ಹಿರಿಯ ನಾಯಕರು ತಮ್ಮ ಅಭ್ಯರ್ಥಿ ಪರ ಚುನಾವಣಾ ಪ್ರಚಾರದಲ್ಲಿದ್ದಾರೆ. ಎಲ್‌ಡಿಎಫ್ ಒಕ್ಕೂಟದಿಂದ ಎಂ.ಆರ್. ರಝಾಕ್ ಸ್ಪರ್ಧಿಸುತ್ತಿದ್ದು ಸಿಎಂ ಪಿಣರಾಯಿ ವಿಜಯನ್ ಸೇರಿದಂತೆ ಹೆಚ್ಚಿನ ಕಾರ್ಯಕರ್ತರ ಪಡೆ ತಮ್ಮ ಹಿಂದಿದೆ ಎಂದೇ ಬಲವಾಗಿ ನಂಬಿದ್ದಾರೆ. ಈ ಎಲ್ಲಾ ಕಾರಣಗಳಿಂದಾಗಿ ಈ ಸಲ ಪಾಲಕ್ಕಾಡ್‌ನ ರೋಚಕ ಮತಬೇಟೆ ರಂಗೇರಿದೆ.

ಸಾಮರಸ್ಯದ ಪೂರಂ

ತ್ರಿಶೂರ್ ಪೂರಂ ಪ್ರತೀವರ್ಷ ಏಪ್ರಿಲ್-ಮೇ ತಿಂಗಳಿನಲ್ಲಿ ನಡೆಯುವ ಕೇರಳ ರಾಜ್ಯದ ಅತ್ಯಂತ ದೊಡ್ಡ ಜಾತ್ರಾ ಮಹೋತ್ಸವ. ಅಲ್ಲಿನ ವಡಕ್ಕುನಾಥನ್ (ಶಿವ) ಕ್ಷೇತ್ರದಲ್ಲಿ ನೂರಾರು ಅಲಂಕೃತ ಆನೆಗಳನ್ನು ಈ ಅವಿಸ್ಮರಣೀಯ ಕ್ಷಣಗಳಲ್ಲಿ ಕಣ್ತುಂಬಿಕೊಳ್ಳುವುದು ಭಕ್ತರ ಪಾಲಿನ ನಿಜಕ್ಕೂ ವಿಶೇಷ ಗಳಿಗೆಯಾಗಿದೆ.

ಜುವೆಲ್ಲರಿಗಳ ಸ್ವರ್ಗ

ಕೇರಳಕ್ಕೂ ಚಿನ್ನಕ್ಕೂ ಅಗಾಧ ನಂಟು. ಕೇರಳದ ಹೆಚ್ಚಿನ ಜುವೆಲ್ಲರಿಗಳ ಕೇಂದ್ರ ಕಚೇರಿ ಇರುವ ಪ್ರದೇಶವೇ ತ್ರಿಶೂರ್ ಜಿಲ್ಲೆ. ಹಾಗಾಗಿ ಇಲ್ಲಿನ ಸಾವಿರಾರು ಮಂದಿ ಜುವೆಲ್ಲರಿಗಳಿಗೆ ಸಂಬಂಧಪಟ್ಟ ವೃತ್ತಿಗಳಲ್ಲಿ ನಿರತರು. ಕೇರಳ ಮೂಲದ ಹಲವಾರು ಪ್ರಮುಖ ಜುವೆಲ್ಲರಿಗಳು ಪಾಲಕ್ಕಾಡ್ ಜಿಲ್ಲೆಯನ್ನು ದಾಟಿ ತಮಿಳುನಾಡು, ಕರ್ನಾಟಕದಲ್ಲೂ ಇವೆ.

ತ್ರಿಶೂರ್: ಮೋದಿ ರೋಡ್‌ಶೋನಲ್ಲಿ ಪದ್ಮಜಾ, ಸುರೇಶ್‌ಗೋಪಿ.

ಪಾಲಕ್ಕಾಡಿನಲ್ಲಿವೆ ನೂರಾರು ಅಗ್ರಹಾರಗಳು

ನೂರಾರು ವರ್ಷಗಳ ಹಿಂದೆ ತಮಿಳುನಾಡಿ ನಿಂದ ಸಾವಿರಾರು ಬ್ರಾಹ್ಮಣ ಕುಟುಂಬಗಳು ಪಾಲಕ್ಕಾಡ್‌ಗೆ ವಲಸೆ ಬಂದ ಕುರುಹುಗಳೇ ಈಗಲೂ ಅಲ್ಲಿ ಕಾಣಸುತ್ತಿರುವ ಅಗ್ರಹಾರ ಗಳು. ಮಾತೃಭಾಷೆ ತಮಿಳು ಆದರೂ ಕೂಡಾ ಮಲಯಾಳಂ ಸಂಸ್ಕೃತಿಯನ್ನು ತಮ್ಮ ಜೀವನದ ಜೊತೆ ಬೆಸೆದುಕೊಂಡಿರುವ ದೈನಂದಿನ ಜೀವನ ಅವರದ್ದಾಗಿದೆ.

ಅವಳು ವಾಸನೆಯಿಂದ ಕಾಯಿಲೆಗಳನ್ನು ಪತ್ತೆಹಚ್ಚುತ್ತಿದ್ದಳು!

ಹಿಂದಿರುಗಿ ನೋಡಿದಾಗ
ಡಾ. ನಾ.ಸೋಮೇಶ್ವರ
naasomeswara@gmail.com

ನಮ್ಮ ಯಶಸ್ವಿ ಬದುಕಿಗೆ ಪಂಚೇಂದ್ರಿಯಗಳು ಅಗತ್ಯ. ಪಂಚೇಂದ್ರಿಯಗಳು ವಾಸ್ತವದಲ್ಲಿ ಮಿದುಳಿನ ವಿಸ್ತೃತ ಅಂಗಗಳು. ಪಂಚೇಂದ್ರಿಯಗಳು ಹೊರಜಗತ್ತಿನ ಮಾಹಿತಿಯನ್ನು ಮಿದುಳಿಗೆ ಕಳುಹಿಸುತ್ತವೆ. ಮಿದುಳು ಅವನ್ನು ವಿಶ್ಲೇಷಿಸುತ್ತದೆ, ಸೂಕ್ತ ಉತ್ತರವನ್ನು ಪ್ರತಿಕ್ರಿಯೆಯ ರೂಪದಲ್ಲಿ ನೀಡುತ್ತದೆ. ವೈದ್ಯ ವಿಜ್ಞಾನದಲ್ಲಿ ಸಂಶೋಧನೆಯನ್ನು ನಡೆಸುವುದು ಎಷ್ಟು ಕಷ್ಟವೋ ಅಷ್ಟೂ ಸುಲಭ. ಆದರೆ ನೋಡುವ ಕಣ್ಣಿರಬೇಕು ಹಾಗೂ ಅರಿಯುವ ಮಿದುಳಿರಬೇಕು. ಅಂಥ ಅಪರೂಪದ, ವಿಚಿತ್ರವಾದ ಹಾಗೂ ನಂಬಲು ಅಸಾಧ್ಯವಾದ ಒಂದು ಸಂಶೋಧನಾ ವಿವರವನ್ನು ತಿಳಿದುಕೊಳ್ಳೋಣ.

ಮೂಗು ಘ್ರಾಣಾಂಗ. ಅಂದರೆ ವಾಸನೆಯನ್ನು ತಿಳಿಸುವ ಅಂಗ. ಮೂಗು ಸುವಾಸನೆಗಳನ್ನು ತಿಳಿಸುವುದರೊಂದಿಗೆ ದುರ್ವಾಸನೆಗಳನ್ನೂ ತಿಳಿಸುತ್ತದೆ. ಅಪರೂಪಕ್ಕೆ ಅದು ರೋಗಗಳನ್ನೂ ಕಂಡುಹಿಡಿಯಲು ನೆರವಾಗುತ್ತದೆ ಎಂದರೆ, ಅದು ನಂಬಲು ಕಷ್ಟವಾಗುತ್ತದೆ. ಇಂಥ ವಿಚಿತ್ರ ಪ್ರಸಂಗವೊಂದು ವೈದ್ಯಕೀಯ ಇತಿಹಾಸದಲ್ಲಿ ನಡೆದಿದೆ. ಆ ಬಗ್ಗೆ ಸ್ಥೂಲವಾಗಿ ತಿಳಿಯೋಣ.

● **ವಾಸನೆ:** ಈ ಪ್ರಕರಣವು ಸ್ಕಾಟ್ಲೆಂಡ್ ದೇಶದ ಪೆರ್ಥ್ ನಗರದಲ್ಲಿ ನಡೆಯಿತು. 70ರ ದಶಕದ ಮಧ್ಯಭಾಗ. ಜಾಯ್ ಮಿಲ್ನೆ ಎಂಬ ದಾದಿಯೊಬ್ಬಳು ಲೆಸ್ ಎನ್ನುವ ಯುವ ವೈದ್ಯನನ್ನು ಮದುವೆಯಾಗಿದ್ದಳು. ಇಬ್ಬರೂ ತಮ್ಮ ತಮ್ಮ ವೃತ್ತಿಯಲ್ಲಿ ಆಳವಾಗಿ ಮಗ್ನರಾಗಿದ್ದರು. ಮದುವೆಯಾಗಿ ಸುಮಾರು 10 ವರ್ಷಗಳಾದವು. ಜಾಯ್, ತನ್ನ ಗಂಡ ಲೆಸ್‌ನ ದೇಹದಲ್ಲಿ ಒಂದು

ಬದಲಾವಣೆಯಾಗುತ್ತಿರುವುದನ್ನು ಗಮನಿಸಿದಳು. ಅವನ ದೇಹದಿಂದ ಗಾಢವಾದ ಕಸ್ತೂರಿ ವಾಸನೆಯನ್ನು (ಮಸ್ಕಿ ಓಡರ್) ಹೋಲುವಂಥ ವಾಸನೆಯು ಹೊರಬರಲಾರಂಭಿಸಿತು. ವಿಶೇಷವಾಗಿ ಲೆಸ್‌ನ ಕುತ್ತಿಗೆ ಮತ್ತು ಬಾಹುಗಳಿಂದ ಈ ರೀತಿಯ ವಾಸನೆಯು ಹೊರಡುತ್ತಿತ್ತು. ವಾಸನೆಯು ಏನೂ ಅಹಿತರಕರವಾಗಿರಲಿಲ್ಲ. ಆದರೂ ಆ ವಾಸನೆಯು ಅಸಹಜವಾಗಿತ್ತು. ಇದನ್ನು ಗಮನಿಸಿದ ಜಾಯ್, ಇದಕ್ಕೆ ಬಹುಶಃ ಲೆಸ್‌ನ ವೈದ್ಯಕೀಯ ವೃತ್ತಿ ಕಾರಣವಾಗಿರಬೇಕೆಂದು ಬಗೆದಳು. ಅವನು ವೈದ್ಯನಾಗಿದ್ದ ಕಾರಣದಿಂದ ಕೆಲಸವು ವಿಪರೀತವಾಗಿರುತ್ತಿತ್ತು. ಆ ಹಿನ್ನೆಲೆಯಲ್ಲಿ ಅವನು ವಿಪರೀತ ಬೆವರುತ್ತಿದ್ದಿರಬೇಕೆಂದು ''ದಿನಕ್ಕೆ 2-3 ಸಲ ಸ್ನಾನ ಮಾಡು, ಅಂಗಿಯನ್ನು ಬದಲಾಯಿಸು'' ಎಂದು ಸಲಹೆಯನ್ನು ನೀಡಿದಳು. ಲೆಸ್ ಹಾಗೆಯೇ ಮಾಡಿದ. ಆದರೆ ಲೆಸ್‌ನ ದೇಹದಿಂದ ಹೊರಡುತ್ತಿದ್ದ ಆ ಗಾಢ ಕಸ್ತೂರಿ ವಾಸನೆಯು ಮಾತ್ರ ತಿಲಮಾತ್ರವೂ ಕಡಿಮೆಯಾಗಲಿಲ್ಲ.

● **ಬದಲಾವಣೆಗಳು:** ಲೆಸ್‌ನ ಒಡಲಿನಿಂದ ಬರುತ್ತಿದ್ದ ವಾಸನೆಯು ಲೆಸ್‌ನಿಗೆ ತಿಳಿಯುತ್ತಿರಲಿಲ್ಲ. ಆಸ್ಪತ್ರೆಯಲ್ಲಿದ್ದ ಯಾರೂ ಲೆಸ್‌ನ ದೇಹದಿಂದ ವಿಶಿಷ್ಟ ವಾಸನೆಯು ಹೊರಬರುತ್ತಿರುವ ಬಗ್ಗೆ ದೂರಿರಲಿಲ್ಲ. ಆ ವಾಸನೆಯು ಜಾಯಳಿಗೆ ಮಾತ್ರ ತಿಳಿಯುತ್ತಿತ್ತು. ಜಾಯ್, ತಾನು ಯಾವುದೇ ಭ್ರಮೆಗೆ ಒಳಗಾಗಿಲ್ಲ, ಲೆಸ್‌ನ ಒಡಲಿನಿಂದ ವಾಸನೆ ಬರುತ್ತಿರುವುದು ಖಚಿತ ಎಂದಳು. ಆದರೆ ಯಾರೂ ಈ ಬಗ್ಗೆ ತಲೆಯನ್ನು ಕೆಡಿಸಿಕೊಳ್ಳಲಿಲ್ಲ. ವರ್ಷಗಳಾದವು. ಲೆಸ್‌ನ ಒಡಲಿನಿಂದ ಬರುತ್ತಿದ್ದ ವಾಸನೆಯು ಮತ್ತಷ್ಟು, ಮಗದಷ್ಟು ಹೆಚ್ಚಾಗುತ್ತಾ ಹೋಯಿತು. ಇದರ ಜತೆಯಲ್ಲಿ ಮತ್ತೊಂದು ಸೂಕ್ಷ್ಮ ವಿಚಾರವನ್ನು ಗಮನಿಸಿದಳು. ಲೆಸ್‌ನ ವ್ಯಕ್ತಿತ್ವದಲ್ಲಿ ಬದಲಾವಣೆಗಳು ತಲೆದೋರುತ್ತಿದ್ದವು. ಸಹಜ ಸ್ನೇಹ ಸ್ವಭಾವದ ಲೆಸ್, ಇತ್ತೀಚೆಗೆ ತಾಳ್ಮೆಯನ್ನು ಕಳೆದುಕೊಂಡವನಂತೆ ಕಿರಿಕಿರಿಯನ್ನು ತೋರಲಾರಂಭಿಸಿದ. ಅವನ ಚಲನವಲನಗಳು ತುಸು ಬಿಗಿಯಾಗಲಾರಂಭಿಸಿದವು. ಕಸ್ತೂರಿ ವಾಸನೆಯು ಅವನ ದೇಹದಿಂದ ನಿರಂತರವಾಗಿ ಹೊರಹೊಮ್ಮುತ್ತಿತ್ತು.

● **ಪಾರ್ಕಿನ್ಸನ್ ಕಾಯಿಲೆ:** 1986. ಲೆಸ್‌ನಿಗೆ 45 ವರ್ಷಗಳಾದವು. ಲೆಸ್‌ನ 'ವಾಸನೆ ಬೀರುವ' ಲಕ್ಷಣಗಳು ದಿನೇ ದಿನೆ ಹೆಚ್ಚುತ್ತಿದ್ದ ಕಾರಣ, ಅವನು ನರವೈದ್ಯರನ್ನು ಭೇಟಿಯಾದ. ಅವನನ್ನು ಆಮೂಲಾಗ್ರವಾಗಿ ಪರೀಕ್ಷಿಸಿದ ವೈದ್ಯರು ಲೆಸ್‌ನಿಗೆ 'ಪಾರ್ಕಿನ್ಸನ್ ಕಾಯಿಲೆ' ಬಂದಿರುವುದಾಗಿ ಘೋಷಿಸಿದರು. ಪಾರ್ಕಿನ್ಸನ್ ಕಾಯಿಲೆಯು ಒಂದು ನರನಶಿಸುವ ಕಾಯಿಲೆ (ನ್ಯೂರೋ ಡಿ-ಜೆನೆರೇಟಿವ್ ಡಿಸೀಸ್). ಮಿದುಳಿನಲ್ಲಿ ಡೋಪಮಿನ್ ಎನ್ನುವ ರಾಸಾಯನಿಕವನ್ನು ಉತ್ಪಾದಿಸುವ ನರಕೋಶಗಳು ಕ್ರಮೇಣ ನಾಶವಾಗುತ್ತಾ ಹೋಗುತ್ತವೆ. ಆಗ ವ್ಯಕ್ತಿಯ ಕೈಕಾಲುಗಳಲ್ಲಿ ಕಂಪನವೂ ಆರಂಭವಾಗುತ್ತದೆ. ದೈಹಿಕ ಚಲನವಲನಗಳು ಬಿಗಿಯಾಗುತ್ತವೆ. ಸರಾಗವಾಗಿ ನಡೆಯಲು ಆಗುವುದಿಲ್ಲ. ನಿಧಾನವಾಗುತ್ತದೆ. ಕೊನೆಗೆ ಆ ನಿಧಾನ ಚಲನೆಯೂ ನಿಲ್ಲುತ್ತದೆ. ಪಾರ್ಕಿನ್ಸನ್ ಕಾಯಿಲೆಗೆ ನಿಖರ ಚಿಕಿತ್ಸೆಯಿಲ್ಲ. ವೈದ್ಯರ ಮಾರ್ಗದರ್ಶನದಲ್ಲಿ ಲಭ್ಯ ಚಿಕಿತ್ಸೆಯನ್ನು ಲೆಸ್ ಆರಂಭಿಸಿದ.

● **ಸಮಾವೇಶ:** ಲೆಸ್, ಪಾರ್ಕಿನ್ಸನ್ ರೋಗಿ ಎನ್ನುವುದು ಖಚಿತವಾಗಿತ್ತು. ಪಾರ್ಕಿನ್ಸನ್ ಕಾಯಿಲೆಯಿಂದ ನರಳುತ್ತಿದ್ದವರಿಗೆ ನೆರವು-ಬೆಂಬಲ-ಸಹಾನುಭೂತಿಯನ್ನು ನೀಡಲು ಬ್ರಿಟನ್ನಿನಲ್ಲಿ ಒಂದು ಸಮಾವೇಶವು ಏರ್ಪಾಡಾಗಿತ್ತು. ಆ ಸಮಾವೇಶಕ್ಕೆ ಲೆಸ್ ಮತ್ತು ಜಾಯ್ ಇಬ್ಬರೂ ಬಂದರು. ಪಾರ್ಕಿನ್ಸನ್ ಕಾಯಿಲೆಯಿದ್ದ ಜನರೆಲ್ಲ ಒಂದು ಸಭಾಂಗಣದಲ್ಲಿ ತುಂಬಿದ್ದರು. ಆ ಸಭಾಂಗಣದೊಳಗೆ ಲೆಸ್ ಹೆಜ್ಜೆಯನ್ನಿಟ್ಟಳು. ಕೂಡಲೇ ಆಕೆಯ ಮೂಗಿಗೆ ಅತ್ಯಂತ ದಟ್ಟ ಕಸ್ತೂರಿ ವಾಸನೆಯು ಬಡಿಯಿತು! ತನ್ನ ಗಂಡ ಲೆಸ್‌ನ ಒಡಲಿನಿಂದ ಬರುತ್ತಿದ್ದ ವಾಸನೆಯಂಥದ್ದೇ! ಅದು ಇಡೀ ಸಭಾಂಗಣದ ಒಳಗೆ ಗಾಢವಾಗಿ ವ್ಯಾಪಿಸಿತ್ತು. ತಕ್ಷಣ ಜಾಯ್‌ಳಿಗೆ ಜ್ಞಾನೋದಯವಾಯಿತು. ತಾನು ಲೆಸ್‌ನ ದೇಹವಾಸನೆಯನ್ನು ಆಘ್ರಾಣಿಸುತ್ತಿರಲಿಲ್ಲ; ಒಂದು ಮಾರಕ ಕಾಯಿಲೆಯ ವಾಸನೆಯನ್ನು ಗ್ರಹಿಸುತ್ತಿದ್ದೆ ಎಂದು ಆಕೆಗೆ ಮಿಂಚಿನಂತೆ



ಹೊಳೆಯಿತು. ಸಭಾಂಗಣದಲ್ಲಿದ್ದ ಪ್ರತಿಯೊಬ್ಬರ ಬಳಿಯೂ ಹೋದಳು, ಪ್ರತಿಯೊಬ್ಬರ ಮೈಯಿಂದ ಅದೇ ದಟ್ಟ ಕಸ್ತೂರಿ ವಾಸನೆಯು ಬರುತ್ತಿತ್ತು.

ಜಾಯ್, ತಾನು ಪಾರ್ಕಿನ್ಸನ್ ಕಾಯಿಲೆಯ ವಾಸನೆಯನ್ನು ಗುರುತಿಸಬಲ್ಲೆ ಎಂದದ್ದು ಹಾಗೆಯೇ ಗಾಳಿಯಲ್ಲಿ ತೇಲಿಹೋಯಿತು. ಯಾರೂ ಅದನ್ನು ಗಂಭೀರವಾಗಿ ಪರಿಗಣಿಸಲಿಲ್ಲ. 2012. ಎಡಿನ್ ಬರೋದಲ್ಲಿ ಡಾ.ಟಿಲೋ ಕುನತ್ ಎಂಬ ವೈದ್ಯನು ಪಾರ್ಕಿನ್ಸನ್ ಕಾಯಿಲೆಯ ಬಗ್ಗೆ ಉಪನ್ಯಾಸವನ್ನು ನೀಡುತ್ತಿದ್ದ. ಅವನು ಸಂಶೋಧಕನೂ ಆಗಿದ್ದ. ಉಪನ್ಯಾಸವು ಮುಗಿದ ಮೇಲೆ, ಜಾಯ್ ಆ ವೈದ್ಯನನ್ನು ಭೇಟಿಯಾದಳು. ''ನಾವು ಪಾರ್ಕಿನ್ಸನ್ ಕಾಯಿಲೆಯ ವಾಸನೆಯನ್ನು ಏಕೆ ಪತ್ತೆ ಹಚ್ಚುತ್ತಿಲ್ಲ?'' ಎಂದು ಸರಳವಾದ ಪ್ರಶ್ನೆಯನ್ನು ಕೇಳಿದಳು. ತಾನು ಹೇಗೆ ತನ್ನ ಗಂಡನ ಕಾಯಿಲೆಯನ್ನು ಪತ್ತೆಹಚ್ಚಿದೆ ಎನ್ನುವುದನ್ನು ವಿವರಿಸಿದಳು. ಜಾಯ್ ನೀಡಿದ ವಿವರಣೆಯನ್ನು ಕುನತ್ ನಂಬಲಿಲ್ಲ. ಆದರೆ ಆಕೆಯ ಆತ್ಮವಿಶ್ವಾಸವನ್ನು ನೋಡಿ, ಯಾಕೆ ಸರಳವಾದ ಒಂದು ಪ್ರಯೋಗವನ್ನು ಮಾಡಿ ನೋಡಬಾರದು ಎಂದು ಅನಿಸಿತು. ಮ್ಯಾಂಚೆಸ್ಟರ್ ವಿಶ್ವವಿದ್ಯಾಲಯದಲ್ಲಿ ರಸಾಯನ ವಿಜ್ಞಾನದಲ್ಲಿ ಪ್ರಾಚಾರ್ಯರಾಗಿದ್ದ ಪೆರ್ಡಿತಾ ಬ್ಯಾರೆನ್ ಎನ್ನುವವರ ಜತೆಗೂಡಿ ಅವರು ಒಂದು ಪ್ರಯೋಗವನ್ನು ರೂಪಿಸಿದರು. ಇವರು ಮಾಡಿದ ಸರಳ ಪ್ರಯೋಗವು ವೈದ್ಯಕೀಯ ಜಗತ್ತಿನಲ್ಲಿ ಒಂದು ದಾಖಲೆಯನ್ನು ಮಾಡಿತು.

● **ಪ್ರಯೋಗ:** ಸಂಶೋಧಕರು 12 ಜನರನ್ನು ಆಯ್ಕೆ ಮಾಡಿಕೊಂಡರು. ಅವರಲ್ಲಿ 6 ಜನರಿಗೆ ಪಾರ್ಕಿನ್ಸನ್ ಕಾಯಿಲೆ ಇತ್ತು. ಉಳಿದ 6 ಜನರಿಗೆ ಆ ಕಾಯಿಲೆ ಇರಲಿಲ್ಲ. ಅಂದರೆ ಆರು ಜನರು ಕಾಯಿಲೆ ಇದ್ದವರು, ಆರು ಜನರು ಕಾಯಿಲೆ ಇಲ್ಲದವರು ಪ್ರಯೋಗದಲ್ಲಿ ಭಾಗಿಯಾಗಿದ್ದರು. ಕಾಯಿಲೆ ಇಲ್ಲದ ಆರು ಜನರನ್ನು 'ಕಂಟ್ರೋಲ್ಸ್' ಎಂದು ಕರೆಯುತ್ತಾರೆ. ಎಲ್ಲರಿಗೂ ಒಂದೊಂದು ಟಿ-ಷರ್ಟ್ ಕೊಟ್ಟರು. 24 ಗಂಟೆಗಳ ಕಾಲ, ಹಗಲೂ ರಾತ್ರಿ, ಮಲಗಿದ್ದಾಗಲೂ ಅದನ್ನು ಧರಿಸುವಂತೆ ಹೇಳಿದರು. ಹಾಗಾಗಿ, 24 ಗಂಟೆಯಲ್ಲಿ ಅವರ ಮೈಬೆವರನ್ನೆಲ್ಲ ಆ ಟಿ-ಷರ್ಟ್ ಹೀರಿಕೊಂಡಿರುತ್ತದೆ. ಮರುದಿವಸ ಆ ಟಿ-ಷರ್ಟುಗಳನ್ನು ತಂದು ಪ್ರಯೋಗಾಲಯಕ್ಕೆ ನೀಡಿದರು. ಆ 12 ಟಿ-ಷರ್ಟುಗಳನ್ನು ಜಾಯ್‌ಳಿಗೆ ನೀಡಿದರು. ಅವನ್ನು ಮೂಸಿ, 'ಯಾರಿಗೆ ಪಾರ್ಕಿನ್ಸನ್ ಕಾಯಿಲೆ ಇದೆ, ಯಾರಿಗೆ ಇಲ್ಲ' ಎನ್ನುವುದನ್ನು ಜಾಯ್ ಹೇಳಬೇಕಾಗಿತ್ತು.

ಜಾಯ್, 12 ಜನರ ಟಿ-ಷರ್ಟುಗಳ ವಾಸನೆಯನ್ನು ನೋಡಿ, ಪಾರ್ಕಿನ್ಸನ್ ಕಾಯಿಲೆ ಇದ್ದ ಆರೂ ಜನರನ್ನೂ ನಿಖರವಾಗಿ ಗುರುತಿಸಿದಳು. ಜತೆಗೆ ಕಾಯಿಲೆ ಇಲ್ಲದ ಆರು ಜನರ ಟಿ-ಷರ್ಟುಗಳಲ್ಲಿ ಒಂದು ಟಿ-ಷರ್ಟನ್ನು ತೆಗೆದುಕೊಂಡು, ''ಇದನ್ನು ಹಾಕಿಕೊಂಡಿದ್ದವರಿಗೂ ಕಾಯಿಲೆ ಇರಬೇಕು'' ನೋಡಿ ಎಂದಳು. ಆದರೆ ಈ ಅಧ್ಯಯನದಲ್ಲಿದ್ದ ಭಾಗಿಯಾಗಿದ್ದ ವಿಜ್ಞಾನಿಗಳು, ''ಜಾಯ್

ಆರೋಗ್ಯವಂತನಿಗೆ ಕಾಯಿಲೆ ಇದೆ ಎನ್ನುತ್ತಿದ್ದಾಳೆ, ಅವಳು ಪರೀಕ್ಷೆಯಲ್ಲಿ ಸೋತಳು'' ಎಂದು ಟೀಕೆಯನ್ನು ಮಾಡಿದರು.

ಸಂಶೋಧನಾ ಅಧ್ಯಯನವು ನಡೆದು ಎಂಟು ತಿಂಗಳಾದವು. ಆರು ಜನ ಆರೋಗ್ಯವಂತರಲ್ಲಿ ಒಬ್ಬನು ಪಾರ್ಕಿನ್ಸನ್ ಕಾಯಿಲೆಯಿದೆ ಎಂದು ಜಾಯ್ ಏನು ಹೇಳಿದ್ದಳೋ, ಆ ಯುವಕನು ನೇರವಾಗಿ ಸಂಶೋಧನಾ ತಂಡವನ್ನು ಸಂಪರ್ಕಿಸಿ, ಈಗಷ್ಟೇ ತನಗೆ ಪಾರ್ಕಿನ್ಸನ್ ಕಾಯಿಲೆ ಇರುವುದನ್ನು ನರಶಾಸ್ತ್ರಜ್ಞರು ಖಚಿತಪಡಿಸಿದ್ದಾರೆ ಎಂಬ ಮಾಹಿತಿಯನ್ನು ನೀಡಿದ. ಜಾಯ್, ನಿಜಕ್ಕೂ ಪಾರ್ಕಿನ್ಸನ್ ಕಾಯಿಲೆಯನ್ನು ಕೇವಲ ಅವರ ದೇಹ ವಾಸನೆಯಿಂದ ಪತ್ತೆಹಚ್ಚಬಲ್ಲಳು ಎನ್ನುವ ವಿಚಾರವು ಇದರಿಂದ ಖಚಿತವಾಯಿತು. ಅಂದು ಲಭ್ಯವಿದ್ದ, ಪಾರ್ಕಿನ್ಸನ್ ಕಾಯಿಲೆಯನ್ನು ಪತ್ತೆಹಚ್ಚಬಲ್ಲ ತಪಾಸಣೆಗಳು ಹಾಗೂ ಪರೀಕ್ಷೆಗಳಿಗಿಂತ ಜಾಯ್‌ಳ ಮೂಗು ಹೆಚ್ಚು ನಿಖರವಾಗಿದೆ ಎಂದು ವೈದ್ಯವಿಜ್ಞಾನಕ್ಕೆ ತಿಳಿಯಿತು.

● **ಪಾರ್ಕಿನ್ಸನ್ ಮಸ್ಕ್:** ಜಾಯ್ ಯಾವುದೇ ದೈವಾಂಶ ಸಂಭೂತ ವ್ಯಕ್ತಿಯಾಗಿರಲಿಲ್ಲ; ಪವಾಡವನ್ನೂ ಮಾಡುತ್ತಿರಲಿಲ್ಲ. ಆಕೆಗೆ 'ಘ್ರಾಣಾತೀತ ಶಕ್ತಿ' ಅಥವಾ 'ಅತಿಸೂಕ್ಷ್ಮ ವಾಸನಾ ಗ್ರಹಿಕೆ' (ಹೈಪರಾಸ್ಮಿಯ) ಇದೆ ಎನ್ನುವ ನಿರ್ಣಯಕ್ಕೆ ಬಂದರು. ಕೆಲವರಿಗೆ ಇಂಥ ಶಕ್ತಿಯಿರುವುದು ನಿಜ. ಆದರೆ ಅವರಿಗೆ ಮಾತ್ರ ಯಾಕೆ ಈ ರೀತಿಯ ಶಕ್ತಿ ಬಂದಿದೆ ಎನ್ನುವ ಪ್ರಶ್ನೆಗೆ ಉತ್ತರವನ್ನು ಕೊಡುವುದು ಕಷ್ಟ. ತಕ್ಷಣ ವೈದ್ಯರು ಜಾಯ್‌ಳ ಬಗ್ಗೆ ಹೆಚ್ಚು ತಲೆಯನ್ನು ಕೆಡಿಸಿಕೊಳ್ಳುವ ಬದಲು, ಆ ಕಸ್ತೂರಿ ವಾಸನೆಯ ರಾಸಾಯನಿಕ ವಿಶ್ಲೇಷಣೆಯನ್ನು ಮಾಡುವ ಹೊಸ ಅಧ್ಯಯನವನ್ನು ಆರಂಭಿಸಿದರು. ಪಾರ್ಕಿನ್ಸನ್ ಕಾಯಿಲೆ ಇರುವ ಪ್ರತಿಯೊಬ್ಬರ ಮೈ ಬೆವರಿನಲ್ಲಿ ಉತ್ಪಾದನೆಯಾಗುವ ಆ ಕಸ್ತೂರಿ ವಾಸನೆಯನ್ನು ಬೀರುವ ರಾಸಾಯನಿಕ ಯಾವುದು ಎಂದು ಹುಡುಕತೊಡಗಿದರು. ಪ್ರೊಫೆಸರ್ ಬ್ಯಾರೆನ್ ಅವರು ಪಾರ್ಕಿನ್ಸನ್ ಕಾಯಿಲೆಯವರ ಚರ್ಮವು ಉತ್ಪಾದನೆಯನ್ನು ಮಾಡುವ ಮೈಜಿಡ್ಡನ್ನು (ಸೀಬಮ್) ಸಂಗ್ರಹಿಸಿದರು. ಅವುಗಳ ರಾಸಾಯನಿಕ ಅಧ್ಯಯನವನ್ನು ಆರಂಭಿಸಿದರು. ಅವರು 'ಮಾಸ್ ಸ್ಪೆಕ್ಟ್ರೋಮೆಟ್ರಿ' ಎಂಬ ಉಪಕರಣದ ನೆರವಿನಿಂದ ಮೈಜಿಡ್ಡನ್ನು ಅಧ್ಯಯನ ಮಾಡಿದರು. ಆಗ ಅವರಿಗೆ, ಜನಸಾಮಾನ್ಯರ ಮೈಜಿಡ್ಡಿಗಿಂತ ಭಿನ್ನವಾದ ರಾಸಾಯನಿಕಗಳು, ಪಾರ್ಕಿನ್ಸನ್ ಕಾಯಿಲೆಯವರ ಮೈಜಿಡ್ಡಿನಲ್ಲಿದೆ ಎನ್ನುವುದು ತಿಳಿಯಿತು. ಐಕೋಸೇನ್, ಹಿಪ್ಪುರಿಕ್ ಆಸಿಡ್, ಆಕ್ಟಾಡೆಕಾನೆಲ್ ಮುಂತಾದ ವಸ್ತುಗಳು ಆವಿಯಾಗಬಲ್ಲ ರಾಸಾಯನಿಕಗಳ ವರ್ಗಕ್ಕೆ ಸೇರಿದ್ದವು.

ಪಾರ್ಕಿನ್ಸನ್ ಕಾಯಿಲೆಯು ಪ್ರಧಾನವಾಗಿ ನಮ್ಮ ದೇಹದ 'ಸ್ವಾಯತ್ತ ಚಲನಾ ನರವ್ಯವಸ್ಥೆ'ಯ ಮೇಲೆ ಪ್ರಭಾವವನ್ನು ಬೀರುತ್ತದೆ. ಈ ವ್ಯವಸ್ಥೆಯು ಬೆವರು ಮತ್ತು ಬೆವರಿನಲ್ಲಿ ಬೆರೆತಿರುವ ತೈಲವನ್ನು ಉತ್ಪಾದಿಸುತ್ತದೆ. ಹಾಗಾಗಿ ಸಾಕಷ್ಟು ಪಾರ್ಕಿನ್ಸನ್ ರೋಗಿಗಳ ಮೈಮೇಲೆ ಅತಿಜಿಡ್ಡು-ಅತಿಬೆವರುವ ಚರ್ಮವನ್ನು ಕಾಣಬಹುದು. ಇದು ಮೈಜಿಡ್ಡು ಚರ್ಮದುರಿಯೂತ (ಸೆಬೋರಿಕ್ ಡರ್ಮಟೈಟಿಸ್) ಎನ್ನುವ ಸ್ಥಿತಿಗೆ ಕಾರಣವಾಗಬಹುದು. ತಲೆ, ಮುಖ, ಕುತ್ತಿಗೆ, ಎದೆಯ ಮೇಲಿರುವ ಚರ್ಮದಲ್ಲಿ ತೈಲಾಂಶವು ಹೆಚ್ಚು ಉತ್ಪಾದನೆಯಾಗುತ್ತದೆ. ಚರ್ಮದ ಹೊಟ್ಟು ಕಂಡುಬರಬಹುದು. ನವೆಯಾಗಬಹುದು. ಈ ಕಾಯಿಲೆಯು ಚರ್ಮದ ಉಪಾಪಚಯವನ್ನೇ (ಮೆಟಬಾಲಿಸಮ್) ಬದಲಿಸುವ ಕಾರಣ, ಭಿನ್ನ ರಾಸಾಯನಿಕಗಳು ಮೈಜಿಡ್ಡಿನಲ್ಲಿರುತ್ತವೆ.

● **ಅನಾದಿ ವಿಧಾನ:** ವೈದ್ಯವಿದ್ಯಾರ್ಥಿಗಳಾಗಿ ಶಿಕ್ಷಣವನ್ನು ಪಡೆಯುವಾಗ, ಒಂದು ರೋಗವನ್ನು ಹೇಗೆಲ್ಲ ಪತ್ತೆ ಹಚ್ಚಬಹುದು ಎನ್ನುವುದನ್ನು ಕಲಿಸುತ್ತಾರೆ. ಅವುಗಳಲ್ಲಿ ವಾಸನೆಯನ್ನು ನೋಡುವುದರ ಮೂಲಕ ರೋಗನಿದಾನವನ್ನು ಮಾಡುವುದೂ ಒಂದು. ಹಣ್ಣಿನ ವಾಸನೆ ಬಂದರೆ ಡಯಾಬಿಟಿಕ್ ಕೀಟೋ ಅಸಿಡೋಸಿಸ್, ಅಮೋನಿಯ ವಾಸನೆ ಬಂದರೆ ಮೂತ್ರಪಿಂಡ ವೈಫಲ್ಯ, ಸಿಹಿಯಾದ ವಾಸನೆಯು ಯಕೃತ್ ವೈಫಲ್ಯ, ಮೀನಿನ ವಾಸನೆ ಟ್ರೈಮೀಥೈಲ್ ಅಮಿನ್ಯೂರಿಯ, ದ್ರಾಕ್ಷಿಹಣ್ಣಿನ ವಾಸನೆಯು ಸ್ಯೂಡೋಮೋನಾಸ್ ಸೋಂಕು... ಹೀಗೆಲ್ಲ ವಾಸನೆಯಿಂದಲೇ ಪತ್ತೆ ಹಚ್ಚಬಹುದಾದ ಕಾಯಿಲೆಗಳಿವೆ. ವೈದ್ಯರಾದವರಿಗೆ ಕಣ್ಣು, ಕಿವಿ, ಮೂಗು, ನಾಲಗೆ, ಚರ್ಮ ಎಲ್ಲವೂ ಚುರುಕಾಗಿರಬೇಕಾಗುತ್ತದೆ. ಆದರೆ ಇತ್ತೀಚಿನ ದಿನಗಳಲ್ಲಿ ವೈದ್ಯರು ನಿಖರ ಶಾರೀರಿಕ ಪರೀಕ್ಷೆಗಿಂತ ರಕ್ತಪರೀಕ್ಷೆ, ಸ್ಕ್ಯಾನ್, ಬಯಾಪ್ಸಿಗಳಿಗೆ ಹೆಚ್ಚು ಆದ್ಯತೆಯನ್ನು ಕೊಡುತ್ತಿರುವುದು ಖೇದನೀಯ ವಿಚಾರ. ಜಾಯ್‌ಳ ವಿಶೇಷ ಘ್ರಾಣ ಸಾಮರ್ಥ್ಯವು ಹೊಸ ಹೊಸ ಸಂಶೋಧನೆಗಳಿಗೆ ಅವಕಾಶ ಮಾಡಿಕೊಟ್ಟಿದೆ ಎನ್ನುವುದು ಸಂತಸದ ವಿಚಾರ.

ಲೆಸ್ ಮಿಲ್ನೆ 2015ರಲ್ಲಿ ಮರಣಿಸಿದ. ಸಾಯುವ ಮೊದಲು ಮಡದಿ ಜಾಯ್ ಮಿಲ್ನೆಯನ್ನು ಕರೆದು, ಅವಳು ತನ್ನ ಉಳಿದ ಬದುಕನ್ನು ಸಂಶೋಧನೆಗೆ ಮೀಸಲಿಡಬೇಕೆಂದು ಪ್ರಾರ್ಥಿಸಿದ. ಜಾಯ್, ತನ್ನ ಗಂಡನ ಆಸೆಯಂತೆ ಇಂದಿಗೂ ಸಂಶೋಧಕರ ಜತೆಯಲ್ಲಿ ನೆರವಾಗುತ್ತಿದ್ದಾರೆ. ಪಾರ್ಕಿನ್ಸನ್ ಕಾಯಿಲೆಯು ಬೆಳೆಯುವಾಗ ಹೇಗೆ ದೇಹದ ಸಹಜ ಉಪಾಪಚಯವನ್ನು ಬದಲಿಸಿ, ಆವಿಯಾಗಬಲ್ಲ ವಿಶೇಷ ರಾಸಾಯನಿಕಗಳನ್ನು ಉತ್ಪಾದಿಸುತ್ತದೆಯೋ, ಹಾಗೆಯೇ ಪ್ರತಿಯೊಂದು ರೋಗದಲ್ಲಿಯೂ ವಿಶೇಷ ರಾಸಾಯನಿಕಗಳು ಉತ್ಪಾದನೆಯಾಗುತ್ತವೆ. ದೇಹದ ವಿವಿಧ ಮಾರ್ಗಗಳ ಮೂಲಕ ಹೊರಬರುತ್ತವೆ. ಅವನ್ನು ಗುರುತಿಸಿ ಕಾಯಿಲೆಯನ್ನು ಪತ್ತೆಹಚ್ಚಬಹುದು ಎನ್ನುವ ವಿಚಾರವನ್ನು ವಿಜ್ಞಾನವು ಒಪ್ಪಿದೆ.

- **ಕ್ಯಾನ್ಸರ್ ಬೆಳೆಯುವುದನ್ನು ಆರಂಭದಲ್ಲಿಯೇ ಪತ್ತೆ ಹಚ್ಚಿದರೆ ಗುಣಪಡಿಸುವುದು ಸುಲುಭ. ಕ್ಯಾನ್ಸರನ್ನು ಪತ್ತೆಹಚ್ಚಲು ನಾಯಿಗಳನ್ನು ತರಬೇತಿಗೊಳಿಸಲಾಗಿದೆ.**

- **ಜಾಯ್, ವಿಜ್ಞಾನಿಗಳ ಜತೆಗೂಡಿ, ಅವರೊಡನೆ ಸಂಶೋಧನೆಯಲ್ಲಿ ಭಾಗಿಯಾಗಿ ಕ್ಯಾನ್ಸರ್ ಬೆಳೆಯುವಾಗ ತೀಕ್ಷ್ಣವಾದ, ಲೋಹೀಯ ಇಲ್ಲವೇ ಔಷಧ ವಾಸನೆಯು (ಶಾರ್ಪ್, ಮೆಟಾಲಿಕ್, ಮೆಡಿಸಿನಲ್) ರೋಗಿಯ ಉಸಿರಲ್ಲಿ ಹಾಗೂ ಮೂತ್ರದಲ್ಲಿ ಹೊರಬರುತ್ತದೆ ಎನ್ನುತ್ತಾಳೆ.**

- **ಆಲ್ಜೈಮರ್ ಕಾಯಿಲೆಯು ಬೆಳೆಯುವಾಗ, ಬೆವರು ಮತ್ತು ಮೈಜಿಡ್ಡಿನಲ್ಲಿ ಮಧುರವಾದ, ಹಣ್ಣಿನ ವಾಸನೆಯು/ವೆನಿಲ್ಲ ವಾಸನೆಯು ಹೊರಬರುತ್ತದೆಯಂತೆ.**

- **ಟಿಬಿ ಬೆಳೆಯುವಾಗ ರೋಗಿಯ ಉಸಿರು ಹಾಗೂ ಕಫದಲ್ಲಿ ಹುಳಿತ ಬಿಯರಿನ ವಾಸನೆ ಅಥವ ತೇವವಾಗಿರುವ ಯೀಸ್ಟ್ (ವೆಟ್ ಯೀಸ್ಟ್) ಹೊರಡಿಸುವ ವಾಸನೆಯು ಕಂಡುಬರುತ್ತದೆಯಂತೆ.**

● **ಸ್ವಾಬ್ ಟೆಸ್ಟ್:** ಪಾರ್ಕಿನ್ಸನ್ ಅಥವಾ ಆಲ್ಜೈಮರ್ ರೋಗಿಗಳ ಮೈಜಿಡ್ಡಿನಲ್ಲಿ, ರೋಗವನ್ನು ಪತ್ತೆಹಚ್ಚಲು ನೆರವಾಗುವ ರಾಸಾಯನಿಕಗಳು ಇರುತ್ತವೆ ಎನ್ನುವುದು ವಿಜ್ಞಾನಿಗಳಿಗೆ ತಿಳಿದಿದೆ. ಹಾಗಾಗಿ ವ್ಯಕ್ತಿಯ, ಸೀಬಮ್ ಅನ್ನು/ಜಿಡ್ಡನ್ನು ಹತ್ತಿಯಿಂದ ಒರೆಸಿ (ಸ್ವಾಬ್) ಅದನ್ನು ಪ್ರಯೋಗಾಲಯಕ್ಕೆ ನೀಡುವುದು. ಪ್ರಯೋಗಾಲಯದಲ್ಲಿ ರಾಸಾಯನಿಕ ಸ್ವರೂಪವನ್ನು ಅಧ್ಯಯನ ಮಾಡಿ, ಯಾವ ರೋಗ ಬಂದಿರುವ ಸಾಧ್ಯತೆ ಇದೆ ಎನ್ನುವುದನ್ನು ಹೇಳಬಹುದು. ಇಂಥ ಪ್ರಮಾಣಬದ್ಧ ಪರೀಕ್ಷೆಗಳು ಅಭಿವೃದ್ಧಿಯ ವಿವಿಧ ಹಂತಗಳಲ್ಲಿವೆ.

● **ಇಲೆಕ್ಟ್ರಾನಿಕ್/ಇ-ನೋಸ್:** ಜಾಯ್‌ಳ ಮೂಗು ಸೂಕ್ಷ್ಮಾತಿಸೂಕ್ಷ್ಮ. ಇವಳಿಗಿಂತಲೂ ಉತ್ತಮವಾದ ಸೂಕ್ಷ್ಮಾತಿಸೂಕ್ಷ್ಮ ವಾಸನೆಯನ್ನು ಪತ್ತೆಹಚ್ಚಬಲ್ಲ 'ಇ-ಮೂಗು'ಗಳು ಸಹ ಬೆಳವಣಿಗೆಯ ವಿವಿಧ ಹಂತಗಳಲ್ಲಿವೆ. ಹಾಗಾಗಿ ಮುಂದಾನೊಂದು ದಿನದಲ್ಲಿ ರೋಗನಿದಾನವನ್ನು ಮಾಡಲು 'ಸ್ವಾಬ್' ಇಲ್ಲವೇ 'ಇಲೆಕ್ಟ್ರಾನಿಕ್ ಮೂಗು'ಗಳ ನೆರವನ್ನು ಪಡೆಯಲಿದ್ದೇವೆ ಎನ್ನುವುದು ಮನುಕುಲಕ್ಕೆ ಬಹಳ ದೊಡ್ಡ ಆಶಾಕಿರಣವಾಗಿದೆ.

ನಿತ್ಯದ ಬದುಕಿನಲ್ಲಿ ಕಾಡುವ ಫಿಟ್ಸ್

● ಮಿರ್ಲೆ ಚಂದ್ರಶೇಖರ

ಫಿಟ್ಸ್ (Seizure) ಎಂಬುದು ಮನುಷ್ಯನಿಗೆ ಕಾಡುವ ಒಂದು ದೈಹಿಕ ಸಮಸ್ಯೆ, ಫಿಟ್ಸ್‌ನಿಂದ ಬರುವ ಭಯವು ದೈನಂದಿನ ಜೀವನದ ಮೇಲೆ ತೀವ್ರ ಪರಿಣಾಮ ಬೀರುತ್ತದೆ. ಮಲೇಷ್ಯಾದಲ್ಲಿ 164 ರೋಗಿಗಳ ಮೇಲೆ ನಡೆಸಿದ ಅಧ್ಯಯನವೊಂದು ತಿಳಿಸಿರುವಂತೆ, ಫಿಟ್ಸ್ ಬರುವ ಬಗ್ಗೆ ಇರುವ ಆತಂಕವೇ ಬದುಕಿನ ಗುಣಮಟ್ಟವನ್ನು ಕುಗ್ಗಿಸುತ್ತದೆ. ಇದು ಫಿಟ್ಸ್ ನಿರೋಧಕ ಔಷಧಿಗಳಿಂದ ಉಂಟಾಗಬಹುದಾದ ಅಡ್ಡಪರಿಣಾಮಗಳಿಗಿಂತಲೂ ಹೆಚ್ಚು ನಕಾರಾತ್ಮಕ ಪರಿಣಾಮವನ್ನು ಬೀರುತ್ತದೆ.

ಫಿಟ್ಸ್ ಒಂದು ಕಾಯಿಲೆ ಅಲ್ಲ, ಅದೊಂದು ಲಕ್ಷಣ ಎನ್ನುತ್ತಾರೆ ವೈದ್ಯರು, ನಮ್ಮ ಮಿದುಳಿನಲ್ಲಿ ನರಕೋಶಗಳು ಪರಸ್ಪರ ಸಂವಹನ ನಡೆಸಲು ಸಣ್ಣ ಪ್ರಮಾಣದ ವಿದ್ಯುತ್ ಸಂಕೇತಗಳನ್ನು ಬಳಸುತ್ತವೆ; ವಿದ್ಯುತ್ ಸಂವಹನದಲ್ಲಿ ಹಠಾತ್ ವ್ಯತ್ಯಯ ಅಥವಾ ಅತಿಯಾದ ಪ್ರವಾಹ ಉಂಟಾದಾಗ ಮಿದುಳಿನ ಕಾರ್ಯವೈಖರಿ ತಾತ್ಕಾಲಿಕವಾಗಿ ಬದಲಾಗುತ್ತದೆ, ಇದನ್ನೇ ನಾವು 'ಫಿಟ್ಸ್' ಅಥವಾ 'ಸೀಜರ್' ಎಂದು ಕರೆಯುವುದು. ಒಬ್ಬ ವ್ಯಕ್ತಿಗೆ ಪದೇ ಪದೆ ಫಿಟ್ಸ್ ಬರುತ್ತಿದ್ದರೆ ಅದನ್ನು ಅಪಸ್ಮಾರ ಎಂದು ಕರೆಯಲಾಗುತ್ತದೆ.

ಮಿದುಳಿಗೆ ಗಾಯವಾದಾಗ, ಸೋಂಕು ಆವರಿಸಿದರೆ, ಮಿದುಳಿನಲ್ಲಿ ಗಡ್ಡೆ (Tumor), ಹುಟ್ಟಿನಿಂದಲೇ ಮಿದುಳಿನ ಬೆಳವಣಿಗೆಯಲ್ಲಿ ವ್ಯತ್ಯಾಸ ಹೀಗೆ ಹಲವು ಕಾರಣಗಳಿಂದ ಫಿಟ್ಸ್ ಬರುವುದುಂಟು.

ಆದರೆ ಆಧುನಿಕ ವೈದ್ಯಕೀಯ ಶಾಸ್ತ್ರದ ನೆರವಿನಿಂದ ಇದನ್ನು ಅತ್ಯಂತ ಪರಿಣಾಮಕಾರಿಯಾಗಿ ನಿಯಂತ್ರಿಸಬಹುದೆಂಬುದನ್ನು ವೈದ್ಯರು ತೋರಿಸಿದ್ದಾರೆ.

ವೈದ್ಯಶಾಸ್ತ್ರವು ಹೇಳುವಂತೆ ಫಿಟ್ಸ್‌ನ ಆತಂಕವು ವ್ಯಕ್ತಿಯ ಭಾವನಾತ್ಮಕ ನೆಮ್ಮದಿ, ಸಾಮಾಜಿಕ ಕಾರ್ಯಕ್ಷಮತೆ ಮತ್ತು ಒಟ್ಟಾರೆ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ. ಆದಾಗ್ಯೂ, ಬೌದ್ಧಿಕ ಕಾರ್ಯಕ್ಷಮತೆ (Cognitive functioning) ಹೆಚ್ಚಾಗಿ ಬಾಧಿತವಾಗುವುದಿಲ್ಲ. ಫಿಟ್ಸ್ ನಿಂದ ಒದ್ದಾಡುವ ಸಂದರ್ಭದಲ್ಲಿ ರೋಗಿಯು ಪ್ರಜ್ಞೆ ಹೊಂದಿರುತ್ತಾನೆ; ಆಗ ಫಿಟ್ಸ್ ಬಂದಾಗಿನ ಸಮಯಗಳಲ್ಲಿ ತಾನು ಅನುಭವಿಸಿದ ಕಷ್ಟಗಳು, ನೋಡುವವರ ದೃಷ್ಟಿ, ನಿಂದನೆಗಳು ಸ್ಪಷ್ಟವಾಗಿ ನೆನಪಿರುತ್ತವೆ.

ಫಿಟ್ಸ್‌ನ ನಿರಂತರವಾದ ಆತಂಕದಿಂದಾಗಿ ಕೆಲವರಿಗೆ ವಾಹನ ಚಾಲನೆ ಸಾಧ್ಯವಾಗದು, ಉದ್ಯೋಗಾವಕಾಶಗಳ ಕೊರತೆ ಎದುರಾಗುತ್ತದೆ, ಸಾರ್ವಜನಿಕವಾಗಿ ಎಲ್ಲರೊಡನೆ ಬೆರೆಯುವುದಕ್ಕೆ ಆಗುವುದಿಲ್ಲ. ಫಿಟ್ಸ್ ಅನ್ನು ನಿಯಂತ್ರಿಸುವುದು ಮಾತ್ರವಲ್ಲದೆ, ಅದರ ನಂತರದ ಮಾನಸಿಕ ದುಷ್ಪರಿಣಾಮಗಳ ಬಗ್ಗೆಯೂ ಎಚ್ಚರ ವಹಿಸಬೇಕಾದ್ದು ಅತ್ಯಗತ್ಯ. ಕಾಗ್ನಿಟಿವ್ ಬಿಹೇವಿಯರಲ್ ಥೆರಪಿ ಮತ್ತು ಸರಿಯಾದ ಶಿಕ್ಷಣದ ಮೂಲಕ ರೋಗಿಯ ಮಾನಸಿಕ ಸ್ಥಿತಿಯನ್ನು ಸುಧಾರಿಸಬಹುದು ಎಂದು ತಜ್ಞ ವೈದ್ಯರು ಸಲಹೆ ನೀಡುತ್ತಾರೆ.

ಶ್ರೀ ರಾಮಚರಿತ ಮಾನಸದ ನಾಲ್ಕು ಸಂವಾದಗಳು

ಒಂದೊಳ್ಳೆ ಮಾತು
ರೂಪಾ ಗುರುರಾಜ್

Vishwavani TV Special
ಯೂಟ್ಯೂಬ್ ಚಾನೆಲ್‌ನಲ್ಲಿ

ಶ್ರೀ ರಾಮಚರಿತ ಮಾನಸವನ್ನು ಕೇವಲ ಒಂದು ಕಥೆಯನ್ನಾಗಿ ನೋಡದೆ, ನಾಲ್ಕು ವಿಭಿನ್ನ ದೃಷ್ಟಿಕೋನಗಳ ಸಂಗಮವಾಗಿ ತುಳಸೀದಾಸರು ಕಟ್ಟಿಕೊಟ್ಟಿದ್ದಾರೆ. ಇದನ್ನು 'ಮಾನಸದ ನಾಲ್ಕು ಘಾಟ್‌ಗಳು' (ಕಟ್ಟೆಗಳು) ಎಂದು ಕರೆಯಲಾಗುತ್ತದೆ. ಶ್ರೀ ರಾಮಚರಿತ ಮಾನಸದ ಚತುರ್ವಿಧ ಸಂವಾದಗಳು ಜೀವನದ ನಾಲ್ಕು ಆಯಾಮಗಳು.

ಶ್ರೀ ರಾಮಚರಿತ ಮಾನಸವು ಕೇವಲ ಒಬ್ಬ ರಾಜನ ಕಥೆಯಲ್ಲ, ಅದು ಮನುಷ್ಯನ ಅಂತರಂಗದ ಪಯಣ. ತುಳಸೀದಾಸರು ಈ ಮಹಾಕಾವ್ಯವನ್ನು ನಾಲ್ಕು ಪ್ರಮುಖ ಸಂವಾದಗಳ ಮೂಲಕ ಹರಿಸಿದ್ದಾರೆ. ನದಿಗೆ ಇಳಿಯಲು ಹೇಗೆ ನಾಲ್ಕು ದಿಕ್ಕುಗಳಲ್ಲಿ ಘಾಟ್‌ಗಳಿರುತ್ತವೆಯೋ, ಹಾಗೆಯೇ ರಾಮನೆಂಬ ಸಾಗರವನ್ನು ಸೇರಲು ಈ ನಾಲ್ಕು ಸಂವಾದಗಳು ನಮಗೆ ದಾರಿದೀಪಗಳಾಗಿವೆ.

● **ಮೂಲ ಶ್ಲೋಕ (ದೋಹಾ):**

ಸುಕೃತಿ ಸಾಧು ನಾಮಹಿಂ ಗುಣ ಗಾನಾ ।
ನಾನಾ ಭಾಂತಿ ಕರಹಿಂ ಇತಿಹಾಸಾ ॥
ಚತುರ ಸಂವಾದ ಸುಮನೋಹರ ಗಾಥೇ ।
ಸದೃಶ ಚಾರಿ ಘಾಟ ಮೃದು ಪಾವನ ಬಾಥೇ ॥

ಅಂದರೆ, ಪುಣ್ಯವಂತರು ಮತ್ತು ಸಾಧುಗಳು ಭಗವಂತನ ನಾಮಗುಣಗಾನವನ್ನು ಅನೇಕ ರೀತಿಯಲ್ಲಿ ಮಾಡುತ್ತಾರೆ. ಈ ಕಾವ್ಯದಲ್ಲಿರುವ ನಾಲ್ಕು ಸುಂದರ ಸಂವಾದಗಳು, ಭಕ್ತಿಯ ನದಿಗೆ ಇರುವ ನಾಲ್ಕು ಪವಿತ್ರವಾದ ಘಾಟ್‌ಗಳಿದ್ದಂತೆ ಎಂದರ್ಥ.

● **ನಾಲ್ಕು ಸಂವಾದಗಳ ವಿವರ:**

1. ಶಿವ-ಪಾರ್ವತಿ ಸಂವಾದ (ಜ್ಞಾನ ಘಾಟ್): ಇದು ಮಾನಸದ ಅತ್ಯಂತ ಎತ್ತರದ ಘಾಟ್. ಇಲ್ಲಿ ಪರಶಿವನು ಗುರುವಿನ ಸ್ಥಾನದಲ್ಲಿ ನಿಂತು, ಶಿಷ್ಯೆಯಾದ ಪಾರ್ವತಿಗೆ ರಾಮತತ್ವವನ್ನು ಬೋಧಿಸುತ್ತಾನೆ. ಬುದ್ಧಿಯಲ್ಲಿ ಮೂಡುವ ಸಂಶಯಗಳನ್ನು ಜ್ಞಾನದ ಮೂಲಕ ಹೇಗೆ ಹೋಗಲಾಡಿಸಬೇಕು ಎಂಬುದು ಈ ಸಂವಾದದ ಸಾರ. ಜ್ಞಾನ ಮಾರ್ಗದಲ್ಲಿ ನಡೆಯುವವರಿಗೆ ಇದು ದಾರಿದೀಪ.

2. ಯಾಜ್ಞವಲ್ಕ್ಯ-ಭರದ್ವಾಜ ಸಂವಾದ (ಕರ್ಮ ಘಾಟ್): ಪ್ರಯಾಗದ ಪವಿತ್ರ ಕ್ಷೇತ್ರದಲ್ಲಿ ನಡೆಯುವ ಈ ಸಂವಾದವು ಕರ್ಮ ಮತ್ತು ಧರ್ಮದ ಬಗ್ಗೆ ಬೆಳಕು ಚೆಲ್ಲುತ್ತದೆ. ಭರದ್ವಾಜ ಮುನಿಗಳು ಸಾಮಾನ್ಯ ಮನುಷ್ಯನ ಪರವಾಗಿ ಪ್ರಶ್ನೆಗಳನ್ನು ಕೇಳಿದರೆ, ಯಾಜ್ಞವಲ್ಕ್ಯರು ಅವುಗಳಿಗೆ ಧರ್ಮದ ಚೌಕಟ್ಟಿನಲ್ಲಿ ಉತ್ತರ ನೀಡುತ್ತಾರೆ. ಸಂಸಾರದಲ್ಲಿ ಇದ್ದುಕೊಂಡೇ ಕರ್ತವ್ಯಗಳನ್ನು ಹೇಗೆ ಪಾಲಿಸಬೇಕು ಎಂಬುದು ಇದರ ಮುಖ್ಯ ವಿಷಯ.

3. ಕಾಕಭುಶುಂಡಿ-ಗರುಡ ಸಂವಾದ (ಉಪಾಸನಾ ಘಾಟ್): ಇದು ಅತ್ಯಂತ ಕುತೂಹಲಕಾರಿ ಸಂವಾದ. ಪಕ್ಷಿರಾಜನಾದ ಗರುಡನಿಗೆ (ಬುದ್ಧಿವಂತಿಕೆಯ ಸಂಕೇತ) ಮೂಡಿದ ಅಹಂಕಾರ ಮತ್ತು ಗೊಂದಲಗಳನ್ನು ಒಬ್ಬ ಸಾಮಾನ್ಯ ಕಾಗೆಯ ರೂಪದಲ್ಲಿದ್ದ ಕಾಕಭುಶುಂಡಿಯು ಪರಿಹರಿಸುತ್ತಾನೆ. ಜ್ಞಾನಕ್ಕಿಂತ ಭಕ್ತಿ ದೊಡ್ಡದು ಮತ್ತು ಶರಣಾಗತಿಯೇ ಅಂತಿಮ ಸತ್ಯ ಎಂಬುದನ್ನು ಈ ಸಂವಾದವು ಪ್ರತಿಪಾದಿಸುತ್ತದೆ.



4. ತುಳಸೀದಾಸ-ಸಂತ/ಅಂತರಂಗ ಸಂವಾದ (ಶರಣಾಗತಿ ಘಾಟ್): ಇಲ್ಲಿ ಕವಿ ತುಳಸೀದಾಸರು ಸ್ವತಃ ತಮ್ಮ ಅಂತರಂಗದೊಂದಿಗೆ ಮತ್ತು ಸಜ್ಜನರೊಂದಿಗೆ ಮಾತನಾಡುತ್ತಾರೆ. ಇದು ಸಂಪೂರ್ಣವಾಗಿ ಶರಣಾಗತಿ ಮತ್ತು ಪ್ರೇಮದ ಸಂಕೇತ. ನಾನು ಮತ್ತು ನನ್ನ ರಾಮ ಎಂಬ ಅವಿನಾಭಾವ ಸಂಬಂಧ ಇಲ್ಲಿ ಎದ್ದು ಕಾಣುತ್ತದೆ.

ಈ ನಾಲ್ಕು ಸಂವಾದಗಳು ನಮ್ಮ ಜೀವನದ ನಾಲ್ಕು ಹಂತಗಳನ್ನು ಪ್ರತಿನಿಧಿಸುತ್ತವೆ. ನಮಗೆ ಜ್ಞಾನವೂ ಬೇಕು (ಶಿವ), ಕರ್ತವ್ಯ ನಿಷ್ಠೆಯೂ ಬೇಕು (ಯಾಜ್ಞವಲ್ಕ್ಯ), ಅಹಂಕಾರವಿಲ್ಲದ ಭಕ್ತಿಯೂ ಬೇಕು (ಕಾಕಭುಶುಂಡಿ) ಮತ್ತು ಅಂತಿಮವಾಗಿ ಶರಣಾಗತಿಯ ಭಾವವೂ ಇರಬೇಕು (ತುಳಸಿ). ನಮ್ಮ ಬದುಕು ಸುಂದರವಾಗಬೇಕಾದರೆ ನಾವು ಯಾರೊಂದಿಗೆ ಸಂವಾದ ನಡೆಸುತ್ತಿದ್ದೇವೆ ಎಂಬುದು ಮುಖ್ಯ. ನಮ್ಮೊಳಗಿನ ಅಹಂಕಾರದೊಂದಿಗೆ ಸಂವಾದ ನಡೆಸಿದರೆ ಪತನ ನಿಶ್ಚಿತ; ಅದೇ ನಮ್ಮೊಳಗಿನ ವಿವೇಕದೊಂದಿಗೆ (ಶಿವ) ಅಥವಾ ಸಜ್ಜನರೊಂದಿಗೆ ಸಂವಾದ ನಡೆಸಿದರೆ ಜೀವನವು ಪಾವನವಾಗುತ್ತದೆ. ಕಲಿಯುವುದು ಮನುಷ್ಯನ ಗುಣವಾದರೆ, ಕಲಿತಿದ್ದನ್ನು ಹಂಚುವುದು ದೈವಗುಣ. ಸತ್ಯವನ್ನು ತಿಳಿಯಲು ವಯಸ್ಸು ಅಥವಾ ರೂಪ ಮುಖ್ಯವಲ್ಲ. ಎಲ್ಲೂ ದಕ್ಕದ ಶಾಂತಿ ನಮಗೆ ನಮ್ಮ ಅಂತರಂಗದ ಸಂವಾದದಲ್ಲಿ ಮಾತ್ರ ಸಿಗಲು ಸಾಧ್ಯ. ಪ್ರತಿದಿನ ಸ್ವಲ್ಪ ಸಮಯ ನಮ್ಮ ಅಂತರಂಗದೊಂದಿಗೆ ಸಂವಾದ ನಡೆಸಿದಾಗ, ಅಲ್ಲಿ ರಾಮನ ದರ್ಶನವಾಗುತ್ತದೆ. ಆತ್ಮಾವಲೋಕನದ ಮಹತ್ವವನ್ನ ಈ ಚರಿತೆ ನಮಗೆ ಸಾರಿ ಹೇಳುತ್ತದೆ. ಇಂಥ ಕೃತಿಗಳು ನಮ್ಮ ಬದುಕಿಗೆ ಬೆಳಕಾಗಲಿ.

ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

1. ಇನ್ನೊಂದು ಕರುಣೆಯಿರುವ ಹುಟ್ಟು (3)
4. ಐಶ್ವರ್ಯಕ್ಕೆ ಮತ್ತೊಂದು ಹೆಸರು (3)
6. ತಪಸ್ವಿಗೂ ಬಂತೇ ಸಿಟ್ಟು (3)
8. ಆತನಿಗೆ ಧೈರ್ಯವಿಲ್ಲ, ಪುಕ್ಕಲು (4)
9. ಮೊಮ್ಮಗನ/ಮೊಮ್ಮಗಳ ಮಗ (4)
11. ಭಾರತೀಯ ಸಂಸ್ಕೃತಿಯಲ್ಲಿ ಕೈಜೋಡಿಸಿ ಮಾಡುವ ವಂದನೆ (4)
14. ನೆರೆಮನೆಯಲ್ಲ, ಕಾರಾಗೃಹ (4)
16. ಕೆಲಸವೊಂದರಲ್ಲಿ ತೊಡಗಿದ, ಆಸಕ್ತ (3)
18. ಮಗಳ ಗಂಡ (3)
19. ಸುವಾಸನೆಯ ಕಾಳುಗಳಿರುವ ಸಣ್ಣಕಾಯಿ (3)

ಮೇಲಿಂದ ಕೆಳಕ್ಕೆ

2. ಬರಹ ರೂಪದಲ್ಲಿದೆ ದಾಖಲೆಪತ್ರ (4)
3. ವಿಷಯವೊಂದರ ಬಗ್ಗೆ ತುಂಬಾ ಬಲ್ಲವನು (2)
5. ಶ್ರೇಷ್ಠವಾದ ನೆಲೆ ಎಂಬರ್ಥದಲ್ಲಿ ಸ್ವರ್ಗಕ್ಕೆ ಈ ಹೆಸರು (4)
6. ತನ್ಮಯಗೊಳಿಸುವ ನಾದ ಹೊರಡಿಸುವ ಕೊಳಲು (3)
7. ಮಗ ಇದ್ದರೆ ಸಲೀಸು (3)
8. ಕಣ್ಣಿಗೆ ಹಚ್ಚಿಕೊಳ್ಳುವ ಕಾಡಿಗೆ (3)
10. ಎಣಿಕೆ ಅಥವಾ ಲಕ್ಷ್ಯ (3)
12. ಸುಲಭವಾಗಿ ಮರೆಯುವ ಸ್ವಭಾವದವನು (4)
13. ನಿಜ ಹೇಳುತ್ತಾ ಬಂದ ಇರುಳು (3)
14. ಏನೋ ಒಂದು ಆಕರ್ಷಣೆ (3)
15. ಬೇಸಗೆ ಕಳೆದ ನಂತರ ಎಲ್ಲರೂ ಬಯಸುವ ಕಾಲ (4)
17. ದೇಹದಲ್ಲಿ ಹರಿಯುವ ಕೆಂಬಣ್ಣದ ವಸ್ತು (2)

ಸರಿಯುತ್ತರಗಳು

ನೀವೂ ಬರೆಯಬಹುದು
ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

ಸಮಾಚಾರ ಸಣ್ಣದಲ್ಲ

ಹೊಸ ತಂಡದ ಬಗ್ಗೆ ಅರ್ಜುನ್ ಕಾತರ



ಲಖನೌ: ಐದು ಬಾರಿಯ ಚಾಂಪಿಯನ್ ಮುಂಬೈ ಇಂಡಿಯನ್ಸ್ ಪರ ಎರಡು ಋತುಗಳನ್ನು ಆಡಿದ ನಂತರ ಅರ್ಜುನ್ ತೆಂಡೂಲ್ಕರ್ ತಮ್ಮ ಐಪಿಎಲ್ ವೃತ್ತಿಜೀವನವನ್ನು ಮತ್ತೆ ಇಂದು ಪ್ರಾರಂಭಿಸಲು ಸಜ್ಜಾಗಿದ್ದಾರೆ. ನೂತನ ಫ್ರಾಂಚೈಸಿ ಲಖನೌ ಸೂಪರ್ ಜೈಂಟ್ಸ್ ಪರ ಅವರು ತಮ್ಮ ಐಪಿಎಲ್ ವೃತ್ತಿಜೀವನ ಮುಂದುವರಿಸಲು ಕಾತರರಾಗಿದ್ದಾರೆ. ಮುಂಬೈ ಇಂಡಿಯನ್ಸ್ ಪರ ಐದು ಪಂದ್ಯಗಳನ್ನು ಆಡಿರುವ ಅರ್ಜುನ್, ಮೂರು ವಿಕೆಟ್‌ಗಳನ್ನು ಪಡೆದಿದ್ದಾರೆ. ಮತ್ತು ಏಕೈಕ ಇನ್ನಿಂಗ್ಸ್‌ನಲ್ಲಿ 13 ರನ್‌ಗಳನ್ನು ಗಳಿಸಿದ್ದಾರೆ. ಕಳೆದ ವರ್ಷದ ಐಪಿಎಲ್ ಮಿನಿ ಹರಾಜಿನಲ್ಲಿ ಲಖನೌ ಸೂಪರ್ ಜೈಂಟ್ಸ್ ಅವರನ್ನು ಮೂಲ ಬೆಲೆ 30 ಲಕ್ಷ ರು.ಗೆ ಖರೀದಿಸಿತ್ತು. ಬುಧವಾರ ನಡೆಯುವ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧದ ಪಂದ್ಯದಲ್ಲಿ ಕಣಕ್ಕಿಳಿಯುವ ಸಾಧ್ಯತೆ ಬಹುತೇಕ ಹೆಚ್ಚಿದೆ. ಇತ್ತೀಚೆಗೆ ಫ್ರಾಂಚೈಸಿ ಅಭ್ಯಾಸದ ಸಮಯದಲ್ಲಿ ಲಖನೌ ತಂಡದ ನಾಯಕ ರಿಷಬ್ ಪಂತ್ ಮತ್ತು ಅರ್ಜುನ್ ತೆಂಡೂಲ್ಕರ್ ಮಧ್ಯೆ ನಡೆದ ಮಾತುಕತೆಯ ಕ್ಲಿಪ್ ಅನ್ನು ಫ್ರಾಂಚೈಸಿ ಹಂಚಿಕೊಂಡಿತ್ತು. ಭಾರತೀಯ ದೇಶೀಯ ಸರ್ಕ್ಯೂಟ್‌ನಲ್ಲಿ ಗೋವಾವನ್ನು ಪ್ರತಿನಿಧಿಸುವ ಅರ್ಜುನ್, 8.58ರ ಎಕಾನಮಿ ದರದಲ್ಲಿ 29 ಟಿ20 ಪಂದ್ಯಗಳಿಂದ 35 ವಿಕೆಟ್‌ಗಳನ್ನು ಗಳಿಸಿದ್ದಾರೆ. ಅರ್ಜುನ್ ತೆಂಡೂಲ್ಕರ್ ಅವರು ಯುವರಾಜ್ ಸಿಂಗ್ ಅವರ ತಂದೆ ಯೋಗರಾಜ್ ಸಿಂಗ್ ಗರಡಿಯಲ್ಲಿ ತರಬೇತಿ ಪಡೆದಿದ್ದಾರೆ.

ಐಪಿಎಲ್ ಸಿಬ್ಬಂದಿ ನಿಗೂಢ ಸಾವು



ಮುಂಬೈ: ಐಪಿಎಲ್ ಪಂದ್ಯಗಳಿಗಾಗಿ ಬಿಸಿಸಿಐನಲ್ಲಿ ಪ್ರಸಾರ ಎಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದ ಬ್ರಿಟಿಷ್ ಪ್ರಜೆಯೊಬ್ಬರು ಮುಂಬೈನ ಟ್ರೈಡೆಂಟ್ ಹೋಟೆಲ್‌ನಲ್ಲಿರುವ ತಮ್ಮ ಕೋಣೆಯಲ್ಲಿ ಶವವಾಗಿ ಪತ್ತೆಯಾಗಿ ದ್ದಾರೆ. ಮೃತರನ್ನು ಬ್ರಿಟಿಷ್ ಪ್ರಜೆ ಇಯಾನ್ ವಿಲಿ ಯಮ್ಸ್ ಲ್ಯಾಂಗ್‌ಫೋರ್ಡ್ ಎಂದು ಗುರುತಿಸಲಾಗಿದ್ದು, ಅವರು ಮಾರ್ಚ್ 24ರಿಂದ ಹೋಟೆಲ್‌ನಲ್ಲಿ ತಂಗಿದ್ದರು. ಮಾರ್ಚ್ 29 ರಂದು ಮುಂಬೈ ಇಂಡಿಯನ್ಸ್ ಮತ್ತು ಕೋಲ್ಕತ್ತಾ ನೈಟ್ ರೈಡರ್ಸ್ ವಿರುದ್ಧ ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ನಡೆದಿದ್ದ ಪಂದ್ಯದಲ್ಲಿ ಅವರು ಕಾರ್ಯನಿರ್ವಹಿಸಿದ್ದರು. ಪಂದ್ಯದ ನಂತರ, ಇಯಾನ್ ಸಂಜೆ ತಡವಾಗಿ ತನ್ನ ಹೋಟೆಲ್ ಕೋಣೆಗೆ ಮರಳಿದ್ದರು. ಮರುದಿನ ಹೋಟೆಲ್ ಸಿಬ್ಬಂದಿ ಅವರ ಕೋಣೆಗೆ ಕರೆ ಮಾಡಲು ಪ್ರಯತ್ನಿಸಿದರು, ಆದರೆ ಇಯಾನ್‌ನಿಂದ ಯಾವುದೇ ಪ್ರತಿಕ್ರಿಯೆ ಬರಲಿಲ್ಲ. ಸ್ವಲ್ಪ ಸಮಯದ ನಂತರ ಸಿಬ್ಬಂದಿ ಪರಿಶೀಲಿಸಲು ಹೋಗಿ ಎಷ್ಟೇ ಕರೆದರೂ ಬಾಗಿಲು ತೆರೆಯದೇ ಇದ್ದಾಗ ಸಿಬ್ಬಂದಿ ಮಾಸ್ಟರ್ ಕೀ ಬಳಸಿ ಅವರ ಕೋಣೆಯನ್ನು ತೆರೆದಾಗ ಇಯಾನ್ ಲ್ಯಾಂಗ್‌ಫೋರ್ಡ್ ನೆಲದ ಮೇಲೆ ಬಿದ್ದಿರುವುದು ಕಂಡುಬಂದಿದೆ.

ಬೌಲಿಂಗ್‌ನಲ್ಲಿ ಮಿಂಚಿದ ಕನ್ನಡಿಗ ವೈಶಾಕ್ ವಿಜಯ್‌ಕುಮಾರ್ | ಅಲ್ಪಮೊತ್ತಕ್ಕೆ ಕುಸಿದ ಗುಜರಾತ್

ಪಂಜಾಬ್‌ಗೆ 163 ರನ್‌ಗಳ ಗೆಲುವಿನ ಗುರಿ

ಚಂಡೀಗಢ: ಇಲ್ಲಿನ ಮುಲ್ಲನ್‌ಪುರದಲ್ಲಿರುವ ಮಹಾರಾಜ ಯಾದವೀಂದ್ರ ಸಿಂಗ್ ಅಂತಾರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆದ ಈ ಆವೃತ್ತಿಯ 4ನೇ ಐಪಿಎಲ್ ಪಂದ್ಯದಲ್ಲಿ ಕನ್ನಡಿಗ ವೈಶಾಕ್ ವಿಜಯ್ ಕುಮಾರ್ ಅವರ ಆಕರ್ಷಕ ಬೌಲಿಂಗ್ ನೆರವಿನಿಂದ ಪಂಜಾಬ್ ತಂಡವು ಗುಜರಾತ್ ತಂಡವನ್ನು 162 ರನ್‌ಗಳಿಗೆ ಕಟ್ಟಿ ಹಾಕುವಲ್ಲಿ ಯಶಸ್ವಿಯಾಯಿತು.

ಇನ್ನಿಂಗ್ಸ್ ಆರಂಭಿಸಿದ ಗುಜರಾತ್ ಟೈಟನ್ಸ್ ಸ್ಫೋಟಕ ಆರಂಭ ಪಡೆದುಕೊಂಡಿತು. ಬಟ್ಲರ್ ಹಾಗೂ ಸಾಯಿ ಸುದರ್ಶನ್ ಜೋಡಿ ಕೇವಲ 3.4 ಓವರ್‌ಗಳಲ್ಲಿ 37 ರನ್‌ಗಳ ಮೊದಲ ವಿಕೆಟ್ ಜತೆಯಾಟ ಪ್ರದರ್ಶಿಸಿತು. ಆದರೆ ಸಾಯಿ ಸುದರ್ಶನ್ ಕೇವಲ 13 ರನ್‌ಗಳಿಸಿ ಮಾರ್ಕೊ ಯಾನ್ಸನ್‌ಗೆ ವಿಕೆಟ್ ಒಪ್ಪಿಸಿದರು. ನಂತರ ಒಂದಾದ ಬಟ್ಲರ್-ಶುಭ್ಮನ್ ಗಿಲ್ 2ನೇ ವಿಕೆಟ್ ಜತೆಯಾಟದಲ್ಲಿ 46 ರನ್ ಸೇರಿಸಿದರು. ಗಿಲ್ 27 ಎಸೆತಗಳಲ್ಲಿ 6 ಬೌಂಡರಿಗಳ ಸಹಿತ 39 ರನ್ ಗಳಿಸಿ ಚಹಲ್‌ಗೆ ವಿಕೆಟ್ ಒಪ್ಪಿಸಿದರು. ಆ ವಿಕೆಟ್ ಬಿದ್ದ ನಂತರ ಗುಜರಾತ್ ತಂಡದ ರನ್‌ಗತಿಗೆ ಕಡಿವಾಣ ಬಿದ್ದಿತು. 4ನೇ ಕ್ರಮಾಂಕದಲ್ಲಿ ಆಡಲು ಕ್ರೀಸ್‌ಗೆ ಬಂದ ಗ್ಲೆನ್ ಫಿಲಿಪ್ಸ್ 17 ಎಸೆತಗಳಲ್ಲಿ ತಲಾ 1 ಬೌಂಡರಿ, 1 ಸಿಕ್ಸರ್ ಸೇರಿದಂತೆ 25 ರನ್ ಗಳಿಸಿ ಕನ್ನಡಿಗ ವೈಶಾಕ್ ವಿಜಯ್ ಕುಮಾರ್ ಬೌಲಿಂಗ್‌ನಲ್ಲಿ ಯಾನ್ಸನ್‌ಗೆ ಕ್ಯಾಚ್ ನೀಡಿ ನಿರ್ಗಮಿಸಿದರು. ಅವರ ಬೆನ್ನಲ್ಲೇ 10 ರನ್‌ಗಳ ಅಂತರದಲ್ಲಿ 33 ಎಸೆತಗಳಲ್ಲಿ 3 ಬೌಂಡರಿ, 2 ಸಿಕ್ಸರ್‌ಗಳ ಸಹಿತ 38 ರನ್ ಗಳಿಸಿದ್ದ ಜೋಸ್ ಬಟ್ಲರ್ 38 ರನ್ ಗಳಿಸಿ ಚಹಲ್ ಬೌಲಿಂಗ್‌ನಲ್ಲಿ ಬಾರ್ಟ್ಲೆಟ್ ಹಿಡಿದ ಅದ್ಭುತ ಕ್ಯಾಚ್‌ಗೆ ಔಟಾದರು. ನಂತರ ಬಂದ ವಾಷಿಂಗ್ಟನ್ ಸುಂದರ್ 18, ಶಾರುಖ್ ಖಾನ್ 4, ರಾಹುಲ್ ತೆವಾಟಿಯಾ 11 ರನ್ ಗಳಿಸಿ ವಿಕೆಟ್ ಒಪ್ಪಿಸಿದರು.

ಪಂಜಾಬ್ ಪರ ವೈಶಾಕ್ ವಿಜಯ್‌ಕುಮಾರ್ 34 ರನ್‌ಗಳಿಗೆ 3 ವಿಕೆಟ್, ಯುಜ್ವೇಂದ್ರ ಚಹಲ್ 28 ರನ್‌ಗಳಿಗೆ 2 ವಿಕೆಟ್ ಪಡೆದು ಮಿಂಚಿದರು. ಮಾರ್ಕೊ ಯಾನ್ಸನ್ ಒಂದು ವಿಕೆಟ್ ಪಡೆದರು.

ಗುಜರಾತ್ ಇನ್ನಿಂಗ್ಸ್ ಆಧರಿಸಿದ ಗಿಲ್

ಮೊನಚಿನ ಬೌಲಿಂಗ್ ಪ್ರದರ್ಶನ ಮಾಡಿದ ವೈಶಾಖ್

ಅಶೋಕ್ ಶರ್ಮಾ ಗುಜರಾತ್ ಟೈಟನ್ಸ್ ಪರ ಪದಾರ್ಪಣೆ

ಗುಜರಾತ್ ಟೈಟನ್ಸ್ ಪರ ಹೊಸ ವೇಗದ ಬೌಲರ್ ಅಶೋಕ್ ಶರ್ಮಾ ಐಪಿಎಲ್‌ಗೆ ಮಂಗಳವಾರ ಪದಾರ್ಪಣೆ ಮಾಡಿದರು. ರಾಜಸ್ಥಾನ್ ಜತೆಗಿನ ದೇಶೀಯ ಋತುವಿನ ಉತ್ತಮ ಪ್ರದರ್ಶನದ ನಂತರ, 23 ವರ್ಷದ ಅಶೋಕ್ ಅವರನ್ನು ಅಬುಧಾಬಿಯಲ್ಲಿ ನಡೆದ ಐಪಿಎಲ್ ಹರಾಜಿನಲ್ಲಿ ಗುಜರಾತ್ ಟೈಟಾನ್ಸ್ 90 ಲಕ್ಷ ರು.ಗೆ ಖರೀದಿಸಿತ್ತು. ಇತ್ತೀಚೆಗೆ ನಡೆದಿದ್ದ ಸೈಯದ್ ಮುಷ್ತಾಕ್ ಅಲಿ ಟ್ರೋಫಿಯಲ್ಲಿ ರಾಜಸ್ಥಾನ ತಂಡದ ಗೆಲುವಿನಲ್ಲಿ ಅವರು ಪ್ರಮುಖ ಪಾತ್ರ ವಹಿಸಿದ್ದರು. ಗ್ರೂಪ್ ಹಂತದಲ್ಲಿ ಅಶೋಕ್ 12.10 ಸರಾಸರಿ ಮತ್ತು 8.84 ಎಕಾನಮಿ ರೇಟ್‌ನೊಂದಿಗೆ 19 ವಿಕೆಟ್‌ಗಳನ್ನು ಪಡೆಯುವ ಮೂಲಕ ಮುಷ್ತಾಕ್ ಅಲಿ ಟ್ರೋಫಿಯ ವಿಕೆಟ್ ಪಟ್ಟಿಯಲ್ಲಿ ಅಗ್ರಸ್ಥಾನ ಪಡೆದಿದ್ದರು.

ಇಂದು ಲಖನೌ-ಡೆಲ್ಲಿ ಕದನ

ಲಖನೌ: ಇಲ್ಲಿನ ಏಕನಾ ಸ್ಪೋರ್ಟ್ಸ್ ಸ್ಟೇಡಿಯಂನಲ್ಲಿ ಇಂದು ನಡೆಯಲಿರುವ ಐಪಿಎಲ್ ಟೂರ್ನಿಯ ಲೀಗ್ ಪಂದ್ಯದಲ್ಲಿ ಅತಿಥೇಯ ಲಖನೌ ಸೂಪರ್ ಜಯಂಟ್ಸ್ ತಂಡವು ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು ಎದುರಿಸಲಿದೆ.

ರಿಷಬ್ ಪಂತ್ ನಾಯಕತ್ವದ ಲಖನೌ ತಂಡದಲ್ಲಿ ಭಾರತ ತಂಡವನ್ನು ಪ್ರತಿನಿಧಿಸುತ್ತಿರುವ ಮೊಹಮ್ಮದ್ ಶಮಿ ಅಲ್ಲದೆ, ವಿದೇಶಿ ಆಟಗಾರರಾದ ಐಡೆನ್ ಮಾರ್ಕ್ರಮ್, ನಿಕೋಲಸ್ ಪೂರನ್‌ರಂತಹ ಆಟಗಾರರೂ ಇದ್ದಾರೆ. ಇದುವರೆಗೂ ಒಂದೇ ಒಂದು ಋತುವಿನಲ್ಲೂ ಐಪಿಎಲ್ ಪ್ರಶಸ್ತಿ ಗೆದ್ದುಕೊಳ್ಳಲು ಸಾಧ್ಯವಾಗದ ಲಖನೌ ತಂಡವು ಕಳೆದ ವರ್ಷದ ಐಪಿಎಲ್‌ನಲ್ಲಿ 7ನೇ ಸ್ಥಾನವನ್ನಷ್ಟೇ ಪಡೆಯಲು ಶಕ್ತವಾಗಿತ್ತು.

ಅಕ್ಷರ್ ಪಟೇಲ್ ನಾಯಕತ್ವದ ಡೆಲ್ಲಿ ತಂಡವು ಈ ಸಲ ಬಲಿಷ್ಠವಾಗಿದ್ದು ಮತ್ತೆ ಐಪಿಎಲ್ ಪ್ರಶಸ್ತಿಯನ್ನು ಗೆಲ್ಲಬೇಕೆನ್ನುವ ತವಕದಲ್ಲಿದೆ. ಕನ್ನಡಿಗರಾಗಿರುವ ಕೆಎಲ್ ರಾಹುಲ್, ಕರುಣ್ ನಾಯರ್ ತಂಡದಲ್ಲಿದ್ದಾರೆ. ಕುಲ್ದೀಪ್ ಯಾದವ್, ನಿತೇಶ್ ರಾಣಾ ಸದ್ಯ ಉತ್ತಮ ಫಾರ್ಮ್‌ನಲ್ಲಿದ್ದಾರೆ. ಅದೇ ರೀತಿ ವಿದೇಶಿ ಆಟಗಾರರಾಗಿರುವ ಮಿಚೆಲ್ ಸ್ಟಾರ್ಕ್, ಪಾತುಂ ನಿಸ್ಸಾಂಕ ತಂಡದಲ್ಲಿರುವ ಕಾರಣ ಇತರ ತಂಡಗಳನ್ನು ಕೆಚ್ಚೆದೆಯಿಂದ ಎದುರಿಸುವ ಸಾಮರ್ಥ್ಯ ಹೊಂದಿದೆ.

ಇದುವರೆಗಿನ ಐಪಿಎಲ್ ಆವೃತ್ತಿಯಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡವು ಒಮ್ಮೆಯೂ ಕೂಡಾ ಟ್ರೋಫಿ ಗೆದ್ದಿಲ್ಲ. ಹಾಗಾಗಿ ಈ ಬಾರಿ ಹೇಗಾದರೂ ಪ್ರಶಸ್ತಿ ಸುತ್ತಿನತ್ತ ತಂಡವನ್ನು ಕೊಂಡೊಯ್ಯಬೇಕೆಂಬ ಛಲ ಡೆಲ್ಲಿ ಆಟಗಾರರಲ್ಲಿದೆ. ಆ ಕಾರಣಕ್ಕಾಗಿ ಡೆಲ್ಲಿ ಮತ್ತು ಲಖನೌ ತಂಡಗಳ ನಡುವೆ ನಡೆಯಲಿರುವ ಪಂದ್ಯವು ರೋಚಕ ಹಣಾಹಣಿ ನಿರೀಕ್ಷಿಸಲಾಗುತ್ತಿದೆ.

ಪಿಚ್ ರಿಪೋರ್ಟ್: ಲಖನೌ ಹಾಗೂ ಡೆಲ್ಲಿ ನಡುವಿನ ಪಂದ್ಯದ ನಡೆಯುವ ಏಕನಾ ಕ್ರೀಡಾಂಗಣದ ಪಿಚ್ ಸಾಮಾನ್ಯವಾಗಿ ಮೊದಲು ಬ್ಯಾಟಿಂಗ್ ಮಾಡುವ ತಂಡಗಳಿಗೆ ಅನುಕೂಲಕರವಾಗಿದೆ. ಇಲ್ಲಿ ಸರಾಸರಿ ಮೊತ್ತ 150-160 ರನ್‌ಗಳು. ಚೇಸಿಂಗ್ ತುಸು ಕಷ್ಟ.

ಮುಖಾಮುಖಿ ದಾಖಲೆ

ಒಟ್ಟು ಆಡಿರುವ ಪಂದ್ಯಗಳು: 07
ಲಖನೌ ಸೂಪರ್ ಜಯಂಟ್ಸ್ ಜಯ: 03
ಡೆಲ್ಲಿ ಕ್ಯಾಪಿಟಲ್ಸ್ ಜಯ: 04

ಇಂದಿನ ಪಂದ್ಯ

ಲಖನೌ ಸೂಪರ್ ಜಯಂಟ್ಸ್-ಡೆಲ್ಲಿ ಕ್ಯಾಪಿಟಲ್ಸ್
ಸ್ಥಳ: ಏಕನಾ ಕ್ರೀಡಾಂಗಣ, ಲಖನೌ
ಸಮಯ: ರಾತ್ರಿ 7.30
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್
ಲೈವ್ ಸ್ಟ್ರೀಮಿಂಗ್: ಜಿಯೋ ಹಾಟ್‌ಸ್ಟಾರ್

ವೆಸ್ಟ್ ಇಂಡೀಸ್ ನಾಯಕಿ ಹೇಲಿ ಮ್ಯಾಥ್ಯೂಸ್, ಮಂಧಾನಾ ಬ್ಯಾಟಿಂಗ್ ಶ್ರೇಯಾಂಕ ಕುಸಿತ

ಅಮೆಲಿಯಾ ಕೆರ್ ನಂ.1 ಆಲ್‌ರೌಂಡರ್

ದುಬೈ: ನ್ಯೂಜಿಲೆಂಡ್‌ನ ಆಲ್‌ರೌಂಡರ್ ಅಮೆಲಿಯಾ ಕೆರ್ ತಮ್ಮ ವೃತ್ತಿಜೀವನದಲ್ಲಿ ಮೊದಲ ಬಾರಿಗೆ ಐಸಿಸಿ ಮಹಿಳಾ ಟಿ20 ಆಲ್‌ರೌಂಡರ್ ಶ್ರೇಯಾಂಕದಲ್ಲಿ ನಂ.1 ಸ್ಥಾನಕ್ಕೆ ಏರಿದ್ದಾರೆ. ಅವರು ವೃತ್ತಿಜೀವನದ ಅತ್ಯುತ್ತಮ ರೇಟಿಂಗ್‌ನೊಂದಿಗೆ (508) ಮೈಲಿಗಲ್ಲು ಸಾಧಿಸಿದರು. ಈ ಹಾದಿಯಲ್ಲಿ ಅಕ್ಟೋಬರ್ 2023ರಿಂದ ಅಗ್ರ ಸ್ಥಾನವನ್ನು ಅಲಂಕರಿಸಿದ್ದ ವೆಸ್ಟ್ ಇಂಡೀಸ್ ನಾಯಕಿ ಹೇಲಿ ಮ್ಯಾಥ್ಯೂಸ್ ಅವರನ್ನು ಹಿಂದಿಕ್ಕಿದರು.

ಇತ್ತೀಚೆಗೆ ಜಿಂಬಾಬ್ವೆ ವಿರುದ್ಧದ ಸರಣಿಯಲ್ಲಿ ಕೆರ್ ಬ್ಯಾಟಿಂಗ್ ಮತ್ತು ಬೌಲಿಂಗ್ ಎರಡರಲ್ಲೂ ಅತ್ಯುತ್ತಮ ಪ್ರದರ್ಶನ ನೀಡಿದರು. ಚಾಮರಿ ಅಟಪಟ್ಟು, ಮೆಗ್ ಲ್ಯಾನಿಂಗ್ ಮತ್ತು ಹೇಲಿ ಮ್ಯಾಥ್ಯೂಸ್ ನಂತರ ನಾಯಕಿಯಾಗಿ ಬಹು ಟಿ20 ಶತಕಗಳನ್ನು ಗಳಿಸಿದ ನಾಲ್ಕನೇ ಮಹಿಳಾ ಆಟಗಾರ್ತಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದರು.

ಬೌಲಿಂಗ್ ಶ್ರೇಯಾಂಕದಲ್ಲಿ ಕೆರ್ ಮೂರು ಸ್ಥಾನ ಏರಿಕೆಯಾಗಿ 10ನೇ ಸ್ಥಾನ ತಲುಪಿದ್ದಾರೆ. ಪಾಕಿಸ್ತಾನದ ಸ್ಪಿನ್ನರ್ ಸಾದಿಯಾ ಇಕ್ಬಾಲ್ ಅಗ್ರಸ್ಥಾನದಲ್ಲಿ ಮುಂದುವರೆದಿದ್ದಾರೆ. ಇಂಗ್ಲೆಂಡ್‌ನ ಸೋಫಿ ಎಕ್ಲೆಸ್ಟೋನ್ ದ್ವಿತೀಯ ಸ್ಥಾನಿಯಾಗಿದ್ದಾರೆ.

ಭಾರತೀಯರ ಪೈಕಿ ಸ್ಮೃತಿ ಮಂಧಾನಾ ಬ್ಯಾಟಿಂಗ್ ಶ್ರೇಯಾಂಕದಲ್ಲಿ 3ನೇ ಸ್ಥಾನಕ್ಕೆ ಕುಸಿದರೆ, ಜೆಮಿಮಾ ರೊಡ್ರಿಗಸ್ 10ನೇ ಸ್ಥಾನದೊಂದಿಗೆ ಅಗ್ರ 10ರಲ್ಲಿ ಸ್ಥಾನ ಪಡೆದರು. ಬೌಲಿಂಗ್ ಪಟ್ಟಿಯಲ್ಲಿ ರೇಣುಕಾ ಸಿಂಗ್ 5ನೇ ಸ್ಥಾನಕ್ಕೆ ಏರಿದರೆ, ಅರುಂಧತಿ ರೆಡ್ಡಿ 9ನೇ ಸ್ಥಾನಕ್ಕೆ ಏರಿದರು. ದೀಪ್ತಿ ಶರ್ಮಾ ಆಲ್‌ರೌಂಡರ್‌ಗಳಲ್ಲಿ ಮೂರನೇ ಸ್ಥಾನದಲ್ಲಿದ್ದಾರೆ.

ಜಾರ್ಜಿಯಾ ವೋಲ್: ನಂ.1 ಬ್ಯಾಟರ್

ಆಸ್ಟ್ರೇಲಿಯಾದ ಬ್ಯಾಟ್ಸ್‌ಮನ್ ಜಾರ್ಜಿಯಾ ವೋಲ್ ಐಸಿಸಿ ಮಹಿಳಾ ಟಿ20 ಬ್ಯಾಟಿಂಗ್ ಶ್ರೇಯಾಂಕದಲ್ಲಿ ನಂ.1 ಸ್ಥಾನಕ್ಕೆ ಏರಿದ್ದಾರೆ. ಎಂಟು ಸ್ಥಾನಗಳ ಜಿಗಿತದೊಂದಿಗೆ ತಮ್ಮ ತಂಡದ ಸಹ ಆಟಗಾರ್ತಿ ಬೆತ್ ಮೂನಿ ಅವರನ್ನು ಹಿಂದಿಕ್ಕಿ ಅಗ್ರಸ್ಥಾನ ತಲುಪಿದ್ದಾರೆ. ಬಲಗೈ ಆಟಗಾರ್ತಿ ಆಗಿರುವ ಅವರು 3ನೇ ವೇಗದ ಟಿ20ಐ ಶತಕದ ದಾಖಲೆ ಮಾಡಿದ್ದರು.

ಗಾಯದಿಂದ ಬಳಲುತ್ತಿರುವ ವೇಗದ ಬೌಲರ್ | ಆಯ್ಕೆ ಕಡೆಗಣನೆ ಬಗ್ಗೆಯೂ ಬೇಸರ

ಮೊಹಮ್ಮದ್ ಶಮಿ ನಿವೃತ್ತಿ ಸುಳಿವು

ದೆಹಲಿ: 'ನನಗೆ ಸುಸ್ತಾದರೆ, ನಾನು ಕ್ರಿಕೆಟ್‌ಗೆ ನಿವೃತ್ತಿ ಎಂದು ಹೇಳುತ್ತೇನೆ, ಆದರೆ ನಾನು ತಕ್ಷಣವೇ ನಿವೃತ್ತಿಯ ಬಗ್ಗೆ ಯೋಚಿಸುತ್ತಿಲ್ಲ ಏಕೆಂದರೆ ಅಂತಹ ಆಲೋಚನೆಗಳು ನಮ್ಮನ್ನು ದಿಢೀರನೆ ಕುಗ್ಗಿಸುತ್ತದೆ. ನಾನು ಬೇಸರಗೊಂಡ ದಿನ ನಿವೃತ್ತಿ ಹೇಳುವೆ' ಎಂದು ಭಾರತ ತಂಡದ ವೇಗದ ಬೌಲರ್ ಮೊಹಮ್ಮದ್ ಶಮಿ ಅವರು ಮಾಧ್ಯಮ ಸಂದರ್ಶನವೊಂದರಲ್ಲಿ ಹೇಳುವ ಮೂಲಕ ತಮ್ಮ ನಿವೃತ್ತಿಯ ಸುಳಿವು ನೀಡಿದ್ದಾರೆ.

ಭಾರತ ತಂಡದ ವೇಗಿ ಕೊನೆಯ ಬಾರಿಗೆ ಚಾಂಪಿಯನ್ಸ್ ಟ್ರೋಫಿ ಫೈನಲ್‌ನಲ್ಲಿ ನ್ಯೂಜಿಲೆಂಡ್ ತಂಡವನ್ನು ಸೋಲಿಸಿದ ಅಂತಾರಾಷ್ಟ್ರೀಯ ಪಂದ್ಯದಲ್ಲಿ ಕಾಣಿಸಿಕೊಂಡಿದ್ದರು. ಕಳೆದ ಕೆಲವು ವರ್ಷಗಳಿಂದ ಅವರು ಸತತವಾಗಿ ಗಾಯಗಳಿಂದ ಬಳಲುತ್ತಿದ್ದಾರೆ. ದೇಶೀಯ ಪಂದ್ಯಗಳಲ್ಲಿ ಅದ್ಭುತ ಪ್ರದರ್ಶನ ನೀಡಿ ದ್ದರೂ, ಅವರನ್ನು ತಂಡವು ಕಡೆಗಣಿಸಿದೆ ಎಂಬ ಬೇಸರವನ್ನೂ ಶಮಿ ಮಾಧ್ಯಮ ಸಂದರ್ಶನದಲ್ಲಿ ಪರೋಕ್ಷವಾಗಿ ವ್ಯಕ್ತಪಡಿಸಿದ್ದಾರೆ. 'ಸೋಮಾರಿತನ ಅಥವಾ ಬೇಸರ ಅನಿಸಿದ ದಿನ ನಾನು ಆಟ ಬಿಡುತ್ತೇನೆ. ಆದರೆ ನನಗೆ ಸದ್ಯ ಸೋಮಾರಿತನ ಇಲ್ಲ, ನಾನು ಆಟವನ್ನು ಆನಂದಿಸುತ್ತಿದ್ದೇನೆ. ಫಲಿತಾಂಶಗಳು ಉತ್ತಮ ಮತ್ತು ಸಕಾರಾತ್ಮಕವಾಗಿವೆ' ಎಂದು ಅವರು ಹೇಳಿದರು.

ಮೊಹಮ್ಮದ್ ಶಮಿ ದೇಶೀಯ ಕ್ರಿಕೆಟ್‌ನ ಮೂರು ಸ್ವರೂಪಗಳಲ್ಲಿ ಆಡಿ 67 ವಿಕೆಟ್‌ಗಳನ್ನು ಗಳಿಸಿದ್ದಾರೆ. ಅವರು ಈಗ ನಡೆಯುತ್ತಿರುವ ಐಪಿಎಲ್‌ನಲ್ಲಿ ಬುಧವಾರದಂದು ಲಖೌನೌ ಸೂಪರ್ ಜೈಂಟ್ಸ್ ಪರ ಆಡಲು ಮೈದಾನಕ್ಕಿಳಿಯಲಿದ್ದು, ಹೈದರಾಬಾದ್ ತಂಡದಲ್ಲಿದ್ದ ಶಮಿಯನ್ನು 10 ಕೋಟಿ ರು.ಗೆ ಲಖನೌ ತಂಡ ತನ್ನದಾಗಿಸಿಕೊಂಡಿತು.

ಅಣ್ಣಾವ್ರ ಹುಟ್ಟುಹಬ್ಬದಂದು ಪುನೀತ್ ನಿವಾಸ ತೆರೆಗೆ

ಕನ್ನಡಿಗರ ಆರಾಧ್ಯ ದೈವ ಪುನೀತ್ ರಾಜ್‌ಕುಮಾರ್ ಅವರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಪುನೀತ್ ನಿವಾಸ ಕಟ್ಟಿದ ಬಡ ಅಭಿಮಾನಿಯೊಬ್ಬನ ಕಥೆಯನ್ನು ಒಳಗೊಂಡ ಪುನೀತ್ ನಿವಾಸ ಈ ಹಿಂದೆಯೇ ಚಿತ್ರೀಕರಣ ಮುಗಿಸಿತ್ತು. ಈಗ ಬಿಡುಗಡೆಗೂ ಸಿದ್ಧವಾಗಿದ್ದು ಏಪ್ರಿಲ್ 24ರ ಡಾ. ರಾಜ್ ಕುಮಾರ್ ಅವರ ಹುಟ್ಟುಹಬ್ಬದಂದು ಸಿನಿಮಾ ತೆರೆಗೆ ಬರಲಿದೆ.

ಶ್ರೀಪಂಚಮಿ ಸಿನಿ ಕ್ರಿಯೇಷನ್ಸ್‌ನಲ್ಲಿ ಎಸ್.ಮೋಹನ್ ಈ ಚಿತ್ರವನ್ನು ನಿರ್ಮಾಣ ಮಾಡಿದ್ದು, ಪ್ರಮುಖ ಪಾತ್ರದಲ್ಲಿಯೂ ನಟಿಸಿದ್ದಾರೆ. ನಾಗೇಂದ್ರ ಪ್ರಸಾದ್ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ.

ಅಪ್ಪು ಅವರ ಅಪ್ಪಟ ಅಭಿಮಾನಿ ಮಲ್ಲು ಅನಾಥ ಹುಡುಗ. ಕಟ್ಟಡ ಕೂಲಿ ಕೆಲಸ ಮಾಡಿಕೊಂಡಿದ್ದ, ಆತ ತನ್ನ ಶ್ರಮಪಟ್ಟು ದುಡಿದು ಹಣ ಸಂಪಾದಿಸಿ ಹೊಸ ಮನೆ ಕಟ್ಟುತ್ತಾನೆ. ಆ ಮನೆಗೆ ಪುನೀತ್ ನಿವಾಸ ಎಂದು ನಾಮಕರಣ ಮಾಡುತ್ತಾನೆ. ಆ ಮನೆಗೆ ಬಂದಾಗ ಅಲ್ಲಿ ಅಪ್ಪು ಅವರೇ ಕಾಣಿಸುತ್ತಾರೆ. ತಾನೊಂದು ಸಿನಿಮಾ ಮಾಡಬೇಕೆಂದು ಹೊರಟ ನಾಯಕ ತಾನು ಅಂದುಕೊಂಡಂತೆ ಸಿನಿಮಾ ಮಾಡಿದನೇ, ಇಲ್ಲವೇ, ಪುನೀತ್‌ರ ಆದರ್ಶಗಳನ್ನೇ ಪಾಲಿಸಿಕೊಂಡು ಬಂದ ಆತನ ಕನಸು ನನಸಾಯಿತೇ ಇಲ್ಲವೇ ಎಂಬುದನ್ನು ಸಿನಿಮಾ ನೋಡಿಯೇ ತಿಳಿಯಬೇಕು ಎನ್ನುತ್ತಾರೆ ನಿರ್ದೇಶಕರು.

ಈ ಚಿತ್ರದ ಪ್ರಮುಖ ಪಾತ್ರದಲ್ಲಿ ಹಿರಿಯ ನಟ ಅಭಿಜಿತ್ ಅಭಿನಯಿಸಿದ್ದಾರೆ. ಹಿರಿಯ ನಟ ಶಂಕರ್ ಭಟ್, ಗಂಡಸಿ ಸದಾನಂದಸ್ವಾಮಿ, ಕರಿಸುಬ್ಬು ಶ್ರೇಯಸ್, ಐಶ್ವರ್ಯ, ಎಂ.ಎಸ್. ಉಮೇಶ್, ಡಿಂಗ್ರಿ ನಾಗರಾಜ್, ಟೆನ್ನಿಸ್ ಕೃಷ್ಣ, ರೇಖಾದಾಸ್ ಮುಂತಾದವರು ತಾರಾಗಣದಲ್ಲಿದ್ದಾರೆ. ಬಾಲು ಛಾಯಾಗ್ರಹಣ, ಎಂ.ಎನ್. ಕೃಪಾಕರ್ ಸಂಗೀತ ನಿರ್ದೇಶನ, ಜೆಮ್ ಶಿವು ಸಂಭಾಷಣೆ, ಮುತ್ತುರಾಜ್ ಸಂಕಲನ ಈ ಚಿತ್ರಕ್ಕಿದೆ.

ಟಾಕೀಸ್

ಜೂನ್‌ನಲ್ಲಿ ಮೋಡ ಕವಿದ ವಾತಾವರಣ

ನಿರ್ದೇಶಕ ಸಿಂಪಲ್ ಸುನಿ ಅವರ ಗರಡಿಯಲ್ಲಿ ಪಳಗಿರುವ ನಟ ಶೀಲಮ್ ಗಾಗಿ ಹೊಸ ಸಿನಿಮಾ ನಿರ್ದೇಶನ ಮಾಡಿದ್ದಾರೆ. ಮೋಡ ಕವಿದ ವಾತಾವರಣ ಶೀರ್ಷಿಕೆಯಲ್ಲಿ ಸಿನಿಮಾ ಸಿದ್ಧವಾಗಿದೆ. ಟೈಟಲ್ ನಿಂದ ಕುತೂಹಲ ಹೆಚ್ಚಿಸಿರುವ ಈ ಚಿತ್ರದ ಬಿಡುಗಡೆ ದಿನಾಂಕ ಘೋಷಣೆಯಾಗಿದೆ. ಜೂನ್ 26ರಂದು ಮೋಡ ಕವಿದ ವಾತಾವರಣ ತೆರೆಗೆ ಬರಲಿದೆ. ಶೀಲಮ್ ಈ ಹಿಂದೆ ಹಲವು ಸಿನಿಮಾಗಳಲ್ಲಿ ಸಣ್ಣಪುಟ್ಟ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದರು. ಆದರೆ ಈಗ ಮೋಡ ಕವಿದ ವಾತಾವರಣ ಚಿತ್ರದ ಮೂಲಕ ಪೂರ್ಣ ಪ್ರಮಾಣದ ನಾಯಕ ನಟನಾಗಿ ಅಭಿನಯಿಸಿದ್ದಾರೆ. ಫ್ಯಾಂಟಸಿ ಕಥೆಯ ಜತೆಗೆ ಲವ್ ಸ್ಟೋರಿ ಹೊಂದಿರುವ ಈ ಚಿತ್ರದಲ್ಲಿ ಶೀಲಮ್ ಗೆ ಜತೆಯಾಗಿ ಸಾತ್ವಿಕಾ ಹಾಗೂ ಮೋಕ್ಷಾ ಕುಶಾಲ್ ನಟಿಸಿದ್ದಾರೆ.

ಒಂದು ಸರಳ ಪ್ರೇಮಕಥೆ ಸಿನಿಮಾ ನಿರ್ಮಾಣ ಮಾಡಿದ್ದ ರಾಮ್ ಮೂವೀಸ್ ಈ ಸಿನಿಮಾಕ್ಕೂ ಬಂಡವಾಳ ಹೂಡಿದೆ. ಸಂತೋಷ್ ರೈ ಪಾತಾಜೆ ಛಾಯಾಗ್ರಹಣ, ಜೂಡಾ ಸ್ಯಾಂಡಿ ಸಂಗೀತ ನಿರ್ದೇಶನ ಹಾಗೂ ಆದಿತ್ಯ ಕಶ್ಯಪ್ ಸಂಕಲನ ಈ ಸಿನಿಮಾಗಿದೆ. ಈ ಚಿತ್ರಕ್ಕಾಗಿ ಸಂಜಿತ್ ಹೆಗಡೆ ಹಾಡಿರುವ ನನ್ನೆದೆಯ ಹಾಡೊಂದನು ... ಗೀತೆ ಬಿಡುಗಡೆಯಾಗಿದ್ದು ಮೆಚ್ಚುಗೆ ಪಡೆದಿದೆ.



ಕಥನಾರ್‌ನಲ್ಲಿ ಮಿಂಚಿದ ದೇವಸೇನಾ

ಬಾಹುಬಲಿಯ ದೇವಸೇನಾ ಇನ್ನೇನು ಹಸೆಮಣೆ ಏರಲಿದ್ದಾರೆ ಎಂಬ ಸುದ್ದಿ ಕೇಳಿ ಅವರ ಅಭಿಮಾನಿಗಳು ಖುಷಿಯಾಗಿದ್ದರು. ಈ ನಡುವೆಯೇ ಅನುಷ್ಕಾ ಮತ್ತೊಂದು ಸರ್ ಪ್ರೈಸ್ ನೀಡಿದ್ದಾರೆ. ಅನುಷ್ಕಾ ಶೆಟ್ಟಿ ಕಥನಾರ್ ಸಿನಿಮಾದಲ್ಲಿ ಅಭಿನಯಿಸಿದ್ದು ಆ ಚಿತ್ರದ ಟ್ರೇಲರ್ ರಿಲೀಸ್ ಆಗಿದೆ. ಕಥನಾರ್ ಡಾರ್ಕ್ ಫ್ಯಾಂಟಸಿ ಜತೆಗೆ ಥ್ರಿಲ್ಲರ್ ಕಥೆಯನ್ನು ಒಳಗೊಂಡಿದೆ ಎಂಬುದು ಟ್ರೇಲರ್ ನಲ್ಲಿ ಸ್ಪಷ್ಟವಾಗುತ್ತದೆ. ಅನುಷ್ಕಾ ಈ ಚಿತ್ರದಲ್ಲಿ ನೀಲಿ ಎಂಬ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಘಾಟಿ ಸೋಲಿನ ಬಳಿಕ ಎಚ್ಚೆತ್ತಿರುವ ಅನುಷ್ಕಾ ಬಲು ಜಾಣ್ಮೆಯಿಂದ ಕಥೆಗಳನ್ನು ಆಯ್ದುಕೊಳ್ಳುತ್ತಿದ್ದಾರೆ. ಹಾಗಾಗಿ ಈ ಬಾರಿ ಹೊಸ ಅವತಾರ ತಾಳಿರುವ ಅನುಷ್ಕಾ ಗೆಲುವಿನ ಲಯಕ್ಕೆ ಮರಳುವ ತವಕದಲ್ಲಿದ್ದಾರೆ.

ಜಯಸೂರ್ಯ ನಾಯಕನಾಗಿ ನಟಿಸಿದ್ದು ಜಾದೂಗಾರನಾಗಿ ಕಾಣಿಸಿಕೊಂಡಿದ್ದಾರೆ. ಜಯಸೂರ್ಯ ಅವರಿಗೂ ಈ ಸಿನಿಮಾ ನಿರೀಕ್ಷೆ ಹೆಚ್ಚಿಸಿದ್ದು ಮತ್ತೊಂದು ಬಿಗ್ ಬ್ರೇಕ್ ನಿರೀಕ್ಷೆಯಲ್ಲಿದ್ದಾರೆ. ಪ್ರಭುದೇವ, ಮೋಹನ್ ಲಾಲ್ ವಿಶೇಷ ಪಾತ್ರದಲ್ಲಿ ಅಭಿನಯಿಸಿದ್ದಾರೆ.

ರೋಜಿನ್ ಥಾಮಸ್ ನಿರ್ದೇಶನದಲ್ಲಿ ಅದ್ದೂರಿಯಾಗಿ ಮೂಡಿಬಂದಿರುವ ಕಥನಾರ್ ಪ್ಯಾನ್ ಇಂಡಿಯಾ ಸಿನಿಮಾವಾಗಿ ನಿರ್ಮಾಣವಾಗಿದೆ. ಮಲೆಯಾಳಂ, ಕನ್ನಡ ಸೇರಿದಂತೆ ಹಲವು ಭಾಷೆಗಳಲ್ಲಿ ತೆರೆಗೆ ಬರಲಿದೆ. ಕಥನಾರ್ ತಾಂತ್ರಿಕವಾಗಿಯೂ ಅದ್ಭುತವಾಗಿದ್ದು ಹಾಲಿವುಡ್ ಶೈಲಿಯಲ್ಲಿ ಮೂಡಿ ಬಂದಿದೆ.

ಕಾಲದ ಸುಳಿಯಲ್ಲಿ ಚಂದನ್

ರ್‍ಯಾಪರ್ ಚಂದನ್ ಶೆಟ್ಟಿ, ಸಂಗೀತ ನಿರ್ದೇಶನದ ಜತೆಗೆ ನಟನಾಗಿಯೂ ಗುರುತಿಸಿಕೊಂಡಿದ್ದಾರೆ. ಸದ್ಯ ಚಂದನ್ ಶೆಟ್ಟಿ ಅಭಿನಯದ ಎಲ್ರ ಕಾಲೆಳಿಯುತ್ತೆ ಕಾಲ ಚಿತ್ರ ತೆರೆಗೆ ಸಿದ್ಧವಾಗಿದೆ. ಈ ಹಿಂದೆ ಗುಬ್ಬಿ ಮೇಲೆ ಬ್ರಹ್ಮಾಸ್ತ್ರ ಚಿತ್ರವನ್ನು ನಿರ್ದೇಶನ ಮಾಡಿದ್ದ ಸುಜಯ್ ಶಾಸ್ತ್ರಿ, ಈಗ ಎಲ್ರ ಕಾಲೆಳಿಯುತ್ತೆ ಕಾಲ ಚಿತ್ರಕ್ಕೂ ಆ್ಯಕ್ಷನ್ ಕಟ್ ಹೇಳಿದ್ದಾರೆ.

ಇದು ಎಂಬತ್ತು ತೊಂಬತ್ತರ ಕಾಲಘಟ್ಟದ ಕಥೆಯನ್ನು ಒಳಗೊಂಡಿದ್ದು, ರೆಟ್ರೋ ಶೈಲಿಯಲ್ಲಿ ಚಿತ್ರದ ಕಥೆ ಸಾಗಲಿದೆ. ಪ್ರೇಕ್ಷಕರನ್ನು ಅಂದಿಲ ಕಾಲ ಘಟ್ಟಕ್ಕೆ ಕರೆದೊಯ್ಯಲಿದೆ. ಈ ಚಿತ್ರದ ಹಾಡುಗಳು ಬಿಡುಗಡೆಯಾಗಿದ್ದು ಒಂದಕ್ಕಿಂತ ಒಂದು ಹಾಡು ಮಧುರವಾಗಿ ಮೂಡಿಬಂದಿವೆ. ಚಿತ್ರದಲ್ಲಿ ಒಟ್ಟು ಐದು ಹಾಡುಗಳಿದ್ದು, ಅದರಲ್ಲಿ ನಾಲ್ಕು ಹಾಡುಗಳಿಗೆ ಪ್ರವೀಣ ಹಾಗೂ ಪ್ರದೀಪ್ ಸಾಹಿತ್ಯ ರಚಿಸಿದ್ದು ಸಂಗೀತ ಒದಗಿಸಿದ್ದಾರೆ. ಇನ್ನು ಒಂದು ಹಾಡಿಗೆ ಚಂದನ್ ಶೆಟ್ಟಿ ಸಾಹಿತ್ಯ ಬರೆದಿದ್ದು ಸಂಗೀತ ಸಂಗೀತ ಸಂಯೋಜಿಸುವ ಜತೆಗೆ ಹಾಡಿನಲ್ಲಿಯೂ ಹೆಜ್ಜೆ ಹಾಕಿದ್ದಾರೆ.

ಎಂಬತ್ತು, ತೊಂಬತ್ತರ ಕಾಲಘಟ್ಟದ ಕಥೆ ಇದಾಗಿದ್ದು, ಅದಕ್ಕೆ ತಕ್ಕಂತೆ ಸಂಗೀತ ಸಂಯೋಜಿಸುವುದು ನಿಜಕ್ಕೂ ಚಾಲೆಂಜಿಂಗ್ ಆಗಿತ್ತು. ಹಾಗಾಗಿ ಲೈವ್ ಇನ್‌ಸ್ಟ್ರುಮೆಂಟ್ ಬಳಸಿ ಸಂಗೀತ ಒದಗಿಸಿದ್ದೇವೆ. ಎಲ್ಲಾ ಹಾಡುಗಳು ಕೇಳಲು ಮಧುರವಾಗಿದೆ ಎಂದು ಸಂಗೀತ ನಿರ್ದೇಶಕ ಪ್ರವೀಣ್ ತಿಳಿಸಿದರು.

ಈ ಚಿತ್ರದಲ್ಲಿ ನಾನು ವಸಂತಾ ಎಂಬ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ ಎಂದು ನಟಿ ಅರ್ಚನಾ ಕೊಟ್ಟಿಗೆ ಹೇಳಿದರು. ಗೋಕುಲ್ ಎಂಟರ್‌ಟೇನ್‌ಮೆಂಟ್‌ನಲ್ಲಿ ಗೋವಿಂದರಾಜು ಚಿತ್ರ ನಿರ್ಮಾಣ ಮಾಡಿದ್ದಾರೆ. ರಾಜಗುರು ಕಥೆ, ಚಿತ್ರಕಥೆ ಬರೆದಿದ್ದಾರೆ. ಏಪ್ರಿಲ್ 17 ರಂದು ಚಿತ್ರ ರಾಜ್ಯಾದ್ಯಂತ ತೆರೆಗೆ ಬರಲಿದೆ.

ಸಿನಿಪ್ರಿಯರನ್ನು ಒಮ್ಮೆ ಹಳೆಯ ಕಾಲಘಟ್ಟಕ್ಕೆ ಕರೆದೊಯ್ಯಬೇಕು ಎಂಬ ಹಂಬಲ ನನಗಿತ್ತು. ಹಾಗಾಗಿಯೇ ಈ ಚಿತ್ರದ ಕಥೆಯನ್ನು ಆಯ್ದುಕೊಂಡೆ. ರೆಟ್ರೋ ಶೈಲಿಯಲ್ಲಿ ಮೂಡಿಬಂದಿರುವ ಈ ಚಿತ್ರವನ್ನು ನೋಡುತ್ತಿದ್ದರೆ ನಮ್ಮ ಜೀವನದ ಹಳೆಯ ನೆನಪುಗಳು ನಮ್ಮ ಕಣ್ಣಮುಂದೆ ಹಾದು ಹೋಗುತ್ತವೆ. ಇಲ್ಲಿ ಹಾಸ್ಯದ ಜತೆಗೆ ಲವ್ ಸ್ಟೋರಿಯೂ ಪ್ರಮುಖವಾಗಿದೆ.
-ಸುಜಯ್ ಶಾಸ್ತ್ರಿ ನಿರ್ದೇಶಕ

ಎಲ್ರ ಕಾಲೆಳಿಯುತ್ತೆ ಕಾಲ ನಾನು ನಟನಾಗಿ ಮೊದಲು ಕೇಳಿದ ಕಥೆ. ಸುಜಯ್ ಅವರು ನಿರ್ದೇಶನ ಮಾಡಿದ್ದ ಗುಬ್ಬಿ ಮೇಲೆ ಬ್ರಹ್ಮಾಸ್ತ್ರ ಚಿತ್ರವನ್ನು ನೋಡಿ ಮೆಚ್ಚಿದ್ದೆ. ಹಾಗಾಗಿ ಅವರು ಕಥೆ ಹೇಳಿದ ಕೂಡಲೇ ಸಿನಿಮಾದಲ್ಲಿ ನಟಿಸಲು ಸಂತಸದಿಂದಲೇ ಸಮ್ಮತಿಸಿದೆ. ಇದರಲ್ಲಿ ನನ್ನ ಪಾತ್ರ ವಿಭಿನ್ನವಾಗಿದೆ. ತೆರೆಯಲ್ಲಿ ನನ್ನನ್ನು ನೋಡಿ ನಾನೇ ನಂಬಲಾಗಿಲ್ಲ. ಪ್ರೇಕ್ಷಕರಿಗೂ ನಮ್ಮ ಚಿತ್ರ ಹಿಡಿಸುತ್ತದೆ ಎನ್ನುವ ನಂಬಿಕೆಯಿದೆ.
-ಚಂದನ್ ಶೆಟ್ಟಿ ನಟ